ನಾಸ್ತಿಕನು ಮತ್ತು ದೇವರು

ಗೌರೀಶ ಕಾಯ್ಕಿಣಿ

ಪ್ರಕಾಶಕರು:
ಕಾಲಗತಿ ಪ್ರಕಾಶನ, ರಾಯಬಾಗ–591 317
ಜಿಲ್ಲೆ–ಬೆಳಗಾಂವ

శ్రీ [illegible]
నేదునూరి గారికి
[illegible]
శ్రీరమణ
[illegible]

ಕಾಲಗತಿ ಗ್ರಂಥಮಾಲೆಯ ಹದಿನಾಲ್ಕನೆಯ ಹೂವು

ನಾಸ್ತಿಕನು ಮತ್ತು ದೇವರು

ಅರ್ಥಾತ್

ಎಲ್ಲಿ ಆಚೆಯೂ ದಂಡೆ?

ಗೌರೀಶ ಕಾಯ್ಕಿಣಿ

ಕಾಲಗತಿ ಪ್ರಕಾಶನ, ರಾಯಬಾಗ–591 317
ಜಿಲ್ಲೆ–ಬೆಳಗಾಂವಿ

Nastikanu Mathu Devaru i.c. Elli Aacheya Dande ? : A thesis on An Ethiest and God by Shri Gourish Kaikini and Published by Sou. Pushpa J. Hosur for Kalagati Prakashan,
Raibag—591-317 (Dist-Belgaum)

Pages : viii + 120 Price : 16—00

First Edition : 1989

ಪ್ರಥಮ ಮುದ್ರಣ : ೧೯೮೯

ಜ್ಯೋತಿ ಹೊಸೂರ ಎಂ. ಎ.
ಸಂಪಾದಕ: ಕಾಲಗತಿ ಗ್ರಂಥಮಾಲೆ

ಕಾಲಗತಿ ಗ್ರಂಥಮಾಲೆಗೆ,

ಇನ್ನೂರು ರೂಪಾಯಿ ಕೊಟ್ಟವರು ಹಿತಚಿಂತಕರು
ಮುನ್ನೂರು ರೂಪಾಯಿ ಕೊಟ್ಟವರು ಬೆಂಬಲಿಗರು
ನಾನ್ನೂರು ರೂಪಾಯಿ ಕೊಟ್ಟವರು ಪೋಷಕರು
ಐನೂರು ರೂಪಾಯಿ ಕೊಟ್ಟವರು ಮಹಾಪೋಷಕರು
ಗ್ರಂಥವೊಂದರ ವೆಚ್ಚವೆಲ್ಲ ಕೊಟ್ಟವರು ಆಶ್ರಯದಾತರು

ಮುದ್ರಕರು:
ಫ. ಶಿ. ಭಾಂಡಗೆ ತ್ವರಿತ ಮುದ್ರಣ
ಗಂಗಾಪೂರಪೇಟ ಗದಗ–582 101.

ನನ್ನ
ಪ್ರೀತಿಯ ಕವಿಮಿತ್ರ

ಶ್ರೀ ಅರವಿಂದ ನಾಡಕರ್ಣಿ

ಇವರಿಗೆ

ಆತ್ಮೀಯ ಪ್ರೀತಿಯ
ಸವಿನೆನಪು

ಪರಿವಿಡಿ

ಭಾಗ–I

ಭಾಗ–II

ಅಥಾತಃ ತೋಃ....

ವೈದಿಕ ಯುಗದ ತತ್ವಜಿಜ್ಞಾಸೆ–ಮೀಮಾಂಸೆ ಎಲ್ಲ ಈ ರೀತಿ ಆರಂಭವಾಗುತ್ತದೆ. "ಅಥ ಅತಃ ತು....ಜಿಜ್ಞಾಸಾ". ಬ್ರಹ್ಮವಿರಲಿ, ಧರ್ಮವಿರಲಿ, ಕರ್ಮವಿರಲಿ ಈ ತತ್ವಜ್ಞಾನದ ಆರಂಭ, ಜಿಜ್ಞಾಸೆಯಿಂದ–ವಿಚಿಕಿತ್ಸೆಯಿಂದ. ಯಾವ ಚಿಕಿತ್ಸೆಗೂ ವಿಚಿಕಿತ್ಸೆಯೇ ಮೂಲ.

ಅದೇ ಬಗೆಯ ಜಿಜ್ಞಾಸೆ, ಅರಿತುಕೊಳ್ಳಬೇಕೆಂಬ ಆಸೆ, ನನ್ನ ಈ ಪ್ರಬಂಧದ ಪ್ರೇರಣೆ. ದೇವರ ಕುರಿತು ನನ್ನ ತಲೆಯಲ್ಲಿ ಎಂದಿನಿಂದಲೂ ಸುತ್ತುತ್ತಿದ್ದ ಊಹಾಪೋಹಗಳ ವಿಚಾರ ಲಹರಿಗಳನ್ನು ಈ ಪುಟ್ಟ ಪುಸ್ತಕದಲ್ಲಿ ಒಟ್ಟಿಗೆ ತೋಡಿಕೊಂಡಿದ್ದೇನೆ. ಈ ವಿಷಯದ ವಿವೇಚನೆ ಇದೇ ಮೊದಲಲ್ಲ, ಇದೇ ಕೊನೆಯದಲ್ಲ. "ತತ್ ವಿದ್ಧಿ ಪರಿಪ್ರಶ್ನೇನ" ಎಂದಿದೆ ಭಗವದ್ಗೀತೆ. ಪ್ರಶ್ನೆಗೆ ಪರಿಪ್ರಶ್ನೆ, ಅದಕ್ಕೆ ಮರಿಪ್ರಶ್ನೆ–ಮರುಪ್ರಶ್ನೆ ಏಳುತ್ತಲೇ ಇರುತ್ತವೆ.

ವರಕವಿ ಬೇಂದ್ರೆಯವರ ಒಂದು ಸಾಲಿನ ಕೊನೆಯ ಚೂರನ್ನು ನನ್ನ ಶೀರ್ಷಿಕೆಯಾಗಿ ಎತ್ತಿಕೊಂಡಿದ್ದೇನೆ. "....ನಾ ಬಲ್ಲೆ ನನಗೆ ಗೊತ್ತಿಲ್ಲವಾದರೂ ಎಲ್ಲಿ ಆಚೆಯಾ ದಂಡೆ?" ವರಕವಿಗಳ ಪ್ರಬುದ್ಧ ಆಂತರಿಕ ಶ್ರದ್ಧೆ ನನ್ನದಲ್ಲ. ಗೊತ್ತಿಲ್ಲದ ಸಂಗತಿಯನ್ನು ನಾನು ನಂಬುವುದಾದರೂ ಹೇಗೆ? ಏಕೆ? ನನ್ನ ಪಾಲಿಗೆ 'ಆಚೆಯ ದಂಡೆ' ಒಂದು ಸವಾಲೇ. ಹತ್ತಿರ ಸರಿದಂತೆ ಇನ್ನೂ ದೂರ ಸರಿಯುವ ಕ್ಷಿತಿಜ ರೇಖೆಯಂತೆ, ಈ ದೇವರ ವಿಚಾರ. ಇದು ಬುದ್ಧಿಗೆ ಖಾದ್ಯವಲ್ಲ, ಭಾವನೆಗೆ ವೇದ್ಯ.

ನಮ್ಮ ಪ್ರಾಚೀನ ಸೂತ್ರಕಾರರು ತಮ್ಮ ತತ್ವ ವಿಚಿಕಿತ್ಸೆಯ ಆರಂಭ ಶ್ರೀ ಗಣೇಶಾಯ ನಮಃ ಇತ್ಯಾದಿ ದೇವತಾ ಸ್ತುತಿಗಳಿಂದ ಶುರುಮಾಡಲಿಲ್ಲ. ಅವರು "ಅಥ, ಅತಃ...." ಎಂದು, ಅಂದರೆ 'ಇನ್ನು ಹೀಗೆ ಇಂತು' ಎಂದು ನೇರ ವಿಷಯವನ್ನು ಪ್ರವೇಶಿಸಿದರು. ಜಿಜ್ಞಾಸೆಯನ್ನೇ ಪ್ರಧಾನವಾಗಿ ಇಟ್ಟುಕೊಂಡರು. ಇದು ನಮ್ಮಂಥ ವೈಚಾರಿಕರಿಗೂ ಒಂದು ಮಾರ್ಮಿಕ ಮಾರ್ಗದರ್ಶನ.

ಈ ಪುಸ್ತಕವು ದೇವರ ಪ್ರಮೇಯಕ್ಕೆ ನಾಸ್ತಿಕನ ಉತ್ತರವಲ್ಲ. ಈ ಪ್ರಶ್ನೆಗೆ ನಾಸ್ತಿಕನ ನಿಲುವಿನಿಂದ ಒಂದು ನಿರ್ವಚನವಿದು. ಆದಷ್ಟು ಸರಳ ಸುಬೋಧ ಸರಣಿಯಲ್ಲಿ ಮಾಡಲು ಹೊರಟ ಒಂದು ಸಾಹಸ. ಈ

ದಾರಿಯಲ್ಲಿ ಮುಂದೆ ಹೋಗುವವರಿಗೆ, ಆ ದೂರ ತೀರಕ್ಕೆ ಸಾಗುವವರಿಗೆ ಇದೊಂದು ಸಣ್ಣ ಬುತ್ತಿ. ಈ ಪಾಥೇಯವು ಪಥ್ಯವಾಗಲಿ ಎಂದು ನನ್ನ ಹಾರೈಕೆ.

ಸನ್ಮಿತ್ರ ಪ್ರಿ. ಜ್ಯೋತಿ ಹೊಸೂರ ಅವರು ಪ್ರಾಜ್ಞರು. ನನ್ನ ಒಂದು ಪುಸ್ತಕವನ್ನು –“ಪ್ರಜ್ಞಾನೇತ್ರದ ಬೆಳಕಿನಲ್ಲಿ”– ಈಗಾಗಲೇ ಅಂದವಾಗಿ ಪ್ರಕಟಿಸಿ ಉಪಕಾರ ಮಾಡಿದ ಆಪ್ತಮಿತ್ರರು. ಈ ಪ್ರಬಂಧವನ್ನು ತಮ್ಮ ‘ಕಾಲಗತಿ’ ಪ್ರಕಾಶನದಿಂದ ಬೆಳಕಿಗೆ ತರಲು ಒಪ್ಪಿ ಅನುಗ್ರಹಿಸಿದ್ದಾರೆ. ಅದಕ್ಕೆ ನಾನು ಅವರಿಗೆ ಚಿರಋಣಿ.

ಗೋಕರ್ಣ **—ಗೌರೀಶ ಕಾಯ್ಕಿಣಿ**

ಸಹೃದಯರಲ್ಲಿ ಅರಿಕೆ

ಸದಭಿರುಚಿಯ ಸಂಸ್ಕಾರ, ಮುಕ್ತ ಚಿಂತನೆಗೆ ಪ್ರಚೋದನೆ, ಪರಂಪರೆಯ ಪರಿಶೋಧನೆ, ಪ್ರಗತಿಶೀಲತೆಗೆ ಪ್ರೇರಣೆ, ಮಾನವ ಪ್ರಜ್ಞೆಯ ಜಾಗೃತಿ ತನ್ಮೂಲಕ ಆನಂದಾನುಭೂತಿ ಹಾಗೂ ಸತ್ಯಾನ್ವೇಷಣೆ ಇವು ಕಾಲಗತಿ ಪ್ರಕಾಶನದ ಉದ್ದೇಶಗಳು. ಇವುಗಳ ಸಾಧನೆ ಅಷ್ಟೇನೂ ಸುಲಭವಲ್ಲವೆಂಬ ಅರಿವು ನಮಗಿದೆ. ಆದ್ದರಿಂದ ಈ ಮಾರ್ಗದಲ್ಲಿ ನಿಷ್ಠೆಯಿಂದ ಹೆಜ್ಜೆಯಿಡುತ್ತ ಸಾವಧಾನವಾಗಿ ಮುನ್ನಡೆಯುವ ಹಂಬಲ ನಮ್ಮದು. ಎದುರಿಟ್ಟುಕೊಂಡ ಉದ್ದೇಶಗಳ ಸಾಧನೆಯ ದಾರಿಯಲ್ಲಿಯ ನಮ್ಮ ಪ್ರಾಮಾಣಿಕ ಪ್ರಯತ್ನ ನಿರಂತರವಾಗಿ ಸಾಗಿದೆ. ಇಲ್ಲಿಯ ವರೆಗಿನ ಸಾಧನೆಯಿಂದ ಸ್ವಲ್ಪುಮಟ್ಟಿನ ಸಮಾಧಾನ ನಮಗಾಗಿದೆ. ನಮ್ಮ ಪ್ರಕಟನೆಗಳನ್ನೆಲ್ಲ ಪರಿಶೀಲಿಸಿದ ಪ್ರಾಜ್ಞರು ಮೇಲಿನ ಮಾತಿನ ಸತ್ಯಾಸತ್ಯತೆ ಒರೆಗೆ ಹಚ್ಚಿ, ತಮ್ಮ ನಿರ್ಭಿಡೆಯ ಅಭಿಪ್ರಾಯ ತಿಳಿಸಿ, ನಮ್ಮ ಮಹತ್ವಾಕಾಂಕ್ಷೆಯ ಉದ್ದೇಶಗಳ ಸಾಧನಾಪಥದಲ್ಲಿ ಮುನ್ನುಗ್ಗಲು ಮಾರ್ಗದರ್ಶನ ಮಾಡಬೇಕೆಂದು ಅರಿಕೆ.

ನಮ್ಮ ಈ ಪ್ರಯತ್ನದಲ್ಲಿ ಸಕಲರ ಬೆಂಬಲ, ನೆರವು ಬೇಕು. ಸಹೃದಯರೂ ಸಾಹಿತ್ಯಾಭಿಮಾನಿಗಳೂ ವಿವಿಧ ರೀತಿಯಲ್ಲಿ ಆರ್ಥಿಕ ನೆರವು ನೀಡಬೇಕೆಂದು ನಿತ್ಯದಂತೆ ಬಿನ್ನವಿಸುವುದನ್ನು ಮರೆಯಲಾರೆವು. ಸಹೃದಯರ ಸಹಕಾರ ಮತ್ತು ನೆರವುಗಳೇ ನಮ್ಮ ಬಲ.

ಈಗ ತಮ್ಮ ಕೈಯಲ್ಲಿರುವ 'ನಾಸ್ತಿಕನು ಮತ್ತು ದೇವರು' ಅರ್ಥಾತ್ 'ಎಲ್ಲಿ ಆಚೆಯಾ ದಂಡೆ?' ಹೆಸರಿನ ಈ ಪುಸ್ತಕವು ಕರ್ನಾಟಕದ ಪ್ರಖ್ಯಾತ ವಿಚಾರವಾದಿ ಸಾಹಿತಿ ಶ್ರೀ ಗೌರೀಶ ಕಾಯ್ಕಿಣಿ ಅವರ ದೀರ್ಘಕಾಲದ ಚಿಂತನ-ಮಥನದ ಫಲಶ್ರುತಿ. ಇದು ನಮ್ಮ ನಾಡಿನ ವೈಚಾರಿಕ ಕ್ಷೇತ್ರಕ್ಕೆ ಬಿಸಿ ತಾಗಿಸುವುದೆಂದು ನಮ್ಮ ಬಯಕೆ. ಈ ದಿಸೆಯಲ್ಲಿ ಎಲ್ಲೆಲ್ಲೂ ಸಂವಾದ ನಡೆಯಲು ನಮ್ಮೀ ಪ್ರಕಟನೆ ಪ್ರಚೋದನೆ ನೀಡಿದರೆ ನಮ್ಮ ಶ್ರಮ ಸಾರ್ಥಕ.

ಸನ್ಮಾನ್ಯರಾದ ಶ್ರೀ ಗೌರೀಶ ಕಾಯ್ಕಿಣಿ ಅವರು ಕಾಲಗತಿ ಪ್ರಕಾಶನದ ಪರವಾಗಿ ತಮ್ಮೀ ಗ್ರಂಥವನ್ನು ಪ್ರಕಟಿಸಲು ಅನುಮತಿ ಕೊಟ್ಟು, ಶುಭ ಕೋರಿದ ಸಲುವಾಗಿ ಅವರಿಗೆ ನಾವು ಕೃತಜ್ಞರು. ಗ್ರಂಥದ ಮುದ್ರಣ ಕಾರ್ಯವನ್ನು ಅಲ್ಪಾವಧಿಯಲ್ಲಿ ಅಂದವಾಗಿ ಮುದ್ರಣ ಮಾಡಿಕೊಟ್ಟದ್ದಕ್ಕಾಗಿ ಗದುಗಿನ ಶ್ರೀ ಫ. ಶಿ. ಭಾಂಡಗೆಯವರ ತ್ವರಿತ ಮುದ್ರಣಾಲಯದ ಸಂಚಾಲಕರಾದ ಶ್ರೀ ಅಶೋಕ ಅವರಿಗೂ ಧನ್ಯವಾದಗಳು.

ಕಾಲಗತಿ ಪ್ರಕಾಶನದ ಸಕಲ ಬಳಗಕ್ಕೆ ಹೃತ್ಪೂರ್ವಕ ವಂದನೆಗಳು.

ಪುಷ್ಪಾ ಹೊಸೂರ
ಪ್ರಕಾಶಕರು

ಭಾಗ-I

ನಾಸ್ತಿಕನು ಮತ್ತು ದೇವಗು

1

"ನಾಸ್ತಿಕನ ದೇವರು" ಈ ಶೀರ್ಷಿಕೆಯನ್ನೆ ಈ ಪ್ರಬಂಧಕ್ಕೆ ಇಡುವ ದೆಂದುಕೊಂಡಿದ್ದೆ. ಆದರೆ ಓದುಗರ ಹುಬ್ಬು ಪ್ರಶ್ನಾರ್ಥಕ ಚಿಹ್ನವಾದಂತೆ ನನಗೆ ಭಾಸವಾಯಿತು. ಮೊದಲೇ ನಾಸ್ತಿಕ. ಅವನಿಗೂ ದೇವರೆಂಬುದೊಂದು (ಒಬ್ಬ?) ಉಂಟೇ? ಅನಿಸಿತು. ದುಷ್ಟರೆಂಬವರಿಗೂ ದೇವರಿರಬಹುದು. ಶ್ರೀಕೃಷ್ಣ ಸಂಧಾನಕ್ಕೆ ಬಂದಾಗ ದುರ್ಯೋಧನನೇ ಹೇಳಿದ್ದುಂಟು— "ಕೇನಾಪಿ ದೇವೇನ ಹೃದಿಸ್ಥಿತೇನ ಯಥಾ ನಿಯುಕ್ತೋಽಸ್ಮಿತಥಾ ಕರೋಮಿ" ಅವನಿಗೂ ದೇವರ ಇರುವಿಕೆಯ ಬಗೆಗೆ ಖಚಿತವಿಲ್ಲ. ಆದರೂ ಇಲ್ಲವೆನ್ನುವ ಧಾರ್ಷ್ಟ್ಯವಿಲ್ಲ. "ಯಾರಾದರೂ ದೇವನೆಂಬವನು ತನ್ನ ಹೃದಯದಲ್ಲಿ ಇದ್ದದ್ದೇ ಆದರೆ ಆತ ನಿಯೋಜಿಸಿದಂತೆ ಮಾಡುವೆನು"-ಅನ್ನುತ್ತಾನ ಆಭೂಪ!

ಅಂದರೆ, ದೇವನೊಬ್ಬ ಇರಬೇಕು. ಅದು ಮನದಂತರಾಳದಲ್ಲಿಯೇ ಇರಬೇಕು ಮತ್ತು ನಮ್ಮ ಚಟುವಟಿಕೆಗಳೆಲ್ಲ ಅವನ ಪ್ರೇರಣೆಯಿಂದಲೇ ನಡೆಯುತ್ತಿರಬೇಕು, ಎಂದು ದುರ್ಯೋಧನನಂಥವರೂ ಗ್ರಹೀತವಿಟ್ಟುಕೊಂಡಿದ್ದರು. ಆದರೆ ಇವರೂ ಕೂಡ ಈ ದೇವನೆಂಬ ವಸ್ತುವೋ ಸತ್ಯವೋ ಹೊರಗೆಲ್ಲಿಯೂ ಕಾಣಸಿಗುವಂತಹದಲ್ಲ, ಇದ್ದುದೇ ಆದರೆ ಅದೊಂದು ಭಾವನೆ, ಅಂತರಂಗದ ಪ್ರೇರಣೆ—ಎಂಬಂತೆಯೇ ನಂಬುತ್ತಿರಬೇಕು.

ಆದರೆ "ನಾಸ್ತಿಕ" ನೆಂಬ ವ್ಯಕ್ತಿ ಆ ದೇವತ್ವವನ್ನೇ ನಿರಾಕರಿಸುತ್ತಾನೆ. ಆ ದೇವರ ಅಸ್ತಿತ್ವವನ್ನೇ ಅಲ್ಲಗಳೆಯುತ್ತಾನೆ. ಅಂಥ ತಿಳುವಳಿಕೆ ದೇವನನ್ನು ಹೇಗೆ ಊಹಿಸಬಲ್ಲದು? ನಮ್ಮ ನಿಮ್ಮ ಯಾವ ಊಹೆಗೂ ನಮ್ಮ ಅನುಭವವೇ ಮೂಲ. ಕಂಡದ್ದು, ಅನಿಸಿದ್ದು, ತಿಳಿದದ್ದು ನಮ್ಮ ಊಹನೆಗೆ ಉತ್ಪ್ರೇಕ್ಷೆಗೆ- ಎಲ್ಲ ಕಲ್ಪನೆಗೆ 'ಕಚ್ಚಾ ಸರಕು' ಒದಗಿಸುತ್ತದೆ. ಉದಾಹರಣೆಗೆ, ಹುಟ್ಟು ಕುರುಡನಿಗೆ 'ಬೆಳಕು' ಬರೇ ಶಬ್ದ ಅದು ಏನೆಂಬ ಕಲ್ಪನೆ ಬಾರದು.

ಇನ್ನು 'ನಾಸ್ತಿಕ'ನಾದರೋ ಅಂಥ ಕುರುಡನಲ್ಲ. "ನ ಅಸ್ತಿ" (ಇರುವದಿಲ್ಲ) ಎಂಬ ತೀರ್ಮಾನಕ್ಕೆ ಬರುವ ಮುಂಚೆ ಆತ ದೇವರನ್ನು ನಂಬಿದ್ದ. ಮುಂದೆ ತನ್ನ ಬುದ್ಧಿ ಬೆಳೆದಂತೆ ಬಲಿತಂತೆ ಯುಕ್ತಾ ಯುಕ್ತ ವಿಚಾರದ ಫಲ

ವಾಗಿಯೋ ಬಲಿಯಾಗಿಯೋ ಆತ ಆ ನಂಬಿಗೆಯನ್ನು ಕಳೆದುಕೊಂಡವನು. ಅವರ ನೆಲೆಯಾದ ಆ ದೇವತ್ವವನ್ನು ಅಲ್ಲಗಳೆದವನು.

ಏಕೆಂದರೆ 'ಇಲ್ಲ'ವೆಂಬುದು ಒಂದು ಕೇವಲವಾದ ತಾನೇ ತಾನಾದ ಕಲ್ಪನೆ ಅಲ್ಲ. ಅದು 'ಇದೆ' ಎಂಬುದನ್ನು ಅಲ್ಲಗಳೆಯುತ್ತದೆ. ಈ 'ಇದೆ' ಎಂಬುವದು ಕಲ್ಲು, ಮರ, ಮೇಜು, ಖುರ್ಚಿಯಂತೆ ನಮ್ಮ ಪಂಚೇಂದ್ರಿಯ ಗಳಿಗೆ ಗ್ರಾಹ್ಯವಾಗಿರಬಹುದು. ಅಂದರೆ ವಾಸ್ತವ ಸತ್ಯವಾಗಿರಬಹುದು. ಅಥವಾ ಅಂಥದೊಂದು ಇರುವದೆಂಬ ತಿಳುವಳಿಕೆಯೋ ಅನಿಸಿಕೆಯೋ ಆಗಿರಬಹುದು. ಇಂಥ ಅರಿವು ಅನಿಸಿಕೆ ಮೊದಲು ಇದ್ದ ಹೊರತು ಅದನ್ನು ಇಲ್ಲವೆಂದು ಸಾರುವದು ಶಕ್ಯವಿಲ್ಲ.

ಹಾಗೆಯೇ ದೇವರ ವಿಚಾರ. ದೇವರನ್ನು ನಂಬುವದು ಬೇರೆ; ದೇವರಲ್ಲಿ ನಂಬುವದು ಬೇರೆ. ಮೊದಲನೆಯ ನಂಬಿಗೆ ಆ ವಸ್ತುತ್ವದ ಅಸ್ತಿತ್ವದ ಕುರಿತು. ಎರಡನೆಯ ನಂಬಿಕೆ ಆ ವಸ್ತು ನಮಗೆ, ನಮ್ಮ ಬದುಕಿಗೆ ಪ್ರಸ್ತುತವೋ ಅಪ್ರಸ್ತುತವೋ ಎಂಬುದರ ಕುರಿತು. ಮೊದಲನೆಯದು ವಸ್ತುನಿಷ್ಟ. ಎರಡನೆಯದು ಆತ್ಮನಿಷ್ಟ. ಅದು ತಾಂತ್ರಿಕ ಸೈದ್ಧಾಂತಿಕ ವಿಷಯ. ಇದು ನೈತಿಕ ಭಾವನಾತ್ಮಕ ವಿಷಯ. ಈ ಭೇದವನ್ನು ನಾವು ನಿಚ್ಚಳವಾಗಿ ಮನಗಾಣಬೇಕು. ಅನೇಕ ದೇವರುಗಳನ್ನು ನಂಬುವವರೂ ಒಂದು ದೇವತೆಯಲ್ಲಿ ನಂಬಿ ನಡೆದುಕೊಳ್ಳುತ್ತಾರೆ. ಅದಕ್ಕೆ ಭಯ ಭಕ್ತಿಗಳಿಂದ ಸ್ಪಂದಿಸುತ್ತಾರೆ. ಉಳಿದವುಗಳನ್ನು ಅವರು ಬರೆ ಒಪ್ಪಿಕೊಳ್ಳುತ್ತಾರೆ. ಆ ದೇವರುಗಳು ಇತರರಿಗೆ ಇಷ್ಟ ದೇವತೆಗಳಾಗಬಹುದು. ಆದರೆ ಅವರ ಸ್ವಂತದ ಇಷ್ಟದೇವತೆ ಬೇರೆಯೇ.

ಹೀಗೆ ದೇವರ ನಂಬಿಕೆಯಲ್ಲಿಯೂ ಹಲವು ಬಗೆಗಳಿವೆ. ನಾನು ಮೇಲೆ ಉದಾಹರಿಸಿದ ದುರ್ಯೋಧನನದೆಂಬ ಮಾತಿಗೆ ಹಿಂದೆ ಇನ್ನೊಂದು ಮಾತು ಬರುತ್ತದೆ. "ಜಾನಾಮಿ ಧರ್ಮಂ ನಚ ಮೇ ಪ್ರವೃತ್ತಿಃ ಜಾನಾಮಿ ಅಧರ್ಮಂ ನಚ ಮೇ ನಿವೃತ್ತಿಃ" ಅಂದರೆ ಅವನಿಗೆ ಧರ್ಮವು ಗೊತ್ತು. ಆದರೆ ಅದರಲ್ಲಿ ಆತ ತೊಡಗಲಾರ. ಅದರಲ್ಲಿ ಅವನಿಗೆ ಮೆಚ್ಚಿಗೆ ಮನಸ್ಸು ಇಲ್ಲ. ಆತನಿಗೆ ಅಧರ್ಮವೂ ಗೊತ್ತು. ಆದರೆ ಅದರಿಂದ ಅವನಿಗೆ ಬಿಡುಗಡೆ ಇಲ್ಲ. ಅದರಲ್ಲಿ ಆತನ ಮತಿ ಗತಿ ತೊಡಗಿಕೊಂಡುಬಿಟ್ಟಿವೆ. ಇದಕ್ಕೆಲ್ಲ ಆತ ಕೊಡುವ ಹವಾಲೆ– ಅಂತಃಪ್ರೇರಣೆಯದು. ಅಂತರಾಳದಲ್ಲಿ ಕೂತಿರುವನೆಂಬ ಆ ಯಾವನೋ ದೇವನೆಂಬವನದು.

ಇಲ್ಲಿ 'ಧರ್ಮ'ದ ಬಗೆಗೆ ಬಂದ ಅಭಿಪ್ರಾಯವನ್ನೇ ನಾವು ಈಗ ದೇವರ ಬಗೆಗೆ ಹೊಂದಿಸಿಕೊಳ್ಳಬಹುದು. "ನೂರು ದೇವರನ್ನು ನೂಕಾಚೆ ದೂರ"

ವನ್ನುವಾಗಲೂ ನಾವು ಒಂದು ದೇವತೆಯನ್ನು ಕುರಿತು ಆಳವಾಗಿ ಸ್ಪಂದಿಸುತ್ತಿರುತ್ತೇವೆ. ಉಳಿದ ದೇವತ್ವಗಳು ಉಳಿದವರಿಗಾಗಿ, ನಾವು ಅವುಗಳ ಬಗೆಗೆ ತಟಸ್ಥ. ಕ್ರೈಸ್ತರ ಸಿಲುಬೆ, ಮುಸ್ಲಿಮರ ಕಾಬಾ ಹಿಂದುಗಳಿಗೆ ಹೇಗೋ ಹಾಗೆಯೇ ಹಿಂದುಗಳಲ್ಲಿಯೂ ವೈಷ್ಣವರಿಗೆ ಲಿಂಗ, ಶೈವರಿಗೆ ಸಾಲಿಗ್ರಾಮ, ಗಣಪತಿ ಉಪಾಸಕರಿಗೆ ಶ್ರೀಚಕ್ರ, ಶಾಕ್ತರಿಗೆ ಇತರ ಉಪಾಸ್ಯಗಳು ಸಂವೇದನೆ, ಭಕ್ತಿ ಭಾವನೆ ಉಂಟುಮಾಡುವದಿಲ್ಲ. ಗರತಿಗೆ ತನ್ನ ಗಂಡನು ಹೇಗೋ ಹಾಗೆಯೇ ಈ ಭಾವಿಕರಿಗೆ ದೈವಭಕ್ತರಿಗೆ ತಾವು ನೆರೆ ನಂಬಿದ ದೈವ ಬಿಟ್ಟರೆ ಇತರ ದೇವರುಗಳೆಲ್ಲರ ಕುರಿತೂ ಉಪೇಕ್ಷೆ ಅಲ್ಲದಿದ್ದರೂ ಉದಾಸೀನ, ಸ್ವೀಕಾರವಿದ್ದರೂ ಅದೊಂದು ಸೌಜನ್ಯದ ಆಚಾರ ಹೊರತು ಪುರಸ್ಕಾರವಲ್ಲ.

ಭಕ್ತಿ, ಭಜನೆ ಎಂಬುದೇ ಒಂದು ಆಯ್ಕೆ-ಬಯಕೆಯ ಆಯ್ಕೆ. ಆದ್ದರಿಂದಲೇ ರಾಮ ಭಕ್ತ, ಕೃಷ್ಣ ಭಕ್ತನಾಗಲಾರ. ಆದರೆ 'ಭಕ್ತ' ನೆಂಬ ಪಾತಳಿಯಲ್ಲಿ ಇಬ್ಬರೂ ತಮ್ಮ ಇಷ್ಟದೇವತೆಯನ್ನು ಕೂಡಿಯೇ ಪೂಜಿಸಬಲ್ಲರು. ಒಬ್ಬ ಇನ್ನೊಬ್ಬನ ಭಕ್ತಿಯನ್ನೂ ಶ್ರದ್ಧೆಯನ್ನೂ ದೇವರನ್ನೂ ಅರಿತುಕೊಳ್ಳಬಲ್ಲ, ಬೇರೆ ಬೇರೆ ವಿಗ್ರಹಗಳ ದೇವತಾ ಸ್ವರೂಪವನ್ನು ಕಲ್ಪಿಸಿಕೊಳ್ಳಬಲ್ಲ, ಆದರಿಸಬಲ್ಲ.

ಆದರೆ ನಾಸ್ತಿಕನು ದೇವತ್ವವನ್ನೇ ಅಲ್ಲಗಳೆಯುತ್ತಾನೆ. ನಮ್ಮ ಹಳೆಯ ಪರಂಪರಾಗತ ದೇವರುಗಳನ್ನೇ ನಿರಾಕರಿಸುತ್ತಾನೆ. ಮಾತ್ರವಲ್ಲ, ದೇವತ್ವವೆಂಬ ಮಹಾ ವ್ಯಕ್ತಿಯಾಗಲಿ ಶಕ್ತಿಯಾಗಲಿ ಇಲ್ಲವೆನ್ನುತ್ತಾನೆ. ಅನ್ನುತ್ತಾನೆ ಮಾತ್ರವಲ್ಲ, ಹಾಗೆ ಅವನಿಗೆ ಮನೋಭಾವದಿಂದಲೂ ಅನಿಸುತ್ತಿರುತ್ತದೆ. ಅಂಥವನು ತನ್ನದೊಂದು ದೇವತ್ವವನ್ನು ತನ್ನದೆಂಬ ದೇವರನ್ನು ಹೇಗೆ ಕಲ್ಪಿಸಬಲ್ಲ ? ಅವನು ಊಹಿಸಿದ್ದು ದೇವರು ಹೇಗಾದೀತು-ತಾನೇ ಅಂಥ ದೇವತ್ವವನ್ನೇ ಒಪ್ಪದಿರುವಾಗ?

2

ಆದ್ದರಿಂದಲೇ ನಾನು ಈ ಪ್ರಬಂಧದ ಹೆಸರು "ನಾಸ್ತಿಕನು ಮತ್ತು ದೇವರು" ಎಂದು ಬದಲಿಸಿದೆ. ರೂಢಿಯಲ್ಲಿ ದೇವರನ್ನು ನಂಬುವವರೂ ದೇವರಲ್ಲಿ ನಂಬುವವರೂ ಬಹು ಸಂಖ್ಯೆಯಲ್ಲಿದ್ದಾರೆ. ಆ ಮಾನದಲ್ಲಿ 'ನಾಸ್ತಿಕ' ರೆಂಬುವವರ ಸಂಖ್ಯೆ ತೀರ ಕಡಿಮೆ. ತಾಂತ್ರಿಕ ದೃಷ್ಟಿಯಿಂದ ಇಲ್ಲಿಯೂ ಒಂದು ಸೋಜಿಗ. ಲಕ್ಷಾಂತರ ಆಸ್ತಿಕರು ಅಂದರೆ ದೇವರನ್ನು ದೇವರಲ್ಲಿ ನಂಬುವವರೂ ಸಾಮಾನ್ಯವಾಗಿ,ಸಾರ್ವತ್ರಿಕವಾಗಿ ಕೇವಲ ಸಂಸ್ಕಾರ ಬಲದಿಂದ, ರೂಢಿಯ ಬಲದಿಂದ, ಗತಾನುಗತಿಕತೆಯ ಬಹುಜನಾಭಿಪ್ರಾಯದ ಸೆಳವಿನಿಂದ;

ದೇವರಲ್ಲಿ ನಂಬಿಕೆ ಯಾಂತ್ರಿಕವಾಗಿ, ಒಂದು ಚಟವಾಗಿ ಹಾಗೆ 'ಆಸ್ತಿಕ' ರಾಗಿರುತ್ತಾರೆ. ಅವರ ಬದುಕಿನ ಮುಕ್ಕಾಲು ಪಾಲು ವ್ಯವಹಾರಗಳೆಲ್ಲ ದೇವರ ಹಂಬಲವಿಲ್ಲದೆ ಬೆಂಬಲಕ್ಕಾಗಿ ಕಾಯದೆ ಸುಸೂತ್ರವಾಗಿ ನಡೆದಿರುತ್ತವೆ.

ಈ ದೃಷ್ಟಿಯಲ್ಲಿ ದೇವರಿಗಿಂತ ಕರ್ಮವನ್ನು ನಂಬಿಯೇ ನಡೆಯುವವರು ಬಹು ಹೆಚ್ಚು. "ಲೋಕೋಯಂ ಕರ್ಮ ಬಂಧನಃ" ದೇವರ ಬಗೆಗೆ ಮೌನ ವನ್ನು ಪಾಲಿಸಿದ ಬೌದ್ಧರೂ ಕರ್ಮವನ್ನು ನಂಬಿ ನಡೆದರು. ನಮ್ಮ ಸನಾತನ ಧರ್ಮದಲ್ಲಿಯೂ ಕರ್ಮ ಬಂಧನವನ್ನೂ ಅದರ ಫಲವನ್ನೂ ನಂಬುವವರೆಲ್ಲ ತತ್ವತಃ ದೇವರ ಮಟ್ಟಿಗೆ ನಾಸ್ತಿಕರೇ. ಕರ್ಮ ಸಿದ್ಧಾಂತದಂತೆ ದೇವರ ಅಗತ್ಯ ವಿಲ್ಲ. ಒಳ್ಳೆಯ ಕರ್ಮಕ್ಕೆ ಒಳ್ಳೆಯ ಫಲ, ಕೆಟ್ಟ ಕರ್ಮಕ್ಕೆ ಕೆಟ್ಟ ಫಲ ತಾನಾಗಿಯೇ ತಪ್ಪದೇ ಸಿಗುವದು ಅಂದಾಗ ಈ ಕರ್ಮ ಫಲಗಳ ಅನಿವಾರ್ಯ ಕ್ರಮದಲ್ಲಿ ನಡುವೆ ದೇವರ ಹಸ್ತಕ್ಷೇಪ ಅವ್ಯವಹಾರ್ಯ. ಹೆಚ್ಚೆಂದರೆ ದೇವ ನೊಬ್ಬ ಅಧ್ಯಕ್ಷ. ಕರ್ಮ ವಿಪಾಕದ ನಿರಂತರ ಕ್ರಮಕ್ಕೆ ಮೂಕ ನಿಷ್ಕ್ರಿಯ ಸಾಕ್ಷಿ! ಅದಕ್ಕೇ ದಾಸರು ಮೊರೆ ಇಟ್ಟರು. "ನಾ ಮಾಡಿದ ಕರ್ಮಬಲವಂತ ವಾದರೆ ನೀ ಮಾಡುವದೇನೋ ಹರಿಯೇ?" ಕರ್ಮ ಸಿದ್ಧಾಂತವನ್ನು ನಂಬುವ ವರಿಗೆ ದೇವರು ಅನಗತ್ಯ. ಏಕೆಂದರೆ ಆತ ಅದರ ಕಾರ್ಯಕ್ರಮಣದಲ್ಲಿ ಅಸಮರ್ಥ!

ಈ ಕರ್ಮ ಸಿದ್ಧಾಂತದ ನಿಲುವೆಯನ್ನು ಬಿಟ್ಟರೂ, ಜನ ಸಾಮಾನ್ಯರ ದಿನನಿತ್ಯದ ಬದುಕಿನ ಮಟ್ಟದಲ್ಲಿ ನಿಂತು ನೋಡಿದರೂ ನಾವು ಕಾಣುವದೇನು? ಕ್ರೈಸ್ತರ ರವಿವಾರ, ಮುಸ್ಲಿಮರ ಶುಕ್ರವಾರ ನಮ್ಮ ನಮ್ಮ ಇಷ್ಟದೇವತೆಗಳ ವಿಶಿಷ್ಟ ವಾರಗಳನ್ನು ಬಿಟ್ಟರೆ; ಹಬ್ಬ ಹರಿದಿನ ಹರಕೆ ವ್ರತವೈಕಲ್ಯಗಳ ಸಂದರ್ಭ ಗಳನ್ನು ಬದಿಗಿಟ್ಟರೆ; ನಮ್ಮ ಜನ ಹೆಚ್ಚಾಗಿ ದೇವರ ನೆನಹು–ನಂಬಿಗೆಗಳಲ್ಲಿ ಬಾಳುವದು ಕಡಿಮೆ. ತಿಂಗಳ ಸಂಬಳ, ಬ್ಯಾಂಕಿನ ಠೇವಣಾತಿ, ದಿನದ ದುಡಿಮೆ, ಕೂಲಿ ಸಂಬಳ, ದೈವದ ಲಾಟರಿ, ಹಿರಿಯರು ಮಾಡಿಟ್ಟ ಆಸ್ತಿ ಇವನ್ನೇ ನಂಬಿ– "ಅನ್ಯಥಾ ಶರಣಂ ನಾಸ್ತಿ ತ್ವಮೇವ ಶರಣಂ ಮಮ"—ಎಂಬ ಭಾವನೆಯಿಂದ ನಡೆದು ನೆಮ್ಮದಿ ಪಡೆಯುತ್ತಾರೆ. ಸಂಕಟ ಬಂದಾಗಲೇ ಅವರಿಗೆ ವೆಂಕಟ ರಮಣನ ಹಂಬಲ.

ಉಪನಿಷತ್ತು ಹೇಳುವಂತೆ, "ನವಾ ಅರೇ ದೇವಾನಾಂ ಕಾಮಾಯ ದೇವಾಃ ಪ್ರಿಯಾಃ ಭವಂತಿ! ಆತ್ಮನಸ್ತು ಕಾಮಾಯ ಏವದೇವಾಃ ಪ್ರಿಯಾಃ ಭವಂತಿ" ದೇವರ ಬಯಕೆಯಿಂದ ದೇವರು ಪ್ರಿಯರಾಗುವದಿಲ್ಲ. ನಮ್ಮ ನಮ್ಮ ಬಯಕೆಯಿಂದಲೇ ದೇವರು ಪ್ರಿಯರಾಗುತ್ತಾರೆ! (ದೇವರು ಮಾತ್ರವಲ್ಲ

ಹೆಂಡಿರು ಮಕ್ಕಳು ಎಲ್ಲರೂ ನಮಗಾಗಿ ನಮಗೆ ಪ್ರಿಯರು!—ಎನ್ನುತ್ತಾರೆ ಪೂಜ್ಯ ಯಾಜ್ಞವಲ್ಕ್ಯರು ಈ ವಚನದಲ್ಲಿ.) ಹೀಗೆ ಪ್ರಾಪಂಚಿಕವಾಗಿ ಲೌಕಿಕವಾಗಿ "ವ್ಯಾವಹಾರಿಕ ಸತ್ತೆ"ಯಲ್ಲಿಯೂ ನಮ್ಮ ಪಾಲಿಗೆ ದೇವರು ಇದ್ದೂ ಇಲ್ಲದಂತೆಯೇ. ವಸ್ತುತಃ ದೇವರು ಇಲ್ಲ; ನಮಗೆ ನಾವೇ ಎಂಬ ಭಾವನೆ ನಮ್ಮ ಬಾಳನ್ನು ಆಳವಾಗಿಯೇ ಆಳುತ್ತದೆಂದರೆ ವಿಶೇಷ ತಪ್ಪಾಗಲಿಕ್ಕಿಲ್ಲ. ದೇವರಿಗೆ ನೈವೇದ್ಯ ಕೊಡುವಾಗ, ಮೀಸಲು ಎಡೆ ಇಡುವಾಗ ಹರಕೆ ಹೊರುವಾಗ, ಡಬ್ಬಿಗೆ ಕಾಣಿಕೆ ಹಾಕುವಾಗ, 'ಸಪಾದ' ಪ್ರಸಾದಕ್ಕಾಗಿಯೇ ಸತ್ಯನಾರಾಯಣ ಮಾಡುವಾಗ, ದೇವಿಗಾಗಿ ಕುರಿ ಕೋಳಿ ಕಡಿದು, "ಅವಲ ಹಬ್ಬ" "ಆವಾರಿ" ನಡೆಯಿಸುವಾಗ ಇಂಥ ಎಲ್ಲದರ ಪ್ರಯೋಜನ ನಮ್ಮ "ಉದರ ವೈರಾಗ್ಯ"ದ ತೃಪ್ತಿಯೇ ಆಗಿರುತ್ತದೆ. ದೇವರು ನಿಜವಾಗಿಯೂ ಅದನ್ನು ಸ್ವೀಕರಿಸುವದಿಲ್ಲವೆಂಬ ಮನೋಭಾವನೆ ನಮ್ಮಲ್ಲಿ ದೃಢವಾಗಿರುತ್ತದೆ'—ಕೋಳೂರ ಕೊಡಗೂಸಿನಿಂದ ರಾಮಕೃಷ್ಣ ಪರಮಹಂಸರವರೆಗೂ ಕೆಲವು ಅಪರೂಪದ ಅಪವಾದಗಳನ್ನು ಬಿಟ್ಟರೆ, ಬಹುಮಟ್ಟಿಗೆ ಡಂಬಾಚಾರ, ಬಹಳಷ್ಟು ಶಿಷ್ಟಾಚಾರ, ಕರ್ಮಠ ಉಪಚಾರ, ಒಂದು ರಸಿಕ ಅಥವಾ ಭಾವನಾಮಯ ಸಾಂಕೇತಿಕತೆ, ಇಲ್ಲವೆ ಜಡ ಮೂಢ ಅನುಕರಣೆ ಇವೆಲ್ಲವುಗಳಿಂದ ನಮ್ಮ ದೇವರ ಕಲ್ಪನೆ, ಆವಾಹನೆ ಮತ್ತು ಆರಾಧನೆ ರೂಪುಗೊಂಡಿರುತ್ತದೆ. ಇಂಥ ಯಾಂತ್ರಿಕ ಆಸ್ತಿಕ್ಯದ ಬೆನ್ನಿಗೆ—ತಳಕ್ಕೆ ಭದ್ರವಾದ ನಾಸ್ತಿಕ್ಯವೇ ನೆಲೆಸಿರುತ್ತದೆ. ಅದನ್ನು ಮೂರ್ಖರು ಅರಿತಿರುವದಿಲ್ಲ; ಧೂರ್ತರು ಒಪ್ಪಿಕೊಳ್ಳುವದಿಲ್ಲ; ಇಷ್ಟೇ ಭೇದ.!

ನಾಸ್ತಿಕರಲ್ಲಿ ನಾನಾ ಪ್ರಕಾರ

ಇನ್ನು ಇದಕ್ಕೆ ವಿರುದ್ಧವಾಗಿ ನಾಸ್ತಿಕರೆಂಬುವರದೂ ಕೆಲವು ಗಮನಾರ್ಹ ಗುಂಪು ಇರುತ್ತವೆ. ಕೆಲವರು ಒಳಒಳಗೆ ಭಾವಿಕರೂ ದೈವಭಕ್ತಿಯವರೂ ಅಂಧ ಶ್ರದ್ಧೆಯವರೂ ಆಗಿರುತ್ತಾರೆ. ಆದರೆ ಅದೇಕೋ ಅದಕ್ಕೆ ನಾಚಿಕೊಂಡು ತಾವು ಆಧುನಿಕರೆಂದು ಕಾಣಿಸಿಕೊಳ್ಳಲಿಕ್ಕೆ ನಾಸ್ತಿಕತೆಯ ಅಥವಾ ನಿರೀಶ್ವರವಾದಿಯೆಂಬ ಸೋಗು ಮೆರೆಸುತ್ತಿರುತ್ತಾರೆ. ಆಫೀಸಿನ, ಕ್ಲಬ್ಬಿನ ಉಡುಪಿನಂತೆಯೇ ಅಂಥವರ ಈ ಸೋಗು. ಇಂಥ ಸೋಗಲಾಡಿಗಳಿಗಿಂತ ಪ್ರಾಮಾಣಿಕ ಅಂಧ ಶ್ರದ್ಧೆಯ ಭಾವಿಕರು ಎಂದೆಂದಿಗೂ ಲೇಸು.

ನಾಸ್ತಿಕರೆಂದೆನಿಸಿಕೊಳ್ಳುವವರ ಇನ್ನೊಂದು ವರ್ಗವಿದೆ. ಅವರದು ದೇವರೊಂದಿಗೆ "ವಿರೋಧ ಭಕ್ತಿ" ಹಿರಣ್ಯ ಕಶಿಪುವಿನಂತೆ, ರಾವಣನಂತೆ,

ಶಿಶುಪಾಲನಂತೆ, ಕಂಸನಂತೆ. ಅವರಿಗೆ ದೇವರೆಂಬ ಸಂಗತಿಯೊಂದಿಗೇ ಒಂದು ಜಾತಿ ವೈರವಿದ್ದಂತೆ, ದೇವರ ಹೆಸರೆತ್ತಿದರೆ ಅಸಹ್ಯ. ದೇವರ ಕಥೆ ಕಲ್ಪನೆಗಳನ್ನು ಕಂಡಲ್ಲಿ ಕೇಳಿದಲ್ಲಿ ಹಳಿಯುವದು, ಹೀಯಾಳಿಸುವದು. ತಾವೇನೋ ಅಂಥವುಗಳನ್ನು ನಂಬುವವರಿಗಿಂತ ಹೇಗೋ ಶ್ರೇಷ್ಠರು ಎಂದು ಕಾಣಿಸಿಕೊಳ್ಳುವದು ಈ ಬಗೆಯ ನಾಸ್ತಿಕರ ಅಟ್ಟಹಾಸ. ಆದರೆ ಇದೂ ಒಂದು ತಿರುವು ಮುರುವಾದ ದೈವಿಕ ಭಾವನೆಯೇ–ಎಂಬ ವಿಚಾರ ಇವರಿಗೆ ಹೊಳೆಯುವದಿಲ್ಲ! ಇಚ್ಛಾ ಸ್ವಾತಂತ್ರ್ಯ ವಿಚಾರ ಸ್ವಾತಂತ್ರ್ಯ ಪ್ರತಿಯೊಬ್ಬರಿಗೂ ಇದೆ. ನಾವು ಮೆಚ್ಚದಿದ್ದನ್ನು ಒಪ್ಪದಿದ್ದನ್ನು ಇನ್ನೊಬ್ಬರು ಮೆಚ್ಚಬಾರದು. ಒಪ್ಪಬಾರದು ಎಂಬ ಹಟವೇಕೆ? ಅಲ್ಲದೆ ಯಾವುದು ಇಲ್ಲವೋ ಅಂಥ ಅಭಾವದ ಕುರಿತು ಇಷ್ಟೆಲ್ಲ ತ್ವೇಷ ದ್ವೇಷ ಪ್ರತಿಭಟನೆಯ ಅಗತ್ಯವೇನು? ಆವಿರ್ಭಾವವಾದರೂ ಹೇಗೆ? ಏಕೆ? ಆದರೆ ಈ ವೀರ ನಾಸ್ತಿಕರಿಗೆ ಇದನ್ನು ಕೇಳಬೇಡಿ. ಏಕೆಂದರೆ ಹೀಗೆ ದೇವರನ್ನು ಹಗೆಯಾಗಿ ನೋಡುವ ಅವರ ದೃಷ್ಟಿಗೆ ದೇವರು ಇರುವನೆಂಬುದು ಸ್ಪಷ್ಟ. ಆದರೆ ಅದೊಂದು ಏನೋ ದುಷ್ಟ ಶಕ್ತಿ; ಅನಿಷ್ಟ ವ್ಯಕ್ತಿ. ಅದನ್ನು ಕಂಡಲ್ಲಿ ಪ್ರತಿಭಟಿಸಬೇಕು–ಪರಧರ್ಮದ ಮೂರ್ತಿ ಭಂಜಕರಂತೆ! ಈ ವೃತ್ತಿಗೆ ಏನೆನ್ನಬೇಕು ? ಇದೊಂದು ಮನೋವಿಕೃತಿ. ಮನೋವಿಶ್ಲೇಷಣೆಯ ಚಿಕಿತ್ಸೆಗೆ ಯೋಗ್ಯವಾದ "ಕೇಸು" ಎನ್ನಬಹುದೇ?

ಇಂಥ ದೈವ ದ್ವೇಷಿಗಳೂ ತತ್ವತಃ ಆಸ್ತಿಕರೇ. ದೇವರನ್ನು ಒಪ್ಪದಿದ್ದರೂ ನಂಬುವವರೇ. ಲೋಕವೆಲ್ಲ ತನ್ನಂತೆಯೇ ದೇವರನ್ನು ತಿರಸ್ಕರಿಸದಿದ್ದರೆ ಇವರಿಗೆ ತನ್ನ ನಾಸ್ತಿಕ್ಯವೇ ದುರ್ಬಲ, ಅಸ್ಥಿರವೆನಿಸುತ್ತಿರಬೇಕು. ಇವರ ನಾಸ್ತಿಕತೆ ಸರಿಯಾದ ವಿಚಾರದಿಂದ, ಜಾಗೃತ ತಿಳುವಳಿಕೆಯಿಂದ, ಪ್ರೌಢವಾದ ಪ್ರಜ್ಞೆಯಿಂದ ಬಂದದ್ದಲ್ಲ. ಏನೋ ಭಾವಾವೇಶದಿಂದ, ಬಾಳಿನ ಆರಂಭದ ಯಾವದೋ ಆಶಾಭಂಗದ ಘೋರ ಪ್ರತಿಕೂಲತೆಗಳ ಕಟುವಾದ ಅನುಭವದಿಂದ ಮನಸ್ಸು ಕೆಟ್ಟಿದ್ದರಿಂದ ಹುಟ್ಟಿದ್ದು. ತಾನು ನೆಚ್ಚಿ ನಂಬಿದ ದೈವ ತನಗೆ ವಿನಾಕಾರಣ ಕೈಬಿಟ್ಟಿತು, ತನ್ನ ಬಾಳು ಹಾಳುಮಾಡಿತು ಎಂಬ ರೊಚ್ಚಿನಿಂದ ಇಂಥವರ ಹೃದಯ ಒಮ್ಮೆಲೇ ನಿಷ್ಠುರವಾಗಿ ಕಠೋರವಾಗಿ ಅವರ ಪಾಲಿಗೆ ದೈವವೇ ಕೆಟ್ಟ ಹಗೆಯೆನಿಸಿಬಿಡುತ್ತದೆ. ನಿಜವಾಗಿಯೂ ಅವರಿಗೆ ಬಾಳಿನಲ್ಲಿ ಇರುವ ನಂಬಿಕೆಯೇ ಹಾರಿಹೋಗಬೇಕು. ಅದರ ಬದಲು ದೇವರೆಂಬ ಅವ್ಯಕ್ತ ಶಕ್ತಿಯಲ್ಲಿಯ ನಂಬಿಕೆ ನಷ್ಟವಾಗಿಬಿಡುತ್ತದೆ. ಮಾತ್ರವಲ್ಲ ಅದನ್ನು ಇದುರಿಸಿ ಅದರ ಹಗೆಯಾಗಿ ಹೋರಾಡಬೇಕೆಂಬ ವಿಚಿತ್ರ ಈರ್ಷೆಯ ಮೊಂಡು ಹಟ ಹುರಿಗೊಳ್ಳುತ್ತದೆ, ನುಣ್ಣಗಿನ ಕಾಜು ಒಡೆದು ಹರಿತವಾದ ಮೊನೆಯ ಚೂರು

ಗಳು ಚೂರಿಯಂತೆ ಚೂಪಾಗಿ ಎದ್ದುನಿಲ್ಲುವಂತೆ. ಇಂಥವರ ನಾಸ್ತಿಕ ತಾತ್ವಿಕವೂ ಅಲ್ಲ, ಅವರ ದೈವ ದ್ವೇಷ ಸಾತ್ವಿಕವೂ ಅಲ್ಲ. ಇನ್ನೊಂದು ಆಕಸ್ಮಿಕ ದೈವಾನುಕೂಲ ಒದಗಿಬಂದರೆ ಇವರ ಈ ದ್ವೇಷ ಒಮ್ಮೆಲೇ ಕರಗಿ, ಇವರು ತಿರುಗಿ ಗಡಿಯಾರದ ಲಂಬಕದಂತೆ–ಇನ್ನೊಂದು ತುದಿಗೆ ಮುಟ್ಟಿ, ಪುನಃ ಆರಂಭದ ದೈವಿಕ ಶ್ರದ್ಧೆಯನ್ನು ಹೊಂದಬಹುದು–ಶಾಪ ಭ್ರಷ್ಟ ಗಂಧರ್ವ ನೊಬ್ಬನು ತನ್ನ ರಾಕ್ಷಸ ರೂಪದಿಂದ ಬಿಡುಗಡೆ ಪಡೆದ ಉಃಶಾಪದ ಫಲವಾಗಿ ಮತ್ತೆ ದಿವ್ಯ ಪುರುಷನಾಗುವಂತೆ!

ಇಂಥ ಬದಲಾವಣೆಯನ್ನು ಕ್ರಮೇಣ ಹೊಂದುವ ಇನ್ನೂ ಒಂದು ನಾಸ್ತಿಕರ ಗುಂಪು ಇದೆ. ಈ ಮಂದಿ ನವ ಯೌವನದಲ್ಲಿ ತುಂಬ ಓದಿಕೊಂಡು ಹೊಸ ವಿಚಾರದ ಗಾಳಿ ತುಂಬಿಕೊಂಡು ತೀಕ್ಷ್ಣ ಬುದ್ಧಿಯಿಂದಲೇ ದೀರ್ಘ ವಿಚಾರ ಮಾಡಿ ದೇವರಿಲ್ಲ; ಸೃಷ್ಟಿಯ ವ್ಯಾಪಾರ–ಗತಿ ಎಲ್ಲ ಸ್ವಯಂಚಾಲಿತ; ಎಂಬ ನಿಲುಮೆಗೆ ತಮ್ಮ ಸಮರ್ಥ ವೈಚಾರಿಕತೆಯಿಂದಲೇ ಬಂದಿರುತ್ತಾರೆ. ತಮ್ಮ ವಾದ–ವಿವಾದ ಲೇಖನ-ಭಾಷಣಗಳಲ್ಲಿ ಈ ಬುದ್ಧಿ ಪ್ರಾಮಾಣ್ಯದ ಭೂಮಿಕೆಯನ್ನೇ ಪ್ರತಿಪಾದಿಸುತ್ತಿರುತ್ತಾರೆ.

ಆದರೆ ವಯಸ್ಸಾದಂತೆ ರಕ್ತದ ಕಾವು, ಕೆಚ್ಚು ಕಡಿಮೆಯಾದಂತೆ ಮನೋ ಬಲ ಕುಗ್ಗಿ, ಬದುಕಿನ ಬವಣೆಗಳಿಗೆ ಹುಣ್ಣಾಗಿ, ಅಂತರಂಗದ ಹಾಗೂ ಬಹಿರಂಗದ ಆಘಾತಗಳಿಗೂ ತತ್ತರಿಸುವಂತೆ ಆಗಿ ಕ್ರಮೇಣ ಸಂಪ್ರದಾಯ ಶರಣರಾಗುವುದುಂಟು. ಕೆಲಕಾಲ ಬಹಿರಂಗದಲ್ಲಿ ಎಂದಿನಂತೆಯೇ ನಿರೀಶ್ವರ ವಾದದ ಆಧುನಿಕ ವಿಚಾರದ ಚರ್ಯೆ ಕಾಣಿಸಿಕೊಂಡರೂ ಅಂತರಂಗದಲ್ಲಿ ಹಳೆಯ ಭಾವುಕತೆ, ಬಾಲ್ಯದ ಸಂಸ್ಕಾರಗಳ ದೈವಭಕ್ತಿ ಮತ್ತೆ ಮೂಡಿಬಂದು ಇಮ್ಮೊಗವಾಗಿ ನಡೆನುಡಿಯುವುದುಂಟು. ಮತ್ತೂ ಮುಂದೆ ಹೋಗಿ ತಾತ ಮುತ್ತಾತರಂತೆ ಪೂರ್ತಿ ಪೂಜಾ–ಪಾಠ ಪಾರಾಯಣಗಳಲ್ಲಿ ಅನುಷ್ಠಾನ ಉಪಾಸನೆಗಳಲ್ಲಿ ತಮ್ಮ ಬಾಳಿನ ಉಳಿದ ಅಂಶವನ್ನು ತೆಪ್ಪಗೆ ಕಳೆಯುವು ದುಂಟು–ಶಿವ ಶಿವಾ ಹರಿ ಹರಿ ಎಂದು ಜಪ ಮಾಡುತ್ತ!

"ನೋಡಿ, ಈ ಮಹಾ ವಿಚಾರವಾದಿಗಳು ಇಂಗ್ಲಂಡ ಅಮೇರಿಕೆಗಳಲ್ಲಿ ಓದಿ ಬುದ್ಧಿವಂತರಾಗಿ ಬಂದವರು, ದೇವ ಧರ್ಮವೆಲ್ಲ ಸುಳ್ಳು ಮೋಸ ಎಂದೆಲ್ಲ ಪ್ರಚಾರ ಮಾಡುತ್ತ ಬದುಕಿದವರು; ಮಹಾ ಸುಧಾರಕರೂ ಕ್ರಾಂತಿ ಕಾರಣರೂ ಎಂದು ಹೆಸರಾದವರು; ಇಂದು ಭಗವದ್ಗೀತೆ, ಉಪನಿಷತ್ತು ಓದು ತ್ತಿರುತ್ತಾರೆ. ವಿಭೂತಿ, ಗೋಪಿಚಂದನ ಹಚ್ಚಿಕೊಳ್ಳುತ್ತಾರೆ. ಅವರಿಂದಾದರೂ ಪಾಠ ಕಲಿಯಿರಿ. ಹೃದಯ ಪರಿವರ್ತನೆಯೆಂದರೆ ಹೀಗೆ, ಇದು ನಮ್ಮ ಸನಾತನ

ಸಂಪ್ರದಾಯದ ಸಂಸ್ಕಾರ ಬಲ—"ಎಂದೆಲ್ಲ ಹಳೆಯ ನಿಷ್ಠಾವಂತರು ಈ ಹೊಸಬರ ಹಿಂದೇಟು ಕಂಡು ತಮ್ಮದೇ ಗೆಲುವಾಯಿತೆಂಬಂತೆ ಹೇಳುವ ದುಂಟು.

ಆದರೆ ಇದು ನಿಜವಾದ ಹೃದಯ ಪರಿವರ್ತನೆಯಲ್ಲ. ಹಳಬತನಕ್ಕೆ ಅಂಧಶ್ರದ್ಧೆಯ ಆಸ್ತಿಕ ಭಾವನೆಗೆ ಹಿಂಜರಿದ ಈ ಹೊಸಬರೆಂಬ ಮಂದಿ ಹೊಂದಿದ್ದು ಹೃದಯ ಪರಿವರ್ತನೆ ಅಲ್ಲ. ಇದು ಕ್ಷುದ್ರವಾದ ಹೃದಯ ದೌರ್ಬಲ್ಯ. ಅವರ ಮೂಲದ ಸ್ವಭಾವ ನಿಜವಾಗಿಯೂ ಹೋಗಿರುವದೇ ಇಲ್ಲ. ಅದು ಗುಪ್ತವಾಗಿತ್ತು. ವಯಸ್ಸು ಬೆಳೆದಂತೆ, ಆಯುಷ್ಯ ಸವೆದಂತೆ, ಅವರ ಸಂಕಲ್ಪ ಶಕ್ತಿ ಕುಗ್ಗಿ, ಮನಸ್ಸಿನ ನಿರ್ಧಾರ, ವಿಚಾರದ ಹರಿತ ಚುರುಕು ಮೊಂಡವಾಗಿ ಅಂತಃಸತ್ವವೇ ಶಿಥಿಲವಾಯಿತು. ಆಗ ಯೌವನ ಮಧ್ಯಮ ವಯಸ್ಸಿನಲ್ಲಿ ಆ ಬುದ್ಧಿ ಪೂರ್ವಕವಾಗಿ ಒಪ್ಪಿಕೊಂಡ ವಿಚಾರವಾದದ ತರ್ಕಶುದ್ಧ ಸೈದ್ಧಾಂತಿಕ ನಿಲುವೇ ಕ್ರಮೇಣ ಹುರಿಗೆಟ್ಟು ದುರ್ಬಲವಾಯಿತು. ಆಗ ನ್ಯೂಟನ್ನನ ಮೊದಲನೆಯ ನಿಯಮದಂತೆ ಮನಸ್ಸು ತನ್ನ ಮೂಲದ ಜಡತ್ವ ವನ್ನು ಪಡೆಯಹತ್ತಿತು. ಗುರುಹಿರಿಯರು ಬಾಲ್ಯದಲ್ಲಿ ಕಲಿಸಿದ ಸಂಸ್ಕಾರ, ಹಾಕಿಕೊಟ್ಟ ಮಾನಸಿಕ ಚಟುವಟಿಕೆಗಳ ಚಟಗಳು ತಿರುಗಿ ತಲೆ ಎತ್ತುವಂತೆ ಆಯಿತು.

ಇದೂ ಒಂದು ರೀತಿಯ "ಎರಡನೆಯ ಬಾಲ್ಯ". ಇದರ ಅರ್ಥ ಪ್ರೌಢಾ ವಸ್ಥೆಯ ಪ್ರಬುದ್ಧ ಬುದ್ಧಿಯ ವಯೋಮಾನದಲ್ಲಿ ಸರಿಯಾಗಿ ಚೆನ್ನಾಗಿ ವಿಚಾರ ಮಾಡಿ ದೃಢವಾಗಿ ನೆಚ್ಚಿಕೊಂಡ ಅಭಿಪ್ರಾಯಗಳು ಹುಸಿಯೆಂದು ಅಲ್ಲವೇ ಅಲ್ಲ. ಅವೇ ಸತ್ಯ ಸಮ್ಯಕ್ ವಿಚಾರ. ಆದರೆ ಮುಂದೆ ಮನೋದೈಹಿಕ ದೌರ್ಬಲ್ಯದಿಂದ ಆತ ಅವುಗಳಿಗೆ ಅಂಟಿಕೊಂಡು ಉಳಿಯದಾದನು. ಇಂಥ ಉದಾಹರಣೆಗಳಲ್ಲಿ ನಾವು ಅಧಿಕೃತವೆಂದು ಒಪ್ಪಿಕೊಳ್ಳಬೇಕಾದದ್ದು ಇವರ ತಾರುಣ್ಯದಲ್ಲಿಯ ಪ್ರೌಢ ಪ್ರಬುದ್ಧ ಅವಸ್ಥೆಯಲ್ಲಿಯ ಕಟ್ಟುನಿಟ್ಟಾದ ಅಭಿ ಪ್ರಾಯಗಳನ್ನೇ ಹೊರತು ಇಳಿಯ ವಯಸ್ಸಿನ ಮರುಕಳಿಸಿದ ಹಳೆಯ ಅಪ್ರಬುದ್ಧ ಅವಸ್ಥೆಯ ಅಭಿಪ್ರಾಯಗಳನ್ನು ಅಲ್ಲಾ.

ದೇವರಂಥ ವಿಷಯಗಳು ಸ್ಥೂಲವಾಗಿ ಆಗಲಿ ಸೂಕ್ಷ್ಮವಾಗಿ ಆಗಲಿ ಭಾವನಾ ಪ್ರಪಂಚಕ್ಕೆ ಸೇರಿದವು. ಅವುಗಳ ಕುರಿತು ವಿಚಾರಗಳು ಅಷ್ಟು ತರ್ಕ ಶುದ್ಧ ನಿರ್ವಿಕಾರ ಇಲ್ಲವೆ ನಿರ್ದಿಷ್ಟವಾಗಿ ಇರುವದು ಅಪರೂಪ. ನಮ್ಮ ಬುದ್ಧಿಯ ಮೇಲೆ ನಮ್ಮ ಮನಸ್ಸಿನ ಪ್ರಭಾವ ವರ್ಚಸ್ಸು ಇಲ್ಲವೇ ಸಂಸ್ಕಾರ ಇರುವ ತನಕವೂ ದೇವರ, ಧರ್ಮದ, ಪಾಪ-ಪುಣ್ಯಗಳ ಬಗೆಗೆ ನಮ್ಮ ವಿಚಾರ

ಗಳು ಬಣ್ಣ ಪಡುವುದುಂಟು; ಬಣ್ಣಗೆಡುವುದುಂಟು. ಗಣಿತಶಾಸ್ತ್ರದ, ಭೌತ ಶಾಸ್ತ್ರಗಳ ನಿಯಮಗಳಂತೆ ಭೂಮಿತಿಯ ಪ್ರಮೇಯಗಳಂತೆ ಅವು ತ್ರಿಕಾಲಾ ಬಾಧಿತವಲ್ಲ. ಇತಿಹಾಸದ ಸುದೀರ್ಘ ನಡೆದು ಬಂದ ದಾರಿಯಲ್ಲಿ ಮಾನವನು ಮುಂದುವರಿದಂತೆ ಅವನ ದೇವನೂ ಸುಧಾರಿಸುತ್ತಾ ಬಂದಿದ್ದಾನೆ. ಇದನ್ನು ಅಲ್ಲಗಳೆಯುವಂತೆಯೂ ಇಲ್ಲ. (ಅದು ಏನು ಎಂತು ಎಂಬ ಕುರಿತೇ ಒಂದು ಪ್ರತ್ಯೇಕ ಪ್ರಬಂಧವನ್ನು ಬರೆಯಬೇಕಾದೀತು.)

ದೇವರ ಕಲ್ಪನೆಯ ಬಗೆಗೆ ನಾಸ್ತಿಕರ ನೋಟ–ನಿಲುಮೆಗಳನ್ನು ಗಮನಿಸುವಾಗ ಅವರ ಸ್ಥೂಲ ವರ್ಗೀಕರಣ ಈ ಬಗೆಯಾಗಿದೆ.

3

ಆಸ್ತಿಕ–ಅನಾಸ್ತಿಕ

ಈ ವರ್ಗೀಕರಣದ ತಳಹದಿಯಾದ ನಾಸ್ತಿಕ್ಯದ ಸ್ವರೂಪವನ್ನು ತುಸು ಆಲೋಚಿಸೋಣ.

ನಾಸ್ತಿಕನು ಯಾರು? ಆಸ್ತಿಕನು ಅಲ್ಲದವನು ನಾಸ್ತಿಕನೋ. ಡಾ. ಶಿವರಾಮ ಕಾರಂತರನ್ನು ಯಾರೋ ಸಂದರ್ಶಕರು ಕೇಳಿದರು "ನೀವು ಆಸ್ತಿಕರೋ ನಾಸ್ತಿಕರೋ?" ಅದಕ್ಕೆ ಅವರು ನೀಡಿದ ಉತ್ತರ "ನಾನು ಅನಾಸ್ತಿಕ" ಈ ಅನಾಸ್ತಿಕನು ಯಾರು? ಈತ ಅತ್ತ ಆಸ್ತಿಕನೂ ಅಲ್ಲ ಇತ್ತ ನಾಸ್ತಿಕನೂ ಅಲ್ಲ! ಆದರೆ "ಅನ್" ಉಪಸರ್ಗ "ನ" ಕಾರವೇ ಅಂದಾಗ ಅನ್+ಆಸ್ತಿಕ ನಾಸ್ತಿಕನೇ ಆಗುತ್ತಾನೆ–ಅನ್+ಆರೋಗ್ಯದಂತೆ. ಆದರೆ ಡಾ. ಕಾರಂತರ ಮಾತು ಬರೇ ಶಬ್ದಭೇದವಲ್ಲ. ಅವರ ಅಭಿಪ್ರಾಯ ತಾನು ಅ–ನಾಸ್ತಿಕ ಹೊರತು ಅನ್ ಆಸ್ತಿಕನೆಂದಲ್ಲ.

ಅಂದರೆ ಇದು ಯಾವ ಜಾತಿ? ಆಸ್ತಿಕನಂತೂ ಅಲ್ಲ. ಆದರೆ ನಾಸ್ತಿಕನೆಂದೂ ಹೇಳಿಕೊಳ್ಳಲಾರ. ಇದು "ಅಜ್ಞೇಯ"ವಾದಿಯೆಂಬ ಅರ್ಥದ ಶಬ್ದ! ದೇವರ ಬಗೆಗೆ ಏನೂ ಹೇಳಲು ಬರುವಂತಿಲ್ಲ; ತಿಳಿಯುವಂತಿಲ್ಲ. ಅಚಿಂತ್ಯವಿದ್ದದ್ದು ಅಗಮ್ಯ. ವರಕವಿ ಬೇಂದ್ರೆಯವರು ಅಂದಂತೆ "ನಾ ಬಲ್ಲೆ ನನಗೆ ಗೊತ್ತಿಲ್ಲವಾದರೂ ಎಲ್ಲಿ ಆಚೆಯಾ ದಂಡೆ" ಆಚೆಗೆ ಏನೋ ಇದೆ. ಆದರೆ ಅದು ಏನು ಹೇಗೆ ಎಂಬುದು ಹೇಳುವದು ಶಕ್ಯವಿಲ್ಲ, ಏನೋ ಇದೆ, ಇರಬೇಕು ಎಂದೆನ್ನುವ ಮಟ್ಟಿಗೆ ಆಸ್ತಿಕ; ಏನೆಂದು ತಿಳಿಯದು, ತಿಳಿಯದಿದ್ದುದು ಒಪ್ಪಿಕೊಳ್ಳಲಾಗದ–ಎಂಬ ಮಟ್ಟಿಗೆ ನಾಸ್ತಿಕ. ಅಂತೆಯೇ ಅನಾಸ್ತಿಕ!

ಇದರ ಅರ್ಥ ಇಷ್ಟೇ ಆಸ್ತಿಕ ಮತ್ತು ನಾಸ್ತಿಕ ಇವರಿಬ್ಬರ ನಡುವೆ ಒಂದೆರಡು ಹಂತಗಳೋ ಮಟ್ಟಗಳೋ ಇರುತ್ತವೆ. ಆಸ್ತಿಕರಲ್ಲಿಯೂ ಹಲವು ದೇವರುಗಳನ್ನು ಭಜಿಸುವವರು ತದ್ವಿರುದ್ಧವಾಗಿ ಏಕೇಶ್ವರೀ ಪಂಥದವರೂ ಇರುತ್ತಾರೆ. ಇವರ ನಡುವೆಯೂ ತಾವು ಒಪ್ಪುವ ಹಲವು ದೇವರುಗಳಲ್ಲಿ ತಮ್ಮ ಹೆಚ್ಚು ಮೆಚ್ಚಿಗೆಯ ದೇವರೇ ಉಳಿದವರಿಗಿಂತ ಮಿಗಿಲು. ಉಳಿದ ದೇವತೆಗಳು ಆ ಒಂದು ದೇವರಿಗೆ ಅಧೀನ–ವಿಧೇಯ ಎಂದು ನಂಬುವ ಪ್ರವೃತ್ತಿಯು ವೈಷ್ಣವ, ಶೈವ, ಗಾಣಪತ್ಯ, ಶಾಕ್ತ ಮುಂತಾದ ಪಂಥದವರಲ್ಲಿ ಇರುತ್ತದೆ. ಆಯಾ ದೇವರ ಕುರಿತ ಪುರಾಣಗಳಲ್ಲಿ ಆಯಾ ದೇವರೇ ಸರ್ವಶ್ರೇಷ್ಠ, ಸಾರ್ವಭೌಮ ಎಂಬ ಭೂಮಿಕೆ ಇರುತ್ತದೆ. ಇದಕ್ಕೆ ಇಂಗ್ಲೀಷನಲ್ಲಿ Henotheism ಎನ್ನುತ್ತಾರೆ. ಇದು ಶುದ್ಧ ಏಕೇಶ್ವರೀ ವಾದವಲ್ಲ. ತಮ್ಮ ಇಷ್ಟ ದೇವತೆಯೇ ಶ್ರೇಷ್ಠವೆನ್ನುವಾಗ ಈ ಭಾವಿಕರು ಇತರ ದೇವತೆಗಳನ್ನು ಅಲ್ಲಗಳೆಯುವುದಿಲ್ಲ. ಅವರನ್ನು ತಾರತಮ್ಯದಿಂದ ಕಾಣುತ್ತಾರೆ.

ಇದರ ಮುಂದಿನ ಹೆಜ್ಜೆ ಏಕೇಶ್ವರೀ ಪಂಥ ಇಲ್ಲವೆ ವಾದ. ಇವರಿಗೆ ಜಗತ್ತಿಗೆಲ್ಲ ಒಬ್ಬನೇ ಈಶ್ವರ. ಬೇರೆ ದೇವರೆಂಬುದೇ ಇಲ್ಲ. ಅವೆಲ್ಲ ಭ್ರಮೆ, ಸುಳ್ಳು ದೇವತೆಗಳು. ಅವುಗಳ ಉಪಾಸನೆ ಆರಾಧನೆ ಎಲ್ಲ ಪಾಖಂಡ, ಖಂಡನಾರ್ಹ. ಈ ಪಂಥದ ಅತಿ ಉಗ್ರನಿಷ್ಠರ ನಿಷ್ಠೆ ಇಸ್ಲಾಂ ಧರ್ಮದಲ್ಲಿ ಕಂಡುಬರುತ್ತದೆ. ಮಹಮ್ಮದ ಪೈಗಂಬರರು ಮಕ್ಕಾದಲ್ಲಿಯ ಪರಂಪರಾಗತವಾಗಿ ಪೂಜೆ ಪಡೆಯುತ್ತಿದ್ದ ಹಲವಾರು ದೇವತೆಗಳನ್ನು ಅಲ್ಲಗಳೆದು, ಇಲ್ಲವಾಗಿಸಿ, ಪೂಜ್ಯ ಕಾಬಾ ಒಂದನ್ನೇ ಸಮಗ್ರ ಅರಬ ಹಾಗೂ ಇಸ್ಲಾಂ ಧರ್ಮದ ಜನತೆ ದೇವರ ಪ್ರತೀಕವಾಗಿ ಮನ್ನಿಸಬೇಕು; ಬೇರೆ ಯಾವ ವಿಗ್ರಹವನ್ನೂ ಪೂಜಿಸಬಾರದು ಎಂದು ವಿಧಿಸಿದರು. ಅಲ್ಲಾ ಒಬ್ಬನೇ ದೇವರು ಇನ್ನಾರೂ ಅಲ್ಲಾ ಇಲ್ಲ. ('ಏಕಂ ಏವ ಅದ್ವಿತೀಯಂ') ಎಂಬ ತತ್ವವನ್ನು ವಸ್ತುತಃ ಇಸ್ಲಾಂ ಧರ್ಮ ಪಾಲಿಸುತ್ತ, ಆಚರಿಸುತ್ತ ಬಂದಿದೆ. ಅನ್ಯ ಧರ್ಮದವರ ಪೂಜಾ ಪ್ರತೀಕಗಳನ್ನು ಧ್ವಂಸ ಮಾಡುವದೇ ಒಂದು ಪವಿತ್ರ ಕರ್ತವ್ಯವೆಂದು ಪ್ರಾಮಾಣಿಕವಾಗಿಯೂ ಪ್ರಾಚೀನ ಮಹಮ್ಮದೀಯ ಪಠಾಣ, ಮುಘಲ ಆದಿ ದೊರೆಗಳೂ ಅವರ ಸೇನಾಪತಿಗಳೂ ನಂಬಿ ನಡೆದದ್ದೂ ಇತಿಹಾಸ ಪ್ರಸಿದ್ಧವಾಗಿದೆ. ಅಂತೆಯೇ ಅವರು ಮೂರ್ತಿ ಭಂಜಕರೆನಿಸಿಕೊಂಡರು.

ಇಂಥ ಏಕೇಶ್ವರೀ ಪಂಥಕ್ಕೆ ಆ "ಏಕೋದೇವ"ನೂ ಪೂರ್ತಿ ಅಮೂರ್ತ, ನಿರಾಕಾರ ಇದು Monotheism (ನಮ್ಮ ಸನಾತನ ಧರ್ಮದಲ್ಲಿ ಇಂಥ

Monotheism ಇಲ್ಲ) ಆದರೆ ಪಾರಮಾರ್ಥಿಕವಾದ ವೇದಾಂತದ Monism –'ಏಕಂ ಸತ್' ಎಂಬ ಬ್ರಹ್ಮತತ್ವವಿದೆ. ಬ್ರಹ್ಮ ಒಂದೇ ಸತ್ಯ. ಅದು ಅದ್ವಿತೀಯವೆಂದು ಪ್ರತಿಪಾದಿಸಿದ ಆದಿ ಶಂಕರಾಚಾರ್ಯರೂ ಅನೇಕ ದೇವ ದೇವತೆಗಳ ಕುರಿತು ಭಕ್ತಿಭಾವಾವೇಶ ತುಂಬಿದ ಸ್ತೋತ್ರಗಳನ್ನು ರಚಿಸಿದ್ದು ಪ್ರಸಿದ್ಧವಿದೆ. ಅಂದರೆ ನಮ್ಮ ಧರ್ಮಶ್ರದ್ಧೆ ಎಲ್ಲ ದೇವತೆಗಳನ್ನೂ ಒಪ್ಪಿ ಕೊಳ್ಳುತ್ತದೆ.

ಆಸ್ತಿಕ್ಯದಲ್ಲಿಯ ಈ ಪ್ರಭೇದಗಳ ಜತೆಗೆ ಇನ್ನೊಂದು ಪ್ರಕಾರವೂ ಇದೆ. ಈ ಪ್ರಕಾರದ ಶ್ರದ್ಧೆ ದೇವರನ್ನು ಒಂದು ವ್ಯಕ್ತಿಯಾಗಿ ಕಾಣುವದಿಲ್ಲ. ಅದೊಂದು ಜಗನ್ನಿಯಾಮಕ ಶಕ್ತಿ–ಆತ್ಮಗಳನ್ನೆಲ್ಲ ಆಳುವ ಪರಮಾತ್ಮ ತತ್ವ ವೆಂದು ಪರಿಗಣಿಸುತ್ತದೆ. ದೇವರನ್ನು ಸಗುಣ ಸಾಕಾರ ಪರಮಪುರುಷ ಇತ್ಯಾದಿಯಾಗಿ ಕಾಣುವದು ನಂಬುವದು Deism. ಆದರೆ ದೇವರನ್ನು ಒಂದು ಪರಮಶಕ್ತಿಯಾಗಿ ತತ್ವವಾಗಿ ಕಾಣುವದು ನಂಬುವದು Deism. ನಮ್ಮಲ್ಲಿ ಆಧುನಿಕ ಯುಗದಲ್ಲಿ ವೇದಾಂತದ–ವೇದಗಳ ಉಪನಿಷತ್ತುಗಳ ತತ್ವಗಳ ಆಧಾರದ ಮೇಲೆ ಪುನರುಜ್ಜೀವನಗೊಂಡ ಹಿಂದೂ ಧರ್ಮದ ಆರ್ಯ ಸಮಾಜ, ಬ್ರಹ್ಮ ಸಮಾಜ, ಪ್ರಾರ್ಥನಾ ಸಮಾಜ ಮುಂತಾದವು ಹೆಚ್ಚು ಕಡಿಮೆ ಇಂಥ ದೇವತ್ವವನ್ನು ಕಲ್ಪಿಸಿಕೊಂಡವು. ಇಲ್ಲಿಯೂ ಸಗುಣ ಉಪಾ ಸನೆಗೆ ಒಂದು "ಆಲಂಬ" ಬೇಕಾದ್ದರಿಂದ ಸಿಖ್ ಪಂಥ ಗ್ರಂಥ ಸಾಹೇಬನನ್ನೂ ಆರ್ಯ ಸಮಾಜದವರು ವೇದೋಕ್ತ ಹೋಮ ಹವನವನ್ನೂ ಇನ್ನಿತರರು ಇನ್ನೇನನ್ನೋ ಪೂಜಾ ಪ್ರತೀಕವಾಗಿಟ್ಟುಕೊಂಡದ್ದು ಕಂಡುಬರುತ್ತದೆ.

ಆಸ್ತಿಕರ ನಿಲುವು

ಇಂಥ ನಿರ್ಗುಣ ನಿರಾಕಾರ ದೇವರ ಉಪಾಸಕರೆಲ್ಲ ಸರ್ವೇಸಾಮಾನ್ಯ ವಾಗಿ ಸರಳ ಮೂರ್ತಿಪೂಜಕ ದೇವತಾರಾಧಕರ ದೃಷ್ಟಿಯಲ್ಲಿ ಒಂದು ರೀತಿ ಪಾಷಂಡಿಗಳೇ, ನಾಸ್ತಿಕರೇ; ವೇದಕಾಲದಲ್ಲಿ ಇಂದ್ರ, ವರುಣ, ರುದ್ರ, ಮರುತ್ ಪ್ರಭೃತಿ ದೇವತೆಗಳನ್ನು ಆರಾಧಿಸುತ್ತಿದ್ದರಾದರೂ ಈ ದೇವತೆಗಳು ಅಸ್ಪಷ್ಟರೇ ಇದ್ದರು. ಪುರಾಣ ಕಾಲದ ವಿಷ್ಣು, ಶಿವ, ದುರ್ಗೆ, ಗಣಪತಿ, ಸುಬ್ರಹ್ಮಣ್ಯ, ಹಯಗ್ರೀವ, ಅಯ್ಯಪ್ಪ, ವೆಂಕಟೇಶ, ಸರಸ್ವತಿ, ಕಾಲಭೈರವ ರಂತೆ ಸುಸ್ಪಷ್ಟ ನಿರ್ದಿಷ್ಟ "ಬಿಂಬ"ಗಳಾಗಿದ್ದಿಲ್ಲ. ಈ ಕೋಟಿಯಲ್ಲಿ ರಾಮ, ಕೃಷ್ಣ, ಪರಶುರಾಮ, ನರಸಿಂಹರೂ ಬಂದರು. ಲಿಂಗ, ಸಾಲಿಗ್ರಾಮ,

ಶ್ರೀಚಕ್ರ ಮುಂತಾದ ಚಿಹ್ನೆಗಳೂ ಬಂದವು. ಈ ವಿಗ್ರಹಾರಾಧಕರಿಗೆ, ಸಗುಣ ದೈವತ್ವಗಳ ಭಕ್ತರಿಗೆ ನಿರ್ಗುಣ ನಿರಾಕಾರ ಧ್ಯಾನಿಗಳೂ ಒಂದು ರೀತಿ ನಾಸ್ತಿಕರೇ!

ಆದಾಗ್ಯೂ, ಭಗವದ್ಗೀತೆಯಲ್ಲಿಯೇ ಒಂದೆರಡು ವಚನಗಳು ದೇವರು ಒಂದು ವ್ಯಕ್ತಿ ಅಲ್ಲ; ಅದೊಂದು ತತ್ವ, ಇಲ್ಲವೇ ಭಾವ ಎಂಬ ನಿಲುವೆಯನ್ನು ಸಮರ್ಥಿಸಿಕೊಂಡಿರುವಂತಿದೆ.

"ಅವಜಾನಂತಿ ಮಾಂ ಮೂಢಾಃ ಮಾನುಷೀ-ತನುಂ ಆಶ್ರಿತಂ"- ನನ್ನನ್ನು ಮೂಢರು ಮನುಷ್ಯ ದೇಹಧಾರಿಯೆಂದು ತಿಳಿಯುತ್ತಾರೆ. ಅಂದರೆ ಹಾಗೆ ತಿಳಿಯುವದು ತಿಳಿಗೇಡಿತನವೆಂದು ಆ ಕೃಷ್ಣ ಪರಮಾತ್ಮನೇ ಹೇಳುತ್ತಾನೆ. ಹಾಗೆಯೇ "ಅವತಾರ"ವಾದದ ಪ್ರಸ್ತಾಪ ಮೊಟ್ಟಮೊದಲಿಗೆ ಭಗವದ್ಗೀತೆ ಯಲ್ಲಿಯೇ ಬರುತ್ತದೆ. ಅದನ್ನು ಪ್ರಸ್ತಾಪಿಸುವ ಆ ಸುಪ್ರಸಿದ್ಧ ಎರಡು ಶ್ಲೋಕಗಳಲ್ಲಿಯೂ "ಸಂಭವಾಮಿ ಯುಗೇ ಯುಗೇ" ಮತ್ತು "ತದಾ ಆತ್ಮಾನಂ ಸೃಜಾಮಿ ಅಹಂ" ಎಂಬ ಮಾತುಗಳಿಂದ ದೇವತ್ವವನ್ನು ಮೂರ್ತೀಕರಿಸುವ 'ಅವತಾರ' ಕಾಲಕಾಲಕ್ಕೆ ಹುಟ್ಟಿಬರುತ್ತದೆ. ಅಂದಾಗ ಆ ಮುಂಚೆ ಅದು ನಿರಾಕಾರ 'ನಿರ್ಗುಣ'ವಾಗಿಯೇ ಇರುವಂತಹದು ಎಂಬ ಭಾವ ವ್ಯಕ್ತವಾಗುವ ದಿಲ್ಲವೇ ?

ಹಾಗೆಯೇ ಇನ್ನೂ ಖಚಿತವಾಗಿ ಭಗವದ್ಭಕ್ತರ ಬಗೆಗೆ ಭಗವಾನ್ ಶ್ರೀಕೃಷ್ಣ ಒಂದು ಸಂಖ್ಯಾ ಪ್ರಮಾಣವನ್ನೇ ಕೊಡುತ್ತಾನೆ. "ಸಾವಿರ ಮನುಷ್ಯರಲ್ಲಿ ಯಾವನೋ ಒಬ್ಬ ಸಿದ್ಧಿಗಾಗಿ ಯತ್ನಿಸುತ್ತಾನೆ. ಅಂಥ ಸಾವಿರ ಸಿದ್ಧರಲ್ಲಿ ಯಾವನೋ ಒಬ್ಬ ತನ್ನನ್ನು ತತ್ವತಃ ತಿಳಿದುಕೊಳ್ಳುತ್ತಾನೆ!" ಅಂದರೆ ಈ ದೇವರೆಂಬುದನ್ನು ವಸ್ತುತಃ ತಿಳಿಯುವದಲ್ಲ, ತತ್ವತಃ ಅದೊಂದು ತತ್ವ ವೆಂದು ತಿಳಿದುಕೊಳ್ಳುವದೇ ಸಿಜವಾದ ಅಂತಿಮ ಸಿದ್ಧಿಯಾಗಿದೆ.

ಗೌತಮ ಬುದ್ಧನು ನಿರೀಶ್ವರವಾದಿ ಆಗಿದ್ದನು. ಮೂರ್ತಿಪೂಜಕ ಸನಾತನ ಧರ್ಮಗಳ ಅಭಿಪ್ರಾಯದಲ್ಲಿ ಬೌದ್ಧ ಧರ್ಮವು ನಾಸ್ತಿಕ. ಆದರೆ ಮುಂದೆ ಭಾವಿಕರ ಸಂಖ್ಯೆಯೇ ಎಲ್ಲ ಧರ್ಮಗಳಲ್ಲಿಯೂ ಹೆಚ್ಚು. ಆದ್ದರಿಂದ ಬೌದ್ಧರೂ ಬುದ್ಧನನ್ನೇ ದೇವತ್ವಕ್ಕೆ ಏರಿಸಿಬಿಟ್ಟರು. ಬುದ್ಧನ ಭವ್ಯ ಪ್ರತಿಮೆಗಳು ಅವನ ಅವಶೇಷಗಳ ಸ್ತೂಪಗಳೂ ಅವನ ವಿಗ್ರಹಗಳ ಪೂಜೆಗಾಗಿ ಚೈತ್ಯಾಲಯಗಳೂ ನಿರ್ಮಾಣವಾದವು. ಹಾಗೆಯೇ ಜೈನರಲ್ಲಿ ಜಿನಪುರುಷ (ತೀರ್ಥಂಕರ)ರ ಬಸದಿಗಳು ಉಂಟಾದವು. ಬೋಧಿಸತ್ವನ,

ವರ್ಧಮಾನ ಮಹಾವೀರನ ಜನ್ಮಾಂತರಗಳ ಕಥೆಗಳ ಜಾತಕ ಪುರಾಣ ಗ್ರಂಥಗಳೂ ಹುಟ್ಟಿಕೊಂಡವು.

ಆದರೂ ಅವ್ಯಕ್ತದ ಉಪಾಸಕರನ್ನು ಈ ಮೂರ್ತಿ ಪೂಜಕರು, ವಿಗ್ರಹಾರಾಧಕರು ಕಡೆಗಣಿಸುತ್ತಿರಲಿಲ್ಲ. ಈ ತತ್ವಚಿಂತಕರೂ ಈ ಪೂಜೆ, ಅರ್ಚನೆ ಮಾಡುವವರನ್ನು ತಿರಸ್ಕರಿಸುತ್ತಿದ್ದಿಲ್ಲ. ಹಿಂದುಗಳಲ್ಲಿಯ ವೇದಾಂತಿಗಳು ಯೋಗಿಗಳು ವಿಗ್ರಹಾರಾಧಕರನ್ನು ಅಲ್ಲಲ್ಲಿ ಟೀಕಿಸುತ್ತಿದ್ದರೂ ಒಟ್ಟಿನಲ್ಲಿ ತಿರಸ್ಕರಿಸುತ್ತಿದ್ದಿಲ್ಲ. ಅದೊಂದು ಬಗೆಯ ಸಹಜೀವನವೇ ನಡೆದು ಬಂದಿತು. ಏಕೆಂದರೆ ಸಾಮಾನ್ಯವಾಗಿ ಇವೆಲ್ಲ ಒಳಭೇದಗಳು ಒಂದು ದೈವಿಕ ಶ್ರದ್ಧೆಯನ್ನೇ ಅನ್ವಯಿಸಿದ್ದವು. ಮೂರ್ತಿ ಪೂಜೆಯನ್ನು ಒಪ್ಪದಿದ್ದರೂ ಜಗತ್ತನ್ನೂ, ಜೀವಕೋಟಿಯನ್ನೂ ನಿಯಂತ್ರಿಸುವ, ಚಾಲನೆಗೊಳಿಸುವವ ಯಾವದೋ ಒಂದು ಮಹಾಶಕ್ತಿ ಇರಬೇಕು–ಇದೆ ಎಂಬ ಭಾವನೆ, ನಂಬಿಕೆ, ಆ ಕುರಿತು ಒಂದು ನಿಷ್ಠೆ ಸಾರ್ವತ್ರಿಕವಾಗಿಯೇ ಇತ್ತು. ನಮ್ಮಲ್ಲಿಯ ಪರಮ ಮೇಧಾವಿಗಳೂ ದಾರ್ಶನಿಕರೂ ಆಚಾರ್ಯಪುರುಷರು ಎನ್ನುವವರೂ ಈ ನಿಷ್ಠೆಯನ್ನು ಮೀರುತ್ತಿರಲಿಲ್ಲ. ಅವರ ವೈಚಾರಿಕತೆ ಪಾರಮಾರ್ಥಿಕ ಅಥವಾ ತತ್ವಾರ್ಥ ಚಿಂತನೆ ನಿರಂಕುಶ ಗತಿಯುಳ್ಳದಿದ್ದಿಲ್ಲ. ಆದು ಈ ಶ್ರದ್ಧೆ ನಿಷ್ಠೆಗಳ ಪರಿಧಿಯೊಳಗೇ ಕೆಲಸ ಮಾಡುತ್ತಿತ್ತು. ಅದು ಧರ್ಮಕ್ಕೆ ಲೋಕಾಚಾರಕ್ಕೆ ಬಹು ಜನ ಸಮುದಾಯದ ಅಂಧಶ್ರದ್ಧೆಗೆ ವಿಧೇಯವಾಗಿ ಅಲ್ಲದಿದ್ದರೂ ಅವಿರೋಧವಾಗಿಯೇ ಪ್ರವರ್ತಿಸುತ್ತಿತ್ತು. ಉದಾಹರಣೆಗೆ, ತಮ್ಮ ಸಿದ್ಧಾಂತಕ್ಕಾಗಿ ತತ್ವಕ್ಕಾಗಿ ಶಿಕ್ಷೆಗೊಳಗಾಗುವ, ಮರಣ ದಂಡನೆಯನ್ನು ಶಾಂತ ಚಿತ್ತದಿಂದ ಒಪ್ಪಿಕೊಳ್ಳುವ ಗ್ಯಾಲಿಲಿಯೋ, ಸಾಕ್ರೆಟಸ್ ನಮ್ಮಲ್ಲಿ ಅಪರೂಪ. "ಯದ್ಯಪಿ ಸಿದ್ಧಂ ಲೋಕ ವಿರುದ್ಧಂ ನಾಚರಣೀಯಂ" ಎಂಬ ಮನೋಧರ್ಮ ಇಲ್ಲಿ ಯಾರನ್ನೂ ಬಿಟ್ಟಿದ್ದಿಲ್ಲ. ನಮ್ಮ ಭಾಸ್ಕರಾಚಾರ್ಯನ ಭಾಸ್ಕರಾಚಾರ್ಯತ್ವ ಅವನ ವೇದ ಶಾಲೆಯಲ್ಲಿಯೇ. ವೇದ ಶಾಲೆಯಿಂದ ಹೊರ ಬಿದ್ದೊಡನೆ ಆತ ಇತರ ಭಾವಿಕ ಜನ ಜಂಗುಳಿಯಂತೆಯೇ. ಸೂರ್ಯ ಚಂದ್ರರ ಗ್ರಹಣಗಳೂ ಗ್ರಹಗತಿಗಳೂ ಏನು ಹೇಗೆ ಎಂಬುದು ಅವನಿಗೆ ಗೊತ್ತು. ಆದರೂ ಗ್ರಹಣ ಮೋಕ್ಷಕ್ಕಾಗಿ ಗ್ರಹಚಾರ ಪೀಡೆಯ ನಿವಾರಣೆಗಾಗಿ ಆತ ಗಂಗಾಸ್ನಾನ, ತಿಲ ತರ್ಪಣ, ಜಪ ತಪ ಅನುಷ್ಠಾನ ಮಾಡಲು ತಪ್ಪುತ್ತಿರಲಿಲ್ಲ. ಇಂಥ ವರ್ತನೆಗೆ ಬಹುಶಃ ಎರಡು ಕಾರಣ. ಒಂದು ಜನಾಭಿಪ್ರಾಯದ ಭಯ– ಅಂದರೆ ನೈತಿಕ ಧೈರ್ಯದ ಕೊರತೆ; ಇನ್ನೊಂದು ತತ್ವ ಬೇರೆ, ಲೌಕಿಕ ವ್ಯವಹಾರ ಬೇರೆ ಎಂಬ ಒಂದು ಅನುಕೂಲ ಮನವರಿಕೆ. ಇದಕ್ಕೆ ಹಿನ್ನೆಲೆ

ಭಗವದ್ಗೀತೆಯಲ್ಲಿಯೇ ನೀಡಲಾದ ಆದೇಶ. "ನ ಬುದ್ಧಿ ಭೇದಂ ಜನಯೇತ್ ಅಜ್ಞಾನಾಂ ಕರ್ಮಸಂಗಿನಾಂ" ಅಂದರೆ ಅಜ್ಞಾನಿಗಳೂ ಕರ್ಮಗಳಲ್ಲಿ ತೊಡಗಿದವರೂ ಆದ ಮುಗ್ಧ ನಂಬಿಗೆಯುವರಲ್ಲಿ ಬುದ್ಧಿ ಭೇದವನ್ನು ಉಂಟು ಮಾಡಬಾರದು. ಅಂಥವರನ್ನು ಸಲ್ಲದ ಸಂಶಯದಲ್ಲಿ ಹಾಕಬಾರದು. ಸಂಶಯಾತ್ಮರು ನಾಶ ಹೊಂದುತ್ತಾರೆ! ಇತ್ಯಾದಿ.

ನಾಸ್ತಿಕರ ಕುರಿತು ಇಂಥ ಬುದ್ಧಿವಂತರ ನಿಲುಮೆ ಒಂದು ಬಗೆಯ ಆತ್ಮ ಸಂರಕ್ಷಣೆಯದು. ಅದು ಹೀಗೆ: ನಾಸ್ತಿಕ್ಯಕ್ಕಿಂತ ಅಸ್ತಿಕ್ಯವೇ ವಾಸಿ. ಏಕೆಂದರೆ ದೇವರು ಇಲ್ಲವೋ ಹಾಗಿದ್ದರೆ ನಾಸ್ತಿ ಪಕ್ಷದಿಂದ ನಮಗೇನು ಹಾನಿ ಇಲ್ಲ. ಆದರೆ ಒಂದು ವೇಳೆ ದೇವರು ಇದ್ದದ್ದೇ ಆದರೆ ? ಆ ಅಸ್ತಿ ಪಕ್ಷದಲ್ಲಿ ನಾಸ್ತಿಕ ಕೆಟ್ಟ! (ದೇವರ ಕೋಪಕ್ಕೆ ದೇವರನ್ನೂ ಇದ್ದೂ ಅಲ್ಲಗಳೆದ ಪಾಪಕ್ಕೆ ಗುರಿಯಾಗಿ) "ನಾಸ್ತಿ ಚೇತ್ ನಾಸ್ತಿ ನೋ ಹಾನಿಃ ಅಸ್ತಿಚೇತ್ ನಾಸ್ತಿಕೋ ಹತಃ"

ಕೆಲವು ವೈಜ್ಞಾನಿಕರ ಅಸ್ತಿಕ್ಯ

ಹೀಗೆ ಶುದ್ಧ ಆಸ್ತಿಕರಿಂದ ಶುದ್ಧ ನಾಸ್ತಿಕರವರೆಗೆ ನಡುವೆ ಹಲವಾರು ಹಂತಗಳೋ ಪ್ರಭೇದಗಳೋ ಕಂಡು ಬರುತ್ತವೆ. ಇವುಗಳಲ್ಲಿ ಅನೇಕ ವೈಜ್ಞಾನಿಕರೂ ಕಂಡು ಬರುತ್ತಾರೆ. ಸರ್ ಐಸಕ್ ನ್ಯೂಟನ್‌ನಂಥವರು ತಮ್ಮ ಅದ್ಭುತ ಮೂಲಗಾಮೀ ನಿಸರ್ಗ ನಿಯಮಗಳ ಶೋಧಗಳಿಂದ ಸೃಷ್ಟಿಯ ರಹಸ್ಯವನ್ನು ಭೇದಿಸಿ ಆ ಮಟ್ಟಿಗೆ ದೇವರ ಕೈವಾಡವನ್ನೇ ಕಿತ್ತು ಹಾಕಿದರು. ಆದರೆ ಈ ವಿಜ್ಞಾನಿಗಳು ತಮ್ಮ ಖಾಸಗೀ ಬದುಕಿನಲ್ಲಿ ಪರಮ ಧಾರ್ಮಿಕರೂ ದೈವಿಕ ಶ್ರದ್ಧೆಯುವರೂ ಅಗಿದ್ದರು. ನೇಮದಿಂದ ಚರ್ಚಿಗೆ ಹೋಗುತ್ತಿದ್ದರು. ಪ್ರಾರ್ಥನೆ ಮಾಡುತ್ತಿದ್ದರು. ತಮ್ಮ ಶೋಧಗಳಿಂದ ದೇವರ ಕರ್ತೃತ್ವವನ್ನೇ ಮೊಟಕು ಮಾಡಿದಂತಾಗಿದೆ, ಅಸ್ತಿತ್ವವೇ ಸಂಶಯಾಸ್ಪದವಾಗಿದೆ ಎಂಬ ಅರಿವೇ ಅವರಿಗೆ ಇದ್ದಿಲ್ಲ. ಇದಕ್ಕೇನೆನ್ನಬೇಕು?

ಇದಕ್ಕೆ ಒಂದೆರಡು ಕಾರಣಗಳನ್ನು ಊಹಿಸಬಹುದು. ಮೊದಲನೆಯದಾಗಿ, ಈ ವಿಜ್ಞಾನಿಗಳ ಲೌಕಿಕ ವ್ಯವಹಾರ (ನಮ್ಮ ಭಾಸ್ಕರಾಚಾರ್ಯರಂಥವರಂತೆಯೇ) ತಾವು ಬೆಳೆದು ಬಂದ ಕುಲದ, ಸಮಾಜದ ಸಂಸ್ಕಾರಗಳ ಬಲದಿಂದ ಬಹುಮಟ್ಟಿಗೆ ಯಾಂತ್ರಿಕವಾಗಿ, ಸಾಂಪ್ರದಾಯಿಕವಾಗಿಯೇ ನಡೆಯುತ್ತ ಮುಂದುವರಿಯುತ್ತದೆ. ಅದೊಂದು ವಿಶೇಷ ಆಲೋಚನೆ ಮಾಡದೆ ಆಚರಿಸುವ ಬದುಕಿನ ಚಟವಾಗಿ ಬಿಟ್ಟಿರುತ್ತದೆ. ನಿರುಪದ್ರವಿಯಾದ ಧಾರ್ಮಿಕ–ದೈವಿಕ ಕ್ರಿಯಾಕಾಂಡಗಳಲ್ಲಿ ಇತರರಂತೆಯೇ ನಡೆಯೋಣ.

ಮಂದಿಯ ಮನಸ್ಸು ನೋಯಿಸುವುದೇಕೆ? ಅದರಿಂದ ತನ್ನ ಮುಖ್ಯ ಕಾರ್ಯಕ್ಕೆ ತೊಂದರೆ ಎಂಬ ಭಾವನೆ ಇಂಥ ಗತಾನುಗತಿಕ ಬದುಕಿಗೆ ಸಮರ್ಥನೆ.

ಎರಡನೆಯದಾಗಿ, ಇಂಥ ಸಂಶೋಧಕರೂ, ವಿಜ್ಞಾನಿಗಳೂ, ಕಲಾವಿದರೂ ತಮ್ಮ ಮುಖ್ಯ ಕಾರ್ಯದ ಒಂದು ಗುಂಗಿನಲ್ಲಿಯೇ ತನ್ಮಯರಾಗಿರುತ್ತಾರೆ. ಹಗಲಿರುಳೂ ಅದೇ ಧ್ಯಾನ, ಅದೇ ಧ್ಯಾಸ. ಅವರ ಜಾಗ್ರತ ಪ್ರಜ್ಞೆ ಅದೊಂದೇ ವಿಷಯದ ಅನುಸಂಧಾನದಲ್ಲಿರುತ್ತದೆ. ಹಾಗಾಗಿ ಅವರಿಗೆ ಲೌಕಿಕ ವ್ಯವಹಾರಗಳೂ ದಿನನಿತ್ಯದ ಕಟ್ಟಲೆ-ಕಂದಾಚಾರಗಳೂ ಒಂದು ಹಗಲುಗನಸಿನ ಯಾಂತ್ರಿಕ ಕ್ರಿಯೆಗಳಂತೆ ನಡೆದು ಹೋಗುತ್ತವೆ. ಅವುಗಳ ಬಗೆಗೆ ಅವರ ಮೇಧಾಶಕ್ತಿ ಆಳಕ್ಕೆ ಇಳಿಯುವದಿಲ್ಲ. ತತ್ವಾನ್ವೇಷಣೆಗೆ ತೊಡುಗುವುದೇ ಇಲ್ಲ.

ಮತ್ತು ಮೂರನೆಯದಾಗಿ, ಎಷ್ಟೋ ಪ್ರತಿಭಾಶಾಲಿ ತತ್ವಚಿಂತನಶೀಲರ ಮನಸ್ಸು ಕಣ್ಣುಪಟ್ಟಿಯ ಕುದುರೆಯಂತೆ ಕೆಲಸ ಮಾಡುತ್ತದೆ. ಅಥವಾ ಅವರ ಮನಸ್ಸಿಗೆ ವಿಭಾಗ (ಕಂಪಾರ್ಟ್‌ಮೆಂಟ್ಸ್)ಗಳಿದ್ದಂತೆ. ಅದಕ್ಕೆ ತಾತ್ವಿಕ ಕಕ್ಷೆಯೇ ಬೇರೆ. ವ್ಯಾವಹಾರಿಕ ಕಕ್ಷೆಯೇ ಬೇರೆ. ಅಲ್ಲಿ ಸಲ್ಲುವದು ಶುದ್ಧ (abstract) ಬುದ್ಧಿ-ಧೀಶಕ್ತಿ, ಇಲ್ಲಿ ಸಲ್ಲುವದು ಸಮಾಜಿಕ ಭಾವನಾವಶವಾದ ಬುದ್ಧಿವಂತಿಕೆ. ಉದಾಹರಣೆಗೆ: ಸಂಗೀತ ವಿದ್ವಾನನು ತನ್ನ ಕೂಸನ್ನು ಆಡಿಸುವಾಗ ಅಜ್ಜಿ ಹಾಡಿದ ಮಟ್ಟಿನಲ್ಲಿಯೇ ಲಾಲಿ ಹಾಡಬಹುದು. ಗಣಿತ ಶಾಸ್ತ್ರಜ್ಞ ಸಂತೆಯ ಧಾರಣೆಯ ಲೆಕ್ಕ ತಪ್ಪಬಹುದು. ಯುದ್ಧದಲ್ಲಿ ಎಂಥ ಪ್ರಹಾರಗಳನ್ನೂ ಸಹಿಸುವ ಯೋಧನು ಕ್ಷೌರಿಕನ ಕತ್ತಿಯ ಗಾಯಕ್ಕೆ ರೇಗಾಡಬಹುದು.

ಅಂದರೇನು? ವೈಜ್ಞಾನಿಕನೋ ವೈಚಾರಿಕನೋ ಸದಾ ಕಾಲವೂ ಉನ್ನತ ಜಾಗೃತ ಬೌದ್ಧಿಕ ಮಟ್ಟದಲ್ಲಿಯೇ ವ್ಯವಹರಿಸುತ್ತಾನೆಂದಿಲ್ಲ,ವ್ಯವಹರಿಸಬೇಕೆಂತಲೂ ಇಲ್ಲ. ನಿಜವಾದ ತಾತ್ವಿಕನಾದ ನಾಸ್ತಿಕನೂ ವ್ಯಾವಹಾರಿಕವಾಗಿ ಮನೆಯವರೊಂದಿಗೋ ಸಮಾಜದಲ್ಲಿಯೋ ಮನೆಯ ದೇವರ ಪೂಜೆ ನೇಮದಿಂದಲೇ ಮಾಡಬಹುದು. ದೇವಸ್ಥಾನಗಳಿಗೆ ಹೋಗಬಹುದು. ಕಂಡ ಗುಡಿಯ ಎದುರು ಕೈಮುಗಿಯಲೂಬಹುದು. ಅದೊಂದು ಜಾಯಮಾನಕ್ಕೆ ಅಂಟಿದ ಚಟ. "ದೇವರಾಣೆ" ಅನ್ನಬಹುದು. 'ಅಯ್ಯೋ ದೇವರೇ' ಎಂದು ಕೂಗಬಹುದು. ಹಾಗೆಂದ ಮಾತ್ರಕ್ಕೆ ಆತ ದೇವರನ್ನು, ದೇವರಲ್ಲಿ ನಂಬುತ್ತಾನೆಂದಲ್ಲ.

ನಾನು ಸ್ವತಃ ಪರಮನಾಸ್ತಿಕ. ಆದರೆ ಬಾಲ್ಯದಿಂದಲೂ ನೋಡಿದ ಮಾಡಿಕೊಂಡು ಬಂದ ದೇವರ ಪೂಜೆಯಲ್ಲಿ ನನಗೊಂದು ಅಂದ. ಒಂದು

ಸೊಗಸು ಕಾಣುತ್ತದೆ. ಅದು ತಪ್ಪಿದಾಗ ಏನೋ ಕಳೆದುಕೊಂಡಂತೆಯೂ ಅನಿಸುತ್ತದೆ. ದಿನಾಲೂ ನೇಮದಿಂದ ಚರಕಾ ನೂಲುವವರಿಗೆ ಆ "ಸೂತ್ರ ಯಜ್ಞ" ತಪ್ಪಿದಂತೆ. ಅದೊಂದು ವಾಡಿಕೆಯ ಒಲವು. ಚಟದ ಒತ್ತಾಯ, ಖಾಸಗೀ ಚೇಷ್ಟೆ ಹೊರತು ಆಸ್ತಿಕತೆಯ ದಾಖಲೆ ಆಗುವುದಿಲ್ಲ.

ಇದನ್ನು ಇಲ್ಲಿ ಒತ್ತಿ ಹೇಳುವದೇಕೆಂದರೆ ಹಲವರು ಜಾಣ ಮಂದಿ ಕೇಳುವದುಂಟು. "ಅಲ್ರೀ ನೀವೆಲ್ಲ ನಾಸ್ತಿಕ್ರು ನಾಸ್ತಿಕ್ರು ಎಂದ್ಕೊಳ್ತೀರಿ. ಆದರೆ ಬಾಯಿಂದ ದೇವ್ರು ದೇವ್ರು ಅನ್ನೋದು ಬಿಡೋದಿಲ್ಲ. ಪೂಜೆ ಬೇರೆ ಮಾಡ್ತೀರಿ. ತುಳಸೀ ಪೂಜೆ, ಮಗನ ಮುಂಜಿ ಮುಂತಾದ್ದೆಲ್ಲ ನಾಸ್ತಿಕನಿಗೇಕೆ ಒಣ ಉಸಾಬ್ರಿ?" ಅಂಥವರಿಗೆ ಉತ್ತರವಿಷ್ಟೇ: ಒಂದು, ಬಾಲ್ಯದಿಂದಲೂ ಕುಲಾಚಾರವಾಗಿ ಇಂಥ ಕೆಲವು ವಾಡಿಕೆ ಅಂಟಿಕೊಂಡು ಬಂದಿರುತ್ತದೆ. ಅವನ್ನು ಬಿಡಬೇಕಾಗಿ ಅನಿಸುವುದಿಲ್ಲ. ಇನ್ನೊಂದು 'ದೇವರಾಣೆ' ಇತ್ಯಾದಿ ಮಾತಿನ ಚಟಗಳು ನಿತ್ಯ ಬಳಕೆಯಾಗಿ ಬಾಯಿಗೆ ಬರುತ್ತವೆ. "ಅಯ್ಯೋ" "ವಾಹವಾ" ಮುಂತಾದವುಗಳಂತೆ. ಕೊನೆಯಲ್ಲಿ, ಈ ಪೂಜೆ, ಮದುವೆ, ಮುಂಜಿ ಇತ್ಯಾದಿ ಗಳಿಗೆ ಒಂದು ಸಾಂಸ್ಕೃತಿಕ ಮೂಲ್ಯಗಳಿರುತ್ತದೆ. ಅವುಗಳಿಂದ ನಮ್ಮ ಸ್ವಂತಿಕೆಯ ಸಂಸ್ಕಾರಗಳಿಂದ ನಮ್ಮ ಮಕ್ಕಳ ಬೆಳೆಯುವ ತಲೆಮಾರಿನ ಭಾವ ಕೋಶ ಸಂಪನ್ನ ಶ್ರೀಮಂತವಾಗುತ್ತದೆ. ಮುಂದೆ ಪ್ರಾಯಪ್ರಬುದ್ಧರಾದ ಮೇಲೆ ಅವರೇ ಬೇಕಾದರೆ (ಅಂದರೆ ಬೇಡವಾದರೆ) ಇವೆಲ್ಲ ವಿಧಿಗಳನ್ನು ಬಿಟ್ಟುಕೊಡಲಿ, ನಮ್ಮ ವಿಚಾರಗಳನ್ನು ಅವರ ಮೇಲೆ ಎಳೆವರೆಯದಲ್ಲಿಯೇ ಹೇರುವದು ಸರಿ ಅಲ್ಲ. ದೇವರೊಂದಿಗೆ, ಆಸ್ತಿಕನೊಂದಿಗೆ ನಾಸ್ತಿಕನಿಗೆ ದ್ವೇಷ ವೈರ ವಿರೋಧವೇಕೆ? Let us agree to differ!

4

ಸ್ಥೂಲವಾಗಿ ಹೇಳುವದಾದರೆ "ದೇವನೊಬ್ಬ ನಾಮ ಹಲವು" ಎನ್ನು ವವರೂ ಆ ಒಬ್ಬನೆಂಬ ದೇವನನ್ನು ಇಬ್ಬಗೆಯಾಗಿ ಕಲ್ಪಿಸುತ್ತಾರೆ. ("ಏಕಂ ಸತ್ ಬಹುಧಾ ಕಲ್ಪಯಂತಿ" ಎಂಬ ವೇದವಾಕ್ಯವೂ ಈ ದೇವರೆಂಬುದು ಬುಡ ದಲ್ಲಿಯೂ ಕೊನೆಯಲ್ಲಿಯೂ ಒಂದು 'ಕಲ್ಪನೆ' ಎಂಬಂತೆ ಒಕ್ಕಣಿಸುತ್ತದೆ.) ಒಂದು ಬಗೆ, ದೇವ ಒಂದು ವ್ಯಕ್ತಿ–ವ್ಯಕ್ತಿತ್ವ; ಬ್ರಹ್ಮ–ವಿಷ್ಣು–ಮಹೇಶ್ವ ರನೋ ಅಥವಾ ಸಹಸ್ರ–ಶೀರ್ಷ ಪುರುಷನೋ. ಅಥವಾ ಆದಿಮಾಯೆ, ಪ್ರಕೃತಿ

ದೇವತೆಯೋ ಈ ವ್ಯಕ್ತಿತ್ವದಲ್ಲಿ ಸರ್ವಶಕ್ತಿತ್ವ, ಸರ್ವಜ್ಞತ್ವ, ಸರ್ವಾಂತರ್ಯಾಮಿತ್ವ, ಸರ್ವತಂತ್ರ ಸ್ವತಂತ್ರತ್ವ ಇತ್ಯಾದಿ ಅತಿ ಮಾನವ ಗುಣಗಳ ಆರೋಪ ಮಾಡಲಾಗುತ್ತದೆ. ಇನ್ನು ಎರಡನೆಯದಾಗಿ, ಅದೊಂದು ಆದಿತತ್ವ, ಪರಮ ತತ್ವ; ಆದಿಕಾರಣ, ಪರಬ್ರಹ್ಮ ಶಕ್ತಿ. ಅದಕ್ಕೆ ಸಗುಣ ನಿರ್ಗುಣ ಎರಡೂ ಶಕ್ತಿಗಳನ್ನು ಆರೋಪಿಸಲಾಗುತ್ತದೆ. ಆದರೆ ಇದರೊಂದಿಗೆ ಮಾನವನಿಗೆ ಭಕ್ತನಿಗೆ ಭಾವನಾಮಯ ಸಂಬಂಧ ಸಂಪರ್ಕ ಸಾಧ್ಯವಿಲ್ಲ. ತತ್ವವೆಂಬ ದೃಷ್ಟಿಯಲ್ಲಿ ಅದು ಪ್ರೇಮ ಸ್ವರೂಪವಲ್ಲ. ಅದು ಧ್ಯಾನಗಮ್ಯ. ಆದರೂ ಬುದ್ಧಿಗೂ ನಿಲುಕದ 'ಆಚೆಯ' ಸಂಗತಿ ಅದು! ಅಂದರೆ ಭಯ, ಭಕ್ತಿ, ಶ್ರದ್ಧೆ, ಉಪಾಸನೆಗಳಿಗೆ ಈ ಪರಬ್ರಹ್ಮ ವಸ್ತು ಇದ್ದೂ ಇಲ್ಲದಂತೆ. ಇದಕ್ಕೆ ಭಾವಿಕ ಸಾಧಕ ಹೃದಯ ಸಹಸಾ ಸ್ಪಂದಿಸಲಾರದು.

ನಾಸ್ತಿಕನು ಯಾರು ?

ಅಂದಾಗ ನಾಸ್ತಿಕನೆಂದರೆ ಯಾರು? ಜಗತ್‌ಸೃಷ್ಟಿಯ ಹಿಂದೆ ಒಂದು ಆದಿಕಾರಣವೆಂಬುದೇನೋ ಇದೆ ಎಂದು ಒಪ್ಪಿಕೊಂಡು, ಆ ಕಾರಣದಿಂದ ಜಡ ಸೃಷ್ಟಿ ಉಂಟಾಗಿದೆ ಎಂಬುದನ್ನೂ ಒಪ್ಪಿಕೊಳ್ಳುವ ತತ್ವಜ್ಞಾನಿ, ನಿರೀಶ್ವರ ಸಾಂಖ್ಯರಂತೆ ತತ್ವಜ್ಞಾನಿಯೇ ಆಗುತ್ತಾನೆ; ದಾರ್ಶನಿಕನೇ ಅನಿಸಿಕೊಳ್ಳುತ್ತಾನೆ. ಆದ್ದರಿಂದಲೇ ನಮ್ಮ ಷಡ್ದರ್ಶನಗಳಂತೆ ಚಾರ್ವಾಕ (ನಾಸ್ತಿಕ) ಮತವೂ ದರ್ಶನವೆಂದು ಪರಿಗಣಿಸಲ್ಪಟ್ಟಿತು.

ಆದರೆ ಈ ಜಗದಾದಿಕಾರಣ ಚೈತನ್ಯವೋ, ಭೌತಿಕ(ಜಡ)ವೋ? ಜಡದಿಂದ ಚೈತನ್ಯವೋ, ಚೈತನ್ಯದಿಂದ ಜಡವೋ? ಕೊನೆಗೂ ಈ ಪ್ರಶ್ನೆಯ ಉತ್ತರದ ಮೇಲೆ ನಿಂತಿದೆ– ಯಾರು ಆಸ್ತಿಕ, ಯಾರು ನಾಸ್ತಿಕನೆಂಬುದು. ಅಲ್ಲಿಯೂ ಸೃಷ್ಟಿ ಮೂಲದಲ್ಲಿ ಚೈತನ್ಯವನ್ನು ಒಪ್ಪಿಕೊಂಡರೆ ಮುಗಿದಂತಿಲ್ಲ. ಆಸ್ತಿಕರು ಈ ಚೈತನ್ಯವನ್ನು, ಶಕ್ತಿಯನ್ನು ಪ್ರಜ್ಞಾಮಯವಾಗಿ ಧೀಮಂತವಾಗಿ ವಿಶ್ವನಿಯಾಮಕ ಪ್ರೇರಣೆಯಾಗಿ ಇರುವದೆಂದು ಗ್ರಹೀತವಿಟ್ಟುಕೊಳ್ಳುತ್ತಾರೆ. ನಮಗೆ ನಾಸ್ತಿಕರಿಗೂ ಈ ಆಸ್ತಿಕರಿಗೂ ಬರುವ ಮೂಲ ಭೇದ ಇದೇ ಆಗಿದೆ.

ಆದಾಗ್ಯೂ ನಮ್ಮ ಭಾರತೀಯ ಸಂಪ್ರದಾಯದಲ್ಲಿ, ಮೂಲದಲ್ಲಿ, ನಾಸ್ತಿಕನೆಂದರೆ ವೇದಗಳನ್ನು ಅಲ್ಲಗಳೆಯುವವನೆಂದೇ ಇದ್ದಿರಬೇಕು. "ನಾಸ್ತಿಕೋ ವೇದ ನಿಂದಕಃ" ಎನ್ನುತ್ತಿದೆ ಮನುಸ್ಮೃತಿ. ಅಂದರೆ ಅದರಲ್ಲಿ ನೇರವಾಗಿ ದೇವರನ್ನು ನಿರಾಕರಿಸುವ ಕಲ್ಪನೆ ಒಳಪಟ್ಟಿದ್ದಿಲ್ಲ. ಆದರೆ, ಮುಂದೆ ಪರಲೋಕವೇ

ಇಲ್ಲವೆನ್ನುವವನು ನಾಸ್ತಿಕನೆಂದು ಹೇಳಲಾಯಿತು. ಪರಲೋಕದ ಬೆನ್ನಿಗೇ ಅದಕ್ಕೆ ಸಾಧನವೆಂಬ ಅದೃಷ್ಟವೂ ಅದಕ್ಕೆ ಸಾಕ್ಷಿಯಾದ ಈಶ್ವರನೂ ಇಲ್ಲವೆಂಬ ಅಭಿಪ್ರಾಯವುಳ್ಳವನು ನಾಸ್ತಿಕನೆಂಬ ವ್ಯಾಖ್ಯೆ ರೂಢವಾಯಿತು. "ನಾಸ್ತಿಕ ಪರಲೋಕಃ ತತ್ಸಾಧನಂ ಅದೃಷ್ಟಂ ತಸ್ಯ ಸಾಕ್ಷೀ ಈಶ್ವರಃ ವಾ ಇತಿಮತಿಃ ಯಸ್ಯ ಸಃ" "ಯತ್ ನಾಸ್ತಿ ಏವ ತತ್ ಅಸ್ತಿ ವಸ್ತುಃ ಇತಿ ಮೃಷಾ ಜಲ್ಪದ್ಭಿಃ ಆಸ್ತಿ-ಕೈಃ" ಇತ್ಯಾದಿ.

ಇದಕ್ಕೆ ವಿರುದ್ಧವಾಗಿ ಆಸ್ತಿಕನು ಪರಲೋಕವು ಉಂಟೆಂದು ತಿಳಿಯುವವನು. ಶಂಕರಾಚಾರ್ಯರ ಹೇಳಿಕೆಯಂತೆ, ಪರಮಾರ್ಥದಲ್ಲಿ ಹಾಗೂ ಆಗಮಗಳ ಅರ್ಥದಲ್ಲಿ ಶ್ರದ್ಧೆಯನ್ನು ಇಡುವಿಕೆಯೇ ಆಸ್ತಿಕ್ಯವು. ("ಆಸ್ತಿಕ್ಯಂ ಶ್ರದ್ಧಧಾನತಾ ಪರಮಾರ್ಥೇಷು ಆಗಮಾರ್ಥೇಷು ಚ") ಆದರೆ ಇನ್ನೊಂದೆಡೆಗೆ ಶಂಕರಾಚಾರ್ಯರೇ ಶ್ರದ್ಧೆಯೆಂದ "ಸತ್ಯಬುದ್ಧ್ಯಾ ಅವಧಾರಣಂ" ಎಂದು ಹೇಳಿದ್ದುಂಟು. ಅಂದರೆ ಒಂದು ಸಂಗತಿಯನ್ನು ಸತ್ಯವೆಂದು ಗ್ರಹಿಸುವದು.

ಆರ್ಯಸಮಾಜದ ಸ್ಥಾಪಕರಾದ ಸ್ವಾಮಿ ದಯಾನಂದ ಸರಸ್ವತಿಯವರು ತಮ್ಮ "ಸತ್ಯಾರ್ಥ ಪ್ರಕಾಶ" ಗ್ರಂಥದಲ್ಲಿ "ಶ್ರದ್ಧಾ"ಶಬ್ದವನ್ನೇ ಹೀಗೆ ವ್ಯಾಖ್ಯಾನಿಸಿದ್ದಾರೆ: ಶ್ರತ್+ಧಾ."ಶ್ರತ್" ಅಂದರೆ ಸತ್ (ಸತ್ಯ) "ಧಾ" ಅಂದರೆ ಧಾರಣೆ ಮಾಡುವದು. ಅಂದರೆ ಸತ್ಯವೆಂದು ಧಾರಣೆ ಮಾಡುವದು.

ಅರ್ಥಾತ್ ಇದೊಂದು ಕೊನೆಗೂ ನಂಬಿಕೆಯ, ಭಾವನೆಯ ವಿಷಯ. ಪರಲೋಕ ಮತ್ತು ಪರಮೇಶ್ವರ ಇವೆರಡು ಸಂಗತಿಗಳನ್ನು ನಂಬದವರು ನಾಸ್ತಿಕರು. ಆದರೂ 'ನಾಸ್ತಿಕ' ಎಂಬ ಶಬ್ದವು ಒಂದು ರೀತಿ ಅಸ್ಪಷ್ಟ-ಸಂದಿಗ್ಧ. ಇಲ್ಲವೆನ್ನುವವ, ಆದರೆ ಏನನ್ನು? ಹಾಗೆಯೇ ಆಸ್ತಿಕ ಇದೆ ಎನ್ನುವವ, ಏನು ಇದೆಯೆನ್ನುವವ? ಅದು ವಾಚ್ಯವಾಗಿಲ್ಲ. ಭಗವದ್ಗೀತೆಯಲ್ಲಿ ಶ್ರೀಕೃಷ್ಣ ವೇದವಾದರತರನ್ನು ಟೀಕಿಸುವಾಗ "ನ ಅನ್ಯತ್ ಅಸ್ತಿ ಇತಿ ವಾದಿನಃ"ಎನ್ನುತ್ತಾನೆ. (ವೇದದ ಹೊರತು) "ಇನ್ನೊಂದು ಇಲ್ಲವೆನ್ನುವವರು" ಎಂದಿದ್ದಾನೆ. ಇಲ್ಲಿಯೂ ಇನ್ನೊಂದು ಇಲ್ಲ; ಯಾವದು ಆ ಇನ್ನೊಂದು? ಸೂಚಿಸಿಲ್ಲ

ಆದರೆ ನಾಸ್ತಿಕನೆಂಬ ಅರ್ಥದ ಇಂಗ್ಲೀಷ ಶಬ್ದ (ಗ್ರೀಕ್ ಮೂಲದ್ದು) ಈ ಕುರಿತು ನೇರ ಹಾಗೂ ಸ್ಪಷ್ಟ. "Atheist" ದೇವರ ಅಸ್ತಿತ್ವವನ್ನೇ ಅಲ್ಲಗಳೆಯುವವನು. "Theos" ಅಂದರೆ ದೇವ "A" ಆದರ ನಿರಾಕರಣೆ. ಡಾ. ಕಾರಂತರು ತಾನು 'ಅನಾಸ್ತಿಕ' ಎಂದಾಗ ಅವರ ನಿಲುಮೆ "ಅಜ್ಞೇಯವಾದಿಯದೆಂಬುದು ಸೂಚಿತವಾಗುತ್ತದೆ. ಈತ 'Agnostic'. ದೇವರ ಬಗೆಗೆ ಅಥವಾ ಭೌತಿಕವಲ್ಲದ ಯಾವದೇ ಸಂಗತಿಯ ಬಗೆಗೆ ಏನೂ ಹೇಳು

ವದು ಸಾಧ್ಯವಿಲ್ಲ. ಅದು "ಜ್ಞೇಯು" (ತಿಳಿಯಬಲ್ಲದ್ದು) ಅಲ್ಲ ಎಂಬ ಅತಿ ಪ್ರಾಮಾಣಿಕ ಮತ್ತು ಪ್ರಾಂಜಲ ನಿಲುಮೆ ಇದು. ದೇವರೆಂಬುದು ಇರಬಹುದು, ಇಲ್ಲದಿರಬಹುದು. ಅದು ನಮ್ಮ ಮಾತಿಗೂ ಮತಿಗೂ ನಿಲುಕದ ಸಂಗತಿ. ನಮ್ಮ ಮತಿಗೆ, ವಿಚಾರಕ್ಕೆ ನಿಲುಕುವ, ಒಳಪಡುವ ಯಾವ ಸಂಗತಿಯೂ ನಮ್ಮ ಬುದ್ಧಿಶಕ್ತಿಗೆ ಗೌಣ. ವಿಧೇಯು "ದೇವತ್ವ" ಹಾಗೆ ಆಗಲು, ಇರಲು ಸಾಧ್ಯವೇ? ಆದ್ದರಿಂದಲೇ ಇರಬೇಕು, ಜೈನರೂ ಬೌದ್ಧರೂ ಭೌದ್ಧಿಕವಾಗಿಯೂ ತಾತ್ವಿಕವಾಗಿಯೂ ದೇವರ ಗೊಡವೆಗೆ ಹೋಗಲಿಲ್ಲ. (ನಿಘಂಟುವಿನಂತೆ ಬಸದಿ ಚೈತ್ಯಾಲಯುಗಳಿಗೆ "ನಾಸ್ತಿಕಾಲಯು"ಗಳೆಂಬ ಹೆಸರು. ಬೌದ್ಧರನ್ನು "ನಾಸ್ತಿವಾದಶೂರ"ರೆಂದೂ ಕ(ಜ)ರೆಯುತ್ತಿದ್ದರು.) ಆದಿಶಂಕರರನ್ನೂ "ಪ್ರಚ್ಛನ್ನಬೌದ್ಧ"ನೆಂದವರುಂಟು!

ಹೀಗೆ ಒಟ್ಟಿನಲ್ಲಿ ನಾಸ್ತಿಕನು ವೇದಗಳ ಪ್ರಾಮಾಣ್ಯವನ್ನು ಒಪ್ಪುವದಿಲ್ಲ. ಏಕೆಂದರೆ, ವೇದಗಳು ಅಪೌರುಷೇಯ. ಅಂದರೆ ಮನುಷ್ಯರು ರಚಿಸಿದ್ದಲ್ಲ, ಅವು ಈಶ್ವರನ ನಿಃಶ್ವಸಿತ. ಆದರೆ ನಾಸ್ತಿಕನು ಅವನನ್ನೆ—ಒಪ್ಪುವುದಿಲ್ಲ. ಅಂದಾಗ, ಅವನ ಉಸಿರೆಲ್ಲಿಂದ ಬಂತು? ಇದಕ್ಕೆ ಆನುಷಂಗಿಕವಾಗಿ ಆವರು ಪರಲೋಕವನ್ನೂ ಪುನರ್ಜನ್ಮವನ್ನೂ ಒಪ್ಪುವದಿಲ್ಲ. ಈ ಜಗತ್ತು, ಈ ಜೀವನ ಒಂದೇ ನಾಸ್ತಿಕನಿಗೆ ಸತ್ಯ. ನಾಸ್ತಿಕನು ದೈವವನ್ನು ಅವಲಂಬಿಸುವ ವಿಧಿಗಳನ್ನೂ ವ್ರತಗಳನ್ನೂ ಅನುಷ್ಠಾನಗಳನ್ನೂ ಆ ಉಪಾಸನೆಗಳನ್ನೂ ಎಲ್ಲ ಕರ್ಮಕಾಂಡವನ್ನೂ ನಂಬುವದಿಲ್ಲ, ಒಪ್ಪುವದಿಲ್ಲ. ಆತ ವೈಚಾರಿಕ ನಿಲುಮೆಯುವನಾಗಿದ್ದರೆ ಇವೆಲ್ಲವುಗಳನ್ನೂ ಕುತೂಹಲದಿಂದ, ಜಿಜ್ಞಾಸೆಯಿಂದ, ವೈಜ್ಞಾನಿಕ ದೃಷ್ಟಿಯಿಂದ ತಿಳಿಯಲು ಅಳೆಯಲು ತೊಡಗಬಹುದು. ಆ ಮಟ್ಟದಲ್ಲಿ ಈ ದೈವಿಕ ಧಾರ್ಮಿಕ ವಿಧಿ ವಿಧಾನಗಳನ್ನೂ ಅವುಗಳ ಪ್ರಕ್ರಿಯೆಗಳನ್ನೂ ಕಲಾತ್ಮಕವಾಗಿಯೋ ಸಮಾಜಶಾಸ್ತ್ರ, ಮಾನವವಂಶಶಾಸ್ತ್ರ ಮುಂತಾದವುಗಳ ವಿಷಯುವೆಂದಾಗಿಯೋ ಪರಿಶೀಲಿಸಬಹುದು. ಪ್ರೀತಿಸಲೂಬಹುದು–ಪಳೆಯುಳಿಕೆಗಳಂತೆ. ಆದರೆ ಆ ಕುರಿತು ಒಂದು ಪೂಜ್ಯ ಭಾವನೆ, ಪವಿತ್ರತೆ, ದೈವಿಕ ಶ್ರದ್ಧೆ ನಾಸ್ತಿಕನ ಮನಸ್ಸಿನಲ್ಲಿ ನೆಲೆಸಿರಲಾರದು. ಇಂಥ ಸಂಶೋಧಕ ನಾಸ್ತಿಕನಿಗೆ ತನ್ನ ಸಂಶೋಧನೆಯೇ ಸತ್ಯದ ಶೋಧನೆಯೇ ಒಂದು ಆರಾಧನೆ, ಹೊರತು ಅಂಥ ಶೋಧನೆಗೆ ಒಳಪಟ್ಟ ವಸ್ತು, ವಿಧಿವಿಧಾನಗಳೆಲ್ಲ ಆ ಮಟ್ಟಿಗೇ ಮಹತ್ವದವು.

ಕಂಡವರಿಗಲ್ಲ ಕಂಡವರಿಗಷ್ಟೆ...?

ದೇವತ್ವದ ಉಗಮ ದೈವಭಕ್ತಿಯ ಸ್ವರೂಪ ಇವುಗಳನ್ನು ಐತಿಹಾಸಿಕ, ಸಾಮಾಜಿಕ, ಸಾಂಸ್ಕೃತಿಕ ಮೌಲ್ಯಗಳಾಗಿ ವಿಚಿಕಿತ್ಸೆಯ ಮೂಲಗಳಾಗಿ ನಿರ್ಲಿಪ್ತ ನಿಚ್ಚಳ ದೃಷ್ಟಿಯಿಂದ ನೋಡಲು ನಾಸ್ತಿಕ ಮೇಧಾವಿಯೇ ಯೋಗ್ಯ ಅಧಿಕಾರಿ. ಅಂಥ ಪರಿಶೀಲನೆಯಲ್ಲಿ ಅವನ ಭಾವನೆ ತೊಡಕಾಗಿ ಹೆಣೆದುಕೊಳ್ಳಲಾರದು. ಹೀಗೆ ವೈಜ್ಞಾನಿಕನ ನಿಲುಮೆ, ಆತ ಮುನ್ನಡೆಯುವ ನಿಟ್ಟು, ತತ್ವತಃ ನಾಸ್ತಿಕ್ಯದ್ದೇ ಆಗಿರುತ್ತದೆ. ಶುದ್ಧ ವಿಚಾರವಾದಿಯೂ, ವೈಜ್ಞಾನಿಕ ದೃಷ್ಟಿಯುಳ್ಳವನೂ ಒಂದಲ್ಲ ಒಂದು ದಿನ–ಅಲ್ಲ ಒಂದು ದಿನ ಮುಂಚೆಯೇ–ನಾಸ್ತಿಕನಾಗುತ್ತಾನೆ. ಅವನ ಅತ್ಯಂತ ಬಲಿಷ್ಠವಾದ ದೂರದರ್ಶಕಕ್ಕೂ ಸೂಕ್ಷ್ಮದರ್ಶಕಕ್ಕೂ ಪಾರದರ್ಶಕ, ಅಪಾರದರ್ಶಕ ಪ್ರಜ್ಞಾನೇತ್ರಕ್ಕೂ ದೇವನೆಂಬ ವಸ್ತು ಗೋಚರಿಸುವದಿಲ್ಲ. ಅಂದಾಗ ವೈಜ್ಞಾನಿಕ ನಾಸ್ತಿಕನ ವಿಚಾರವಾದಿ ದೃಷ್ಟಿಗೆ ತರ್ಕಶುದ್ಧ ಪ್ರಯೋಗಸಿದ್ಧ ಪರಿಶೀಲನೆಗೆ ದೇವತ್ವ ಒಂದು ವಾಸ್ತವ, ಭೌತಿಕ ಸತ್ಯವಾಗಿ ಉಳಿಯುವದೇ ಇಲ್ಲ.

ಒಬ್ಬರಿಗೆ ಕಂಡದ್ದು, ಅವರವರಿಗೆ ಅನಿಸಿದ್ದು ಎಷ್ಟೇ ಸ್ಪಷ್ಟವೂ ಖಚಿತವೂ ಅನಿಸಿದ್ದರೂ ಅದು ಅವರವರ ಪಾಲಿನ ವ್ಯಕ್ತಿಗತ ಆತ್ಮನಿಷ್ಠ ಸತ್ಯವಾಗುತ್ತದೆ. ಅದು "ಕಂಡವರಿಗಷ್ಟೆ ಕಂಡವರಿಗಲ್ಲ" ನಿಜ. ಮೂಕನ ಕನಸಿನಂತೆ ಇನ್ನೊಬ್ಬರಿಗೆ ತಿಳಿಸುವದಾಗಲಿ ಕಾಣಿಸುವದಾಗಲಿ ಶಕ್ಯವಿಲ್ಲ. ಇಂಥ ನೈಜಕ್ಕೂ ಬೆಲೆಯಿದೆ, ಜೀವಾಳದ ಮಹತ್ವವಿದೆ. ಆದರೆ ಅದು ಕೇವಲ ಭಾವನಿಕ, ಆತ್ಮಗತ ಅಥವಾ ಸ್ವಸಂವೇದ್ಯ. ಆದರೆ ವೈಜ್ಞಾನಿಕ ಸತ್ಯವನ್ನು ಸಪ್ರಯೋಗವಾಗಿ, ಪ್ರತ್ಯಕ್ಷವಾಗಿ ಸಾರ್ವಜನಿಕವಾಗಿ ನಾವೆಲ್ಲ ಹಿತವಾಗಿ ಸಮರ್ಥಿಸಿ ಸಾಧಿಸುವದು ಸದಾ ಶಕ್ಯ. ಅದು Socially verfiable ಭಾವನಿಷ್ಠತೆ. ಪ್ರತ್ಯಕ್ಷವೂ ಅಲ್ಲ ಪರೋಕ್ಷವೂ ಅಲ್ಲ. ಅದು ಅಪರೋಕ್ಷ ಅನುಭವ. ಬೆಲ್ಲ, ಜೇನು ಎರಡೂ ಸಿಹಿ–ಆದರೆ ಆ ಸಿಹಿ ಒಂದೇ ಅಲ್ಲ. ನೂರಾರು ಪ್ರವಚನ-ಪ್ರಬಂಧ ಬರೆದರೂ ಈ ಸಿಹಿ ಸಿಹಿಗಳ ಭೇದ ತಿಳಿಸಿ ಹೇಳಲು ಆಗುವುದಿಲ್ಲ. ಆದರೆ ಮಾತೇ ಇಲ್ಲದೆ ಒಂದೊಂದು ಹನಿ ಬೆಲ್ಲವನ್ನೂ ಜೇನುತುಪ್ಪವನ್ನೂ ನಾಲಿಗೆ ಹಚ್ಚಿ ಸವಿದ ಮಾತ್ರಕ್ಕೆ ಆ ಸಿಹಿ ಏನು, ಈ ಸಿಹಿ ಏನು ಎಂಬುದರ "ಸಾಕ್ಷಾತ್ಕಾರ" ತಟ್ಟನೆ ಆಗುವದು.–ಹಾಗೆ ಸವಿದವರಿಗೆ.

ದೇವನೆಂಬುದು ಅಂಥದೇ ಒಂದು ಭಾವಾನುಭವ. ಆದರೆ ಸಿಹಿ ಕಹಿಗಳಿಗಿಂತ ಇನ್ನೂ ಸೂಕ್ಷ್ಮ. ಕಲೆ, ಕಾವ್ಯ, ಸಂಗೀತ, ಹರ್ಷ, ಶೋಕ, ಹಾಸ್ಯ, ಭಯಗಳ ವಿಶಿಷ್ಟ ರಸಾನುಭವದಂತೆ. ಈ ಅರ್ಥದಲ್ಲಿ ಈ ಸುಭಾಷಿತ ಪೂರ್ತಿ

ಸತ್ಯ. "ನ ಗೇವೋ ವಿದ್ಯತೇ ಕಾಷ್ಟೇ ನ ಪಾಷಾಣೇ ನ ಮೃಣ್ಮಯೇ" **"ಭಾವೇಷು ವಿದ್ಯತೇ ದೇವಃ ತಸ್ಮಾತ್ ಭಾವೋಹಿ ಕಾರಣಂ"** ಅಂದರೆ ದೇವನೆಂಬುದು ಒಂದು ಭಾವ. ಅದು ಕಟ್ಟಿಗೆ, ಕಲ್ಲು ಮಣ್ಣುಗಳ ವಿಗ್ರಹವಲ್ಲ. ಕೇವಲ ಮೂರ್ತಿಗಳು ದೇವರಲ್ಲ ಅವು ಒಂದು ಪ್ರತೀಕ, ಎಂಬುದಿಷ್ಟೇ, ಈ ಶ್ಲೋಕದ ಭಾವಾರ್ಥವಲ್ಲ. ದೇವನೆಂಬುದೇ ಒಂದು ಭಾವ–ಭಾವನೆ. ಮಹಾ-ರಾಷ್ಟ್ರದ ಪ್ರಸಿದ್ಧ ಸಂತ ಕವಿ ಏಕನಾಥರೂ ಹಾಗೆಯೇ ಉದ್ಗರಿಸಿದ್ದಾರೆ. "ಭಾವತೋ ಚಿ ದೇವ ಭಾವತೋ ಚಿ ದೇವ ಯಾ ಅರ್ಥೀಂ ಸಂದೇಪ ಮಾನೂ ನಕಾ". ದೇವರು ಮಾನವನನ್ನು ತನ್ನ ಪ್ರತಿಬಿಂಬ ರೂಪದಲ್ಲಿ ನಿರ್ಮಿಸಿದ್ದಾನೆ–ಎನ್ನುತ್ತದೆ ಬೈಬಲು. ಆದರೆ ನಿಜವಾಗಿ ನೋಡಿದರೆ ಪರಿಸ್ಥಿತಿಯು ತೀರ ತದ್ವಿರುದ್ಧವಾಗಿಯೇ ಇರುತ್ತದೆ. ಆಯಾ ದೇಶ ಕಾಲ ಪರಿಸ್ಥಿತಿ ಹಾಗೂ ಮಾನವನ ಅಂದಿನ ಮನಃಸ್ಥಿತಿಯು ಒಟ್ಟಿನ ಮಟ್ಟ ಇವುಗಳ ಫಲಿತವಾಗಿ, ಪರಿಣಾಮವಾಗಿ ಅವರವರ ಕಲ್ಪನೆ, ಕಾಮನೆಗಳಿಗೆ ಅನುರೂಪವಾಗಿ ತಮ್ಮ ತಮ್ಮ ದೇವರುಗಳನ್ನು ಅವರ ಸ್ವರೂಪ–ಸ್ವಭಾವಗಳನ್ನು ಮಾನವ ಸಮಾಜಗಳು ಉಂಟು ಮಾಡಿಕೊಂಡಿದ್ದಾಗಿದೆ.

ನಮ್ಮ ಭಗವದ್ಗೀತೆಯೂ ಒಂದೆಡೆಯಲ್ಲಿ ಇದೇ ಅಭಿಪ್ರಾಯವನ್ನು ಒಡಮೂಡಿಸುತ್ತದೆ. "ಸತ್ವಾನುರೂಪಾ ಸರ್ವಸ್ಯ ಶ್ರದ್ಧಾ ಭವತಿ ಭಾರತ" ಅವರವರ ಸತ್ವಕ್ಕೆ ಮನಃಶಕ್ತಿಗೆ ಅನುರೂಪವಾಗಿ ಅವರವರ ಶ್ರದ್ಧೆ ಇರುತ್ತದೆ. ಮಾತ್ರವಲ್ಲ, ಸ್ಥೂಲವಾಗಿ ಮಾನವರನ್ನು ಸತ್ವ, ರಜ ಮತ್ತು ತಮ ಎಂಬ ಮೂರು ಮಾದರಿಯ ಪ್ರಭಾವ (ಸ್ವಭಾವ) ಪ್ರಕೃತಿಯವರೆಂದು ವರ್ಗೀಕರಿಸಿ, ಗೀತೆಯು ಆಯಾ ಸ್ವಭಾವಕ್ಕೆ ಅನುರೂಪವಾದ ದೇವತಾ ಸ್ವರೂಪಗಳು ಯಾವವೆಂಬುದನ್ನೂ ವಿಶದವಾಗಿ ವ್ಯಾಖ್ಯಾನಿಸಿದೆ. ಅದೆಲ್ಲ ಇಲ್ಲಿ ಅಪ್ರಸ್ತುತ. (ಈ ಶ್ರದ್ಧೆಯ ಸ್ವರೂಪ ವಿಚಾರವು ಈ ಪ್ರಬಂಧದ ವಿಷಯವಲ್ಲ.) ನಮಗೆ ಪ್ರಸ್ತುತವಾದುದೆಂದರೆ– ನಮ್ಮ ದೇವರ ಕಲ್ಪನೆ, ಶಿಲ್ಪನೆ ಮೂಲತಃ ನಮ್ಮಂತೆಯೇ, ನಮ್ಮ ಆಕಾರ–ವಿಕಾರ–ಆಚಾರ–ವಿಚಾರಗಳನ್ನೇ ಹಿಗ್ಗಿಸಿ ಹೆಚ್ಚಿಸಿ ಭಾರಿ ಹಿರಿದಾಗಿಸಿ "ವಿರಾಟ" ರೂಪಗೊಳಿಸಿ ಅಮಾನುಷ, ಅತಿಮಾನುಷ ಪ್ರಮಾಣದಲ್ಲಿ ಕಂಡರಿಸಿದ ಪ್ರತೀಕಗಳು ಪ್ರತಿಮೆಗಳು. ಅಂದರೆ ದೇವರು ಮಾನವನದೇ ಮನೋಬಿಂಬಗಳು. ಶಾಂತ, ಗಂಭೀರ, ಯೋಗಿ, ಸೌಮ್ಯ, ಉಗ್ರ, ರುದ್ರ, ನಿಂತ, ಕುಳಿತ, ಮಲಗಿದ, ಕುಣಿಯುವ, ಗಂಡು, ಹೆಣ್ಣು, ದಂಪತಿ, ಅವಿವಾಹಿತ, ಅರ್ಧಪಶು (ಆನೆ, ಕುದುರೆ, ಹಂದಿ, ಗರುಡ, ಸರ್ಪ ಮುಂತಾದ ಮುಖವುಳ್ಳವು) ಇತ್ಯಾದಿ ಇತ್ಯಾದಿಯಾಗಿ ನಮ್ಮ ದೇವತಾ

ಪ್ರಪಂಚದ ಘಟಕಗಳು ಮಾನವಾಕೃತಿಗಳ ಅಂಶಗಳೇ ಆಗಿವೆ. ಡಾ. ಕಾರಂತರು ಹಿಂದೊಮ್ಮೆ ಹೇಳಿದಂತೆ ರಾಜಾ ರವಿವರ್ಮರು ಚಿತ್ರಿಸದಿದ್ದರೆ ನಮ್ಮ ದೇವತೆಗಳಿಗೂ ನಮ್ಮ ಧ್ಯಾನದಲ್ಲಿ ಬರುವ ಬಿಂಬಗಳಿಗೂ ಆಕಾರವೇ ಇರುತ್ತಿದ್ದಿಲ್ಲ.

ಹೀಗೆ ದೇವರ ಇಂಥ ಮಾನುಷೀಕರಣ (Personification) ನಾವು ಅರ್ಥಮಾಡಿಕೊಳ್ಳಬಹುದು. ಈ ಮನೋವ್ಯಾಪಾರ ಸಹಜ ಸ್ವಾಭಾವಿಕ. ಆದರೆ ಇಂಥ ಒಬ್ಬ "ಆದಿಪುರುಷ"ನನ್ನು "ವಿರಾಟ ಪುರುಷ"ನನ್ನು ಜಗತ್ ಸೃಷ್ಟಿಯ ಮೂಲದಲ್ಲಿ ಸ್ಥಾಪಿಸುವದು, ಅವನಿಂದಲೇ ಸಕಲ ವಸ್ತು ಜಾತ ಜೀವಕೋಟಿಯ ಪ್ರಕೃತಿ ಪ್ರಪಂಚ ಉಂಟಾಯಿತು. ಏಕೆಂದರೆ, ಆತ "ಇರಲಾರನೇಕಾಕಿ" ಎಂದು ತನ್ನ ಒಂಟಿತನಕ್ಕಾಗಿ ಬೇಸರ ಬೇಗುದಿ ಪಟ್ಟನೆಂದು ಭಾವಿಸುವದೂ ನಂಬುವದೂ ವೈಚಾರಿಕ ಹಾಗೂ ಬುದ್ಧಿ ಪ್ರಾಮಾಣ್ಯವಾದಿ ನಾಸ್ತಿಕನಿಗೆ ಏನೂ ಸಮಾಧಾನ ನೀಡದ ಮಾತು.

5

ಅಜ್ಞಾತ ಮೂಲ್ಯ "X"

ಜಗತ್ತು ಹೇಗೆ ಉಂಟಾಯಿತು? ಈ ಸೃಷ್ಟಿ ಚಕ್ರದ ಪ್ರವರ್ತನೆಗೆ ಕಾರಣ ಯಾರು? ಏನು? ಎಂಬ ಪ್ರಶ್ನೆಗಳು ಆದಿ ಮಾನವನನ್ನು ಕಾಡಿದ್ದು ಸ್ವಾಭಾವಿಕ. ಮಾನವನಿಗೆ ಒಂದು ಮನಸ್ಸು ಇದೆ. ಆ ಮನಸ್ಸಿನ ಅಂಗವಾಗಿ ಬುದ್ಧಿಶಕ್ತಿ ಕೆಲಸ ಮಾಡುತ್ತದೆ. ಈ ಬುದ್ಧಿ, ವಸ್ತು ವಸ್ತುಗಳ ಸಂಬಂಧಗಳನ್ನು ಅವುಗಳ ಗುಣ ಧರ್ಮಗಳನ್ನೂ ಅರಿತುಕೊಳ್ಳಲು ಯಾವಾಗಲೂ ಹೆಣಗುತ್ತಿರುತ್ತದೆ. ಸರಿಯಾದ, ಯೋಗ್ಯವಾದ ಸಂಬಂಧ ತಿಳಿದು ಬರುವ ತನಕವೂ ತಿಳಿದುಬಾರದ ತನಕವೂ ಅದು ಏನಾದರೊಂದು ಸಂಬಂಧವನ್ನು ಕಲ್ಪಿಸಿಕೊಳ್ಳುತ್ತದೆ.

ಇಂಥ ಸಂಬಂಧಗಳಲ್ಲಿ ಕಾರ್ಯ ಕಾರಣ ಸಂಬಂಧ ಒಂದು. ಕಾರ್ಯಕ್ಕೆ ಒಂದು ಕಾರಣ, ಕಾರಣಕ್ಕೊಂದು ಕಾರ್ಯ ಹೀಗೆ ಈ ಸಂಬಂಧದ ಸರಪಳಿ. ಇತಿಹಾಸದ ಆರಂಭದಲ್ಲಿ ಮಾನವನ ಕುತೂಹಲ ಮತ್ತು ಜಿಜ್ಞಾಸೆ ತನ್ನ ಸುತ್ತಲಿನ ಆಗುಹೋಗುಗಳ ವಿಶ್ವಪ್ರಪಂಚದ ವಸ್ತು ವ್ಯಾಪಾರಗಳ ಮೂಲವನ್ನು ಅರಸುತ್ತ ಹೋದಂತೆ ಅವನ ಬುದ್ಧಿಗೆ ಎಲ್ಲ ನಿಟ್ಟಿನಲ್ಲಿಯೂ ಏನೋ ಅಗಮ್ಯ ಕಾರಣವಿರುವಂತೆ ಅನಿಸಿತು. ಗುಡುಗು, ಮಿಂಚು, ಮಳೆ, ಋತು ಚಕ್ರ, ಬಿಸಿಲು, ಬೆಳದಿಂಗಳು, ಗಿಡ, ಮರ, ಹೂ,ಕಾಯಿ, ಶಿಶು, ಪಶು, ಹುಟ್ಟು, ಸಾವು ಇವೆಲ್ಲವುಗಳ ಘಟನೆಯ, ಪ್ರಕೃತಿಯ ಸಂಘಟನೆಯ ಹಿಂದೆ ಭವ್ಯ

ಅವ್ಯಕ್ತ ಶಕ್ತಿಗಳು ಕೆಲಸ ಮಾಡುತ್ತಿರುವಂತೆ ಅವನು ಭಾವಿಸುವನು. ಅಂದರೆ ಕಾರಣವೂ ಕಾಣಸಿಗದಲ್ಲಿ ತಿಳಿಯದಿರುವಲ್ಲಿ ಆತ ಕಾರಣವನ್ನೊಂದು ಕಲ್ಪಿಸಿದನು. ಆದಿಯಲ್ಲಿ ಈ ಅಗೋಚರ ಅಗಮ್ಯವಾದ ಕಾರಣಗಳ ಕಲ್ಪ ಬಹು ದೊಡ್ಡದಿತ್ತು. ಆ ಇಡಿಯ "ಆದಿಮೂಲದ ಮೊತ್ತ"ವನ್ನು ಆತ ದೇವರೆಂದುಕರೆದನು-ಬೀಜ ಗಣಿತದಲ್ಲಿ ಅಜ್ಞಾತ ಸಂಖ್ಯೆಗೆ "ಕ್ಷ" (ಎಕ್ಸ್) ಎಂದು ಕರೆಯುವಂತೆ.

ಆರಂಭದಲ್ಲಿ ಈ"ಕ್ಷ"ದ ಅಸ್ತಿತ್ವ ಮತ್ತು ವ್ಯಾಪ್ತಿ ಸಾರ್ವತ್ರಿಕವಾಗಿತ್ತು. ಸೃಷ್ಟಿಯ ಒಳ ಹೊರಗಿನ ವ್ಯಾಪಾರಗಳಿಗೂ ಅದೇ ಒಂದು ಮಹಾ ಕಾರಣವಾಗಿತ್ತು. ಆದರೆ ಮಾನವನ ಶೋಧ ಬೋಧಗಳ ತೆಕ್ಕೆ ಅಗಲವಾದಂತೆ ಆಳವಾದಂತೆ ಅವನ ಅನುಭವದ ಹಾಗೂ ಅವಲೋಕನೆಯ ಅನೇಕ ಕ್ಷೇತ್ರಗಳೂ ವಿಷಯಗಳೂ ಅವನ ಬುದ್ಧಿಯ ಹಿಡಿತಕ್ಕೆ ಬಂದವು. ಅನೇಕ ಪ್ರಶ್ನೆಗಳಿಗೆ ಅವನಿಗೆ ಉತ್ತರೋತ್ತರ ಉತ್ತರಗಳು ಸಿಗುತ್ತ ಹೋದವು. ಮತ್ತು ಆ ಮಟ್ಟಿಗೆ ದೇವರೆಂಬ ಆ "ವಿರಾಟ ಪುರುಷನ" ಸಾಮ್ರಾಜ್ಯ ಮತ್ತು ಆಧಿಪತ್ಯ ಸಂಕುಚಿತವಾಗುತ್ತ ಹೋಯಿತು. ತೀರ ಈಚಿನ ಒಂದು ಉದಾಹರಣೆಯನ್ನೇ ನೋಡಿರಿ. ಪುರಾಣಕಾಲದಿಂದಲೂ ನಮ್ಮ ಚಂದ್ರಲೋಕದ ಆಚೆಯ (ನಮಗೆ ಕಾಣದ) ಮಗ್ಗಲಲ್ಲಿ ಪಿತೃಲೋಕವಿದೆ. ನಮ್ಮನ್ನು ಅಗಲಿ ಹೋದ ಪಿತೃಗಳೆಲ್ಲ ಅಲ್ಲಿ ವಾಸಿಸುತ್ತಾರೆ— ಎಂದು ನಂಬಲಾಗುತ್ತಿತ್ತು. ಆದರೆ ಮೊನ್ನೆ ಮೊನ್ನೆ ಚಂದ್ರಗೋಲದಲ್ಲಿ ಇಳಿದು ಸುತ್ತಿಬಂದ ಗಗನಯಾತ್ರಿಗಳು ಅಲ್ಲಿ ಯಾರನ್ನೂ ಕಾಣಲಿಲ್ಲ! ಜೀವನದ ಅನುಭವದ ಹಾಗೂ ಜಗತ್ತಿನ ರಹಸ್ಯಗಳ ಒಂದೊಂದೇ ಕ್ಷೇತ್ರವು ನಮ್ಮ ವಿಜ್ಞಾನದ ಕಕ್ಷೆಗೆ ಒಳಪಡುತ್ತ ಬಂದಂತೆ ಅಲ್ಲಿಯ ದೇವರ ಅಧಿಕಾರವೂ ಅಸ್ತಿತ್ವವೂ ಮಾನವನ ಅಜ್ಞಾನದೊಂದಿಗೆ ಮಾಯವಾಗುತ್ತ ಬಂದಿದೆ.

ಇವರ ತಾತ್ಪರ್ಯವೇನು? ದೇವರೆಂಬುದು ಮಾನವನ ವೈಚಾರಿಕತೆಯೇ ತನ್ನ ಸಮಾಧಾನಕ್ಕಾಗಿ ಕಲ್ಪಿಸಿಕೊಂಡ ಒಂದು ಸತ್ತೆ— ಮಕ್ಕಳು ಹೆದರುವ "ಗುಮ್ಮ"ನಂತೆ. ಮುಂದೆ ಅವೇ ವೈಚಾರಿಕತೆಯ ವಿಚಿಕಿತ್ಸೆ, ಸಂಶೋಧನೆ ಬೆಳೆದಂತೆ ಈ "ಕ್ಷ" ಗಂಟಿನ ಬೆಲೆ ಏನು ಎಷ್ಟು ಎಂಬುದು ತಿಳಿಯುತ್ತ ಹೋಗುತ್ತದೆ. ಹೀಗೆ ವೈಜ್ಞಾನಿಕ ದೃಷ್ಟಿಯು ಅನಿವಾರ್ಯವಾಗಿ, ಕ್ರಮೇಣ ನಿರೀಶ್ವರವಾದದತ್ತ ನಮ್ಮನ್ನು ಒಯ್ಯುತ್ತದೆ. ವಿಜ್ಞಾನಿಗೇ ಗೊತ್ತಾಗದಂತೆ ಆತ ತತ್ವತಃ ನಾಸ್ತಿಕನಾಗುತ್ತಾನೆ. ಅವನಿಗೆ ಜೀವಾಣುವಿರಲಿ, ಪರಮಾಣುವಿರಲಿ" ಅಂತರಿಕ್ಷವಿರಲಿ, ಅಂತರಂಗವಿರಲಿ— ಎಷ್ಟೇ ಅಗಮ್ಯವಾದರೂ-ರಮ್ಯವೇ ಹೊರತು ದಿವ್ಯವೆನಿಸುವದಿಲ್ಲ. ಅನ್ವೇಷಣೆಗೆ ಗುರಿ

ಯಾಗಬಲ್ಲ ಯಾವ ರಹಸ್ಯವೂ-ಅದು ಅಜ್ಞಾತವೇ ಆಗಿರಲಿ, ಅಜ್ಞೇಯವೇ ಆಗಿರಲಿ-ಅವನ ಧೀಶಕ್ತಿಗೆ ಒಂದು ಆಹ್ವಾನ, ಒಂದು ಸ್ವಾರಸ್ಯದ ಒಗಟು ಹೊರತು ಆ ಕುರಿತು ಅವನಿಗೆ ಯಾವದೇ ಬಗೆಯ ಪೂಜ್ಯತೆ ಪವಿತ್ರತೆಯ ಗೂಢ ಗಾಢ ಭಾವನೆ ಉಂಟಾಗಿರುವದಿಲ್ಲ. ಭೌತಶಾಸ್ತ್ರೀಯವಾಗಿಯೋ ತತ್ವಶಾಸ್ತ್ರೀಯವಾಗಿಯೋ ಮನೋವೈಜ್ಞಾನಿಕವಾಗಿಯೋ ಶುದ್ಧ ವೈಚಾರಿಕವಾಗಿಯೋ ಅದೊಂದು ಅವನು ತಿಳಿಯಲು, ತಿಳಿಸಲು ಹೆಣಗುವ ವಾಸ್ತವ ಸತ್ಯ.

ದೇವರು: ಒಂದು ರೂಪಕ, ಸಂಕೇತ

ಈ ವೈಚಾರಿಕ—ನಾಸ್ತಿಕನ ನಿಲುಮೆಯಂತೆ ದೇವರೆಂಬುದು ಒಂದು ರೂಪಕ; ಒಂದು ಪ್ರತೀಕ; ಒಂದು ಸಂಕೇತ. ತೀರ ಭಾವನಾಮಯ ಮನಸ್ಸು ಅದನ್ನು ಒಂದು ತೇಜಃಪುಂಜವಾದ ಶಕ್ತಿಯಾಗಿ, ದಿವ್ಯ ಭವ್ಯ ವ್ಯಕ್ತಿಯಾಗಿ ರೂಪಿಸಬಹುದು. ಅದರ ಉತ್ಕಟ ಪ್ರಭಾವಕ್ಕೆ ತಾನೂ ತೀವ್ರವಾಗಿ ಸ್ಪಂದಿಸಬಹುದು. ಮನಸ್ಸಿನಲ್ಲಿರುವದನ್ನು ಕನಸಿನಲ್ಲಿಯೂ ಕಾಣಬಹುದು— ದೃಷ್ಟಾಂತವಾಗಿಯೋ, ಸಾಕ್ಷಾತ್ಕಾರವಾಗಿಯೋ ಪ್ರಭಾವ ಬೀರಬಹುದು. ಆದರೆ ಎಷ್ಟೇ ಪ್ರಭಾವಿಯಾದರೂ, ಭಾವಾವೇಶಕ್ಕೆ ಕಾರಣವಾದರೂ ಇದೊಂದು ವಾಸ್ತವ ಸತ್ಯವಲ್ಲ- ಸಂಗೀತದ ರಾಗ ರೂಪದಂತೆ! ಅದರ ರುಚಿ ಇದ್ದವರಿಗೆ, ಪ್ರಜ್ಞೆ ಇದ್ದವರಿಗೆ ಮಾತ್ರ ಅದೊಂದು ಭಾವಸಿಕ ಸತ್ಯ.

ಇನ್ನು ಈ ದೇವರು ಸರ್ವಾಂತರ್ಯಾಮಿಯೂ ವಿಶ್ವಾತ್ಮಕನೂ ಎಂದು ತಿಳಿದರೂ ಪ್ರತಿಯೊಂದು ಜೀವಿಯ ಜಡ ವಸ್ತುವಿನ ಜೀವಾಳವಾದ ಆ ಚೇತನವು ಒಂದೊಂದು ಅಂಶವಾಗಿ ಸತ್ಯ. ಹೊರತು ಅದರ ಸಾರ್ವಭೌಮ ಸಾರ್ವತ್ರಿಕ ಅಥವಾ ಸರ್ವೇಶ್ವರನೆಂಬ ಸ್ವರೂಪ ಕೇವಲ ಭಾವಗಮ್ಯ—ಮನೋಮಯ ಕಲ್ಪನೆ (Mental Abstraction). ಭಗವದ್ಗೀತೆಯಲ್ಲಿ ಉಕ್ತವಾದ ಈ ಮಾತುಗಳನ್ನು ನಾವು ಪರಮಾರ್ಥತಃ ಹೀಗೆಯೇ ಗ್ರಹಿಸಬೇಕು. "ಮಮ ಏವ ಅಂಶೋ ಜೀವಲೋಕೇ ಜೀವಭೂತಃ" "ಸರ್ವಸ್ಯ ಚ ಅಹಂ ಹೃದಿ ಸನ್ನಿವಿಷ್ಟಃ" "ಈಶ್ವರ: ಸರ್ವ ಭೂತಾನಾಂ ಹೃದ್ದೇಶೇ ಅರ್ಜುನ ತಿಷ್ಠತಿ" (ಜೀವಲೋಕದಲ್ಲಿ ಜೀವವಾಗಿರುವದು ನನ್ನ ಅಂಶವೇ—ಪ್ರತಿಯೊಬ್ಬನ ಹೃದಯದಲ್ಲಿಯೂ ನಾನು ನೆಲೆಸಿದ್ದೇನೆ— ಅರ್ಜುನನೇ ಈಶ್ವರನು ಎಲ್ಲ ಭೂತಗಳ ಹೃದಯದಲ್ಲಿ ಇರುತ್ತಾನೆ.) ಇದೆಲ್ಲದರ ಅರ್ಥ

ಈಶ್ವರನು ಒಡೆದು ಬಿಡಿ ಬಿಡಿ ಅಂಶವಾಗಿ ಜಡ ವಸ್ತುಗಳಲ್ಲಿ ಪ್ರಪಂಚದಲ್ಲಿ ಸೇರಿಕೊಂಡಿರವನೆಂದಲ್ಲ. ಪ್ರತಿ ಹೃದಯದಲ್ಲಿಯೂ ಈಶ್ವರನಿರುತ್ತಾನೆಂದಾಗ ಆಯಾ ಹೃದಯದ-ಮನೋ ದೇಹದ ಮಟ್ಟಿಗೆ ಆತ ಸ್ವಯಂಭೂ, ಸ್ವತಂತ್ರ, ಸ್ವಾಯುತ್ತ ಆಯಾ ದೇಹಕ್ಕೆ ಆಯಾ ಆತ್ಮಕ್ಕೆ ದೃಢಗಾತ್ರ.

ನಾಸ್ತಿಕನು ದೇಹಾತ್ಮವಾದಿಯಾಗಬಹುದು. ಆದರೆ ಪರಮಾತ್ಮವಾದಿ ಅಲ್ಲ. ಜಡದಿಂದ ಬೇರೆಯಾಗಿ ಚೇತನಕ್ಕೆ, ದೇಹದಿಂದ ಬೇರೆಯಾಗಿ ಜೀವಾತ್ಮಕ್ಕೆ, ದ್ರವ್ಯದಿಂದ ಬೇರೆಯಾಗಿ ಗುಣಕ್ಕೆ ಅಸ್ತಿತ್ವವಿರಲಾರದು. ಕೆಲವೊಂದು ರೀತಿಯಲ್ಲಿ ಒಟ್ಟುಗೂಡಿ ಹೊಂದಿಕೊಂಡು ವಿರುದ್ಧ ವಸ್ತುಗಳ ಸಂಘಟಿತವಾದ ಕ್ರಿಯೆ ಪ್ರತಿಕ್ರಿಯೆಗಳ ಪರಿಪಾಕವೇ ಶಕ್ತಿ, ಚೇತನ್ಯ, ಜೀವೋತ್ಪತ್ತಿ ನೆಲ್ಲಿ ತಿಂದು ನೀರು ಕುಡಿದಾಗ ನಾಲಿಗೆಗೆ ಸವಿಯ ರುಚಿ ಅನಿಸುತ್ತದೆ. ಆ ಸವಿನೆಲ್ಲಿಯಲ್ಲಿಯೂ ಇಲ್ಲ ನೀರಿನಲ್ಲಿಯೂ ಇಲ್ಲ. ನಾಲಿಗೆಯಲ್ಲಿಯೂ ಇದ್ದಿಲ್ಲ. ಆಕ್ಸಿಜನ್ ಗುಣ ಧರ್ಮ ಬೇರೆ, ಹೈಡ್ರೋಜನ್ ಗುಣಧರ್ಮ ಬೇರೆ-ಕೆಲಮಟ್ಟಿಗೆ ಪರಸ್ಪರ ವಿರುದ್ಧ ಆದರೆ ಅವೆರಡು ಅನಿಲಗಳ ಸಂಯೋಗದಿಂದ ಉಂಟಾದ ನೀರು? ಅದು ಅನಿಲವಲ್ಲ, ಪ್ರವಾಹಿ. ಆ ಎರಡೂ ಅನಿಲಗಳ ಗುಣಧರ್ಮಗಳಿಂದ ಭಿನ್ನವಾದುದೇ ನೀರಿನ ಗುಣಧರ್ಮ! ಮೂಲದಲ್ಲಿ ಇಲ್ಲದ ಈ ಹೊಸ ಅವಿಷ್ಕಾರ ಹೇಗೆ ಎಲ್ಲಿಂದ ಬಂತು? ಇದನ್ನು ನಾವು ರಾಸಾಯನಿಕ ಕ್ರಿಯೆ ಎನ್ನುತ್ತೇವೆ. ಹಾಗೆಯೇ ವಿದ್ಯುತ್ ಶಕ್ತಿಯ ಉತ್ಪತ್ತಿಯೂ ಒಂದು ರಾಸಾಯನಿಕ ಕ್ರಿಯೆ. ಈ ರೀತಿ ಮೂಲ ಪರಮಾಣುಗಳ ಸಂಖ್ಯೆ ಹೆಚ್ಚು ಕಡಿಮೆ ಆಗಿ ಕೂಡಿಕೊಂಡ ಮಾತ್ರಕ್ಕೆ ಮೂಲ ಧಾತು-ಲೋಹಗಳೇ ಬೇರೆ ಬೇರೆ ಆಗುತ್ತವೆ. ಒದರಂತೆ ಒಂದಿರುವದಿಲ್ಲ. ಆ ಮೂಲ ಪರಮಾಣುವನ್ನು ಒಡೆದರೆ? ಅದೊಂದು ಪ್ರಚಂಡ ವಿದ್ಯುತ್ ಸ್ಫೋಟ! ಕೊನೆಗೂ ಜೀವಸೃಷ್ಟಿಗೆ ಅಡಿಪಾಯ ಜಡ ಸೃಷ್ಟಿ. ಜಡ ಸೃಷ್ಟಿಯ ಮೂಲ ಘಟಕ ಈ ವಿದ್ಯುತ್ ಶಕ್ತಿ ಸ್ಪಂದನ. ಆದರೆ ಅಲ್ಲಿ ಸರ್ವಶಕ್ತಿ ಸರ್ವಜ್ಞ ಸ್ವರೂಪದ ಒಂದು ವಿರಾಟ ಪ್ರಜ್ಞೆ ಎಂಬುದು ಇರುವುದಿಲ್ಲ. ಇರುವದು ಶಕ್ಯವೂ ಇಲ್ಲ.

ಅದೇನೇ ಇದ್ದರೂ ಈ ರಾಸಾಯನಿಕ ಕ್ರಿಯೆಯಿಂದ ಇಲ್ಲವೆ ಮೂಲದಲ್ಲಿ ಇಲ್ಲದ್ದು ಪರಿಣಾಮದಲ್ಲಿ ಬರುವಂಥ ಪಲ್ಲಟ (Mutation) ಪ್ರಕ್ರಿಯೆಯಿಂದ ಜಡ-ಜೀವ-ಆತ್ಮಗಳ ಕ್ರಮ ಪರಿವರ್ತನೆ, ಪ್ರಕೃತಿಯ ಸಹಜ- ವ್ಯಾಪಾರ ಸ್ವಯಂ ಪ್ರೇರಿತ, ಸ್ವಯಂಭೂ, ತಾನೇ ತಾನಾಗಿ ಒದಗಿ ಬರುವದು. ಇದನ್ನೇ 'ಋತು'ವೆನ್ನಿ, ಕರ್ಮವೆನ್ನಿ, ಧರ್ಮವೆನ್ನಿ, ಆದರೆ ಇದರ ಹಿಂದೆ

ದೈವ, ದೈವಿಕತೆ, ಆಧಿ ಮಾನಸ ಇತ್ಯಾದಿ ಕೇವಲ ಮಾತಿನ ಜಾಣತನ. ಅಂದಾಗ ಈ ಕಾರ್ಯ ಕಾರಣಶೃಂಖಲೆಯನ್ನು ಅರಿತು ಅದಕ್ಕೆ ಹೊಂದಿಕೊಂಡು ಬದುಕುವದು ನಮ್ಮ ಕರ್ತವ್ಯ ಮತ್ತು ಭೋಕ್ತೃವ್ಯ. ಅದರ ಮೂಲ (ಆದಿ) ಕಾರಣವೆಂಬುದನ್ನು ಊಹಿಸಿ, ಕಲ್ಪಿಸಿ ಅದನ್ನು 'ಬ್ರಹ್ಮ'ವೆಂದೋ 'ತತ್' ಅಥವಾ 'ಸತ್'ಎಂದೋ ಪರಿಭಾವಿಸಿಕೊಳ್ಳಬಹುದು. ಆದರೆ ಅದಕ್ಕೆ ಒಂದು ಬೃಹತ್ ಮಹತ್ ವ್ಯಕ್ತಿತ್ವವೆಂದು ರೂಪಗುಣಗಳನ್ನು ಆರೋಪಿಸಿ ಅದರ ನಿಗ್ರಹಾನುಗ್ರಹಗಳಿಗಾಗಿ ಅದನ್ನು ಶಿವನೋ ಗಣಪತಿಯೋ ವಿಷ್ಣುವೋ ಸರಸ್ವತಿಯೋ ರಾಮನೋ ಕೃಷ್ಣನೋ ದತ್ತಾತ್ರೇಯನೋ ದುರ್ಗೆಯೋ ಮಾರಿಯೋ ಮಾಸ್ತಿಯೋ ಎಂದು ವಿಗ್ರಹ ಮಾಡಿ ಆರಾಧಿಸುವದು ಒಂದು ದೃಷ್ಟಿಯಲ್ಲಿ ಆಯುಷ್ಯದ ಅಪವ್ಯಯವೇ ಎನ್ನಬಹುದು.

ಪೂಜೆಯ ಸಮರ್ಥನೆ

ಈ ಕುರಿತು ಹಲವು ಪ್ರಾಜ್ಞರು ಈ ರೀತಿ ಸಮರ್ಥನೆ ಹೂಡುತ್ತಾರೆ. ನಿರ್ಗುಣದ ಉಪಾಸನೆ, ನಿರಾಕಾರ ತತ್ತ್ವದ ಆರಾಧನೆ ನಮ್ಮ ಮನಸ್ಸಿಗೆ ಒಗ್ಗದು. ಅದಕ್ಕಾಗಿ ಅದರ ಪ್ರತೀಕವನ್ನು, ದೇವತಾಮೂರ್ತಿಯನ್ನೂ, ಓಂ ಕಾರ, ಸ್ವಸ್ತಿಕ, ಶ್ರೀಚಕ್ರ, ಲಿಂಗ, ಸಾಲಿಗ್ರಾಮ, ನರ್ಮದಾ ಬೆನಕದಂಥ ಚಿಹ್ನೆಗಳನ್ನು ಇಟ್ಟುಕೊಂಡು ಪೂಜೆ ಮಾಡುವದು. ಅವನ್ನೇ ದೇವರೆಂದು ನಂಬುವ ಪ್ರಮೇಯವಿಲ್ಲ. ಇತ್ಯಾದಿ.

ಆದರೆ ಇದೆಲ್ಲ ಮಾತಿನ ಮೋಡಿ. ಏಕೆಂದರೆ ಬಹುಶಃ ಎಲ್ಲ ಭಾವಿಕರೂ ತಾವು ಪೂಜಿಸುವ ಪ್ರತೀಕವನ್ನೇ ದೇವರೆಂದು ಮನವಾರೆ ನಂಬಿ ಭಜಿಸುತ್ತಾರೆ. ಈ ಪ್ರತೀಕ ಪ್ರತಿಮೆಯಾಗಿರಲಿ, ದೇವದಿಕರ, ತಮ್ಮ ಗುರುಗಳ ಭಾವಚಿತ್ರಗಳಾಗಿರಲಿ, ಅವುಗಳಿಂದಲೇ ತಮ್ಮ ಇಷ್ಟಪೂರ್ತಿಯನ್ನು ಪಡೆಯಲು ಹಂಬಲಿಸುತ್ತಾರೆ. ಇದೊಂದು ಪರಮಾತ್ಮ ತತ್ತ್ವದ ಸಂಕೇತ. ತಮ್ಮ ಮನಸ್ಸಿನ ಏಕಾಗ್ರತೆಗಾಗಿ ಒಂದು ಆಧಾರವೆಂದು ಭಾವಿಸುವವರು ತೀರ ವಿರಳ. ಇನ್ನೊಂದು ಸಂಗತಿ ಎಂದರೆ, ಎಳೆ ಮಕ್ಕಳಿಗೆ ನಡೆಯಲು ಬರುವ ವರೆಗೆ ಹಿಡಿದು ಮುನ್ನಡೆಯಲಿಕ್ಕೆ ಮೂರು ಗಾಲಿಗಳ ಕೈಗಾಡಿ ಕೊಡುವದಿಲ್ಲವೇ ಹಾಗೆಯೇ ಈ ಪ್ರತೀಕಾರಾಧನೆ ನಿರ್ಗುಣೋಪಾಸನೆಗೆ ಒಂದು ಆರಂಭದ ವಸ್ತು, ಪಾಠವೆನ್ನುವದುಂಟು, ಈ ಬುದ್ಧಿವಂತರು. ಆದರೆ ಮಕ್ಕಳು ಕಾಲು ಬಲಿತ ಮೇಲೆ ಈ ಮೂಗಾಲಿಯ ಗಾಡಿಯನ್ನು ಬಿಟ್ಟು ಕೊಡುತ್ತಾರೆ. ಮುಂದೆ ಶಾಲೆಗೋ ಕಾಲೇಜಿಗೋ ಕಛೇರಿಗೋ ಅದನ್ನು ಹಿಡಿದುಕೊಂಡು ನಡೆಯುವದಿಲ್ಲ. ಆದರೆ ಈ ವಿಗ್ರಹಾರಾಧನೆಯ ಆರಂಭವನ್ನು ನಾವು ಮುದುಕಾಗುವ ತನಕವೂ ಬಾಳೆಲ್ಲ ನಡೆಯಿಸುತ್ತೇವೆ.

ಹೇಗಿದೆ ಈ ಪೇಚು ? ತತ್ವವನ್ನು, ನಿರ್ಗುಣ ನಿರಾಕಾರ "ಬ್ರಹ್ಮ" ವಸ್ತು ಎಂಬುದನ್ನು ಪೂಜಿಸುವದು ಸಾಧ್ಯವಿಲ್ಲ. ಅದನ್ನು ಸಗುಣ ಸಾಕಾರ ಪ್ರತಿಮೆ (ವಿಗ್ರಹ)ವನ್ನಾಗಿ ಮಾಡಿ ಪೂಜೆ, ಆರಾಧನೆ, ಉತ್ಸವ, ಸಮಾರಂಭ ಗಳನ್ನು ವಿಜೃಂಭಣೆಯಿಂದ ನೆರವೇರಿಸುವದರಲ್ಲಿ ನಾವು ಉತ್ಸವ ಪ್ರಿಯ ಭಾವಿಕರು, ಭಕ್ತಿಯ ಭಂಡಾಟ, ಡಂಭದ ಡೊಂಬರಾಟಗಳನ್ನು ಹೂಡಿ ಅವುಗಳಿಂದ ರಂಜನೆ, ಆನಂದ, ಇನ್ನೂ ಇತರ ಪ್ರಯೋಜನಗಳನ್ನು ಪಡೆ ಯುತ್ತೇವೆ ಮತ್ತು ಮೂರ್ತಿ ಪೂಜೆಯನ್ನು ಒಂದು ಮೋಜಿನ ಗೊಂಬೆ ಯಾಟದ ಮಟ್ಟಕ್ಕೆ ಇಳಿಸುತ್ತೇವೆ.

ಇನ್ನು ಇದರ ಬದಲು ತತ್ವದ ಉಪಾಸನೆಯನ್ನೇ ಏಕೆ ಮಾಡಬಾರದು ? ಎಂದರೆ ಅದು ಅಸಾಧ್ಯವಿದ್ದಷ್ಟೇ ಅನಾವಶ್ಯಕ. ತತ್ವ ಇರುವದು ಆಚರಣೆ ಗಾಗಿ, ನಿಯಮವಿರುವದು ಅನುಸರಣೆಗಾಗಿ. ತತ್ವ ನಿಯಮಗಳನ್ನು ಅರಿತು ನಮ್ಮ ನಡತೆಯಲ್ಲಿ ಇಳಿಸಿದರೆ ಅವುಗಳ ಉಪಾಸನೆ ಮಾಡಿದಂತೆ. "ಉಪ"– ಹತ್ತಿರ, "ಆಸ್"–ಕೂಡ್ರು ; ದೇವರ ಉಪಾಸನೆ ಅಂದರೆ ದೇವರ ಹತ್ತಿರ ಆದಷ್ಟು ನಿಕಟ ಹೋಗಿ ಹೊಂದಿಕೊಳ್ಳುವದು. ಇದು ದೇವರ ಮೂರ್ತಿ ಯೊಂದಿಗೆ ಗರ್ಭಗುಡಿಯಲ್ಲಿ ಹೋಗಿ ಕೂತ ಮಾತ್ರಕ್ಕೆ ಸಾಧ್ಯವಾಗುವ ಕೆಲಸವಲ್ಲ. ಆದರೆ ಒಂದು ಹಿರಿದಾದ ಮೂಲಭೂತ ತತ್ವವನ್ನು ಅಥವಾ ನಿಯಮವನ್ನು ಅರಿತುಕೊಂಡು ಅದನ್ನು ನಮ್ಮ ಬಾಳಿನಲ್ಲಿ ಅರಗಿಸಿಕೊಳ್ಳುವದು ಸಾಧ್ಯ ; ಮತ್ತು ಅದೇ ನಿಜವಾದ ಸಿದ್ಧಿ.

ಒಂದು ವ್ಯಾವಹಾರಿಕವಾದ ಚಿಕ್ಕ ಉದಾಹರಣೆಯನ್ನೇ ಗಮನಿಸಿರಿ. ತಂದೆ ಹಾಕಿಕೊಟ್ಟ ಧೋರಣೆ, ನೀಡಿದ ಪ್ರೇರಣೆ ಯಾವದನ್ನೂ ಗಮನಿಸದೆ, ಭಾರೀ ಪಿತೃ ಭಕ್ತಿಯಿಂದ ತಂದೆಯನ್ನು ನಡುವೆ ಪೀಠದಲ್ಲಿ ಕುಳ್ಳಿರಿಸಿ ಅವನ ಸುತ್ತಲೂ "ನಮೋ ನಮೋ ಓ ನಮ್ಮ ತಂದೆ ! ಉದ್ಧಾರಾದೆವೋ ನಿಮ್ಮಿಂದೆ" ಎಂದು ಹಗಲು ರಾತ್ರಿ ತಾಳಗಟ್ಟಿ ತಾಳಕುಟ್ಟುತ್ತಾ ಭಜನೆ ಮಾಡುತ್ತ ಸುತ್ತುತ್ತಿದ್ದರೆ– ಅದು ಎಷ್ಟೇ ತನ್ಮಯರಾಗಿ ಭಾವ ಪರವಶ ರಾಗಿ ನಡೆದುಕೊಂಡರೂ– ಆ ತಂದೆ ಸಂತುಷ್ಟನಾಗುವ ಬದಲು ಪ್ರಸನ್ನ ನಾಗುವ ಬದಲು ಸಿಟ್ಟಿಗೆದ್ದು ಆ ಮೂರ್ಖ ಮಕ್ಕಳನ್ನು ಬಯ್ದು ಬಡಿದು ಓಡಿಸದೆ ಇರುತ್ತಾನೆಯೇ ?

ಲೋಕಮಾನ್ಯ ತಿಲಕರು "ಗೀತಾ ರಹಸ್ಯ"ದಲ್ಲಿ ಒಂದು ಶ್ಲೋಕ ವನ್ನು ಉದಾಹರಿಸಿದ್ದು ತುಂಬ ಮಾರ್ಮಿಕವಾಗಿದೆ. "ಅಪಹಾಯ ನಿಜಂ ಕರ್ಮ" ಕೃಷ್ಣ ಕೃಷ್ಣೇತಿ ವಾದಿನಃ ತೇ ಹರೇಃ ದ್ವೇಷಿಣಃ ಪ್ರೋಕ್ತಾಃ

ಕರ್ಮಾರ್ಥಂ ಜನ್ಮಯತ್ ಹರೇಃ (ತಮ್ಮ ಕರ್ತವ್ಯ ಕರ್ಮಗಳನ್ನು ಬಿಟ್ಟು ಕೊಟ್ಟು ಕೃಷ್ಣ ಕೃಷ್ಣ ಎಂದು ಹೇಳುತ್ತಿರುವವರು ನಿಜವಾಗಿಯೂ ಆ ಹರಿಯ ದ್ವೇಷಿಗಳು, ಏಕೆಂದರೆ ಹರಿಯು ಹುಟ್ಟಿದ್ದೇ ಕರ್ತವ್ಯ ಪಾಲನೆಗಾಗಿ! ಲೋಕಮಾನ್ಯರು ಶುದ್ಧ ಆಸ್ತಿಕರು. ದೈವಿಕ ಶ್ರದ್ಧೆಯ ದೃಷ್ಟಿಯಿಂದಲೇ ಹೀಗೆ ಬರೆದಿರುತ್ತಾರೆ. ಕೃಷ್ಣನನ್ನು ಭಜಿಸುವದೆಂದರೆ ಅವನಂತೆಯೇ ಕರ್ತವ್ಯ ಪರಾಯಣನಾಗುವದು. ಕರ್ಮಯೋಗಿ ಆಗುವದು. ಬರೆ ಅವನನ್ನು ಕೊಂಡಾಡುತ್ತ ಕೂಡ್ರುವದಲ್ಲ.

ಕೃಷ್ಣ ಭಕ್ತಿಯಂಥ ಸಗುಣ ಉಪಾಸನೆಯ ಬಗೆಗೇ ಹೀಗೆ ಹೇಳುವಾಗ ಜಗತ್ತಿಗೆ ಆದಿಮೂಲವೆಂಬ ತತ್ +ವ ದ ವಿಚಾರ, ಭಕ್ತಿ ಭಜನೆ ದಾನ ಧಾರಣೆ ಅರ್ಚನೆ ಪೂಜನೆ ಇತ್ಯಾದಿ ಎಷ್ಟು ಅಸಗತ್ಯ, ಎಷ್ಟು ಅವಿವೇಕದ್ದು ಎಂಬುದು ಮತ್ತೆ ಒತ್ತಿ ಹೇಳಬೇಕಾಗಿಲ್ಲ.

ನಮ್ಮಲ್ಲಿ ಒಂದು ಗ್ಯಾಸ್ ಸ್ಟೋವ್ ಇದೆ. ಅದನ್ನು ಹೇಗೆ ಹೊತ್ತಿಸಬೇಕು. ಗ್ಯಾಸನ್ನು ಹೇಗೆ ನಿಯಂತ್ರಿಸಬೇಕು ಎಂಬುದಕ್ಕೆ ಒಂದು ನಿಯಮಾವಳಿ ಇದೆ. ನಾವು ಆ ನಿಯಮಾವಳಿಯನ್ನೇ ಮುಂದಿಟ್ಟುಕೊಂಡು ಅದಕ್ಕೆ ಗಂಧ, ಪತ್ರೆ, ಮಂತ್ರ, ಪುಷ್ಪ ಏರಿಸಿ ಧೂಪ ದೀಪ ನೈವೇದ್ಯಗಳನ್ನು ಅರ್ಪಿಸುತ್ತ ಅನನ್ಯ ಭಕ್ತಿಯಿಂದ ಅಗ್ನಿಯ ಉಪಾಸನೆ ಮಾಡುತ್ತ ಕುಳಿತರೆ ಆ ಸ್ಟೋವ್ ಉರಿಯು ವದೇ ? ಅಡುಗೆ ಆಗುವುದೇ ? ಅಗ್ನಿ ನಾರಾಯಣ ಪ್ರಸನ್ನನಾಗಿ ಪ್ರಸಾದ ನೀಡುವನೇ ? ನಾವು ಮಾಡಬೇಕಾದದ್ದು ಆ ನಿಯಮಗಳನ್ನು ಅರಿತು ಮನ ಗಂಡು ಅದರಂತೆ ಆಚರಿಸಿ ಆ ಗ್ಯಾಸ್ ಸ್ಟೋವ್‌ನಿಂದ ಸರಿಯಾಗಿ ಕೆಲಸ ತೆಗೆದು ಕೊಳ್ಳುವದು. ಅದುವೆ ಆ ಮಟ್ಟಿಗೆ ಸರಿಯಾದ ನಿಜವಾದ 'ಉಪಾಸನೆ'.

ಈ ವಿಶ್ವಧರ್ಮ ಪಾಲನೆಯದೂ ಅದೇ ರೀತಿ, ವಿಶ್ವದ, ಸೃಷ್ಟಿಚಕ್ರದ, ಮಾನವತೆಯ ನಿಯಮಗಳನ್ನು ಬಿಚ್ಚು ಮನಸ್ಸಿನಿಂದ ಪಾಲಿಸಿ ಆಚರಣೆ ಯಲ್ಲಿ ತರಲು ಯತ್ನಿಸುತ್ತಿರುವದೇ ನಿಜವಾದ ಈಶ್ವರ ಪೂಜೆ. ಈ ವಿಶ್ವ-ಮಾನವ ಧರ್ಮದ ಸತ್ವ-ತತ್ವಗಳಿಗೆ ವಿರೋಧಿಯಾಗದಂತೆ, ವಿರುದ್ಧ ಹೋಗ ದಂತೆ ಬದುಕಲು ಯತ್ನಿಸುವದೇ ನಿಜವಾದ ದೇವತಾರ್ಚನೆ. (ಅಂದರೆ ಈಶ್ವರ ಹಾಗೂ ದೇವತ್ವದ ವ್ಯಾಖ್ಯೆ ಮೇಲೆ ಹೇಳಿದ ರೀತಿಯಲ್ಲಿಯೇ ಅರ್ಥೈಸುವದಾದರೆ)

"ಯೇನ ಕೇನ ಪ್ರಕಾರೇಣ ಯಸ್ಯಕಸ್ಯಾಪಿದೇಹಿನಃ ಸಂತೋಷಂ ಜನಯೇತ್ ಪ್ರಾಜ್ಞಃ ತದೇವೇಶ್ವರ ಪೂಜನಂ." (ಯಾವುದಾದರೂ ರೀತಿ ಯಲ್ಲಿ ಯಾವುವದಾದರೂ ದೇಹಿಗೆ ಸಂತೋಷವನ್ನುಂಟು ಮಾಡಬೇಕು.)ಅದುವೆ

ನಿಜವಾದ ಈಶ್ವರ ಪೂಜೆ.

ಎಂಥ ನಾಸ್ತಿಕನೂ ಈ ವ್ಯಾಖ್ಯೆಯನ್ನು ಒಪ್ಪದಿರಲಾರ. ಏಕೆಂದರೆ, ಇಲ್ಲಿ ದೇವತ್ವದ ಕಲ್ಪನೆಯೂ ಅರ್ಥವೂ ಸಕಲ ಜೀವಕೋಟಿಯನ್ನೇ ಒಳಗೊಂಡಿದೆ. ಇದನ್ನು ಬಿಟ್ಟು ಮರೆತು ಧಿಃಕರಿಸಿ ದೇವರ ಸ್ಥಾನವೆಂಬ ಪ್ರತ್ಯೇಕ ಮಂದಿರಗಳಲ್ಲಿ ಮೂರ್ತಿಗಳನ್ನು ಸ್ಥಾಪಿಸಿ ಅವುಗಳ ಭೋಗ ಶೃಂಗಾರ, ಪೂಜೆ ಪುನಸ್ಕಾರಗಳಿಗಾಗಿ ಲಕ್ಷಾಂತರ ಹಣ ಪೋಲು ಮಾಡುವ-ಅರ್ಚನೆ-ಆರಾಧನೆಗಳೆಲ್ಲ ಅಪವ್ಯಯ ಅನಾಚಾರ ಅನೈತಿಕವೆಂದು ಅಭಿಪ್ರಾಯ ಪಡುವ ಯಾವ ನಾಸ್ತಿಕವೈಚಾರಿಕನೂ ಇಂಥ ದೈವಭಕ್ತಿಯನ್ನು ಎಂದಿಗೂ ಒಪ್ಪಲಾರ.

"ಕಸ್ಮೈ ದೇವಾಯ ?"

ವಿಷ್ಣುವಿಗೋ ಕೃಷ್ಣನಿಗೋ ಇಟ್ಟ "ಜನಾರ್ಧನ"ನೆಂಬ ಹೆಸರೊಂದಿಗೆ ಜನ+ಅರ್ದನ ಅಂದರೆ ಜನರನ್ನು ಸಾಂತ್ವನಗೊಳಿಸುವವನೆಂಬ ಅರ್ಥವನ್ನು ಕೊಡುವಂತೆ ಭಾಸವಾಗುತ್ತದೆ. ಈ ಶಬ್ದ ಆದರೆ ಅರ್ದನ ಅಂದರೆ ತಾಪಕೊಡು, ಕಾಡು, ಪೀಡಿಸು ಎಂಬ ಅರ್ಥ ! ಈ ಅರ್ಥದಲ್ಲಿ ನಮ್ಮ ಪರಂಪರಾಗತ ಪ್ರಚಲಿತ ದೇವರುಗಳೆಲ್ಲ ಒಂದಲ್ಲ ಒಂದು ರೀತಿಯಲ್ಲಿ ಜನಾರ್ದನರೇ ಎಂದರೆ ತಪ್ಪಾಗಲಾರದು.

ಈ ವಿಶ್ವದ ಆದಿಕಾರಣದ ಬಗೆಗೆ ಸಾವಿರಾರು ವರ್ಷಗಳ ಕಾಲ ಆಚೆಯಿಂದಲೂ ಪ್ರೌಢ ಬುದ್ಧಿಯ ಹಂತಕ್ಕೆ ಬಂದ ಆರ್ಯರು ಅವರ ಮಟ್ಟಿಗೆ ಆಳವಾಗಿ ದೀರ್ಘವಾಗಿ ವಿಚಾರ ಮಾಡಿದ್ದುಂಟು. ವೇದಗಳಲ್ಲಿ ಬರುವ "ನಾಸದೀಯ ಸೂಕ್ತವೇ ಅದಕ್ಕೆ ಒಂದು ದಾಖಲೆ. "ಸತ್ ಏವ ಸೌಮ್ಯ ಇದಮಗ್ರೇ ಆಸೀತ್" ಎಂದು ಋಷಿಗಳು ಅಂದರೂ ಜಗತ್ತಿನ ಆದಿಯಲ್ಲಿ ಸತ್ ಎಂಬುದೇ ಇತ್ತು ಅಂದರೆ ಏನೆಂದಂತೆ ? ಸತ್ ಎಂಬುದು ಅಸ್ (ಇರು)ಧಾತುವಿನ ರೂಪ. ಅದರ ಅರ್ಥ 'ಇರುವ' ಅಂದಾಗ ವಿಶ್ವದ ಆದಿಯಲ್ಲಿ (ಅಗ್ರದಲ್ಲಿ) ಇರುವದೆಂಬುದೇ ಇತ್ತು ಎಂದಂತೆ ಆಯಿತು.

ಇಂಥದರಿಂದ ಸಮಾಧಾನವಾಗಲಿಲ್ಲ, ಕೆಲವು ಮೇಧಾವಿಗಳಿಗೆ. ನಾಸದೀಯ ಸೂಕ್ತ ಅದರದೇ ಶಿಶು. ಆರಂಭದಲ್ಲಿಯೇ 'ಆಗ ಸತ್ತು ಇದ್ದಿಲ್ಲ ಅಸತ್ತೂ ಇದ್ದಿಲ್ಲ' ಎಂಬ ಮಾತು ಆದಿಕಾರಣದ ಕುರಿತು ಕುತೂಹಲದೊಡನೆ ಸಂಶಯವನ್ನು ವ್ಯಕ್ತಮಾಡುತ್ತದೆ. ಆದಿಯಲ್ಲಿ ಕಗ್ಗತ್ತಲೆಯನ್ನೇ ಊಹಿಸುತ್ತದೆ. ಇನ್ನೊಬ್ಬ ಪ್ರಸಿದ್ಧ ಋಷಿ ಕಸ್ಮೈ ದೇವಾಯ ಹವಿಷಂ ವಿಧೇಯ ? (ಯಾವ ದೇವರಿಗೆ ಹವಿಸ್ಸನ್ನು ಕೊಡೋಣ ?)ಎಂದು ಕೇಳುತ್ತಾನೆ.

ಈ ಋಷಿಗಳೆಲ್ಲ ಆಸ್ತಿಕರೇ ಅಥವಾ ಹೆಚ್ಚೆಂದರೆ ಡಾ. ಕಾರಂತರು ವರ್ಗೀಕರಿಸಿದ 'ಅನಾಸ್ತಿಕರು' ಎನ್ನಬಹುದು. ಅಂದರೆ ಅವರು ವಿಶ್ವದ ಮೂಲದಲ್ಲಿ, ಕೇಂದ್ರದಲ್ಲಿ ಏನೋ ಒಂದು ಶಕ್ತಿಯನ್ನು ಊಹಿಸಿಕೊಂಡರೂ ಅದನ್ನೊಂದು ವ್ಯಕ್ತಿಯೆಂಬಂತೆ ರೂಪ-ಗುಣ-ಕ್ರಿಯಾ ಶೀಲತ್ವಗಳುಳ್ಳ ಆಕೃತಿಯಾಗಿ ಅದು ಸ್ತ್ರೀಯೋ ಪುರುಷನೋ ಎಂಬುದಾಗಿ ಕಟ್ಟುನಿಟ್ಟಾಗಿ ನಿರ್ವಿವಾದವಾಗಿ ಗ್ರಹಿಸಿಕೊಂಡಿದ್ದಿಲ್ಲ. ಆದಾಗ್ಯೂ ಈ ಶಕ್ತಿ ವಿಶ್ವಾತ್ಮಕ ವಾಗಿ ನಿರಂತರವಾಗಿ ನಿರಪವಾದವಾಗಿ (ತಪ್ಪು ತಡೆಯಿಲ್ಲದೆ) ಕೆಲಸ ಮಾಡು ತ್ತಿರುತ್ತದೆಂದು ಅಂದಿನ ಮೇಧಾವಿಗಳ ತಿಳುವಳಿಕೆಯಾಗಿತ್ತು. ಆದರೂ ಮನುಷ್ಯನಿಗೆ ಈ ತಿಳುವಳಿಕೆ ಎಂಬುವದೇ ತನ್ನತನದ ಅರಿವಿನಿಂದ ಆರಂಭ ವಾಗುತ್ತದೆ. ಆದ್ದರಿಂದ ತನ್ನಿಂದ ಬೇರೆಯಾಗಿ ಪೂರ್ತಿ ಬದಿಗೆನಿಂತು ಇನ್ನೊಂದು ಎರಕದಲ್ಲಿ ಊಹೆಯನ್ನು ಹರಿಬಿಡುವದು ಮನುಷ್ಯನಿಗೆ ಅದೂ ಆದಿಕಾಲದ ಅನುಭವದ ಅಪ್ರಬುದ್ಧ ಅವಸ್ಥೆಯ ಮನುಷ್ಯನಿಗೆ ಅಷ್ಟೊಂದು ಸಾಧ್ಯವಿದ್ದಿಲ್ಲ. ಆದ್ದರಿಂದ ಈ ವಿಶ್ವಶಕ್ತಿಯು ಜಗನ್ನಿಯಾಮಕ ಚಾಲನೆಯು ತನ್ನಂತೆಯೇ, ಆದರೆ ಎಷ್ಟೋ ಪಟ್ಟು ಮಿಗಿಲಾದ ಮಹಾ ಮಟ್ಟದ ಹಾಗೂ ಮೊತ್ತದ ಒಂದು ವ್ಯಕ್ತಿತ್ವದ "ವಿರಾಟ್ ಪುರುಷ"ನ ಮಹಾ ಚೇತನದ ಲೀಲಾವ್ಯಾಪಾರವೆಂದು ಆಗಿನ ಋಷಿ ಮುನಿಗಳು ಭಾವಿಸುವದು ಸ್ವಾಭಾವಿಕವಾಗಿತ್ತು.

ಇದೊಂದು ಬಗೆಯ ಪ್ರಾಣವಾದ. (Animism) ನಮ್ಮ ಚಿಕ್ಕ ಮಕ್ಕಳಿಗೆ ಮೇಜು ಹಣೆಗೆ ಜಪ್ಪಿ ನೋವಾದರೆ ಅವರ ಅಳು ನಿಲ್ಲಿಸಲಿಕ್ಕೆ ನಾವು ಆ ಮೇಜನ್ನು ಗದ್ದರಿಸಿ ಅದನ್ನೇ ಗುದ್ದಿ ಮಗುವನ್ನು ಸಂತೈಸು ವದಿಲ್ಲವೇ ? ಅದರಿಂದ ಆ ಮಗು ಸಮಾಧಾನವನ್ನು ಪಡುತ್ತದೆ, ಏಕೆ ? ಆ ಬಾಲ ಬುದ್ಧಿಗೆ ಆ ಮೇಜಿನಲ್ಲಿಯೂ ತನ್ನಂತೆಯೇ ಒಂದು ಜೀವಂತ ಶಕ್ತಿ (ವ್ಯಕ್ತಿತ್ವ) ಇರುವದೆಂದು ಅನಿಸುತ್ತಿರುತ್ತದೆ. ಅದನ್ನು ನಾವು ದಂಡಿಸಿದಾಗ ಮಗುವಿಗೆ ತೃಪ್ತಿ. ಇಲ್ಲಿ ನೋವು ನಿಜ, ತೃಪ್ತಿ ಹುಸಿ. ಆದರೂ ನಮಗಿಲ್ಲಿ ಆ ಬಾಲ ಭಾವನೆಯ ಪ್ರಪಂಚದ ಈ ನಂಬಿಕೆ ಮುಖ್ಯ. ಮಾನವನ ಇತಿಹಾಸದ ಆ ಎಳೆವರಯದಲ್ಲಿಯೂ ವಿಶ್ವದ ಅದ್ಭುತಕ್ಕೆ ಕಂಡಲ್ಲೆ ಭಯ, ಚಕಿತನಾಗಿ ಮಣಿಯುವ ಮಾನವನೆಂಬ "ಮಂಕು ತಿಮ್ಮ"ನಿಗೆ ಪ್ರಕೃತಿಯ ಎಲ್ಲ ಆಗು ಹೋಗುಗಳ ಹಿಂದೆಯೂ ತನ್ನಂತೆಯೇ ಆದರೆ ತನ್ನನ್ನು ಬಹಳವಾಗಿ ಮೀರಿದ 'ಅತಿಮಾನವ' ಶಕ್ತಿಗಳ ಕ್ರಿಯೆ-ಕ್ರೀಡೆಗಳು ತನ್ನ ಬದುಕಿಗೆ ಭದ್ರವೋ ರುದ್ರವೋ ಆಗಿ ತಟ್ಟುವ ವ್ಯಾಪಾರಗಳೇ

ಅನುಭವಕ್ಕೆ ಬರುತ್ತಿದ್ದವು. ಇವೆಲ್ಲವುಗಳ ಹಿಂದೆ ಆತ ತನ್ನ ಊಹಾ ಶಕ್ತಿಯ ಬಲದಿಂದ ಒಳಿತೋ ಕೆಡುಕೋ ಮಹಾ ಚೇತನಗಳನ್ನು ಕಲ್ಪಿಸಿ ಅವುಗಳನ್ನು ಒಡಂಬಡಿಸಿಕೊಳ್ಳಲಿಕ್ಕೆ ಒಲಿಸಿಕೊಳ್ಳಲಿಕ್ಕೆ ಯತ್ನಿಸತೊಡಗಿದನು. ಹೀಗೆ ಆ ಪ್ರಚಂಡ ಶಕ್ತಿಗಳ ಮಾನವೀಕರಣ (anthropomorphic conception) ಒಂದು ಸಹಜವಾದ ಪ್ರತಿಕ್ರಿಯೆ ("ತನ್ನಂತೆ ಪರರ ಬಗೆ" ಯುವದು ದೇವರ ಬಗೆಗೂ ನಮ್ಮ ದೃಷ್ಟಿ.)

ನಾಸ್ತಿಕನ ಐತಿಹಾಸಿಕ ಪ್ರಜ್ಞೆ

ವೈಚಾರಿಕ ನಾಸ್ತಿಕನ ಐತಿಹಾಸಿಕ ಪ್ರಜ್ಞೆಗೆ ಇದೆಲ್ಲ ಒಪ್ಪಿಗೆ. ಮನುಷ್ಯನ ಮನಸ್ಸಿನ ಅವಸ್ಥಾಂತರಗಳೊಂದಿಗೆ ದೇವರೂ ರೂಪಾಂತರಗೊಳ್ಳುತ್ತ ಬಂದಿರುವದೆಂಬುದೂ ಅವರಿಗೆ ಒಪ್ಪಿಗೆ. ಈ ರೂಪಾಂತರಗಳ ಹಂತಗಳ ಇತ್ಯರ್ಥಕ್ಕೆ ಇಲ್ಲಿ ಅವಕಾಶವಿಲ್ಲ.

ಜಗತ್ತಿಗೆ ಒಂದು ಆದಿಶಕ್ತಿ ಇದೆ ಎಂಬುದನ್ನು ಮಾನವನು ತನ್ನ ಧೀಶಕ್ತಿಯಿಂದ ಊಹಿಸಿ ತರ್ಕಿಸಿ ಒಪ್ಪಿಕೊಂಡನು. ಆ ಶಕ್ತಿ ಒಂದು ತತ್ವವೋ (ಜಡಶಕ್ತಿಯೋ) ಅಥವಾ ಇಚ್ಛಾ-ಸಂಕಲ್ಪ-ಪ್ರೇರಣೆಗಳುಳ್ಳ ಚೇತನೆಯೋ ಎಂಬ ಕವಲುದಾರಿಗೆ ನಿಂತಿತು, ಮನುಷ್ಯನ ವಿಚಾರ. ತನ್ನ ಅನುಭವದ ಅನುಮಾನದಲ್ಲಿ ಮಾನವನು ಆದಿಶಕ್ತಿಯನ್ನು ಆದಿಪುರುಷ ಪರಮ ಪುರುಷ ಪರಮಾತ್ಮ ಪರಮೇಶ್ವರ ಇತ್ಯಾದಿಯಾಗಿ ಸ್ವಾಭಾವಿಕವಾಗಿಯೇ ಭಾವಿಸಿಕೊಂಡು ಮುಂದುವರಿದು ಆ ಮಾರ್ಗವಾಗಿ ತನ್ನ ಮಟ್ಟಿಗೆ ಒಂದು ಭಾವನಾಮಯ ಸಾಂತ್ವನೆಯನ್ನು ಸಮಾಧಾನವನ್ನು ಕಂಡುಕೊಂಡನು. ಆದಿತತ್ವ ಒಂದು ಮಹಾಸತ್ವ, ವಿರಾಟ್ ವ್ಯಕ್ತಿತ್ವ, ಆದರಿಂದ ಮುಂದೆ ಅನೇಕ ದೇವ ದೇವತೆಗಳು ಅವರ ಅವತಾರಗಳೂ ದೈವದಿಂದ ದೆವ್ವದವರೆಗೆ, ಆ ದೇವತೆಗಳ ತರಗತಿಗಳು, ಇವೆಲ್ಲವುಗಳನ್ನು ಒಲಿಸಿಕೊಳ್ಳುವ ವಿವಿಧ ವಿಧಾನಗಳು– ಹೋಮ ಹವನ, ಪೂಜೆ, ಜಪತಪ, ಅನುಷ್ಠಾನ, ಬಲಿ ಭೂತಾರಾಧನೆ ಇತ್ಯಾದಿ ಏನೆಲ್ಲ ಕ್ರಿಯೆಗಳನ್ನು ಒಳಗೊಂಡ ಉಪಾಸನಾ ಮಾರ್ಗಗಳು ಅವನ್ನು ಒಳಗೊಂಡ ಧರ್ಮ ಭಕ್ತಿ ಪಂಥಗಳು ಶಾಖೋಪಶಾಖೆಯಾಗಿ ಮಾನವ ಸಮಾಜದ ಬದುಕಿನಲ್ಲಿ ಬಲವಾಗಿ ಆಳವಾಗಿ ಬೇರೂರಿ ಬೆಳೆದು ಕೊಂಡವು.

ಇದೆಲ್ಲ ಒಮ್ಮೆಲೇ ಎಲ್ಲ ಪ್ರಾಜ್ಞರು ಒಟ್ಟಾಗಿ ಕೂತು ಆಲೋಚಿಸಿ ಮಾಡಿ ಕೊಂಡ ಆಚಾರ– ವಿಚಾರಗಳ ವರ್ಗೀಕರಣವಲ್ಲ. ತದ್ವಿರುದ್ಧವಾಗಿ ಬೇರೆ

ಬೇರೆ ಜನಸಮೂಹಗಳು ಬದುಕಿನ ಬೇರೆ ಬೇರೆ ಮಟ್ಟಗಳಲ್ಲಿ ಕಂಡು ಕಾಪಾಡಿಕೊಂಡು ಬಂದ ನಂಬಿಕೆ ನಡಾವಳಿಗಳನ್ನೇ ಮುಂದೆ ಧರ್ಮದ ಸ್ವಾರಸ್ಯಗಳನ್ನು ತಿಳಿದುಕೊಳ್ಳುವವರು ಕ್ರೋಢೀಕರಿಸಿ ಮನಗಂಡಿದ್ದು.

ಮಾನವನ ಮನಸ್ಸಿನ ಹೆಜ್ಜೆ ಪಾಡೇ ಹೀಗೆ– ಜ್ಞಾತದಿಂದ ಅಜ್ಞಾತದ ಕಡೆಗೆ,ಮೂರ್ತದಿಂದ ಅಮೂರ್ತದ ಕಡೆಗೆ, ಜಡದಿಂದ ಚೇತನದ ಕಡೆಗೆ, ಸ್ಥೂಲದಿಂದ ಸೂಕ್ಷ್ಮದ ಕಡೆಗೆ, ವಸ್ತುವಿನಿಂದ ತತ್ವದ ಕಡೆಗೆ,ಜಗತ್ತಿನ ಆದಿ ಕಾರಣವು ತತ್ವವೆಂಬ ಒಂದು ತಿಳುವಳಿಕೆಯ ನೆಲೆಗೆ ತಲುಪಿದವರೂ ಕೂಡ ಅದನ್ನು ಒಂದು ಪರಮಾತ್ಮ ಪರಬ್ರಹ್ಮ ತತ್ವವೆಂಬ, ಕೇವಲ ತಿಳುವಳಿಕೆಯ ವಿಷಯವಾಗಬಲ್ಲ ಸಂಗತಿಯೆಂದು ಭಾವಿಸಿ ನಡೆಯಲಿಲ್ಲ. ಈ ತತ್ವವೇತ್ತರೂ ದಾರ್ಶನಿಕರೂ ಆಚಾರ್ಯ ಪುರುಷರೂ ತಮ್ಮ ಭಾವನೆಗಳ ತೃಪ್ತಿಗಾಗಿಯೋ, ತಮ್ಮನ್ನು ನಂಬಿದ ಜನಸಾಮಾನ್ಯರ ಭಾವಿಕತನದ ತೃಪ್ತಿಗಾಗಿಯೋ, ಕರ್ಮ–ಸಂಗಿಗಳಾದ 'ಅಜ್ಞಾನಿಗಳ ಬುದ್ಧಿಭೇದವನ್ನು ಮಾಡಬಾರದು' ಎಂಬ ಒಂದು ಅನುಕೂಲ ಸೂತ್ರವನ್ನು ಹಿಡಿದೋ ತತ್ವಚಿಂತನೆಯ ಬದಲು ಸಗುಣ ದೇವತೆಗಳ ಉಪಾಸನೆಯನ್ನೇ ಪ್ರೋತ್ಸಾಹಿಸಿದರು. ಇದಕ್ಕೆಲ್ಲಾ ಇತರ ಬಲವಾದ ಲೌಕಿಕ ಸಾಮಾಜಿಕ ಆರ್ಥಿಕ ಆಸಕ್ತಿಗಳ ಅಡ್ಡ ಸೆಳೆತಗಳೂ ಕಾರಣ. ಅವೆಲ್ಲವುಗಳನ್ನು ಲೆಕ್ಕಿಸದೆ ಇಲ್ಲಿ ಹೀಗೆ ಬರೆದದ್ದು ಒಂದು ರೀತಿ ಸರಲೀಕರಣವೆನಿಸಬಹುದು.

ಆದಾಗ್ಯೂ ಇಷ್ಟೊಂದು ನಿಜ, ದೇವರ ಅಸ್ತಿತ್ವವನ್ನು ಭಾವನಾಮಯವಾಗಿ ಸ್ವೀಕರಿಸಿ ಅದನ್ನು ಉಪಾಸಿಸುವ ವೈಚಾರಿಕ ನಿಲುಮೆಯ ದಾರ್ಶನಿಕ ತತ್ವಜ್ಞರು ಮನಸ್ಸಿನ ದ್ವಿಧಾ ಅವಸ್ಥೆಯಲ್ಲೇಯೇ ಬಾಳಿನ ಉದ್ದಕ್ಕೂ ಬದುಕುತ್ತಾರೆ. ಅವರ ಮನಸ್ಸು ಇಮ್ಮೊಗವಾಗಿ ಕೆಲಸ ಮಾಡುತ್ತದೆ. ಅಲ್ಲಿಯೂ ಸಲ್ಲಬೇಕು ಇಲ್ಲಿಯೂ ಸಲ್ಲಬೇಕು ಎಂದು ಅವರ ಸಾಧನೆ. ಅದಕ್ಕೆ ಅನುಗುಣವಾಗಿಯೇ ಅವರ ಪ್ರತಿಪಾದನೆ. ತಮ್ಮ ಭಾವಿಕ ಶ್ರದ್ಧೆಗೆ ಬೌದ್ಧಿಕ ಸಮರ್ಥನೆ ಕೊಡುವ ಖಟಾಟೋಪ.

ತದ್ವಿರುದ್ಧವಾಗಿ ಬೌದ್ಧಿಕ ತತ್ವವಾದಿಯಾಗಿಯೂ ಭಾವನಾಮಯರಾಗಿ ದೇವತ್ವವನ್ನು ಅರಸುವವರು ತಮ್ಮದೇ ಆದ ಒಂದು 'ರಹಸ್ಯವಾದ'ವನ್ನು ಕಟ್ಟಿಕೊಳ್ಳುವದು ಕಂಡುಬರುತ್ತದೆ. ಅಂಥ ಸಂತ ಮಹಂತರಿಗೆ–ಅವರು ಸೂಫೀ ತತ್ವವೇತ್ತರೇ ಇರಲಿ, ಸೆಂಟ್ ಥೆರೆಸಾರಂಥ ಕ್ರೈಸ್ತ ಭಕ್ತರೇ ಆಗಿರಲಿ, ನಮ್ಮ ಅಕ್ಕಮಹಾದೇವಿ, ಮೀರಾಬಾಯಿ, ಮಧುರ ಚೆನ್ನರಂಥ ಅಥವಾ ಗುರುದೇವ ರವೀಂದ್ರನಾಥರಂತಹ ಉತ್ಕಟ ಉನ್ನತ ಭಾವ ಜೀವಿಗಳೇ ಆಗಿರಲಿ–ವಿಚಿತ್ರ ಪೇಚು. ಅವರಿಗೆ ಅತ್ತ ಸಾಕಾರ ಮಾನವೀತನುವನ್ನಾಶ್ರಯಿಸಿದ ದೇವರೂ ಸಲ್ಲರು. ಇತ್ತ ನಿರ್ಗುಣ ನಿರಾಕಾರ ನಿರ್ವಿಕಾರ ಬ್ರಹ್ಮವಸ್ತುವೂ ಸಲ್ಲದು.

ಆದರಿಂದ ಒಂದು ಭಾವನಾಮಯ ಸಂತೋಷ, ಸಾಂತ್ವನೆ ಸಿಗುವದಿಲ್ಲ"-ಬ್ರಹ್ಮಾನಂದ" ವೆಂಬ ತುತ್ತತುದಿಯ ಮನಃಸ್ಥಿತಿಯ ಕಲ್ಪನೆ ನಮ್ಮಲ್ಲಿ ರೂಢವಾಗಿದ್ದರೂ ಕೂಡ ಈಗ ಈ ರಹಸ್ಯವಾದಿಗಳು ತಮ್ಮ ತತ್ವ ವಿಚಾರವೇನೇ ಇದ್ದರೂ ದೇವತ್ವವನ್ನು "ಅನಿರ್ವಚನೀಯ ಪ್ರೇಮಸ್ವರೂಪ" (ನಾರದೀಯ ಭಕ್ತಿ ಸೂತ್ರ)ವೆಂದು ಒಪ್ಪಿ ಧ್ಯಾನಿಸಿ ಅದರೊಂದಿಗೆ ತನ್ಮಯರಾಗುತ್ತಾರೆ. ಈ ಸ್ವರೂಪದ "ಅನಿರ್ವಚನೀಯತೆ" ಯೇ ಅದರ "ರಹಸ್ಯ" (Mysticism) ಅದರ ಸವಿ ಸೊಗಸು ಸುಖ ತನಗೆ ತಾನೇ ಒದಗುವಂತಹದು. ಒಬ್ಬರು ಇನ್ನೊಬ್ಬರಿಗೆ ಕಾಣಿಸಿ ತಿಳಿಸಿಕೊಡಬಹುದಾದ ವಸ್ತುವಲ್ಲ. ಅದು ಹಿಂದೆಯೇ ವಿವರಿಸಿದಂತೆ ಅಪರೋಕ್ಷಾನುಭವ. ಈ ಕುರಿತು ಇಲ್ಲಿ ಚರ್ಚೆ ಅನಗತ್ಯ.

ಇಂಥ ಅನುಭಾವಿಗಳು ಲೌಕಿಕ ಆಚಾರ ಧರ್ಮಗಳ ಮಟ್ಟಿಗೆ ನಾಸ್ತಿಕರೆ ಎಂದರೆ ದೊಡ್ಡ ತಪ್ಪಾಗಲಾರದು. ನವವಿಧ ಭಕ್ತಿಗಳಲ್ಲಿಯ ಕೊನೆಯ ಹಂತಗಳಾದ ಸಖ್ಯ ಮತ್ತು ಮಧುರ (ಆತ್ಮನಿವೇದನೆ) ಭಾವಗಳ ಭಕ್ತಿಯ ಸ್ಥಿತಿಗಳು ಈ "ಅನುಭಾವ"ದ ಅವಸ್ಥೆಯ ಒಳಗೆ ಬರಬಹುದು. ಈ ಅವಸ್ಥೆಯ "ಉನ್ಮನ" ಸ್ಥಿತಿಯನ್ನು ಯೋಗಸೂತ್ರಗಳಲ್ಲಿ ಉಲ್ಲೇಖಿಸಿದ್ದಿದೆ. ಸಾಮಾನ್ಯ (ಲೌಕಿಕ) ಮನಃಸ್ಥಿತಿಯನ್ನು ಮೀರಿದ ಈ ಭಾವಾವೇಶದ ಧ್ಯಾನಾವಸ್ಥಿತ ತನ್ಮಯ ಮನಸ್ಸಿನ ವ್ಯವಸ್ಥೆಯನ್ನು "ಬಾಲೋನ್ಮತ್ ಪಿಶಾಚವತ್" ಅಂದಿದೆ. ಅಂದರೆ ಈ ಸ್ಥಿತಿಯಲ್ಲಿ ಮಗ್ನರಾದವರಿಗೆ ಲೌಕಿಕ ನೆಲೆ ಬೆಲೆಗಳ ಅರಿವಾಗಲಿ ಪರಿವೆಯಾಗಲಿ ಕಡಿಮೆಯೇ. ಅವರು ಬಾಲರಂತೆ, ಉನ್ಮತ್ತರಂತೆ ಅಥವಾ ಪಿಶಾಚಿ (ದೆವ್ವಬಡಿದವ)ಗಳಂತೆ ನಡೆಯುತ್ತಾರಂತೆ. ಅಂದರೆ ಈ ರೀತಿಯ ಪ್ರಜ್ಞೆಯವರನ್ನು ಪ್ರತಿಷ್ಠಿತ ಪ್ರಸ್ಥಾಪಿತ ದೈವ ಭಕ್ತಿಯ ಸಾಂಪ್ರದಾಯಿಕ ಆಸ್ತಿಕರು ಹೆಚ್ಚು ಕಡಿಮೆ ನಾಸ್ತಿಕರನ್ನಾಗಿಯೇ ಕಾಣುತ್ತಿದ್ದರೆ ಸೋಜಿಗವಲ್ಲ.

ವೈಜ್ಞಾನಿಕ ಮನೋವೃತ್ತಿಯ ನಿರೀಶ್ವರವಾದಿ (ನಾಸ್ತಿಕರು)ಗಳು ಇಂಥ ದೈವಿಕ "ಸಮಾಧಿ" ಅಥವಾ ಅನುಭಾವ ಸ್ಥಿತಿಯು ಮನೋವಿಶ್ಲೇಷಣೆಯ ವಿಷಯವೆಂದು ಪರಿಗಣಿಸುವರು. ಇಂಥ ದೈವಿಕ ಪ್ರಜ್ಞೆ ಇಲ್ಲವೆ ವಿಶಿಷ್ಟ ಭಾವಾವೇಶದ ಅವಸ್ಥೆ ಮನಃಶಾಸ್ತ್ರದ ವಿಚಿಕಿತ್ಸೆ–ಚಿಕಿತ್ಸೆಗಳಿಗ ಒಪ್ಪುವ ಸಂಗತಿಯೆಂದು ಈಗಾಗಲೇ ಈ ಕ್ಷೇತ್ರದಲ್ಲಿ ವಿದ್ವತ್ ಮಾನ್ಯವಾಗಿದೆ. "ಅತೀಂದ್ರಿಯ ಪ್ರಜ್ಞೆ" "ಮರಣೋತ್ತರ ಜೀವನ" "ಧಾರ್ಮಿಕ ಅನುಭವ" "ದೃಷ್ಟಾಂತ–ಸಾಕ್ಷಾತ್ಕಾರ" ಮುಂತಾದವೆಲ್ಲದರ ಬಗೆಗೆ ಇಂದು ಮನೋವೈಜ್ಞಾನಿಕ ಸಂಶೋಧನೆಯನ್ನು ಒಳಗೊಂಡ ನೂರಾರು ಅಧಿಕೃತ ಗ್ರಂಥಗಳು ಪ್ರಕಟವಾಗಿವೆ. ಆ ಆಳಕ್ಕೆ ನಾವು ಇಳಿಯಬೇಕಿಲ್ಲ.

ಹೀಗೆ ನಾಸ್ತಿಕನು ದೇವರೆಂಬ ಅಸ್ತಿತ್ವವನ್ನು ಬಹಿರಂಗವಾಗಿಯೂ ಅಂತರಂಗವಾಗಿಯೂ ಅಲ್ಲಗಳೆಯುತ್ತಾನೆ. ಆದರೂ ಅದೊಂದು ತತ್ವ-ಭಾವ ವೆಂಬ ಮಟ್ಟದಲ್ಲಿ ಆತ ಗ್ರಹಿಸಬಲ್ಲ. ಆದರೆ ಆ ಗ್ರಹಿಕೆ ಅಂದರೆ ಸ್ವೀಕಾರವಲ್ಲ. ಅದೊಂದು ತರ್ಕದ ತಿಳುವಳಿಕೆ. ಅನುಕೂಲಕ್ಕಾಗಿ ಇಟ್ಟುಕೊಂಡ ಅಥವಾ ಭಾವಿಸಬಹುದಾದ ಅಜ್ಞಾತದ ಸಂಕೇತ. ಹಿಂದೆಯೇ ಹೇಳಿದ ಬೀಜಗಣಿತದ ಎಕ್ಸ್ (ಕ್ಷ)ದಂತೆ ಆ ಕುರಿತು ಯಾವದೇ ಭಾವನಿಕ ನೈತಿಕ ನಿಧಾನ-ವಿಧಾನಗಳು ಸಾಧ್ಯವಿಲ್ಲ.

6

ಮಾನವನ ಉತ್ಕ್ರಾಂತಿಯಲ್ಲಿ ದೇವರ ಕಲ್ಪನೆ

ವೈಜ್ಞಾನಿಕವಾಗಿ ಮತ್ತು ಐತಿಹಾಸಿಕವಾಗಿ ನೋಡಿದ ಸಂಗತಿಗಳ ಸ್ಥಿತಿ ಗತಿಗಳನ್ನು ಅಭ್ಯಸಿಸುವ ರೀತಿ ವಿಚಾರವಂತ ಇಲ್ಲವೆ ಪ್ರಜ್ಞಾಶೀಲ ನಾಸ್ತಿಕನದು. ಮಾನವನೆಂಬ ಪ್ರಾಣಿಯ ಉತ್ಕ್ರಾಂತಿಯ ಕ್ರಮದಲ್ಲಿ ಇತಿಹಾಸದ ವಿಕಾಸದ ಗತಿಯಲ್ಲಿ ದೇವರ ಕಲ್ಪನೆ ಅಥವಾ ಪ್ರಜ್ಞೆ ಮನುಷ್ಯ ಪ್ರಾಣಿಗೆ ನಿಶ್ಚಿತವಾಗಿಯೂ ಯಾವ ಹಂತದಲ್ಲಿ ಅವಧಿಯಲ್ಲಿ ಕಾಣಿಸಿಕೊಂಡಿತು? ಇಲ್ಲಿ ಯಾವ ದೇಶ ಕಾಲ ಇಸವಿ ನಮಗೆ ಮುಖ್ಯವಲ್ಲ. ಮನುಷ್ಯ ಪ್ರಾಣಿಯು ಹುಟ್ಟಿನಿಂದಲೇ ಅವನಲ್ಲಿ ಈ ದೈವಿಕ ಭಾವನೆ ಹುಟ್ಟಿ ಬಂದಂತಿಲ್ಲ. ಇತರ ಪ್ರಾಣಿಗಳಿಗೂ ಮನುಷ್ಯ ನಿಗೂ ಮನೋಮಯ ಕೋಶದ ಮಟ್ಟಿಗೆ ಕೆಲವೊಂದು ಮೂಲ ಪ್ರವೃತ್ತಿಗಳು (ಕಾಲಿದಾಸನ ಮಾತಿನಂತೆ "ಅಶಿಕ್ಷಿತ ಪಟುತ್ವ"ದ ಪ್ರತಿಕ್ರಿಯೆಗಳು) ಮಾನುಷ, ಅಮಾನುಷ ಎರಡೂ ಪ್ರಾಣಿ ಪ್ರಪಂಚಗಳಲ್ಲಿ ಎಂದಿನಿಂದಲೂ ಕಂಡುಬರುತ್ತವೆ.

ಭಯ, ಕಾಮ, ಹಸಿವೆ, ಸಿಟ್ಟು, ಆತ್ಮ ರಕ್ಷಣೆ ಇತ್ಯಾದಿ ಇತರ ಪ್ರಾಣಿ ಗಳಂತೆ ಮಾನವನಿಗೂ ಮೂಲ ಪ್ರವೃತ್ತಿಗಳು. ಇವುಗಳನ್ನೆಲ್ಲ ನಾವು ಮೂರು ಗುಂಪಾಗಿ ಮಾಡುತ್ತೇವೆ: ವ್ಯಕ್ತಿಗತ (Self), ಕಾಮ (Sex) ಮತ್ತು ಸಾಮಾಜಿಕ (Social). ವ್ಯಕ್ತಿ ತಾನೇ ತನಗಾಗಿ, ಹೆಣ್ಣು ಗಂಡಿನೊಳಗೆ ಒಂದಾಗಿ ಅಥವಾ ಸಮಾಜದ ಗುಂಪಿನ (ಬಣದ ಬುಡಕಟ್ಟಿನ ಜಾತಿಯ) ಒಂದು ಘಟಕವಾಗಿ ಬದುಕುವಾಗ ತನ್ನ ಪ್ರವೃತ್ತಿಗಳ ಕ್ರಿಯೆಗಳಿಗೆ ಒಂದು ಹಿಡಿತ ಹೊಂದಾಣಿಕೆ ಇಲ್ಲವೆ ಬದಲಾವಣೆಯು ಅಗತ್ಯ ಬಿದ್ದು ಅದರಿಂದ ಕೆಲವು ಹಲವು ಹೊಸ ವೃತ್ತಿಗಳನ್ನು ಭಾವ ಚರ್ಯೆಗಳನ್ನು ಸಂಸ್ಕಾರ ಕ್ರಮ ದಿಂದ ಬೆಳೆಯಿಸಿಕೊಂಡು ಬರಬೇಕಾಯಿತು.

ಈ ಹಿನ್ನೆಲೆಯಲ್ಲಿ ದೇವರ ಕುರಿತು ಪ್ರಜ್ಞೆ ಅಥವಾ ಆಸ್ತಿಕವೃತ್ತಿ ಮಾನವನಿಗೆ ಒಂದು ಮೂಲಭೂತ ಪ್ರವೃತ್ತಿಯಾಗಿಯೇ ಬಂದಿದ್ದೆ ? ಹಾಗೆ ತಿಳಿಯಲು ಯಾವ ಆಧಾರವೂ ಇಲ್ಲ. ದೈವೀ ಭಾವನೆ. ದೇವರ ಬಗೆಗೆ ಅರಿವು ಅಥವಾ ನಂಬಿಗೆ ಮಾನವನ ಕೂಸಿನ ಹುಟ್ಟುಗುಣವಲ್ಲ. ಅಂದರೇನು? ಪ್ರಕೃತಿಧರ್ಮದಂತೆ ಜೀವವಿಕಾಸಕ್ಕೆ ಅನಿವಾರ್ಯವಾಗಿ ಬೇಕಾಗುವ, ಜೀವದ ಪಾಲಕ ಪೋಷಕ ಮೂಲಪ್ರವೃತ್ತಿ ಅಲ್ಲ— ಈ ಆಸ್ತಿಕ್ಯ ಭಾವನೆ ಇತರ ಪ್ರಾಣಿಗಳ ಸಂದರ್ಭದಲ್ಲಿ ಮಾನವನಿಗೆ ವಿಶಿಷ್ಟವಾಗಿ ಬೆಳೆದು ಬಂದದ್ದು. ಬುದ್ಧಿ (ಮೇಧಾ) ಶಕ್ತಿ ವಿಶ್ವ ಪ್ರಪಂಚದ ಆಗು ಹೋಗುಗಳನ್ನು ಆಕಸ್ಮಿಕ ಗಳನ್ನೂ ಕಂಡಾಗ ಅದರ ಪ್ರತಿಕ್ರಿಯೆ ವಿಶೇಷವಾಗಿ ಭಯ ಮತ್ತು ಆಶ್ಚರ್ಯ. ಅಂದಾಗ ದೇವರ ಕಲ್ಪನೆಯ ಮೂಲ ಈ ಭಯ–ಚಕಿತ–ಭಾವನೆಯಲ್ಲಿಯೇ ಉಂಟಾಯಿತೆಂದರೆ ತಪ್ಪಾಗಲಾರದು. (ವಿಷ್ಣು ಸಹಸ್ರ ನಾಮದಲ್ಲಿ ದೇವರನ್ನು ಭಯಕೃತ್ ಭಯನಾಶನಃ ಎಂದು ಕರೆದಿದ್ದಿದೆ. ದೇವರಿಂದ ನಾವು ಬೇಡು ವದು ಅಭಯ. ದೇವರ ಒಂದು ಹಸ್ತ ಅಭಯ, ಇನ್ನೊಂದು "ವರದ.")

ಅಂದಾಗ ನಮ್ಮ ಪ್ರಾಕೃತ ಮೂಲದ ಭಯ ಪ್ರವೃತ್ತಿಯಿಂದಲೇ ಮುಂದೆ ಮಾನವನು ಪ್ರಬುದ್ಧನಾದಂತೆ ಒಂದು ಹಂತದಲ್ಲಿ ಅದೂ ಗುಂಪು ಗೂಡಿ ಬದುಕುವಾಗಿನ ಹೆಣಗಾಟ ಹೋರಾಟಗಳ ಸಂದರ್ಭದಲ್ಲಿ ಈ ದೈವಿಕ ಪ್ರಜ್ಞೆ ಹಾಗೂ ಶ್ರದ್ಧೆ ರೂಪಗೊಂಡಿತು. ಅರ್ಥಾತ್ ಹೇಗೆ ವಿಚಾರಮಾಡಿ ದರೂ ಈ ದೇವರೆಂಬ ಕಲ್ಪನೆ, ಭಾವನೆ ಮಾನವನ ಮನೋವಿಕಾಸದಲ್ಲಿ ಒಂದು ಗೌಣ ಅಥವಾ ಫಲಿತ (ಜನಿತ) Derivative ಹೊರತು ಸ್ವಯಂಭೂ ಪ್ರೇರಣೆ ಅಲ್ಲ. ದೇವರ ಕುರಿತು ಒಂದು ಪ್ರವೃತ್ತಿ ಎಂಬುದು ಇದ್ದುದಕ್ಕೆ ಯಾವ ವೈಜ್ಞಾನಿಕ ಸುಳಿವೂ ಸಿಕ್ಕಿಲ್ಲ.

ಕಲೆ, ರಸ, ಸಾಹಿತ್ಯ, ಗಣಿತ ಇತ್ಯಾದಿಗಳ ಪ್ರಜ್ಞೆಯಂತೆಯೇ ಈ ದೇವರ ಕುರಿತು ಮಾನವನಲ್ಲಿ ಬೆಳೆದು ಬಂದ ಒಂದು ಭಾವಗ್ರಂಥಿ ಮನಸ್ಸಿನ ವಿಕಾಸದ ವಿಪಾಕ. ಮಾನವನವರೆಗಿನ ಪ್ರಾಣಿವರ್ಗಗಳಲ್ಲಿ ಇದರ ಯಾವ ಕುರುಹೂ ಸುಳಿವೂ ಇಲ್ಲ. ಮುಂದೆ ಮಾನವನಲ್ಲಿಯೂ ಅದು ಶಿಶುವಿನ ಹಂತದಲ್ಲಿ ಇಲ್ಲ. ಮುಂದೆ ತಾಯ್ತಂದೆ ಗುರುಹಿರಿಯರ ನಡೆನುಡಿಯಿಂದ ಕಂಡು ಕೇಳಿ ಅನುಕರಿಸಿ ಕಲಿತು ಬಲಿತು ಬಂದ ವೃತ್ತಿಯೇ ಹೊರತು ಅದು ಮೂಲಪ್ರವೃತ್ತಿ ಅಲ್ಲ.

ಸೃಷ್ಟಿಯ ಪರಿಸರ ಪ್ರಕ್ರಿಯೆಗಳಿಗೆ ಜೀವಾಣುವಿನಿಂದ ಮೊದಲಾಗಿ ಸಕಲ ಪ್ರಾಣಿವರ್ಗವೂ ತನ್ನ ಬದುಕಿನ ಒತ್ತಾಯಗಳಿಗೆ ಪ್ರತಿಯಾಗಿ ನಿರ್ದಿಷ್ಟ ಹಾಗೂ ನಿಷ್ಕೃಷ್ಟವಾದ ಕ್ರಿಯಾ ರೂಪವಾಗುವ ಪ್ರವೃತ್ತಿಗಳನ್ನು ಪಳಗಿಸಿ

ಕೊಂಡವು. ಅಂಥ ಒಂದು ನಿಶ್ಚಿತ ಪ್ರತಿಕ್ರಿಯೆಯಿಂದಾಗಿ ಭಕ್ತಿಪ್ರವೃತ್ತಿ ಇಲ್ಲವೆ ಧರ್ಮಪ್ರವೃತ್ತಿ ಎಂಬುದು ಮಾನವನ ಮನಸ್ಸಿನ ಪ್ರೇರಣೆಗಳಲ್ಲಿ ಒಂದಾಗಿ ಬೆಳೆದು ಬಂದುದಿಲ್ಲ.

ಹೀಗೆ ದೈವಿಕ ಶ್ರದ್ಧೆ ಅಥವಾ ಧಾರ್ಮಿಕ ಪ್ರವೃತ್ತಿ ಒಂದು ಮೂಲ ಭೂತ ಪ್ರಕೃತಿ ಸಿದ್ಧ ಪ್ರವೃತ್ತಿ ಅಲ್ಲ, ಎಂದಾದ ಮೇಲೆ ಅದರ ವಿಕಾಸ ಕುರಿತು ಹಾಗೂ ವ್ಯಾಪಕವಾದ ಆವಿರ್ಭಾವ ಅನೇಕ, ಧರ್ಮಾಚರಣೆ, ಭಕ್ತಿ ಪಂಥ, ಉಪಾಸನಾ ಮಾರ್ಗ ಮುಂತಾದವುಗಳ ರೂಪದಲ್ಲಿ ನಾಸ್ತಿಕ ವಿಚಾರಶೀಲನು ವೈಜ್ಞಾನಿಕವಾಗಿ ವಿಶ್ಲೇಷಿಸುವದು ಸಾಧ್ಯವಿದೆ. ಅದು ಸಾಧಿಸಿಯೂ ಆಗಿದೆ.

ಧಾರ್ಮಿಕ ಅಥವಾ ದೈವಿಕ (ಪಾರಮಾರ್ಥಿಕ) ಮನೋವ್ಯಾಪಾರದ ವೈಜ್ಞಾನಿಕ ವಿಚಿಕಿತ್ಸೆ ಮಾಡುವವರು ಬಳಸುವ ಎರಡು ಪದಗಳನ್ನು ನಾವು ಇಲ್ಲಿ ಗಮನಿಸಬೇಕು. ಅವೆಂದರೆ, "ಪಾರಮಾರ್ಥಿಕ ಪ್ರಜ್ಞೆ" ಮತ್ತು "ಪಾರ ಮಾರ್ಥಿಕ ಅನುಭವ" (ಇಲ್ಲಿ ಪಾರಮಾರ್ಥಿಕ ಎಂಬ ಮಾತು ಧಾರ್ಮಿಕ ಮತ್ತು ದೈವಿಕ ಎಂಬ ಎರಡೂ ಅರ್ಥಗಳಲ್ಲಿ ಬಳಸಲಾಗಿದೆ.) "ಪಾರಮಾರ್ಥಿಕ ಪ್ರಜ್ಞೆ" (Religious Consciousness) ಮನಸ್ಸಿಗೆ ಅರಿವಾಗುತ್ತದೆ. ಅದನ್ನು ಅಂತರ್ಮುಖಿಯಾಗಿ ಚಿಂತಿಸುವದರಿಂದ ಮತ್ತೆ ಪರೀಕ್ಷಿಸಬಹುದು. "ಪಾರಮಾರ್ಥಿಕ ಅನುಭವ" (Religious Experience) ಅದಕ್ಕಿಂತ ಹೆಚ್ಚು ಅಸ್ಪಷ್ಟ ಪದವು. ಇದು ಪಾರಮಾರ್ಥಿಕ ಪ್ರಜ್ಞೆಯ ಒಂದು ಭಾವನಾತ್ಮಕ ಘಟಕವು. ಇದು ತನಗೆ ಅನಿಸಬಹುದು, ಆದರೆ ಇತರರಿಗೆ ತಿಳಿಸುವದು ಅಸಾಧ್ಯ. ಧಾರ್ಮಿಕ ಇಲ್ಲವೆ ದೈವಿಕ ಆಚರಣೆ, ನಡೆವಳಿಕೆಯ ಪರಿಣಾಮ ವಿದು. ಈ ಭಾವನಾಮಯ ಅಂಶವೆ ದೈವಿಕ ಶ್ರದ್ಧೆಗೆ ನಮ್ಮನ್ನು ಒಯ್ಯುತ್ತದೆ. ಈ ಪಾರಮಾರ್ಥಿಕ ಅನುಭವದ ಕೆಲವು ಉದಾಹರಣೆಗಳೆಂದರೆ, ಅನುಭಾವಿಗಳು (ಯೋಗಿಗಳು) ಬಣ್ಣಿಸುವ ದೇವರ ಸಾರ್ವತ್ರಿಕ ಅಸ್ತಿತ್ವದ ಒಂದು ಅನಿಸಿಕೆ (ಭಾವನೆ) ಪ್ರಾರ್ಥನೆ ಅಥವಾ ಪೂಜಾರ್ಚನೆಯ ಯಾವದೇ ಉಪಾಸನೆಯ ವಿಧಿಯ ನಂತರ ಮನಸ್ಸಿಗೆ ಒಂದು ಶಾಂತಿ (ನೆಮ್ಮದಿ)ಯ ಅನಿಸಿಕೆ ಮತ್ತು ಎಲ್ಲ ಸಾಮಾನ್ಯ ಧಾರ್ಮಿಕ ಜೀವನದ ಚಟುವಟಿಕೆಗಳ ಒಳಸೆಳವಾಗಿ ಒಂದು ಭಾವಾವೇಶದ ಮಂದವಾದ ಸಂವೇದನೆ.

ಆದರೆ ಇದೆಲ್ಲವನ್ನೂ ಗಮನಿಸಿ ಮನೋವೈಜ್ಞಾನಿಕವಾಗಿಯೇ ಅನ್ವೇಷಣೆ, ವಿಶ್ಲೇಷಣೆಗಳಿಗೆ ಗುರಿಪಡಿಸಿ ತಕ್ಕಮಟ್ಟಿಗೆ ಗುರುತಿಸಬಹುದು. ಇದು ನಮ್ಮ ಜಿಜ್ಞಾಸೆಯ ವಿಷಯವಾಗಬಲ್ಲದು. ಆ ಮಟ್ಟಿಗೆ ಸತ್ಯಶೋಧಕ ನಾದ ನಾಸ್ತಿಕನಿಗೆ ಉಪನಿಷತ್ತಿನ ಮಾತಿನಲ್ಲಿ ಹೇಳುವುದಾದರೆ, ದೇವರೆಂಬ

ಪ್ರಮೇಯು ಕೇಳತಕ್ಕದ್ದು, ಮನನ ಮಾಡತಕ್ಕದ್ದು ಮತ್ತು ಆಳವಾಗಿ ಚಿಂತಿಸತಕ್ಕದ್ದು. (ಶ್ರೋತವ್ಯಃ ಮಂತವ್ಯಃ ನಿಧಿಧ್ಯಾಸಿತವ್ಯಃ)

ಹೀಗೆ ದೇವರೆಂಬ ವಸ್ತು (?)ವನ್ನು ಒಂದು ಪ್ರಮೇಯವಾಗಿ (Hypothesis) ಒಪ್ಪಿಕೊಳ್ಳಲು ನಾಸ್ತಿಕ ವಿಚಾರವಾದಿಯು ಎಂದಿಗೂ ಸಿದ್ಧ. ಆದರೆ ದೇವರೆಂಬುದು ಆದ್ಯ ಸ್ವತ ಸಿದ್ಧ ಪ್ರತಿಷ್ಠಿತ ಪ್ರಮಾಣವೆಂಬುದು ಅವನಿಗೆ ಎಂದಿಗೂ ಮಾನ್ಯವಿಲ್ಲ. ಒಬ್ಬ "ಷಡ್ಗುಣೈಶ್ವರ್ಯ ಸಂಪನ್ನ" ಭಗವಂತನೆಂದು, "ಕರ್ತುಂ ಅಕರ್ತುಂ ಅನ್ಯಥಾ ಕರ್ತುಂ" ಹೀಗೆ ಸರ್ವಶಕ್ತನೂ ಸರ್ವಜ್ಞನೂ ಸರ್ವವ್ಯಾಪಿಯೂ ಸರ್ವೇಶ್ವರನೂ ಆದ ಪರಮ ಪುರುಷನೂ ಅನಂತ ಕೋಟಿ ಬ್ರಹ್ಮಾಂಡಕ್ಕೆ ನಾಯಕನೂ ಆದ, ಭಕ್ತವತ್ಸಲ ದುಷ್ಟ ಶಿಕ್ಷಕ, ಶಿಷ್ಟ ರಕ್ಷಕನಾದ ದೇವಾಧಿದೇವನೆಂದು, ಮಾನವನ ಗುಣಗಳನ್ನೇ ಹಿಗ್ಗಿಸಿ ಉಬ್ಬಿಸಿ ಒಟ್ಟೈಸಿ ರೂಪಿಸಿದ "ವಿರಾಟ ಪುರುಷ"ನೆಂದು, ಒಬ್ಬ ಅತಿ ಪ್ರಚಂಡ ಅತಿ ಮಾನವ ವ್ಯಕ್ತಿಯಾಗಿ ಆತನೆ ಸಕಲ ಸೃಷ್ಟಿ ಪ್ರಪಂಚದ ನಿರ್ಮಾಪಕ ನಿಯಾಮಕ ನಿಯಂತ್ರಕ ಅಧ್ಯಕ್ಷನೆಂದು ವೈಚಾರಿಕ ನಾಸ್ತಿಕನ ವೈಜ್ಞಾನಿಕ ದೃಷ್ಟಿಯು ಎಂದಿಗೂ ಒಪ್ಪುವಂತಿಲ್ಲ.

ದೇವತಾ ಕಲ್ಪನೆ

ಈ ಬಗೆಯ "ದೇವರು" "ಆತ್ಮ"ದ ಕಲ್ಪನೆಯಿಂದಲೇ "ಮಹತೋ ಮಹಾನ್" ಗೊಳಿಸಿಕೊಂಡ ಈ ಪರಮಾತ್ಮ (ಆತನೇ ಪರಮೇಶ್ವರ)ನೆಂಬ ಕಲ್ಪನೆ ಒಂದು ಮನೋಬಿಂಬ. ದೇವರನ್ನು ಅನಂತಶಕ್ತಿ, ಅನಂತ ಇಚ್ಛೆ, ಅನಂತ ಕರುಣೆ ಹಾಗೂ ಅನಂತ ರೂಪಗಳುಳ್ಳ, ಮಾನವ ವ್ಯಕ್ತಿತ್ವದ್ದೇ ಒಂದು ಬಹು ಬೃಹದಾಕೃತಿಯೆಂದೇ ತಿಳಿಯಬೇಕಾಗುತ್ತದೆ. ಈ ಭಗವಂತನ ಗುಣಗಳೂ ಶಕ್ತಿಗಳೂ ಅಂದರೆ ಮಾನವನಲ್ಲಿ ಇರುವ ಮತ್ತು ಆತ ಇರಬೇಕೆಂದು ಬಯಸುವ ಶಕ್ತಿಗಳದೇ ಮಹದ್ರೂಪ. ಈ ದೇವತೆಗಳ ಶಾರೀರಿಕ ಆಕಾರಗಳನ್ನು ನಾವು ಮಾನವನ ಮಾದರಿಯಿಂದಲೇ ಕಲ್ಪಿಸಿದ್ದೇವೆ. ಇನ್ನು ಒಂದು ತಲೆಯ ಬದಲು ಮೂರೋ ನಾಲ್ಕೋ ಐದೋ ಆರೋ ಅಥವಾ ಸಾವಿರವೋ ಬೆಳೆಸಿಕೊಂಡಿದ್ದೇವೆ. ಹಾಗೆಯೇ ಮಾನವನ ಎರಡು ಕೈಗಳ ಬದಲು ನಾಲ್ಕು, ಆರು, ಎಂಟು–ಸಾವಿರ ಕೈಗಳವರೆಗೂ ಸಂಖ್ಯೆ ಬೆಳೆಯಿಸಿಕೊಂಡಿದ್ದೇವೆ. ಆದರೆ ಅದೇಕೋ ನಮ್ಮ ದೇವರ ಕಾಲುಗಳು ಎರಡೇ ಉಳಿದಿವೆ! ಈ ದ್ವಿಪಾದ ಪಶು ಮನುಷ್ಯನ ಭದ್ರ ನೆಲೆಯನ್ನು ಬಿಟ್ಟುಕೊಡಲಿಲ್ಲ. (ವೇದದಲ್ಲಿಯ "ಪುರುಷಸೂಕ್ತ"ವು ಮಾತ

ಈ ಪುರುಷನನ್ನು "ಸಹಸ್ರಪಾದ್" ಎಂದಿದೆ. ಆದರೆ ಅಲ್ಲಿ ಈ ವಿರಾಟ್ ಪುರುಷನ ವಿಗ್ರಹ ಸಮಗ್ರ ಸಮಾಜ ಪುರುಷನದೇ ಪ್ರತಿಮೆ.)

ನಮ್ಮಲ್ಲಿ ಅತಿಮಾನುಷತ್ವವನ್ನು ಸೂಚಿಸಲು ಕೆಲವು ದೇವತೆಗಳನ್ನು ಸಂಮಿಶ್ರ ರೂಪದಲ್ಲಿ ನಾವು ಕಲ್ಪಿಸಿದ್ದೇವೆ. ಉದಾಹರಣೆಗೆ, ನಮ್ಮ ಬೆನಕ, ಗಣಪ, ನರಸಿಂಹ, ಹಯಗ್ರೀವ. ಇಲ್ಲಿಯೂ ಒಂದು ಸ್ವಾರಸ್ಯ. ಗ್ರೀಕ್ ರೋಮನ್ ಪ್ರಕಾರಗಳಲ್ಲಿಯೂ ಇಂಥ ದೇವತೆಗಳು ಅಥವಾ ದೇವಾಂಶ ಸಂಭೂತವೆಂಬ ವ್ಯಕ್ತಿಗಳು ಪ್ರಸಿದ್ಧ. ಆದರೆ ಅಲ್ಲಿಗೂ ಇಲ್ಲಿಗೂ ಒಂದು ಮಾರ್ಮಿಕ ವ್ಯತ್ಯಾಸವಿದೆ. ಅಲ್ಲಿಯ ಇಂಥ "ನರ–ಪಶು" ದೇವತೆಗಳಲ್ಲಿ ಆಯಾ ವಿಗ್ರಹದ ಮೈಯು ವಿಶಿಷ್ಟ ಪಶುವಿನದು. ಆದರೆ ಮುಖ, ಮಸ್ತಕ ಮನುಷ್ಯನದು. ಉದಾ: ಸ್ಫಿಂಕ್ಸ್. ಇದರ ದೇಹ ಸಿಂಹನದು. ಆದರೆ ತಲೆ ಮನುಷ್ಯಳದು. ಬ್ಯಾಕಸ್: ಇದರ ದೇಹ ಕುದುರೆಯದು. ಆದರೆ ಮುಖ ಮನುಷ್ಯನದು. ಹಾಗೆಯೇ ಸೆಂಟಾರ್. ಆದರೆ ನಮ್ಮ ಹಯಗ್ರೀವ ಕುದುರೆ ಮುಖವುಳ್ಳ ಮನುಷ್ಯ ದೇಹ. ಹಾಗೆಯೇ ನರಸಿಂಹ, ಗಣಪತಿ–ದೇಹ ಮಾತ್ರ ಮನುಷ್ಯನದು, ಮಸ್ತಕ ಸಿಂಹನದು, ಆನೆಯದು. ಉತ್ತಮಾಂಗವು ಉತ್ತಮ ಪ್ರಾಣಿಯದಲ್ಲ.

ಬಹುಶಃ ತೀರ ಹಿಂದುಳಿದ ದುರ್ಬಲ ಅಥವಾ ವನ್ಯ ಬುಡಕಟ್ಟಿನ ಜನಗಳನ್ನು ಹೆಚ್ಚು ಮುಂದುವರಿದ ಮೇಧಾ ಶಕ್ತಿಯ ಬಲಪೌರುಷದ ಜನಾಂಗ ಗಳು ಸೋಲಿಸಿ ಗೆದ್ದು ತಮಗೆ ಅಂಕಿತವಾಗಿ ಮಾಡಿಕೊಂಡುದರ ದ್ಯೋತಕವಾಗಿ ಆ ಸೋತ ಜನಗಳ ದೇವತೆಗಳು ಗೆದ್ದವರ ದೇವತೆಗಳ ವಾಹನಗಳೂ ಗಣಗಳೂ (ಅನುಚರರೂ, ಭೃತ್ಯರೂ) ಆಗಿರಬೇಕು. ಹೀಗೆಯೇ ನಂದಿ, ಗರುಡ, ಸಿಂಹ, ಹಂಸ, ನವಿಲು, ಹೆಗ್ಗಣ, ಹಾವು ಕೂಡ ನಮ್ಮ ಹಿರಿಯ ದೇವತೆಗಳ ವಾಹನ ಗಳಾದವು. ಹಾಗೆಯೇ ಜನಾಂಗಗಳು ಬೆರೆತು ಒಡಗೂಡಿದಲ್ಲಿ ಗಂಡು ಹೆಣ್ಣು ದೈವತಗಳಲ್ಲಿಯೂ ದಾಂಪತ್ಯ ಸಂಬಂಧಗಳು ಕೂಡಿಬಂದವು. ಇದಕ್ಕೆ ಒಂದು ಸಣ್ಣ ಉದಾಹರಣೆ–ನಮ್ಮ ಗೋಕರ್ಣ ಕ್ಷೇತ್ರದಲ್ಲಿ ಶ್ರೀ ಮಹಾಬಲೇಶ್ವರ ದೇವರು ಗಂಗಾಷ್ಟಮಿಯ (ಆಶ್ವಿಜದಲ್ಲಿ) ದಿನ ಗಂಗಾವಳಿ ನದಿಯ ಮುಖದಲ್ಲಿ ಹೋಗಿ ಗಂಗಾದೇವಿಯೊಂದಿಗೆ ಮದುವೆ ನಿಶ್ಚಯ ಮಾಡಿಕೊಂಡು ಬಂದು ಮುಂದೆ ದೀಪಾವಳಿಯ ಸಂಜೆ ಗಂಗೆಯೊಂದಿಗೆ ವಿವಾಹ ವಿಜೃಂಭಣೆಯ ಹಬ್ಬ ನಡೆಯುತ್ತದೆ. ಇರಲಿ. ಈ ಮಾನವೀಕರಣಗೊಂಡ ದೇವತ್ವದ ವಿಚಾರ ಸದ್ಯ ಇಷ್ಟೇ ಸಾಕು.

ನಮ್ಮ ಮಾನವ ಸಂಸ್ಕೃತಿಯು ಚರಿತ್ರೆಯಲ್ಲಿ ಬೆಳೆದುಬಂದ ಮಂದಿರ, ಮಠ, ಚರ್ಚು, ಮಸೀದಿ, ಧರ್ಮ ಸಂಸ್ಥೆ, ಪೂಜೆ-ಪ್ರಾರ್ಥನೆ, ಯಜ್ಞ-ಯಾಗ, ಹೋಮ-ಹವನ ವ್ರತಾರಾಧನೆ ಜಪತಪಾದಿ ಅನುಷ್ಠಾನ, ಉತ್ಸವ, ಸಮಾರಾಧನೆ, ಕಟ್ಲೆ-ಕಂದಾಚಾರ ಮುಂತಾದವುಗಳ ವೈವಿಧ್ಯ ವೈಭವಗಳಿಂದ ಕೂಡಿದ ಹೇರಳ ಸಂದರ್ಭಗಳೇ ದೇವರ ಈ ವೈಯಕ್ತಿಕ ಸ್ವರೂಪದ ಉಪಾಸನೆಯ ವರ್ಣರಂಜಿತವಾದ ಅಂಗವಾಗಿವೆ. ದೇವರನ್ನು ವ್ಯಕ್ತಿಗತವಾಗಿಯೋ ವಿಗ್ರಹವಾಗಿಯೋ ವಿಶಿಷ್ಟ ಅತಿಮಾನುಷ ಶಕ್ತಿಯೆಂದಾಗಿಯೋ ಒಪ್ಪದ ಧರ್ಮಗಳಲ್ಲಿ ಕೂಡ ಈ ಅಂಗವು ಅನಂಗನಂತೆಯೇ ವ್ಯಾಪಿಸಿಕೊಂಡಿದೆ. ನೇರ ಪ್ರವೇಶವಿಲ್ಲದಿದ್ದರೂ ಅಡ್ಡ ಹೊಕ್ಕಿಕೊಂಡು ಆಯಾ ಧರ್ಮ ಪಂಥಗಳಲ್ಲಿ ಸಾಕಷ್ಟು ಹಾವಳಿ ಎಬ್ಬಿಸಿದೆ. ಶುದ್ಧ ಸರಳ ಆಧ್ಯಾತ್ಮಿಕವೋ ಪಾರಮಾರ್ಥಿಕವೋ ಆಗಿರಬೇಕಾದ ದೇವ-ಧರ್ಮ ಪ್ರಪಂಚದಲ್ಲಿ ತುಂಬಿ ಸೂಸುವ ಸಕಲ ಸಿಂಗಾರ ಸೌಂದರ್ಯ, ಐಶ್ವರ್ಯಗಳ ವಿಜೃಂಭಣೆ, ಈ ಒಂದು ಅಂಗದಿಂದಲೇ, ವೈಯಕ್ತಿಕ ದೇವರ (Personal God) ಸ್ತೋಮದಿಂದಲೇ ಪರಂಪರೆಯಿಂದಲೂ ಮೆರೆದಾಡುತ್ತ ಬಂದಿದೆ.

ಪ್ರಪಂಚದಲ್ಲಿ ದೇವರ ಹೆಸರಿನಲ್ಲಿ ದೇವರ ನಿಮಿತ್ತವಾಗಿ ನಡೆದ ನಡೆಯುತ್ತಿರುವ ವ್ಯಾಜ್ಯ, ವೈರ-ಯುದ್ಧಗಳೇ ಈ ವ್ಯಕ್ತಿರೂಪದ ದೇವರುಗಳಿಂದಾಗಿ. ಬ್ರಹ್ಮವಸ್ತು, ಪರತತ್ವ, ಪರಮಾತ್ಮನೆಂಬ ಒಂದು ಅಸ್ತಿತ್ವಕ್ಕಾಗಿ ಧರ್ಮ-ಧರ್ಮಗಳ ನಡುವೆ ಯಾವದೇ ಕಲಹ ಯುದ್ಧ ನಡೆದ ದಾಖಲೆ ಇತಿಹಾಸದಲ್ಲಿ ಇಲ್ಲ.

ಇದರಿಂದ ಒಂದು ಮಾತು ಸ್ಪಷ್ಟವಾಗುತ್ತದೆ. ಇಂಥ ವ್ಯಕ್ತಿರೂಪದ ದೇವರ ಶ್ರದ್ಧೆಯೆಂಬುದು ಪರ್ಯಾಯವಾಗಿ ಅದನ್ನು ನಂಬಿದ ಜನಸಮುದಾಯದ, ಭಜಕ ವೃಂದದ ಇಲ್ಲವೆ ಆಯಾ ಆಸ್ತಿಕ ಸಮಾಜದ ಒಂದು ಸಾಮೂಹಿಕ ಅಭಿಮಾನದ ಆತ್ಮಗೌರವದ ಸಂಕೇತವಾಗಿಬಿಡುತ್ತದೆ, ರಾಷ್ಟ್ರಕ್ಕೆ ಧ್ವಜ ಇರುವಂತೆ. ನಾನ್-ನನ್ನ-ನನ್ನಿ-ನಂದು-ನಂಬಿಗೆ ಇವೆಲ್ಲ ಒಂದೇ ಮೂಲದ ರೂಪಗಳೆಂದೇ ನನ್ನ ಅಭಿಪ್ರಾಯ. ಮಮತೆ ಹೇಗೆ ಮಮ-ನನ್ನದೆಂಬ ಭಾವವೋ ಹಾಗೆಯೆ ನಂಬಿಕೆಯೂ ನನ್ನದೆಂಬ-ನನ್ನಿ-ಸತ್ಯವೆಂಬ ಭಾವ. ನಂಬಿಕೆ ಅಥವಾ ಶ್ರದ್ಧೆ ಅಹಂಕಾರದ ಒಂದು ಸೂಕ್ಷ್ಮ ಆದರೂ ಉತ್ಕಟ ರೂಪ. ಆದ್ದರಿಂದಲೇ ನಾವು ನಂಬಿದ್ದನ್ನು ಒಮ್ಮೆಲೇ ಅಥವಾ ಸುಲಭವಾಗಿಬಿಡಲು ಬದಲಿಸಲು ಸಿದ್ಧರಿರುವದಿಲ್ಲ. ನನ್ನ ನಂಬಿಗೆಯ ಮೇಲೆ ಆದ ಆಘಾತ ನನ್ನ ಅಸ್ಮಿತೆಯ

(ಅಹಂಕಾರದ) ಮೇಲೆಯೇ ಆದ ಆಘಾತವೆನಿಸುತ್ತದೆ. ಆದ್ದರಿಂದಲೇ ಇಂಗ್ಲಿಷಿನಲ್ಲಿ ಒಂದು ಸೂಕ್ತಿ ಇದೆ.

Awoman convinced against her will is of the same opinion still. ತನ್ನ ಇಚ್ಛೆಯ ವಿರುದ್ಧ ಒಬ್ಬನನ್ನು ಮನಗಾಣಿಸಿದರೂ, ಆತ ನನ್ನ ಮೊದಲಿನ ಅಭಿಪ್ರಾಯದವನೇ ಆಗಿರುತ್ತಾನೆ. ಈ ಸೂಕ್ತಿಯಲ್ಲಿ ನಿಜವಾಗಿಯೂ ಏ ಮ್ಯಾನ್ ಎಂಬಲ್ಲಿ ಏ ವುಮನ್ ಎಂದಿದೆ. ಅದಕ್ಕೆ ಕಾರಣ ಗಂಡಿಗಿಂತ ಹೆಣ್ಣಿನಲ್ಲಿ ಅಹಂಕಾರ (ತನ್ನತನದ ಅರಿವು) ತೀವ್ರ.

ಹೀಗೆ ಒಂದು ಅರ್ಥದಲ್ಲಿ ಭಗವದ್ಗೀತೆಯ ವ್ಯಾಖ್ಯೆಯಂತೆ "ಸ್ವ-ಭಾವವೇ ಅಧ್ಯಾತ್ಮ" ಆತ್ಮ-ಅಂತರಾತ್ಮ ಮೂಲ ಬಿಂಬ. ದೇವರು ಅದರ ಹೊರ ತೋರಿಕೆಯ ಉತ್ಸವದ ಮೂರ್ತಿ. ಈ ಕುರಿತು ಇದಕ್ಕೂ ಹೆಚ್ಚು ವ್ಯಾಖ್ಯಾನ ಇಲ್ಲಿ ಅಪ್ರಸ್ತುತ.

ಒಟ್ಟಿನಲ್ಲಿ, ಚಿಂತನಶೀಲ ತತ್ವನಿಷ್ಠ ನಾಸ್ತಿಕನು ಈ ವ್ಯಕ್ತಿರೂಪಿ, ನಿಗ್ರಹಾನುಗ್ರಹ ಶಕ್ತಿಯ, ಭಕ್ತರಿಗೆ ಇಷ್ಟಾರ್ಥವನ್ನು ಕರುಣಿಸುವ ದೇವತ್ವ ವನ್ನು ಒಪ್ಪಲಾರ.

ವಿಶ್ವಶಕ್ತಿ ವ್ಯಕ್ತಿ ವಿಶೇಷವಲ್ಲ

7

ವೈಜ್ಞಾನಿಕ ದೃಷ್ಟಿಯಿಂದ ಈ ವೈಯಕ್ತಿಕ ದೇವರ ಕಲ್ಪನೆ ಒಂದು ಪ್ರಚಂಡ ಅಹಮಿಕೆ (ಅಹಂಕಾರ)ಯ ಮನೋ ವ್ಯಾಪಾರವೆನಿಸುತ್ತದೆ. ವಿಶ್ವ ವ್ಯಾಪಿಯಾದ ವಿದ್ಯುತ್ ಶಕ್ತಿಯ ಕಾರ್ಯ ನಮ್ಮ ಕೋಣೆಯ ಒಂದು ಬಲ್ಬಿನಲ್ಲಿಯೂ ಕಾಣಿಸಿಕೊಳ್ಳುವದು. ಆದರೆ ಅದು ಆ ವಿಶ್ವವ್ಯಾಪಕ ಶಕ್ತಿಯ ತೀವ್ರತೆಯದೇ ನಿತ್ಯ ಗುಣ. ಅದರ ತೆಕ್ಕೆಯಲ್ಲಿ ನಮ್ಮ ನಿಮ್ಮ ಅವಧಿ ಅವಕಾಶಗಳೆಲ್ಲ ಕೇವಲ ಅಂಗಭೂತ ಅಂಶಗಳು. ಇಡಿಯುದರ ಬಿಡಿ ಎಡೆಗಳು. ಇಲ್ಲಿ ಅಲ್ಲಿ ನಮ್ಮ ಒಲೆಗೆ ನಿಮ್ಮ ಗುಡಿಗೆ ಊರ ರಸ್ತೆಗೆ ನಾಟಕ ಸಭಾ ಗೃಹಕ್ಕೆ ಆಯಾ ಪ್ರಯೋಜನಕ್ಕೆ ಆ ಮಿಂಚು ತತ್‌ಕ್ಷಣ ಅಷ್ಟೇ ತೀವ್ರವಾಗಿ ಒದಗುವಾಗ ಅದೊಂದು ಏಕರೂಪ ನಿರ್ವಿಕಾರ ನಿರ್ಭಾವ ಯಾಂತ್ರಿಕ ಕ್ರಿಯೆ. ಅದರಲ್ಲಿ ನಮ ನಿಮಗೆ ವೈಯಕ್ತಿಕವಾಗಿ ವಿದ್ಯುತ್ತಿನ ಯಾವ ವಿಶೇಷ ಪ್ರತ್ಯೇಕ ಪ್ರಸನ್ನತೆಯ ಅನುಗ್ರಹ ಪ್ರಸಾದವೂ ಇರುವುದಿಲ್ಲ.

ಆದರೆ ವಿಶ್ವಚಾಲಕ ವಿಶ್ವಾಂತರ್ಯಾಮಿ ಎಂಬ ದೇವರನ್ನು ಇಷ್ಟಾರ್ಥ ಸಿದ್ಧಿಗಾಗಿ ನಮ್ಮ ಇಷ್ಟದೇವರೆಂದು ಭಜಿಸುವಾಗ ನಮ್ಮ ಅರಿಕೆ ಕೋರಿಕೆ

ನಮಗಾಗಿ ಆತ ಒಲಿದು ಸ್ಪಂದಿಸಬೇಕು, ಸ್ಪಂದಿಸುತ್ತಾನೆ, ನಮ್ಮ ಯೋಗಕ್ಷೇಮ ಆತನ ಇಚ್ಛೆ, ಆತನ ಹೊಣೆ, ಆತನ ಅನುಗ್ರಹ ಎಂದೆಲ್ಲ ನಾವು ಭಾವಿಸುತ್ತೇವೆ. ಆ ಭಾವನೆಯಲ್ಲಿಯೇ ತಿಳಿದೋ ತಿಳಿಯದೆಯೋ ಜೀವಿಸುತ್ತೇವೆ. ನಮ್ಮ ಬಿಂಕ ಬಿಡಿವಾರದ ಬದುಕಿಗೆ ಇದು ನಮ್ರತೆಯ ಶಿಸ್ತು ನೀಡಬಹುದು. ನಮ್ಮ ಬಡ ಬೇಡಿಕೆಯ ಬಾಳಿಗೂ ಇದು ಕೆಲಮಟ್ಟಿಗೆ ನೆಮ್ಮದಿಯ ಲಂಗರು ಅನಿಸಬಹುದು.

ಆದರೆ ವಿಶ್ವನಿಯಾಮಕವಾದ ಒಂದು ಧೀಮಂತ ಪ್ರಜ್ಞಾಧಾರಿತ ಚೈತನ್ಯ ಅಧ್ಯಕ್ಷನಂತೆ ಕೆಲಸ ಮಾಡುತ್ತಿದೆ— ಎಂದು ವಾದಕ್ಕಾಗಿ ಒಪ್ಪಿಕೊಂಡರೂ ಅದು ಆ ವಿಶ್ವದ ಒಂದು ಅಲ್ಪ ಭಾಗದಲ್ಲಿಯೇ ಜೀವ ಪ್ರಪಂಚದ ಒಂದು ಅಲ್ಪ ಅಂಶವಾದ ಈ ಆಕಸ್ಮಿಕ ಯೋಗಾಯೋಗದಿಂದ ಉಂಟಾದ ಮಾನವ ಪ್ರಾಣಿಯ ಖಾಸಗಿ ಬದುಕಿನ ವಿವರಗಳಿಗೆ ವಿಶೇಷವಾದ ಪ್ರತ್ಯೇಕವಾದ ಕೆಲಸಲ ನಾವೇ ಅನನ್ಯವೆಂದು ನಂಬುವಂತೆ ದಯೆಯನ್ನು ತೋರಬಹುದೆ? ಅವರ ಯೋಗ ಕ್ಷೇಮವನ್ನು ತಾನೇ ಹೊರಬಹುದೇ? ಬಾಯಿಗೆ ತುತ್ತು, ಕೂಸಿಗಾಗಿ ತಾಯಿಯಲ್ಲಿ ಮೊಲೆ ಹಾಲು, ಕನ್ಯೆಗಾಗಿ ವರ, "ಕಲ್ಲಲ್ಲಿ ಪುಟ್ಟಿ ಕೂಗುವ ಕಪ್ಪೆಗಳಿಗೆಲ್ಲ ಅಲ್ಲಲ್ಲಿ ಆಹಾರ," ದನಕ್ಕೆ ಹುಲ್ಲು, ಹುಲಿಗೆ ದನ, ಶರಣು ಬಂದ ಪಾಪಿಗೆ ಅವನ ಸರ್ವ ಪಾಪಗಳಿಂದ ಮೋಕ್ಷ, ಹೀಗೆಲ್ಲ ಆ ಭಗವಂತ ಕರುಣಿಸುವನೆಂಬ ಒಂದು ನಿರೀಕ್ಷೆ ನಾವು ನಮ್ಮ ಮಟ್ಟಿಗೆ ಇಟ್ಟುಕೊಳ್ಳಬಹುದು. ಅದಕ್ಕೆ ನಾವು ಸ್ವತಂತ್ರರು. ಅಂಥ ಒಂದು ನಿರೀಕ್ಷೆಯು ಆಸೆ, ಭರವಸೆ ನಮ್ಮ ಬಾಳಿಗೆ ಆನುಗೋಲಾಗಿಯೂ ಒದಗಬಹುದು. ಆದರೆ ಇದೆಲ್ಲ ಮುಗ್ಧ ಆತ್ಮವಂಚನೆ, ಕೆಲಸಲ ಆತ್ಮ ಸಂಭಾವನೆ.

ಭಗವದ್ಗೀತೆಯಲ್ಲಿ ಭಗವಂತನವೆಂಬ ಈ ವಚನಗಳೇ ಇವಕ್ಕೆ ಯೋಗ್ಯ ಪ್ರತ್ಯುತ್ತರ "ಉದ್ಧರೇತ್ ಆತ್ಮನಾ ಆತ್ಮಾನಂ" "ಆತ್ಮಾ ಏವ ಆತ್ಮನಃ ಬಂಧುಃ" "ಆತ್ಮಾ ಏವ ರಿಪುಃ ಆತ್ಮನಃ" "ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋ" (ಇನ್ನು ಇದಕ್ಕೆ ವಿರುದ್ಧವಾದ ತಾನು ವೈಯಕ್ತಿಕ ದೇವ ರೆಂದು ಆಡಿದ ವಚನಗಳೂ ಅದೇ ಗೀತೆಯಲ್ಲಿ ಸಿಗುತ್ತವೆ!)

ಹೀಗೆ ಅನ್ಯಕೇಂದ್ರಿತ ಸೃಷ್ಟಿಯಲ್ಲಿ ಆಗಂತುಕನಾಗಿ ಆಕಸ್ಮಿಕವಾಗಿ ತಲೆಯೆತ್ತಿ ನಿಂತ ಆತ್ಮ ಕೇಂದ್ರಿತ ದೃಷ್ಟಿಯ ಮಾನವನು ಇದೆಲ್ಲ ತನಗಾಗಿಯೇ ಎಂಬ ಅಹಂಭಾವನೆಯಿಂದ ಈ ವಿಶ್ವ ಸೃಷ್ಟಿಯೊಂದಿಗೆ ತನ್ನ ಸಾಮಂಜಸ್ಯವನ್ನು ಕಂಡುಕೊಳ್ಳಲು ನೋಡಿದನು. ಇದರ ಒಂದು ಫಲ ತನ್ನ ವ್ಯಕ್ತಿತ್ವದ ಪ್ರಭಾ ವಲಯವನ್ನೇ ವಿಶ್ವದ ಮೂಲದ ಮೇಲೆ ಪ್ರಕ್ಷೇಪಿಸಿ ವಿಶೇಷ ಗುಣಗಳುಳ

ಅತಿ ಮಾನವ ಭವ್ಯಾಕೃತಿಯನ್ನು ಕಂಡುಕೊಂಡನು.

"ಅತಿಮಾನಸ" ಪಾತಳಿಯನ್ನೂ "ಪೂರ್ಣ ಯೋಗ"ವನ್ನೂ ದೈವೀ ಶಕ್ತಿಯ ಸಾಕ್ಷಾತ್ಕಾರವನ್ನೂ ಕಂಡುಂಡ ಗುರು ಅರವಿಂದರ ಅಭಿಪ್ರಾಯದಂತೆ ನಿಜವಾಗಿಯೂ ನಾವು ಇಂಥ ನೈತಿಕ ಜಗತ್ತಿನಲ್ಲಿ ಬದುಕುತ್ತಿಲ್ಲ. ಒಳಿತು-ಕೆಡಕು (ಪುಣ್ಯ-ಪಾಪ, ಶುಭಾ-ಶುಭ) ಎಂಬ ನೈತಿಕ ಆಶಯುಗಳನ್ನು ಈ ನಿಸರ್ಗ-ವಿಶ್ವ-ಪ್ರಪಂಚದಲ್ಲಿ ಆರೋಪಿಸುವ ಈ ಮಾನವೀ ಪ್ರಯತ್ನವು ಒಂದು ಕರುಣಾಜನಕ ಸಂಗತಿ. ಇಲ್ಲಿ ಮಾನವನು ತನ್ನ ಬಿಂಬವನ್ನೇ ಎಲ್ಲ ಕಡೆಗೆ ಕಾಣಲು ಹೆಣಗುತ್ತಾನೆ. ಈ ವಿಶ್ವದ ಅಂತಿಮ ಸತ್ಯವು ಒಳಿತು ಕೆಡುಕಿನ ಆಚೆಗಿರುವಂತಹದು.

ಹೀಗಿದ್ದೂ ಮಾನವನು ತನ್ನ ಬಿಂಬವನ್ನೇ ಬೃಹದಾಕಾರವಾಗಿ ಹಿಗ್ಗಿಸಿ ಹಿರಿಯಾಗಿಸಿ ದೇವರನ್ನು ಕಲ್ಪಿಸಿಕೊಂಡನೆಂಬುದಕ್ಕೆ ಇನ್ನೂ ಒಂದು ಕಾರಣ ವಿದೆ. ಇದ್ದುದರಿಂದಲೇ ಅದರ ಅಂಶಗಳನ್ನು ಆಳವಡಿಸಿಕೊಂಡೇ ಇಲ್ಲದುದನ್ನೂ ಊಹಿಸಿಕೊಳ್ಳುವ ಗುಣ ಬುದ್ಧಿಯದು. ಇದರಿಂದಲೇ ಅಂಶದಿಂದ ಪೂರ್ಣ, ಅಂತರವಿದ್ದುದರಿಂದ ಅನಂತ, ಕ್ಷಣಿಕದಿಂದ ಚಿರಂತನ, (ಸನಾತನ), ಚಂಚಲದಿಂದ ಶಾಶ್ವತ, ನಿತ್ಯಗಳ ಕಲ್ಪನೆ ನಾವು ಮಾಡಿಕೊಳ್ಳುತ್ತೇವೆ.

ಉರುಳುವ ಗಾಲಿ (ಗೋಲಿ) ನುಣುಪಾದ ಪಾತಳಿಯ ಮೇಲೆ ಬಲು ದೂರ ಹೋಗುತ್ತದೆಂದು ನಾವು ಕಾಣುತ್ತೇವೆ. ಅಂದರೆ ದೊರಗು ಮೈಯಿಂದ ಘರ್ಷಣೆ ಹೆಚ್ಚು, ಅದರಿಂದ ವೇಗ-ಗತಿ ಕುಂಠಿತ ಮೈ ನುಣುಪಾದಷ್ಟು ವೇಗ ಗತಿ ಹೆಚ್ಚು (ಮೈ ಮೈ ಉಜ್ಜುವದಕ್ಕಿಂತ ಉರುಳುವದರಲ್ಲಿ ಘರ್ಷಣೆ ಕಡಿಮೆ ಮತ್ತು ವೇಗ ಹೆಚ್ಚು) ಇಷ್ಟು ಕಂಡುಕೊಂಡ ನಾವು ಇದರಿಂದ ಊಹಿಸುವ ತತ್ವವೇನು? ಘರ್ಷಣೆ ಕಡಿಮೆಯಾದಂತೆ ಗತಿ-ವೇಗ ಹೆಚ್ಚುತ್ತ ಹೋಗುತ್ತದೆಂದಮೇಲೆ ಘರ್ಷಣವು ಶೂನ್ಯವಾದಾಗ-ವಾದಲ್ಲಿ ಗತಿ ವೇಗ ಅನಂತ. ಆದರೆ ವ್ಯವಹಾರದಲ್ಲಿ ಇನೊಂದು ಆದರ್ಶ. ಎಷ್ಟೇ ನುಣುಪು ಮಾಡಿದರೂ ಪಾತಳಿಯ ಘರ್ಷಣೆ ಶೂನ್ಯವಾಗುವದಿಲ್ಲ. ಉರುಳುವ ಗತಿ ವೇಗ ಅನಂತವಾಗುವಂತಿಲ್ಲ.

ದೇವರ ಕಲ್ಪನೆಯೂ ಇಂತಹದೇ ಆದರ್ಶವ ಊಹನೆ. ಸೃಷ್ಟಿಯ ಎಲ್ಲ ಪ್ರಾಣಿಗಳಲ್ಲಿ ಮನುಷ್ಯ ಅತಿ ಅಶಕ್ತ, ಅಸಹಾಯಕ. ಆದರೆ ಈ ಘೋರ ಲೋಪಗಳನ್ನು ತುಂಬಿಕೊಳ್ಳಲಿಕ್ಕೆ ಆತನಲ್ಲಿ ಮೆದುಳು ಬಲಿತು ಮೇಧಾ ಶಕ್ತಿಯೊಂದು ಇತರ ಪ್ರಾಣಿಗಳಿಗಿಂತ ಮಿಗಿಲಾಗಿ ಬೆಳೆದಿದೆ. ಅವರ ಬಲದಿಂದ ಆತ ತನ್ನಲ್ಲಿ ಇಲ್ಲದ್ದನ್ನು ತನಗೆ ಬೇಕಾದುದನ್ನು ಊಹಿಸಬಲ್ಲ, ಕಲ್ಪಿಸಬಲ್ಲ,

ನಿರ್ಮಿಸಬಲ್ಲ. ಅಂಥ ಒಂದು ಊಹಾ ನಿರ್ಮಿತಿ, ಕಲ್ಪಿತ ಸೃಷ್ಟಿ ಈ ದೇವರು. ಇದು ಮಾನವನ ಲೋಪಗಳಿಗೆ ಪೂರಕ, ಶಕ್ತಿಗಳಿಗೆ ಪೋಷಕ ಧ್ಯೇಯ. ಹೀಗೆ ಮಾನವನ ಅಶಕ್ತತೆ ದುರ್ಬಲತೆಯಲ್ಲಿಯೇ ಅವನ ಸ್ಥಿತಿಗತಿಗಳ ಇತಿಮಿತಿಗಳ ಅರಿವಿನಲ್ಲಿಯೇ ಆ ಮೂಲಕ ಹುಟ್ಟಿದ ಆತಂಕ ಆತುರತೆಗಳಲ್ಲಿಯೇ ಈ ಸರ್ವ ಶಕ್ತ ಸರ್ವಜ್ಞ, ಸರ್ವತಂತ್ರ ಸ್ವತಂತ್ರನೆಂಬ ಈಶ್ವರನ ಉತ್ಪತ್ತಿ ಆಯಿತು.

ದೇವರ ಉಭಯ ಸಂಕಟ !

ದೇವರನ್ನು ಬಹುತೇಕ ಎಲ್ಲ ಭಕ್ತಿ ಧರ್ಮಗಳೂ ದಯಾಮಯನೆಂದೂ ಸರ್ವಶಕ್ತನೆಂದೂ ಹೊಗಳುತ್ತವೆ, ಬಣ್ಣಿಸುತ್ತವೆ. ಆತ ದೀನಬಂಧು, ದಯಾ ಸಿಂಧು, ಜತೆಗೇ ಹಿಂದೆ ಹೇಳಿದಂತೆ–ಕರ್ತುಂ ಅಕರ್ತುಂ ಅನ್ಯಥಾ ಕರ್ತುಂ ಸಮರ್ಥ (ಮಾಡಲು ಮಾಡದಿರಲು ಬೇರೊಂದನ್ನೇ ಮಾಡಲು ಶಕ್ತ) ಆದರೆ ತುಸು ನಿರ್ವಿಕಾರವಾಗಿ ಆಲೋಚಿಸಿದರೆ ದೇವರಿಗೆ ಇವೆರಡೂ ವಿಶೇಷಣಗಳು ಅಥವಾ ಲಕ್ಷಣಗಳು ಒಟ್ಟಾಗಿ ಸಲ್ಲುವದು ಶಕ್ಯವೇ?

ಈ ಜಗತ್ತಿನಲ್ಲಿ ಈ ಜೀವಕೋಟಿಗೆ ಕಷ್ಟವಿದೆ, ಕ್ಲೇಶವಿದೆ, ದುಃಖವಿದೆ. ಜಗತ್ತಿನಲ್ಲಿ ಎಲ್ಲರೂ ಯಾವಾಗಲೂ ಎಲ್ಲ ರೀತಿಯಲ್ಲಿಯೂ ಸುಖಿಗಳಾಗುವ ಅವಕಾಶ ಎಂದೂ ಇದ್ದಿಲ್ಲ, ಇರಲಿಕ್ಕಿಲ್ಲ. ಇದು ಒಂದು ಅಪ್ರಿಯವಾದ ಕಟು ಸತ್ಯ. ಇದನ್ನು ನಿವಾರಿಸಲೆಂದೇ ಬುದ್ಧನು ಹೊಸ ಧರ್ಮವನ್ನು ಕಂಡು ಕೊಂಡನು. ಇದನ್ನು ಅಲ್ಲಗಳೆಯಲೆಂದೇ ಆದಿಶಂಕರರು ಮಾಯಾವಾದವನ್ನು ಪ್ರತಿಪಾದಿಸಿದರು-ಈ ಜಗತ್ತೇ ಸುಳ್ಳೆಂದು! ಆದಾಗ್ಯೂ ವ್ಯಕ್ತಿಯ ಹಾಗೂ ಸಮಷ್ಟಿಯ ಬದುಕಿನಲ್ಲಿ ದುಃಖವು ಹಾಸೋ ಹೊಕ್ಕೋ ಆಗಿ ಹೆಣೆದು ಕೊಂಡಿದೆ. ಇದೆಲ್ಲ ಆ ಜಗತ್‌ಚಾಲಕ ಜೀವನ ನಾಟಕ ಸೂತ್ರಧಾರ ದೇವರು ಇರುತ್ತಿರುವಾಗ ಹೇಗೆ? ಏಕೆ?

ಆತ ಸರ್ವಶಕ್ತನೇ ಹೌದಾಗಿದ್ದರೆ ಜಗತ್ತಿನಲ್ಲಿ ಈ ದುಃಖ ಈ ಕಷ್ಟ ಕ್ಲೇಶಗಳನ್ನು ಆತ ಇರದಿರುವಂತೆ ಮಾಡಬಲ್ಲ. ಆದರೆ ಮಾಡಲೊಲ್ಲ. ಅಂದಾಗ ಆತ ಸರ್ವಶಕ್ತನಿದ್ದರೂ ದಯಾಮಯನಲ್ಲ, ಪ್ರೇಮಮಯನಲ್ಲ. ಇನ್ನು ಆತ ದಯಾಮಯನೂ ಪ್ರೇಮಮಯನೂ ಆಗಿದ್ದೇ ನಿಜವಿದ್ದಲ್ಲಿ, ಆತ ಸರ್ವಶಕ್ತ ನಲ್ಲ, ಲೋಕದ ಕಷ್ಟ ಕ್ಲೇಶ ಕೇಡುಗಳನ್ನು ಕಂಡೂ, ಆ ಬಗೆಗೆ ಕಳವಳ ಪಟ್ಟುಕೊಂಡೂ, ಪಾಪ, ಆತ ಅವನ್ನೆಲ್ಲ ನಿವಾರಿಸಲು ಅಸಮರ್ಥನಿರಬೇಕು. ಲೋಕದ ದುಃಖ ದೇವರಿಗೆ ಗೊತ್ತಾಗುವದಿಲ್ಲವೆಂದರೆ ಆತ ಸರ್ವಜ್ಞನಲ್ಲ. ಗೊತ್ತಾಗಿಯೂ ಅವನ್ನು ಹೋಗಲಾಡಿಸಲಾರನೆಂದಾಗ ಆತ ಸರ್ವಶಕ್ತನಲ್ಲ!

ಹೀಗಿದೆ ಈ ಉಭಯ ಸಂಕಟ—ದೇವರ ಸರ್ವಶಕ್ತಿತ್ವ ಮತ್ತು ಸರ್ವಜ್ಞತ್ವಗಳೆಂಬ ಲಕ್ಷಣಗಳ ನಡುವೆ. ಮಂಗಲಮಯವಾಗಿದ್ದರೆ ಆತ ದುರ್ಬಲ; ಮಹಾಬಲನಾಗಿದ್ದರೆ ಆತ ದುರುಳ–ಈ ಪ್ರಪಂಚದಲ್ಲಿ ತೊಳಲಾಡುವ ನಮ್ಮ ನಿಮ್ಮಂಥ ಬಡ ಜೀವಿಗಳ ಪಾಲಿಗೆ! ನಾವೆಲ್ಲ ಜೀವಿಗಳೂ ಆ ದೇವರ ಅಂಶಗಳೇ ಎಂದಾಗಿದ್ದರೆ ಆತ ತನಗೇ ಆವರಿಸಿದ ಈ ದುಃಖ ದುಮ್ಮಾನಗಳನ್ನು ನಿವಾರಿಸಿಕೊಳ್ಳಲಾರನೆಂದೇ ಹೇಳಬೇಕಾಗುತ್ತದೆ!

ಆದ್ದರಿಂದಲೇ ನಮ್ಮ ಮೀಮಾಂಸಕರು ದೇವರನ್ನು ಕೇವಲ ಅಧ್ಯಕ್ಷ ಪುರುಷನೆಂದಾಗಿ ಪ್ರತಿಪಾದಿಸಿದರು. ಆತ ಸರ್ವಸಾಕ್ಷಿ. ಅವನ ಅಧ್ಯಕ್ಷತೆಯಲ್ಲಿ (ಅಧಿ ಅಕ್ಷಃ ಕಣ್ಣ ಕೆಳಗೆ) ಪ್ರಕೃತಿ ಮಾಯೆ ಈ ಎಲ್ಲ ಚರಾಚರ ಸೃಷ್ಟಿ ಪ್ರಪಂಚವನ್ನು ಉಂಟುಮಾಡುತ್ತಗದೆ. ಇದರ ಆಗು ಹೋಗುಗಳೆಲ್ಲ ಕರ್ಮಫಲ ತನ್ನ ಸನ್ನಿಧಿಯಲ್ಲಿ ಅದೆಲ್ಲ ಸುಸೂತ್ರ ಸಾಗುವಂತೆ ನೋಡಿಕೊಳ್ಳುವದಷ್ಟೇ ಈ ಈಶ್ವರನ ಕಾರ್ಯ, ಇತ್ಯಾದಿ ಇತ್ಯಾದಿ.

ಕೊನೆಗೂ ಒಂದು ಸಂಸ್ಕೃತ ಸುಭಾಷಿತವು ಹೇಳುವಂತೆ "ದೇವತೆಗಳು ಕೈಯಲ್ಲಿ ಬಡಿಗೆ ಹಿಡಿದುಕೊಂಡು ದನಗಾಹಿಯಂತೆ ನಮ್ಮನ್ನು ಕಾಪಾಡುವದಿಲ್ಲ. ಅವರು ಯಾರನ್ನು ಕಾಪಾಡಲು ಬಯಸುವರೋ ಅವರಿಗೆ (ತನ್ನನ್ನು ತಾನೇ ಕಾಪಾಡಿಕೊಳ್ಳುವಂತೆ) ಬುದ್ಧಿ ಶಕ್ತಿಯನ್ನು ಕೊಡುವರು."

ವೇದ ಕಾಲದಿಂದಲೂ ಎಲ್ಲ ದ್ವಿಜರಿಗೆ (ಬ್ರಾಹ್ಮಣ–ಕ್ಷತ್ರಿಯ–ವೈಶ್ಯರಿಗೆ) ಪರಮ ಪವಿತ್ರ ದೀಕ್ಷಾ ಮಂತ್ರವಾದ ವಿಶ್ವಾಮಿತ್ರನದೆಂಬ ಗಾಯತ್ರೀ ಛಂದಸ್ಸಿನಲ್ಲಿರುವ ಆ ಪವಿತ್ರ ಪ್ರಾರ್ಥನೆಯೂ ಆ ಸೂರ್ಯದೇವನ ಶ್ರೇಷ್ಠ ತೇಜಸ್ಸಿನಿಂದ ಇನ್ನೇನನ್ನೂ ಬೇಡುವದಿಲ್ಲ: "ಆ ತೇಜಸ್ಸು ಆ ಸೂರ್ಯ (ಸವಿತೃ) ದೇವನು ನಮ್ಮ ಧೀಶಕ್ತಿಯನ್ನು ಪ್ರಚೋದಿಸಲಿ!"

ಅಂದರೇನು? ಜಗತ್ತಿನ ಜೀವನದ ನಮ್ಮ ನಿಮ್ಮ ಬದುಕಿನ ಎಲ್ಲ ಆಗು ಹೋಗುಗಳ ಗುಟ್ಟು ಗೊತ್ತುಮಾಡಿಕೊಳ್ಳಲಿಕ್ಕೆ ನಮಗಿರುವ ಒಂದೇ ಸಾಧನ, ಒಂದೇ ಶಕ್ತಿ. ನಮ್ಮ ಬುದ್ಧಿ–ವಿಚಾರ-ಶಕ್ತಿ, ಧೀಶಕ್ತಿ; ಮತ್ತು ವಿಚಾರ ಪ್ರಧಾನ ನಾಸ್ತಿಕನಿಗೆ ಈ ಬುದ್ಧಿಯೊಂದೇ ಪ್ರಮಾಣ. ಈ ಈಶ್ವರನೆಂಬ ಒಂದು ಶಕ್ತಿಯೋ ದೇವತೆಯೋ ಇದ್ದರೂ ಅದು ನಮಗಾಗಿ ನಮ್ಮೊಳಗೆ ಕೆಲಸ ಮಾಡುವದು ಈ ಬುದ್ಧಿ ಶಕ್ತಿಯ ಮುಖಾಂತರವೇ ಅಲ್ಲವೇ?

ಅಲ್ಲದೇ ಈ ವಿಶ್ವಕ್ಕೆಲ್ಲ ಒಂದು ಚಾಲಕಶಕ್ತಿ ಕಾರಣವಾಗಿರಬೇಕೆಂದು ಒಪ್ಪಿದರೆ ಆ ಶಕ್ತಿಗೂ ಒಂದು ಕಾರಣ ಬೇಡವೇ? ಅದು ಯಾವದು? ಅದು ಬೇಕಿಲ್ಲ. ಈಶ್ವರ ದೇವರು ಸ್ವಯಂಭೂ ಸ್ವತಃ ಸಿದ್ಧ! ಹಾಗಿದ್ದರೆ ಈ ವಿಶ್ವದ

ಸ್ಥಿತಿಗತಿಯೂ ಚಲನವಲನವೂ ಸ್ವಯಂಭೂ, ಸ್ವತಃಸಿದ್ಧವೆಂದು ಏಕೆ ತಿಳಿಯಬಾರದು? ಏಕೆಂದರೆ ಆ ಪರಮಾತ್ಮನನ್ನೂ ನಾವು ವಿಶ್ವಾತ್ಮ ಜಗದಾತ್ಮನೆಂದೇ ಕಲ್ಪಿಸುತ್ತೇವೆ. ವಿಶ್ವದ ಹೊರಗೆ ಆಚೆಗೆ ಅವನಿಗೆ ಎಲ್ಲಿ ಹೇಗೆ ಅಸ್ತಿತ್ವ? ಏಕೆಂದರೆ, "ಅಸ್ತಿತ್ವ" ವೆಂದೊಡನೆ ಇದಕ್ಕೆ ಆಧಾರ ಅವಕಾಶ ಅಗತ್ಯ. ಅದು ದೇಶ ಮತ್ತು ಕಾಲಗಳಿಂದ ಬದ್ಧ. ದೇವರ ಅಸ್ತಿತ್ವಕ್ಕೂ ಈ ಬಂಧನ ತಪ್ಪದು. ಅಂದರೆ ದೇಶ ಕಾಲಗಳೂ ದೇವರೊಂದಿಗೇ ಸನಾತನವೇ?

ಅಂದರೆ ಇರುವಿಕೆ (ಅಸ್ತಿತ್ವ)ವೆಂದೊಡನೆ ಎಲ್ಲಿ, ಎಂದು ಎಂಬ ಪ್ರಶ್ನೆಗಳು ಅದರೊಂದಿಗೆ ಎದ್ದೇ ಏಳುತ್ತವೆ. ನಮ್ಮ ಯಾವ ಧಾರ್ಮಿಕ ಕಾರ್ಯವಿಧಿಗಳಿಗೂ ಆರಂಭದಲ್ಲಿ ನಾವು "ಸಂಕಲ್ಪ"ದ ನೀರು ಬಿಡುವಾಗ "ದೇಶಕಾಲಂಸಂಕೀರ್ತ್ಯ..." ಎಂಬ ಮಾತನ್ನು ಎತ್ತಿ ಹೇಳಲು ತಪ್ಪುವದಿಲ್ಲ. ಏಕೆ ? ಈ ದೇಶ ಮತ್ತು ಕಾಲ ಯಾವ ಕೃತ್ಯ–ಕಾರ್ಯ–ಕ್ರಿಯೆಗೂ ಅಸ್ತಿತ್ವಕ್ಕೆ ಬರುವಾಗ ಹೊಂದಿಕೊಂಡೇ ಇರತಕ್ಕ, ಇರಲೇಬೇಕಾದ ಆಯಾಮಗಳು, ಈ ದೇವರೆಂಬ ಸಂಗತಿಯು ಸಂಗಾತಿಯಾಗಿರಲೇಬೇಕಾಗುತ್ತದೆ.

ಇನ್ನು ಈ ಇರುವಿಕೆ ಬಾಹ್ಯವಾದ ಭೌತಿಕವಾದ ಇಂದ್ರಿಯಗಮ್ಯವಾದ ಆತ್ಮದಿಂದ (ತನ್ನಿಂದ) ಪ್ರತ್ಯೇಕವಾದ ಅಸ್ತಿತ್ವವೇ ಅಲ್ಲದಿದ್ದರೆ, ಅದೊಂದು ಭಾವನೆಯೋ ಭಾಸವೋ ಬುದ್ಧಿ ವ್ಯಾಪಾರವೋ ಕನಸೋ ಕಲ್ಪನೆಯೋ ಅಮೂರ್ತ ಅನಿಸಿಕೆಯೋ ಆಗಿದ್ದರೆ, ಆ ಮಾತೇ ಬೇರೆ. ಅದಕ್ಕೆ ಈ ದೇಶ ಕಾಲಗಳ ಭೌತಿಕ ಬಂಧನ ಪರಿಮಿತಿಗಳು ಇರಲಾರವು. ಆದರೆ ದೇವರೆಂಬ "ಸತ್ತೆ" ಯಾವ ಬಗೆಯ ಅಸ್ತಿತ್ವ?

ಒಂದು ಸುಭಾಷಿತವು ಹೀಗೆ ಹೇಳುತ್ತದೆ. ದೇವನು ಮರದಲ್ಲಿ ಇರುವದಿಲ್ಲ (ಕಟ್ಟಿಗೆಯಲ್ಲಿ ಇರುವದಿಲ್ಲ), ಕಲ್ಲಿನಲ್ಲಿ ಇರುವದಿಲ್ಲ, ಮಣ್ಣಿನಲ್ಲಿ ಇರುವದಿಲ್ಲ, ಅವನು ಇರುವದು ಭಾವದಲ್ಲಿ. ಆದ್ದರಿಂದ ಭಾವವೇ ದೇವತ್ವಕ್ಕೆ ಕಾರಣವು. ಎಂದಿದೆ, ಇನ್ನೊಂದು ಸುಭಾಷಿತ. (ಇಲ್ಲಿ ವೇದ ಶಾಸ್ತ್ರ ಪುರಾಣಗಳಿಗಿಂತ ಇಂಥ ಸುಭಾಷಿತಗಳ ನೆರವು ನಮಗೆ ಹೆಚ್ಚು ಹಿತ ಮತ್ತು ಪ್ರಯೋಜನಕಾರಿ, ಏಕೆಂದರೆ. ಇವುಗಳ ಕವಿಗಳು ನೇರ ಲೋಕಾನುಭವದಿಂದ ಸ್ವೋಪಜ್ಞತೆಯಿಂದ ತಮ್ಮ ಅಭಿಪ್ರಾಯವನ್ನು ಸಾರುತ್ತಾರೆ.)

ಅಂದರೇನು? ದೇವರೆಂಬುದು ಒಂದು ಭಾವ. ಅದರ ಅಸ್ತಿತ್ವ ಕೇವಲ ಭಾವಲೋಕದಲ್ಲಿ. ಅದನ್ನು ನಿರೂಪಿಸಲಿಕ್ಕೆ, ಅದಕ್ಕೆ ನಾಮರೂಪಗಳನ್ನು ಕಲ್ಪಿಸಿ ಶಿಲ್ಪಿಸಿ ಪ್ರತಿಮೆಯಾಗಿ ನಿರ್ಮಿಸಿದ್ದಾಗಿದೆ. ಈ ಪ್ರತೀಕ

ಗಳನ್ನು ನಾವು ಸಲೀಸಾಗಿ ನಮ್ಮಂತೆಯೇ ಆದರೆ ನಮಗಿಂತ ಅದೆಷ್ಟೋ ಪಾಲು ಮಿಗಿಲಾದ ಸ್ವಾತಂತ್ರ್ಯ, ಸರ್ವತಂತ್ರ ಸ್ವೇಚ್ಛಾ ಸತ್ತೆ ಇರುವ, ಅತಿ ಮಾನುಷ ಶಕ್ತಿಯ, ತತ್ವತಃ ಮಾನುಷೀಕೃತ ಭವ್ಯ ದಿವ್ಯ ವ್ಯಕ್ತಿತ್ವಗಳೆಂದು ಭಾವಿಸಿ ಸಂಭಾವಿಸಿ ನಡೆದುಕೊಳ್ಳುತ್ತ ಬಂದಿದ್ದಾಗಿದೆ.

ದೇವ ಶಬ್ದದ ಮೂಲ

ದೇವ ಶಬ್ದದ ಮೂಲವೇನು? ಅದು ಮೂಲತಃ ಸಂಸ್ಕೃತ ದಿವ್ ಧಾತು. ನಮ್ಮ ಮಟ್ಟಿಗೆ ಈ ಪದ ಮತ್ತು ಅದರ ಒಳಗಿನ ಅರ್ಥ (ಪದಾರ್ಥ) ಸಂಸ್ಕೃತದಿಂದ ಬಂದವು. ಕನ್ನಡಕ್ಕೆ ದೇವರಿದ್ದಿಲ್ಲವೇ? ಅಚ್ಚುಗನ್ನಡದಲ್ಲಿ "ಕೋಯಿಲ್" ದೇವತಾ ವಾಚಿ ಶಬ್ದ. (ಮರಾಠಿಯಲ್ಲಿ ದೇವರ ಮುಡಿ ಪ್ರಸಾದಕ್ಕೆ "ಕೌಲ" ಎನ್ನುತ್ತಾರೆ.) ಭೂತಗಳಿಗೆ ಕೊಡುವ ಸೇವೆ, ಭೂತ ನರ್ತನಗಳಿಗೂ "ಕೋಲ" ಎಂಬ ಹೆಸರು ನಮ್ಮಲ್ಲಿದೆ. (ಇದರಿಂದಲೇ "ಕೋಲಾಟ" "ಕೋಲಾಹಲ" ಹುಟ್ಟಿರಬೇಕು.) ಅತೃಪ್ತ ಮೃತಾತ್ಮ ಪ್ರೇತಾತ್ಮಕ್ಕೂ "ಕೊಲಿ" ಎನ್ನುತ್ತಾರೆ. ಇರಲಿ, ಇಲ್ಲಿ "ದಿವ್" ಧಾತುವಿಗೆ ಎರಡು ಅರ್ಥ: ಒಂದು, ಹೊಳೆ ಪ್ರಕಾಶಿಸು, ಇನ್ನೊಂದು, ಜೂಜಾಡು. ವೇದಕಾಲದಿಂದಲೂ ಈ ಅರ್ಥಗಳು ರೂಢವಾಗಿವೆ. ಈ ಎರಡೂ ಕಲ್ಪನೆಗಳೂ ದೇವತ್ವದಲ್ಲಿ ಅಡಕವಾಗಿವೆ. ನಮ್ಮ ಬದುಕೇ ಒಂದು ಜೂಜು, ಯೋಗಾಯೋಗ–ದೈವ ಯೋಗ. ದಿವ: ಆಕಾಶ–ಸ್ವರ್ಗ ಹಗಲು, ಪ್ರಕಾಶತತ್ವ ನಮ್ಮ ಬಾಳನ್ನು ನಡೆಯಿಸುತ್ತದೆ. ಇವುಗಳ ಸಂಯುಕ್ತ ಪರಿಕಲ್ಪನೆಯೇ ದೇವತ್ವ. (ಇಂಗ್ಲೀಷಿನಲ್ಲಿಯೂ ನೇರ ಪ್ರಮಾಣ ಸಾಕ್ಷಿ ಪುರಾವೆ ಇಲ್ಲದೆ ಊಹಿಸುವದಕ್ಕೆ ಡಿವೈನ್ ಎನ್ನುತ್ತಾರೆ. ಈ ಧಾತುವಿನ ವಿಶೇಷ್ಣಣ ರೂಪ "ದಿವ್ಯ" ಅಥವಾ "ದೈವೀ" ಎಂಬ ಅರ್ಥವನ್ನೂ ಕೊಡುತ್ತದೆ.)

ಇತಿಹಾಸ ಪೂರ್ವಕಾಲದಲ್ಲಿ ಎಂದೋ ಆರ್ಯವಂಶ ಕವಲೊಡೆದು ಅವರ ನಡುವೆ ಕಲಹ ಒದಗಿ ಕವಲುಗಳಾಗಿ ಬೇರೆಯಾದರು. ಆಗ್ನೇಯ ಕಡೆಗೆ ಹೊರಳಿ ಬಂದವರ ದೇವರು ವಾಯುವ್ಯದತ್ತ ಹೋದವರಿಗೆ ಡೇವಿಲ್ ಎನಿಸಿಕೊಂಡಿತು. ವೇದದಲ್ಲಿ "ಅಸುರ್" ಶಬ್ದ ರಕ್ಷಕ ಎಂಬರ್ಥದಲ್ಲಿದೆ! (ಅಸ್–ಇರು ಎಂಬ ಧಾತುವಿನಿಂದ ಅದರ ರೂಪ ಸಿದ್ಧಿ.) ಆದರೆ ಅದನ್ನು "ಅಹುರ್" (ದೇವರು) ಎಂದು ಫಾರಸಿಕರು ಒಪ್ಪಿಕೊಂಡರು. ನಮ್ಮ ಪೂರ್ವಿಕರಿಗೆ ಅಸುರ ದೈತ್ಯನಾದ! ಅದಕ್ಕೆ ಪ್ರತಿಯಾಗಿ "ಸುರ" ಶಬ್ದ ಕಲ್ಪಿಸಿಕೊಂಡರು!

8

ಯಾವದೇ ವಿಚಾರವನ್ನು ಭಾವನಾಮಯವಾಗಿ ಗ್ರಹಿಸುವದು, ಕಲ್ಪನೆಯಲ್ಲಿ, ಅದಕ್ಕೆ ನಾಮ ರೂಪಕೊಡುವದು ಇದು ಮನುಷ್ಯನ ಮನಸ್ಸಿನ ಹುಟ್ಟುಗುಣ. ಅದು ಅದರ ಸಾಮರ್ಥ್ಯವೂ ಅಹುದು, ದೌರ್ಬಲ್ಯವೂ ಅಹುದು. ನಮ್ಮ ಭಾವನೆಯೇ ಒಂದು ಕಾವ್ಯ, ಅಂದರೆ ಅದು ಮೂಲತಃ ರೂಪಕಾತ್ಮಕ. ಅಂತೆಯೇ ಅದರಲ್ಲಿ ದೇವರು ಒಂದು ಪ್ರಾಚೀನ ಪುರಾಣ ರೂಪಕ.

"ಸಂಕರ್ಷಣ"ಕ್ಕೆ ಉಪಾಸನೆ ಏಕೆ?

ಮೊನ್ನೆ ನಮ್ಮಲ್ಲಿಯ ಪರಮ ಜ್ಞಾನಿಗಳೂ ಪುರೋಗಾಮೀ ಧೋರಣದ ಸಮಾಜ ಹಿತಕರ್ತರೂ ಆದ ಮಠಾಧೀಶರೊಬ್ಬರು ತಮ್ಮ ಪ್ರವಚನದಲ್ಲಿ ಹೀಗೆ ಅಪ್ಪಣೆ ಕೊಡಿಸಿದರು. ಬ್ರಹ್ಮಾಂಡದಲ್ಲಿ ವಸ್ತು ಮಾತ್ರಗಳನ್ನು ಪರಸ್ಪರ ಆಕರ್ಷಿಸುವ ಶಕ್ತಿ ಗುರುತ್ವಾಕರ್ಷಣೆಯಿದೆ. ಅದರಿಂದ ಗ್ರಹ ಗೋಲಗಳೆಲ್ಲ ನಿಂತಿವೆ. ಈ ಧಾರಣಾ ಶಕ್ತಿಯನ್ನೇ ನಾವು "ಸಂಕರ್ಷಣ" ವೆನ್ನುತ್ತೇವೆ. ಈ ಸಂಕರ್ಷಣನ ಉಪಾಸನೆಯನ್ನೇ ನಾವು ಮಾಡುತ್ತೇವೆ.

ಸರಿ, ಇಲ್ಲಿಯ ಪೂರ್ವಾರ್ಧದ ಮಾತುಗಳು ಒಪ್ಪಿಗೆ. ಅವು ವೈಜ್ಞಾನಿಕ ಸತ್ಯ. ಇನ್ನು ಗುರುತ್ವಾಕರ್ಷಣೆಯನ್ನೇ ನಮ್ಮ ಭಾಗವತರೂ ವೈಷ್ಣವರೂ "ಸಂಕರ್ಷಣ"ವೆನ್ನುವರೆಂಬುದನ್ನು ಸ್ವಾಮೀಜಿಯವರ ಆಪ್ತವಾಕ್ಯ ಪ್ರಾಮಾಣ್ಯವನ್ನು ಒಪ್ಪಿಕೊಳ್ಳೋಣ. ಹಿಂದೂ ಮತ ಸಂಪ್ರದಾಯಗಳ ಪುನರುಜ್ಜೀವನ ಯುಗವು ಆರಂಭವಾದಂದಿನಿಂದ ಈ ರೀತಿ ಪೌರಾಣಿಕ ಪರಿಕಲ್ಪನೆಗಳನ್ನು ವೈಜ್ಞಾನಿಕ ಪರಿಭಾಷೆಯಲ್ಲಿ ಹೊಂದಿಸಿ ಹೇಳುವದೊಂದು ನಮ್ಮ ಧರ್ಮ ಸುಧಾರಕ ಭಾವಿಕರಿಗೆ ಮೆಚ್ಚಿನ ಹವ್ಯಾಸ. ಥಿಯೋಸೋಫಿಯ ಅನುಯಾಯಿ ವಿದ್ವಾಂಸರನೇಕರು ನಮ್ಮ ದಶಾವತಾರಗಳನ್ನು ಡಾರ್ವಿನ್‌ನ ಉತ್ಕ್ರಾಂತಿ ವಾದದ ಜೀವವಿಕಾಸದ ಹಂತಗಳಾಗಿ ಪ್ರತಿಪಾದಿಸಿದ್ದುಂಟು! ಹೀಗೆ ಅನಿರುದ್ಧ, ಸಂಕರ್ಷಣ ಇತ್ಯಾದಿ ನಾಮಗಳನ್ನು ಗುರುತ್ವಾಕರ್ಷಣೆಯ ಪರ್ಯಾಯವೆಂದು ಹೇಳಿದರೆ ನಮ್ಮ ಆಕ್ಷೇಪವಿಲ್ಲ.

ಆದರೆ ದೋಷವೋ ಮೌಢ್ಯವೋ ಹೆಡೆ ಎತ್ತುವದು ಸ್ವಾಮೀಜಿಯವರ ಕೊನೆಯ ಮಾತಿನಲ್ಲಿ. ಗುರುತ್ವಾಕರ್ಷಣೆಯನ್ನು ಸಂಕರ್ಷಣವೆಂದು ಪೌರಾಣಿಕ ಹೆಸರಿನಿಂದ ಕರೆದ ಮಾತ್ರಕ್ಕೆ ಅದನ್ನು ಉಪಾಸನೆಗೆ ಒಳಪಡಿಸುವ ಅಗತ್ಯ ವೇನು? ಉಪಯೋಗವೇನು? ಇಂಥ ಭೌತಿಕ ಶಕ್ತಿಗಳ ನಿಜವಾದ ಉಪಾಸನೆ

ಅವುಗಳ ಗುಣಧರ್ಮಗಳ ಮರ್ಮವನ್ನು ಅರಿತು ಅವನ್ನು ನಮ್ಮ ಬದುಕಿನ ಪ್ರಯೋಜನಕ್ಕೆ ಸರಿಯಾಗಿ ಚೆನ್ನಾಗಿ ಬಳಸಿಕೊಳ್ಳುವದು,? ಮಕ್ಕಳು ಹಾರಿಸುವ ಪತಂಗ, ಬಾನಾಡಿಯಾದ ಹಕ್ಕಿ, ದಿಗಂತ ದಾಟುವ ವಿಮಾನ, ಗ್ರಹಮಂಡಲಕ್ಕೆ ನೆಗೆಯುವ ಉಪಗ್ರಹ ಇವೆಲ್ಲ ತಮ್ಮ ತಮ್ಮ ರೀತಿಯಲ್ಲಿ ಗುರುತ್ವಾಕರ್ಷಣೆಯ ಶಕ್ತಿಯನ್ನೇ ಒಂದು ಸಾಧನವಾಗಿ ಉಪಯೋಗಿಸುತ್ತವೆ. ಇದೇ ಈ ಸಂಕರ್ಷಣ ಶಕ್ತಿಯ ನಿಜವಾದ ಉಪಾಸನೆ- ಅದನ್ನು ಮಾನವನ ನಾಗರಿಕ ಬದುಕಿನ ಸೌಕರ್ಯಕ್ಕೆ, ವಿಕ್ರಮಕ್ಕೆ ಪಳಗಿಸಿಕೊಳ್ಳುವ, ಒಲಿಸಿ ದುಡಿಸಿಕೊಳ್ಳುವ ಸಾಧನೆ. ಉಪ ಆಸ್ ಅಂದರೆ ಹತ್ತಿರ (ಹೋಗಿ) ಇರುವದು; ಉಪಾಸ್ಯ ಶಕ್ತಿಯನ್ನು ಆವಷ್ಟು ಹತ್ತಿರದಿಂದ ತಿಳಿದು ಬಳಸಿ ಪಳಗಿಸಿಕೊಳ್ಳುವದೇ ನಿಜವಾದ ಉಪಾಸನೆ.

ಪ್ರಕೃತಿಯನ್ನೂ ಪರಿಸರವನ್ನೂ ನಿಸರ್ಗವನ್ನೂ ಜೀವನವನ್ನೂ— ಜಗತ್ತನ್ನೇ ಮನುಷ್ಯನು ಸಂಪರ್ಕಿಸಿದ್ದು, ಸಂಬಂಧಿಸಿದ್ದು, ನಿಯಂತ್ರಿಸಿದ್ದು ಮೂರು ಉಪಾಯಗಳಿಂದ-ಉಪಾಸನೆ, ಉಪಭೋಗ ಮತ್ತು ಉಪಯೋಗ. ವಿಕಾಸ ಕ್ರಮದಲ್ಲಿ ಅನಿವಾರ್ಯವಾಗಿ ಮನುಷ್ಯನು ಪ್ರಕೃತಿ ಪರಿಸರದಿಂದ ನಿಸರ್ಗದ ಗರ್ಭದಿಂದ ಬೇರ್ಪಟ್ಟು ಸ್ವತಂತ್ರನೂ ಒಮ್ಮೆಲೇ ಅತಂತ್ರನೂ ಆದನು. ಆಗ ಆತ ತಿರುಗಿ ತನ್ನ ಮೂಲ ಮಾತೃಕೆಯನ್ನು ಹೊಂದಲಿಕ್ಕೆ ಅನುಸರಿಸಿದ ವಿಧಾನ ಎರಡು-ಒಂದು ಅಸಹಾಯನಾಗಿ ಅನನ್ಯವಾಗಿ ಅನಾಥ ಭಾವದಿಂದ ನಿಸರ್ಗಕ್ಕೆ ಪ್ರಾಕೃತಿಕ ಪರಿಸ್ಥಿತಿಗೆ ಶರಣು ಹೋಗುವದು. ಇದರ ಒಂದು ರೂಪ-ವಿಶ್ವಾತ್ಮನೊಂದಿಗೆ ತಾದಾತ್ಮ್ಯ ಪ್ರಪತ್ತಿ, ಶರಣಾಗತಿ, ಭಕ್ತಿ. ಇನ್ನೊಂದು, ವಿಧಾನ, ನಿಸರ್ಗದ ಶಕ್ತಿಗಳನ್ನೇ ಅರಿತು ಅಂಕೆಗೊಳಪಡಿಸಿ ಆಳುವದು, ಅವನ್ನು ತನ್ನ ಬದುಕಿಗೆ ಅಳವಡಿಸಿಕೊಳ್ಳುವದು, ಪ್ರಯೋಗ, ಸಂಶೋಧನೆ-ವಿಜ್ಞಾನ, ಇದು ಪುರುಷಾರ್ಥ; ಅದು ಪರಮಾರ್ಥ. ಇದು ಸಾಮುದಾಯಿಕ ಅಭ್ಯುದಯ, ಅದು ವೈಯಕ್ತಿಕ ಮೋಕ್ಷ, ನಿಶ್ರೇಯಸ.

ಈ ಸಂದರ್ಭದಲ್ಲಿ ನಾವು ಗಮನಿಸತಕ್ಕ ಅಂಶವೆಂದರೆ, ವಿಜ್ಞಾನವು ಅನಿವಾರ್ಯವಾಗಿಯೇ ಅನಾಸ್ತಿಕ-ಅಂದರೆ ಆಸ್ತಿಕವಲ್ಲ. ಅಚಿಂತ್ಯವೆಂಬುದು ಅಗಮ್ಯ. ಮಾತಿಗೂ ಮತಿಗೂ ನಿಲುಕದ "ಆಚೆಯು"ದೇನೋ ಒಂದು! ವಿಜ್ಞಾನವು ಜೀವ-ಜಗತ್ತುಗಳ ವಿಶ್ವವನ್ನು ತಿಳಿಯಲು ಅಳೆದು ನೋಡಲು ಅಳವಡಿಸಲು ಹೊರಟ ಮಾನವೀಯ ಜಿಜ್ಞಾಸೆ—ಅರಿವಿನ ಆಸೆ. ಅಂದಾಗ ಅದು ಅರಿಯಬೇಕಾದುದನ್ನು ಅರಸಬೇಕಾದುದನ್ನು ಮೊದಲಿಗೇ ಒಪ್ಪಿ ಅಪ್ಪಿಕೊಳ್ಳಲಾರದು.

ಅರಿತಷ್ಟನ್ನು "ಇದಂ ಇತ್ಥಂ" ಎಂದು ಒಪ್ಪಿಕೊಂಡು ಇನ್ನು ಅರಿಯಬೇಕಾದುದರ ಬಗೆಗೆ ತಟಸ್ಥವಾಗಿ ತೆರೆದ ಮನಸ್ಸಿನಿಂದಲೇ ತಣ್ಣಗೆ ನಿಲ್ಲುವದು ವಿಜ್ಞಾನದ ನಿಲುವೆ. ಆದ್ದರಿಂದ ವ್ಯಕ್ತಿಯಾಗಿ ವಿಜ್ಞಾನಿಗಳ ಭಾವ-ಭಾವನೆಗಳು ಏನೇ ಇದ್ದರೂ ಅವರ ವೈಜ್ಞಾನಿಕ ನಿಲುವೆ ಮತ್ತು ಅದರ ನಿಲುಕು ನಾಸ್ತಿಕನದೇ ಎಂದರೆ ತಪ್ಪಿಲ್ಲ.

ಒಂದು ಸಣ್ಣ ಉದಾಹರಣೆಯನ್ನೆ ಗಮನಿಸೋಣ. ಚಂದ್ರಗ್ರಹದ ಮೇಲೆ ಮೊದಲಿಗೆ ಹೆಜ್ಜೆ ಇಟ್ಟು ಮರಳಿ ಬಂದ ಗಗನಯಾತ್ರಿ ಆಗಲೇ ಲೋಕಕ್ಕೆ ಪ್ರಕಟಿಸಿದನು—ಚಂದ್ರನು ಒಂದು ಜಡ ನಿರ್ಜೀವ ಗೋಲವೆಂದು. ಅಲ್ಲಿ ನಮ್ಮ ಪಿತೃ ಲೋಕವಾಗಲೀ ಬೇರೆ ಯಾವ ದೇವತ್ವದ ಲಕ್ಷಣಗಳಾಗಲಿ ಅವನಿಗೆ ಕಂಡುಬರಲಿಲ್ಲ. ಅಲ್ಲಿ ಕವಿಗಳ ಅಲಂಕಾರ, ವಿರಹಿಗಳ ಶೃಂಗಾರ, ಅಮೃತ, ಸೌಂದರ್ಯ ಏನೇನೂ ಕಾಣಲಿಲ್ಲ. ಅದೊಂದು ರೂಕ್ಷ ಶುಷ್ಕ ಶೂನ್ಯ ಜಡ ಗೋಲ! ಆದಾಗ್ಯೂ ನೀಲ ಆರ್ಮಸ್ಟ್ರಾಂಗನ ಪರಮ ಭಾವಿಕತೆಗೆ ಯಾವ ಭಂಗವೂ ಬರಲಿಲ್ಲ. ಆತ ಅಲ್ಲಿ ನಿಂತು ಬೈಬಲ್ ವಚನಗಳನ್ನು ಪಠಿಸಿದ. ದೇವರ ಐಶ್ವರ್ಯ ವೈಭವದಲ್ಲಿ ಅವನ ಶ್ರದ್ಧೆ ಇನ್ನೂ ಹೆಚ್ಚಿತು. ಮರಳಿ ಭೂಲೋಕಕ್ಕೆ ಬಂದವನೇ ಅದರ ಪ್ರಚಾರಾರ್ಥವಾಗಿ ಪ್ರವಚನ ಯಾತ್ರೆ ಕೈಗೊಂಡನು. ಆದರೆ ಅಂದಿನಿಂದ ಇಂದಿನವರೆಗೂ ಬಾಹ್ಯಾಕಾಶದಿಂದ, ದಿವದಿಂದ, ಸ್ವರ್ಲೋಕದಿಂದ ದೇವತೆಗಳ ಉಚ್ಚಾಟನೆ ಸದ್ದಿಲ್ಲದೆ ನಡೆದೇ ಇದೆ!

ಹಿಂದೆಲ್ಲ ದೇವತೆಗಳೆಲ್ಲ ಮಂತ್ರಾಧೀನರು. ಆ ಮಂತ್ರಗಳೆಲ್ಲ ಬ್ರಾಹ್ಮಣರಿಗೆ ಅಧೀನ. ಆದ್ದರಿಂದ ಬ್ರಾಹ್ಮಣರೇ ಭೂ ದೇವರು ಎಂಬ ಶ್ರದ್ಧೆ ಇತ್ತು. (ಕ್ಯಾಥೋಲಿಕರಲ್ಲಿಯೂ ಪೋಪನ ಪರ್ಮಿಟ್ಟು ಶವದೊಂದಿಗೆ ಹೂಳಿದರೇ ಮೃತ ಜೀವಿಗೆ ಸ್ವರ್ಗದ ಬಾಗಿಲು ತೆರೆಯುತ್ತಿತ್ತು!) ಆದರೆ ಇಂದು ವಿಜ್ಞಾನದ ಒಂದೊಂದು ಶೋಧವೂ, ಅದರ ಸಾಧನೋಪಕರಣ ಯಂತ್ರವೂ ಹಿಂದೆಲ್ಲ ದೇವರ ಸಾಮ್ರಾಜ್ಯವಾದ ಸ್ಥಾನಗಳನ್ನು ಕೈವಶ ಮಾಡಿಕೊಂಡಿದೆ; ಮಾಡಿಕೊಳ್ಳುತ್ತಿದೆ. ಅಧಿ ಭೌತಿಕ ವಿಜ್ಞಾನವು, ವೈಜ್ಞಾನಿಕ ಭೌತವಾದವು (Scientific Materialism) ತಾನೇ ತಾನಾಗಿ, ವಾಸ್ತವಿಕವಾಗಿ, ವ್ಯಕ್ತಿಗೆ ನಿರಪೇಕ್ಷವಾಗಿ ಆಸ್ತಿಕ್ಯವನ್ನು ಸಂಕ್ಷೇಪಗೊಳಿಸುತ್ತಿದೆ. ಆ ಮಟ್ಟಿಗೆ ನಾಸ್ತಿಕ್ಯವನ್ನು ದೃಢಗೊಳಿಸುತ್ತಿದೆ, ವಿಸ್ತರಿಸುತ್ತಿದೆ.

ದೇವಲೋಕ out of date!

ಈ ನಾಸ್ತಿಕ್ಯ ಭಾವನೆಯನ್ನು ಪೋಷಿಸುವ ಇನ್ನೊಂದು ಪರಿಣಾಮ

ವನ್ನು ಅರ್ವಾಚೀನ ವೈಜ್ಞಾನಿಕ ವಾತಾವರಣವು ಅಬಾಧಿತವಾಗಿಯೇ ನಿರ್ಮೂಲಿಸಿದೆ. ಅದೇನೆಂದರೆ, ನಮ್ಮ ಪುರಾಣಗಳೂ ಪರಂಪರಾಗತ ಶ್ರದ್ಧೆಯೂ ರೂಪಿಸಿ ರೂಢಗೊಳಿಸಿದ ದೇವಲೋಕ ಹಾಗೂ ದೇವತೆಗಳ ವೇಷ ಭೂಷ ಉಪಸ್ಕರ ಉಪಕರಣಗಳ ಇಡಿಯ ಕಟ್ಟುಪಾಡೇ (Set-up) ಪೂರ್ತಿ ಕಾಲಬಾಹಿರ (Out of date) ಆಗಿಬಿಟ್ಟಿದೆ. ಮಧ್ಯಯುಗದ ಅಥವಾ ಅದಕ್ಕೂ ಹಿಂದಿನ ಆವರಣಕ್ಕೆ ಹೊಂದಿಕೆಯಾಗುವಂತಿದ್ದ ಈ ಚೌಕಟ್ಟು ಇಂದಿಗೆ ಹಾಸ್ಯಾಸ್ಪದವೆನಿಸುವಂತಿದೆ. ಇಲ್ಲವೇ ಪೌರಾಣಿಕ ಕಾಲಮಾನದ ರಂಗಸಜ್ಜಿಕೆಯೆನಿಸುತ್ತದೆ. ಆ ಕಿರೀಟ, ಆ ಮಕರ ಕುಂಡಲ, ಆ ಭುಜಕೀರ್ತಿ, ಎದೆಹಾರ, ಪೀತಾಂಬರ, ಉತ್ತರೀಯ, ತೋಳಬಂದಿ, ಅಂದಿನ ಶಂಖ, ಚಕ್ರ, ಗದೆ, ಧನುರ್ಬಾಣಗಳಂಥ ಆ ಆಯುಧಗಳು ಆಗಿನ ರಥಗಳು ಪುಷ್ಪಕ ವಿಮಾನ, ಗರುಡ, ಹಂಸ, ಮೊಸಳೆ, ಐರಾವತವೇ ಮುಂತಾದ ಆ ವಾಹನಗಳು ಭಾವಿಕನಲ್ಲಿಯೂ ಆತ ಯತ್‌ಕಿಂಚಿತ್ ಬುದ್ಧಿವಂತನೇ ಆಗಿದ್ದಲ್ಲಿ ನಂಬಿಕೆ ಉಂಟು ಮಾಡುವಂತಿಲ್ಲ. ಇಂದಿನ ನಮ್ಮ ಬೀದಿ-ಕೇರಿ-ಪೇಟೆ-ಚೌಕಗಳಲ್ಲಿ ನಾರದನೋ ಭಗವಾನ್ ವಿಷ್ಣುವೋ ಕೋಣವನ್ನೇರಿ ಬಂದ ಯಮಧರ್ಮನೋ ಇಳಿದು ಬಂದರೆ ಜನ ಈ ಪ್ರಾಣಿ ಯಾವದೋ ನಾಟಕ ಅಥವಾ ಸಿನೇಮಾ ಕಂಪನಿಯಿಂದ ತಲೆ ಕೆಟ್ಟು ತಪ್ಪಿಸಿಕೊಂಡು ಬಂದಿರಬೇಕೆಂದೇ ಭಾವಿಸಿ ಗುಲ್ಲೆಬ್ಬಿಸುವದು ಖಂಡಿತ!

ಹಾಗೇಯೇ ನಮ್ಮ ದೇವ (ಸ್ವರ್ಗ) ಲೋಕದ ದೇವಾಧಿದೇವತೆಗಳ ಸ್ಥಾನಮಾನ ವರ್ಗೀಕರಣ, ಅಂದಿನ ನಮ್ಮ ಸಾಮಾಜಿಕ ರಾಜಕೀಯ ಶಾಸನ ಪದ್ಧತಿಯದೇ ಆದರ್ಶೀಕರಣ ಇಲ್ಲವೇ ಭವ್ಯ ಪ್ರತಿಬಿಂಬ. ರಾಜಸತ್ತೆ ಹೋಗಿ ಪ್ರಜಾಸತ್ತೆ ಬಂದಂತೆ, ವೈಜ್ಞಾನಿಕ ಪ್ರಗತಿ ಮತ್ತು ಯಾಂತ್ರಿಕ ಸುಧಾರಣೆಗಳು ವಿವಿಧವಾಗಿ ವಿಪುಲವಾಗಿ ಹೆಚ್ಚಾದಂತೆ, ಅದಕ್ಕೆ ಅನುಗುಣವಾಗಿ ನಮ್ಮ ದೇವಲೋಕದಲ್ಲಿಯೂ ಸುಧಾರಣೆ ಬದಲಾವಣೆಗಳಾಗಲಿಲ್ಲ. ಅವು ಮರವಟ್ಟವು. ಹಿಂದೆಯೇ ಬಿದ್ದು ಉಳಿದವು. ಯಜ್ಞಯಾಗಾದಿಗಳು ನಿಂತು ಹೋಗಿ ಈ ದೇವರುಗಳಿಗೆ ಹವಿರ್ಭಾಗವಿಲ್ಲದೆ ಶತಮಾನಗಳಾದವು-ಸೋಮಪಾನ ಅಮೃತಪಾನ ಆಜ್ಯಾಹುತಿ ಎಲ್ಲ ಲೊಳಲೊಟ್ಟೆ! ಇಂದು ಆ ನಮ್ಮ ಇಂದ್ರಾದಿ ದೇವತಾ ಸಾರ್ವಭೌಮರು, ಅಷ್ಟದಿಕ್ಪಾಲಕರು, ಏಕಾದಶ ರುದ್ರರು, ದ್ವಾದಶ ಆದಿತ್ಯರು ಆ ತ್ರಿಮೂರ್ತಿಗಳು ಅವರ ಹೆಂಡಿರು ಮಕ್ಕಳು ಆ ಎಲ್ಲ ದೇವತಾ ಪ್ರಪಂಚವೇ ಈ ಯುಗದಲ್ಲಿ ಒಂದು ಗೊಂಬೆಯಾಟದ ಅಥವಾ ಬಯಲಾಟದ ಯಕ್ಷಲೋಕವಾಗಿಯೇ ನಮಗೆ ರಂಜನೀಯವಾಗಿ ಉಳಿದಿದೆ.

ಹೆಚ್ಚೆಂದರೆ ಅದು ಕವಿಕಲ್ಪನೆಗೆ ಉದ್ದೀಪಕ ಪ್ರತಿಮಾ ಪ್ರಪಂಚವಾಗಿ ಕೆಲಸ ಕೊಡುತ್ತಿದೆ. (ಗ್ರೀಕ್ ರೋಮನ್ ದೇವತೆಗಳ ಹಾಗೂ ಕ್ರೈಸ್ತ ಪುರಾಣದ ವಿಭೂತಿಗಳ ಕಥೆಯು ವ್ಯಥೆಯೂ ಇದೇ ಆಗಿದೆ.) ಮೈಕೆಲ್ ಎಂಜ್‌ಲೋ, ಜಕಣಾಚಾರಿ ಮುಂತಾದವರ ಯುಗದ ಆ ದಿವ್ಯ ಭವ್ಯ ಗುಡಿಗೋಪುರಗಳ ಬೌದ್ಧ ಜೈನ ಶಿಲ್ಪಕಲೆಯ ಮಹೋನ್ನತ ವಾಸ್ತು ಮೂರ್ತಿ ವೈಭವ, ಅವುಗಳ ಬಗೆಗಿನ ಜೀವಂತ ದೈವಿಕ ಭಾವಿಕ ಶ್ರದ್ಧೆ ಎಂದೋ ಲೋಪವಾಗಿ ಹೋಗಿದೆ,– ಪ್ರಾಚೀನ ಧಾರ್ಮಿಕ ಶ್ರದ್ಧೆಯ ಯುಗವು ಸರಿದು ಅರ್ವಾಚೀನ ವ್ಯಾವಹಾರಿಕ ಬುದ್ಧಿಯ ಯುಗ ಧರ್ಮವು ರೂಢಿಗೊಂಡಿದ್ದರಿಂದ. ಇದೆಲ್ಲದರ ಆಳವಾದ ವಿಚಿಕಿತ್ಸೆಗೆ ಇಲ್ಲಿ ಅವಕಾಶವಿಲ್ಲ.

ಅಶ್ರದ್ಧೆಯ ಹೊಸ ಭಾವಿಕತೆ

ಒಟ್ಟಿನಲ್ಲಿ ಈಚಿನ ವೈಜ್ಞಾನಿಕ ವೈಚಾರಿಕ ವಿಚಿಕಿತ್ಸೆಯು ಪ್ರಾಯೋಗಿಕ ಪ್ರಗತಿಯ ಯುಗಮಾನದಲ್ಲಿ ಸಾಂಪ್ರದಾಯಿಕ ಶ್ರದ್ಧೆಯ ಧಾರ್ಮಿಕ ನಂಬುಗೆಯ ಹಾಗೂ ದೈವಿಕ ಒಲವಿನ ಒಂದು ಭಾವಜೀವನ ಅದಕ್ಕೆ ಪೋಷಕವಾದ ಒಂದು ಸಾರ್ವತ್ರಿಕ ಭಕ್ತಿಭಾವದ ವಾತಾವರಣ ತನ್ನ ಕೆಚ್ಚನ್ನು ಕಳೆಯನ್ನು ಕಳೆದುಕೊಳ್ಳುತ್ತ ಬಂದಿದೆ. ಖಾಸಗಿಯಾಗಿ ಅಲ್ಲಲ್ಲಿ ಅನೇಕ ಮನೆಗಳಲ್ಲಿ ಮನಗಳಲ್ಲಿ ಅದು ಇಂದಿಗೂ ಸಾಕಷ್ಟು ಬಲವಾಗಿ ಬೇರು ಬಿಟ್ಟು, ನಿಂತಿರುತ್ತದೆ; ಅಥವಾ ನಿಂತಿರಬಹುದು. ಆದರೆ ಅದೊಂದು ಸಾಮಾಜಿಕ ಸಾರ್ವಜನಿಕ ಅಥವಾ ಲೌಕಿಕ ಶಕ್ತಿಯಾಗಿ ನಿಂತಿಲ್ಲ. ನಮ್ಮ ದೇವಲೋಕ ದೇವತಾರ್ಚನೆ ದೈವಿಕತೆಯ ಶಾಸ್ತ್ರ–ಸಂಪ್ರದಾಯ–ಸಂಸ್ಕಾರಗಳೆಲ್ಲವೂ ತಮ್ಮ ಹಳೆಯ ಹಂತದಲ್ಲಿಯೇ ಉಳಿದು ಆ ಮಂತ್ರ ತಂತ್ರಗಳ ವಿಧಾನಗಳನ್ನು ನಮ್ಮ ಯಂತ್ರ ಯುಗವು ಎಂದೋ ಹಿಂದೆ ಹಾಕಿ ಬಹಳ ಮುಂದೆ ಬಹಳ ದೂರಬಂದು ಬಿಟ್ಟಿದೆ.

ಇದನ್ನು ಮನಗಂಡೇ ನಮ್ಮ ದೈವಿಕ ಭಾವನೆಗೆ, ಧರ್ಮ ಸಂಸ್ಥೆಗೆ ಹೊಸ ಹೊಸ ರೀತಿ, ಹೊಸ ಹೊಸ ರಚನೆ ಒದಗಿಸಲು ರಾಜಾರಾಮ ಮೋಹನರಾಯ್, ಕೇಶವಚಂದ್ರ ಸೇನ್, ಮಹರ್ಷಿ ದೇವೇಂದ್ರನಾಥ್ ಠಾಕೂರ್, ಸ್ವಾಮೀ ದಯಾನಂದ ಸರಸ್ವತಿ ಮುಂತಾದ ಮಹಾಪುರುಷರು ಬ್ರಹ್ಮ ಸಮಾಜ, ಆರ್ಯ ಸಮಾಜ, ಪ್ರಾರ್ಥನಾ ಸಮಾಜದಂಥ ಹೊಸ ಸಂಘ, ಸಂಘಟನೆಗಳನ್ನು ಕಟ್ಟಿದರು. ಸ್ವಾಮೀ ವಿವೇಕಾನಂದರು ನಮ್ಮ

ಮಠ ಪೀಠಗಳಿಗೆ ಹೆಚ್ಚಿನ ಪುರೋಗಾಮೀ ಚರ್ಯೆ ಕೊಡಲು ರಾಮಕೃಷ್ಣ ಮಿಶನ್ನಿನಂಥ ಸಂಸ್ಥೆ ಕಟ್ಟಿದರು.

ಇದಲ್ಲದೇ ಆಧುನಿಕ ಸಂತ ಮಹಂತರು ಸ್ವಾಮೀ ಯೋಗಾನಂದ, ಶಿವಾನಂದ, ಮುಕ್ತಾನಂದ, ಜೆ. ಕೃಷ್ಣಮೂರ್ತಿಗಳಲ್ಲದೇ ಭಗವಾನ್ ಸಾಹಿ ಬಾಬಾ, ಭಗವಾನ್ ರಜನೀಶರಿಂದ ಸಂತ ಕೇಶವದಾಸರ ವರೆಗೆ ಅನೇಕಾನೇಕ "ದೇವ ಮಾನವ"ರು ಹಳೆಯ ಈ ಶ್ರದ್ಧೆಯ ಮದ್ಯವನ್ನೇ ಹೊಸ ಸೀಸೆಗಳಲ್ಲಿ ಹೊಸ ಲೇಬಲ್ಲು ಹಚ್ಚಿ ಭಾರತದ ಒಳಗೂ ಹೊರಗೂ ಧಾರಾಳವಾಗಿ ಧಾರೆ ಧಾರೆಯಾಗಿ ಹರಸಿ ಹರಿಸ ಹತ್ತಿದರು.

ಹಾಗೆಯೇ ಇದೇನೂ ಪರಿಷ್ಕಾರವಿಲ್ಲದೆ ಹಳೆಯ ಸಾಂಪ್ರದಾಯಿಕತೆ ಯನ್ನು ಇದ್ದಕ್ಕಿದ್ದಂತೆ ಪುನರುಜ್ಜೀವನಗೊಳಿಸಲು, ಕೋಮು ಭಾವನೆಯ ಸಾಮೂಹಿಕ ಅಹಂಕಾರವನ್ನು ಹೊತ್ತಿಸಲು ಸುಸಂಘಟಿತ ಪ್ರಯತ್ನ ಪ್ರಚಾರ ಗಳು ನಡೆದಿರುವುದೂ ಉಂಟು. ಅದೊಂದು ಬೇರೆಯೇ ರಾದ್ಧಾಂತ.

ಇಷ್ಟೊಂದು ನಿಜ. ಭಗವದ್ಗೀತೆಯ ಭಾಷೆಯಲ್ಲಿಯೇ ಹೇಳುವದಾದರೆ, ದೇವರೆಂಬ ಪರಿಕಲ್ಪನೆಯ ಹೊಸ ಅವತಾರ ಆಗಬೇಕು, —ದೇವನೆಂಬ ಭಾವವೋ ಸತ್ಯವೋ ಶಕ್ತಿಯುತವಾಗಿ ಸಕ್ರಿಯವಾಗಿ ಊರ್ಜಿತವಾಗಿ ಉಳಿಯ ಬೇಕಾಗಿದೆ. ಏಕೆಂದರೆ ಇಂದು ಸಂಕಟಬಂದಾಗಲೇ ವೆಂಕಟರಮಣನ ನೆನಪು ನಮಗೆ! ಅಥವಾ ಪರಿಸೆಯ ಕೂಡ ಗೋವಿಂದ. ಗತಾನುಗತಿಕವಾಗಿ ಬಳ್ಳಿ ಗುರುಡರಂತೆ ಮಂದಿಯ ಮಂದೆಯಲ್ಲಿ ನಾವೂ ಒಂದಾಗಿ ದೇವರಿಗೊಂದು ಹಣ್ಣು ಕಾಯಿ ಕೊಡುತ್ತೇವೆ—ಕನಿಷ್ಠ ಪಕ್ಷಕ್ಕೆ. ತಲೆಯೇ ತೆಂಗಿನಕಾಯಿ, ಕೈಬೆರಳುಗಳೇ ಬಾಳೇ ಹಣ್ಣುಗಳೆಂದು ದೇವರ ಮುಂದೆ ಬಾಗುತ್ತೇವೆ. ಉಳಿದ ಸಮಯವೆಲ್ಲ ದೇವನೊಬ್ಬನಿದ್ದಾನಲ್ಲ ಎಂದು ಒಪ್ಪಿ ತೆಪ್ಪಗಿರುತ್ತೇವೆ,— ನಮ್ಮ ಬದುಕಿಗೆ ನಾವೇ ಹೊಣೆಯಾಗಿ ಅದರ ಭಾರ ನಾವೇ ಹೊತ್ತು! ನಮಗೆ ಒಳಒಳಗೇ ಗೊತ್ತು–ನಾವು ದೇವರ ಮೇಲೆ ನಮ್ಮ ಭಾರ ಹಾಕಿದರೆ ಆತ ಅವನ್ನು ಕೊನೆಗೂ ನಾಲ್ಕು ಮಂದಿಯ ಹೆಗಲಿಗೆ ಇಟ್ಟು ಕೈ ಕಟ್ಟಿಕೊಂಡು (ಅಥವಾ ಅಭಯ ವರದ ಹಸ್ತನಾಗಿ!) ನಿಲ್ಲುತ್ತಾನೆಂಬುದು.

ನಮಗೆ ಸಾಮಾನ್ಯವಾಗಿ ದೇವರೆಂಬ ಪರಿಕಲ್ಪನೆ ಒಂದು ಈಜುಗುಂಬಳ ದಂತೆ, ಈ ಸಂಸಾರಸಾಗರದಲ್ಲಿ ("ಈಜಬೇಕು ಇದ್ದು ಜೈಸಬೇಕು" ಎಂಬುದಕ್ಕೆ) ಈಜುಗುಂಬಳ ಇರುವುದು ಒಳಗೆ ಟೊಳ್ಳು, ಇರಲಿ. ಆದರೂ ಅದು ನಮಗೆ ಬಾಳಿನ ಕಡಲಲ್ಲಿ ಒಂದು ಆಧಾರ! God is in His Heaven. All's right with the world! (ದೇವನಿರುವನು ಸ್ವರ್ಗದಿ, ಲೋಕ

ವೆಲ್ಲವೂ ನೆವ್ಮ್ಕದಿ!) ಅಂದಿದ್ದಾನೆ-ಕವಿ ಬ್ರೌನಿಂಗ್. ಹೀಗೆ ಜನಸಾಮಾನ್ಯರಿಗೆ ದೇವನು ಇರದಿದ್ದರೂ ಇದ್ದಂತೆ, ಇದ್ದೂ ಇಲ್ಲದಂತೆ, ಬೇಕು.

ಅದಕ್ಕಾಗಿ ಈ ಯುಗಧರ್ಮಕ್ಕೆ ಅನುಸಾರವಾಗಿ ದೇವರ ಪುನರ್ಜನ್ಮವಾಗಬೇಕು. ಆತ ಹೇಳಿಲ್ಲವೆ, "ಪ್ರತಿ ಯುಗಕ್ಕೂ ಹುಟ್ಟಿ ಬರುತ್ತೇನೆ, ನನ್ನನ್ನು ನಾನು ಹುಟ್ಟಿಸಿಕೊಳ್ಳುತ್ತೇನೆ!" ನೆಪೋಲಿಯನ್‌ನು ಚಕ್ರವರ್ತಿ ಆದಮೇಲೆ ಉದ್ಗಾರ ತೆಗೆದಿದ್ದ "ಜಗತ್ತಿನಲ್ಲಿ ದೇವರು ಇಲ್ಲವಾದರೆ ನಾನು ಹುಟ್ಟಿಸುತ್ತೇನೆ. ಇಲ್ಲವಾದರೆ ಈ ಜನವನ್ನು ಆಳುವದು ಅಸಾಧ್ಯ!" ಆತ ಆರಂಭದಿಂದಲೂ ಫ್ರೆಂಚ್ ರಾಜ್ಯ ಕ್ರಾಂತಿಯ ಶಿಶುವಾಗಿ ಮುಂದೆ ಬಂದವನು. ಮೂಲವಲ್ಲಿ ನಿರೀಶ್ವರವಾದಿ. ಆದರೆ ಅವನಿಗೆ ಅವನಂಥ ಆಳರಸರಿಗೆ ಸ್ಥಿತಿಪಾಲನೆಗೆ-ವ್ಯವಸ್ಥೆಯನ್ನು ಯಥಾಸ್ಥಿತಿಯಾಗಿ ಕಾಪಾಡಿಕೊಂಡು ಹೋಗಲಿಕ್ಕೆ ದೇವರಲ್ಲಿ ನಂಬಿಕೆಯ ಆಸ್ತಿಕ್ಯ ಒಂದು ಸಾರ್ವಜನಿಕ (ರಾಜಕೀಯ) ಅಗತ್ಯವೆನಿಸಿತು.

ಅದೇನೇ ಇದ್ದರೂ ಇಂದು ಹಳೆಯ ದೇವರು ಸತ್ತಿದ್ದಾನೆ, ಹೊಸ ದೇವರು ಹುಟ್ಟಿಲ್ಲ. ಈ ಪೊಳ್ಳನ್ನು ತುಂಬುವದು ಹೇಗೆ? ಈ ಪೊಳ್ಳನ್ನು ತುಂಬಲೇ ಬೇಕೇ? ವಿಜ್ಞಾನಿಯು ದೇವರ ಕುರಿತು ತಟಸ್ಥ. ಧಾರ್ಮಿಕನಿಗೆ ಪ್ರಪಂಚವೂ ಬೇಕು, ದೇವರೂ ಬೇಕು. ಪ್ರಪಂಚದ ಚರಿತಾರ್ಥ ಸುಸೂತ್ರಗೊಳಿಸಲಿಕ್ಕೂ ದೇವರು ಬೇಕು. ದೇವರಲ್ಲಿ ಶ್ರದ್ಧೆ, ಭಕ್ತಿ, ಅವನಿಗೆ ತನ್ನ ಸಂಸಾರ ಶಕಟದ ಗಾಲಿಗಳಿಗೆ ಹಾಕುವ ಎಣ್ಣೆ ಜಿಡ್ಡು. ಯೋಗಿಗೋ ದೇವರಿಗಿಂತ ಹೆಚ್ಚು ಮೋಕ್ಷವು ಬೇಕು. ಪ್ರಾಪಂಚಿಕನಿಗೆ ದೇವರು ತನ್ನ ಸಂಸಾರಕ್ಕಾಗಿ ಬೇಕು-ದೇವರಿಗಾಗಿ ದೇವರಲ್ಲ. ಯೋಗಿಗೆ ದೇವರು ಒಂದು ಲಕ್ಷ್ಯ ಮನಸ್ಸಿನ ಏಕಾಗ್ರತೆಗಾಗಿ. ಅವನಿಗೆ ಮನೋನಿಗ್ರಹ "ಚಿತ್ತವೃತ್ತಿ ನಿರೋಧ"ವೇ ಮುಖ್ಯ. ಯೋಗಸೂತ್ರಗಳೇ ಸಾರಿವೆ-"ಈಶ್ವರ ಪ್ರಣಿಧಾನಾತ್ ವಾ" ಅಂದರೆ ಈಶ್ವರನ ಪ್ರಣಿಧಾನ ಅವನಿಗೆ ವಾಪಕ್ಷ, ಅಂದರೆ ಅನಿವಾರ್ಯವಲ್ಲ.

ದೇವರಿಗಾಗಿ ದೇವರು ಬೇಕಾದದ್ದು ಯಾರಿಗೆ? ಕೇವಲ ಭಕ್ತರಿಗೆ. ಅವರದೊಂದು ತೀವ್ರ ವ್ಯಾಕುಲ ಭಾವನಾಮಯ ಮನಃಸ್ಥಿತಿ-ಮೀರಾಬಾಯಿ, ಅಕ್ಕಮಹಾದೇವಿ, ತುಕಾರಾಮ, ಚೈತನ್ಯ ಪ್ರಭು, ರಾಮಕೃಷ್ಣ ಪರಮಹಂಸ ಪ್ರಭೃತಿಗಳ ಮಾದರಿ ಇದು. (ಇವರಲ್ಲಿ ಸಂತ ಫ್ರಾನ್ಸಿಸ್, ಮದರ ಥೇರೇಸಾ, ಸೂಫೀ ಸಂತರೂ ಬಂದರು.)

ಆದರೆ ಬಹು ಜನಸಮುದಾಯಕ್ಕೆ ದೇವರೆಂಬುದು ದೂರದ ತಾರೆ. ಕಣ್ಣು ತೆಕ್ಕೆಯ ಆಚೆಗೇ ಸರಿಯುವ ಕ್ಷಿತಿಜ. ಮಾತಿಗೂ ಮನಸ್ಸಿಗೂ ಬುದ್ಧಿಗೂ ಹೊರತಾದ ಸಂಗತಿ ಅಥವಾ ವ್ಯಾವಹಾರಿಕವಾಗಿ ಆದೊಂದು ಮಾತಿನ

ಮೋಡಿ, ಮನಸ್ಸಿನ ಚಟ. ಆಗುಹೋಗುಗಳನ್ನು, ಆಗದ ಹೋಗದ ಸಂಗತಿಗಳನ್ನೂ ದೇವರದೇ ಗತಿಯೆಂದುಬಿಡುವದು, ಭಾವಿಸುವದು.

ಇಂಥ ಒಂದು ಸಂದರ್ಭದಲ್ಲಿ ದೇವರ ಗತಿಯೇನು? ಅಣು ಯುಗವೆನ್ನಿ, ವಿಜ್ಞಾನದ ಯುಗವೆನ್ನಿ, ವೈಚಾರಿಕತೆಯ ಯುಗವೆನ್ನಿ–ಇಂದಿನ ಒಟ್ಟಿನ ಭ್ರಮನಿರಸನದ ಆಶೆ ಆದರ್ಶಗಳ ಭಂಗದ, ಬಾಳಿಗೊಂದು ಉದ್ದೇಶ ಉತ್ಸಾಹ ಕಾಣದ ವಾತಾವರಣದಲ್ಲಿ, ನಾಸ್ತಿಕತೆಯ ನೆಲೆಯಲ್ಲಿ ನಿಂತು ನೋಡಿದವನಿಗೆ ದೇವರ ಪರಿಕಲ್ಪನೆ ಏನು?

ಭಾಗ-II

1

ದೇವರ ಕುರಿತು ಮೂರು ದೃಷ್ಟಿ

ದೇವರ ವಿಷಯವಾಗಿ ಈವರೆಗಿನ ನಮ್ಮ ದಾರ್ಶನಿಕರ, ವೈಚಾರಿಕರ ತರ್ಕಸರಣಿ ಸ್ಥೂಲವಾಗಿ ಮೂರು ನಿಟ್ಟುಗಳಲ್ಲಿ ಮೂರು ದಿಟ್ಟಿಗಳಿಂದ ಸಾಗಿ ಬಂದಿದೆ. ಈ ಕುರಿತು ಶಾಸ್ತ್ರೀಯ ನಿಲುಮೆಗಳೇ ಮೂರು 1) ಬ್ರಹ್ಮಜ್ಞಾನಿಯದು 2) ತತ್ವಜ್ಞಾನಿಯದು ಮತ್ತು 3) ಆತ್ಮಜ್ಞಾನಿಯದು. ಈ ಜ್ಞಾನ ಪ್ರಪಂಚಗಳನ್ನೇ ನಾನು ಇಲ್ಲಿ ಇಂಗ್ಲೀಷ ಪರಿಭಾಷೆಯಲ್ಲಿ ಹೆಚ್ಚು ವಿಹಿತವಾಗಿ ಮತ್ತು ಖಚಿತವಾಗಿ ಕರೆಯುವದು ಕಾಸ್ಮೋಲೋಜಿ (Cosmology), ಟೆಲಿಯೋಲೋಜಿ (Teleology) ಮತ್ತು ಒಂಟೋಲೋಜಿ (Ontology) ಎಂದು.

ಬ್ರಹ್ಮಜ್ಞಾನ ಅಥವಾ ಕಾಸ್ಮೋಲೋಜಿ ಬ್ರಹ್ಮಾಂಡದ ಆದಿ ಕಾರಣವನ್ನು ಹುಡುಕುತ್ತದೆ. ತತ್ವಜ್ಞಾನ ಅಥವಾ ಟೆಲಿಯೋಲೋಜಿ ವಿಶ್ವವಿಕಾಸದ ಅಥವಾ ಈ ಚರಾಚರ ಸೃಷ್ಟಿಯ ಅಂತಿಮ ಉದ್ದೇಶವನ್ನು, ಹೇತುವನ್ನು, ಗುರಿಯನ್ನು ಹುಡುಕುತ್ತದೆ. ಮತ್ತು ಆತ್ಮಜ್ಞಾನ ಅಥವಾ ಒಂಟೋಲೋಜಿಯು ಮಾನವನ ಅಂತರಂಗದ ಅವಶ್ಯಕತೆ ಪ್ರೇರಣೆ ತುಡಿತಗಳನ್ನು ಹುಡುಕುತ್ತದೆ. ದೇವರ ಅಸ್ತಿತ್ವ ಮತ್ತು ಸ್ವರೂಪಗಳ ಬಗೆಗೆ ಈ ಮೂರೂ ದೃಷ್ಟಿಯಿಂದ ಈ ತನಕ ಜಿಜ್ಞಾಸೆ, ವಿಚಿಕಿತ್ಸೆ ಹಾಗೂ ಪ್ರತಿಪಾದನೆ ನಡೆದು ಬಂದದ್ದು ಕಾಣುತ್ತದೆ. ಅದನ್ನೇ ಇಲ್ಲಿ ಸಂಕ್ಷೇಪವಾಗಿ ಸರಳವಾಗಿ ನಮೂದಿಸುವದು ಕ್ರಮಪ್ರಾಪ್ತವಾಗಿದೆ.

ಬ್ರಹ್ಮಜ್ಞಾನ–ಬ್ರಹ್ಮ ಜಿಜ್ಞಾಸೆ ಇಂದಿನ ವೈಜ್ಞಾನಿಕ ನಿಲುವೆಯಲ್ಲೂ ಸಾಗಿ ಬಂದಿದೆ. ಮೂಲತಃ ಜೀವ–ಜಗತ್ತು, ಚೇತನ–ಜಡ ಅಥವಾ ಶಕ್ತಿ (Energy) ಮತ್ತು ವಸ್ತು(Matter) ಇವು ಸಮಾಂತರವಾದ ಒಂದಕ್ಕೊಂದು ಭಿನ್ನವೆಂಬ ದ್ವಂದ್ವವೆಂಬ ದ್ವೈತಭಾವನೆ ಮಾಯುವಾಗಿ ಇದೆಲ್ಲ ಸೃಷ್ಟಿ ಅಥವಾ ವಿಶ್ವ ಪ್ರಪಂಚದ ಒಟ್ಟಿನಲ್ಲಿ ಮೂಲತಃ ಒಂದೇ ಎಂಬ ಅಖಂಡ ಅದ್ವೈತದ ನಿಲುವೆಗೆ ಆಧುನಿಕ ವಿಜ್ಞಾನವು ಬಂದುಮುಟ್ಟಿದೆ. ಕಲ್ಲು, ಮರ, ಲೋಹ, ನೀರು, ಪ್ರಾಣಿ ಎಲ್ಲ ವಸ್ತು ಜಾತವೂ ಮೂಲತಃ ಒಂದೇ. ಅಣು, ಪರಮಾಣು ಗಳ ಸಂಯೋಗ ಭೇದದಿಂದ ಆಯಾ ರೂಪದಲ್ಲಿ ಉಂಟಾದವೆಂಬುದೇ ಈ ಪರಮಾಣುವಾದದ ಸಾರ. ಪರಮಾಣುವನ್ನು ಒಡೆದರೆ ಸಿಗುವದು ಪ್ರಚಂಡ ವಿದ್ಯುತ್ ಸ್ಫೋಟ. ಅಂದರೆ, ಅಂತತಃ ಅಥವಾ ಆದಿಯಲ್ಲಿ ಇರುವದು ಈ ವಿದ್ಯುತ್ ಶಕ್ತಿಯೊಂದೇ. ಅದರಿಂದಲೇ ಜಡ ರಾಸಾಯನಿಕ ದ್ರವ್ಯಗಳು, ಜೀವ ಇತ್ಯಾದಿ ರೂಪಾಂತರಗಳು, ಗುಣೋತ್ಕರ್ಷಗಳು.

ಈ ರೀತಿ ವಿಶ್ವ ಪ್ರಪಂಚದ ಆದಿ ತತ್ವ ಮೂಲಕಾರಣ ಒಂದು ಪತ್ತೆ ಯಾದಂತೆ. ಆದರೆ ಅದು ಒಂದು ಶಕ್ತಿ, ಅಮಾನುಷ ಪ್ರಚಂಡ ಶಕ್ತಿ, ಹೊರತು ಸರ್ವಶಕ್ತ ಸರ್ವಜ್ಞ ಸರ್ವೇಶ್ವರ ವ್ಯಕ್ತಿಯೋ ವಿರಾಟಪುರುಷನೋ ಅಲ್ಲ. ನಮ್ಮ ಉಪನಿಷತ್ತುಗಳು ಸಾರಿದ್ದುಂಟು– "ತತ್ ತ್ವಂ ಅಸಿ" ("ತತ್ವಮಸಿ") "ಅದು ನೀನಾಗಿರುವಿ!" ಇದನ್ನು ನಾವು ವೈಜ್ಞಾನಿಕವಾಗಿಯೇ ಒಪ್ಪಿಕೊಳ್ಳ ಬಹುದು. ಆ "ತತ್" ಜಗತ್ತಿನ ಆದಿ ತತ್+ವವೇ ನೀನು ಎಂಬ ಮಾತು ಸರಿಯೇ. ಆದರೆ ಈ ಮಾತು ಮುಂದೆ "ನಾನೇ ಆ ಬ್ರಹ್ಮ"(ಅಹಂ ಬ್ರಹ್ಮಾಸ್ಮಿ) ಆಯಿತು. ಸರಿ,ಅದೂ ಒಪ್ಪಿಗೆ.ಈ ಬ್ರಹ್ಮ-ಈ ಬೃಹತ್ ಅಂದರೆ, ಮಹಾವ್ಯಾಪಕ ತತ್ವ ಒಂದು ಶಕ್ತಿಯಾಗಿದ್ದೂ ಅದರಿಂದ ಈ ಸೃಷ್ಟಿಯಲ್ಲಿ ನಾವೂ ನೀವೂ ಒಡ ಗೂಡಿ ಹುಟ್ಟಿ ಬಂದಿದ್ದರಿಂದ, ನಾವೆಲ್ಲ ಆ ಬ್ರಹ್ಮದ ಅಂಶಗಳೇ ಎನ್ನಬಹುದು.

ಆದರೆ ಇದಕ್ಕೂ ಮುಂದೆ ಹಾಯ್ದು ಆ ಬ್ರಹ್ಮ ತತ್ವವನ್ನು ಒಂದು ವಿರಾಟ ವ್ಯಕ್ತಿಯಾಗಿ ಪುರಾಣ ಪುರುಷನಾಗಿ ಕಲ್ಪಿಸಿ ಸ್ಥಾಪಿಸಿ "ನಾನೇ ಅವನು, ಅವನೇ ನಾನು"(ಸೋಽಹಂ) ಅಥವಾ "ಶಿವೋಽಹಂ"ಎಂದೆಲ್ಲ ಹೇಳ ಹೊರಟಾಗ, ಅದು ವಿಜ್ಞಾನಕ್ಕೆ ಒಪ್ಪಿಗೆ ಆಗಲಾರದು. ವಿಜ್ಞಾನದ ನೆಲೆಯ ಮೇಲೆ ನಿಂತ ನಾಸ್ತಿಕನಿಗೂ ಈ "ಪುರುಷೀಕರಣ" (Personification) ನುಂಗಲಾರದ ತುತ್ತು. ಒಂದು ಮೂಲದ ತತ್ವವನ್ನು ಹೀಗೆ ಷಡ್ಗುಣೈಶ್ವರ್ಯ ಸಂಪನ್ನ ವ್ಯಕ್ತಿ (ಪುರುಷ) ಯೆಂದಾಗಿ ಸ್ಥಾಪಿಸುವದು ಪ್ರಸ್ಥಾಪಿಸುವದು ಯಥಾವತ್ ಅಲ್ಲ, ಯಥೋಚಿತವಲ್ಲ; ಸಮ್ಯಕ್ ಜ್ಞಾನವಲ್ಲವೆಂದು ನಾಸ್ತಿಕನೂ ವೈಜ್ಞಾನಿಕನೂ

ಪ್ರತಿಪಾದಿಸುತ್ತಾನೆ. ಜಗತ್ ಪ್ರಪಂಚದ ಬ್ರಹ್ಮಾಂಡ ಸೃಷ್ಟಿಯು ಬೃಹತ್ ಪದದ ಹಾಸುಹೊಕ್ಕಾದ ಎಲ್ಲ ತತ್ವಗಳೂ ದ್ರವ್ಯಗಳೂ ಶಕ್ತಿಗಳೂ ನಮಗೂ ನಿಮಗೂ ಗ್ರಹಗೋಲನೀಹಾರಿಕೆಗಳಿಗೂ ಸಮಷ್ಟಿಗೆ ಹೇಗೋ ಹಾಗೆಯೆ ವ್ಯಷ್ಟಿಗೂ ಖಗೋಲಕ್ಕೆ ಹೇಗೋ ಹಾಗೆಯೇ ಖಾಸಗಿಯಾಗಿಯೂ ಇಲ್ಲಿ ಈಗ ಎಲ್ಲೆಲ್ಲೂ ಎಂದೆಂದಿಗೂ ಸಲ್ಲುತ್ತವೆ. ಆ ದೃಷ್ಟಿಯಿಂದ ಅವು "ಅಣೋರ ಣೀಯಾನ್ ಮಹತೋ ಮಹೀಯಾನ್" "ನಿತ್ಯ ಸರ್ವಗತ ಸ್ಥಾಣೋ"–"ಅಚಲ ಸನಾತನ" ಆದಾಗ್ಯೂ ಇದೆಲ್ಲ ಭೌತಿಕ ಪರಿಭಾಷೆಗೂ ಒಳಪಡುವಂತೆ ಇದೆ. ಸ್ವಭಾವವೇ ಅಧ್ಯಾತ್ಮವೆಂದು ಭಗವತ್ ಗೀತೆಯೇ ಅನ್ನುವಾಗ, ಅಧ್ಯಾತ್ಮಿಕವೆಂಬುದು ಆಧಿ ಭೌತಿಕದ್ದೇ ಒಂದು ವಿಶಿಷ್ಟ ಆಯಾಮ, ಅಂಗ. ಅಧಿದೈವಿಕವೆಂಬುದು ಕೇವಲ ಕಲ್ಪನಾ ವಿಲಾಸ. ಒಂದು ಅಗಮ್ಯ, ರಮ್ಯ ಆಭಾಸ! ವಿಜ್ಞಾನವು ವೇದಾಂತದ ಮೂಲ ಮಾತು ಆಡಹತ್ತಿದೆ. ಅದಕ್ಕೂ ಅಕ್ಷರ–ಸ್ವರ–ವ್ಯಂಜನ ಬೇಕೆ!

ವಿಜ್ಞಾನಿಗಳೊಂದಿಗೆ ಒಂದು ಚರ್ಚೆ

ವಿಜ್ಞಾನವೂ ವೇದಾಂತದಂತೆ ಜೀವ–ಜಡ, ಚೇತನ–ಅಚೇತನ, ಪಿಂಡಾಂಡ–ಬ್ರಹ್ಮಾಂಡಗಳ ಮೂಲ ತಾತ್ವಿಕ ಅದ್ವೈತದ ಬಗೆಗೆ, ಏಕತ್ವದ ಬಗೆಗೆ ಒಮ್ಮತಕ್ಕೆ ಬಂದಂತಿದೆ. ಅವೆರಡೂ ಒಂದು ಮಟ್ಟದಲ್ಲಿ ನೋಟ ಕೂಟವನ್ನು ಸಾಧಿಸಿದಂತಿದೆ. ಇನ್ನು ಮುಂದಿನ ಹೆಜ್ಜೆ ಈ ಮೂಲತತ್ವದ ಸ್ವರೂಪದ ನಿಶ್ಚಯ. ಅದು ಜೀವವೋ? ಜಡವೋ?

ನನ್ನೆದುರಿನಲ್ಲಿ ಮುಂಬಯಿಯ ಭಕ್ತಿ ವೇದಾಂತ ಸಂಸ್ಥೆಯು 1980ರಲ್ಲಿ ಪ್ರಕಟಿಸಿದ ಒಂದು ಚಿಕ್ಕ ಪುಸ್ತಕ ಇದೆ. ಅದು ನಾಲ್ಕು ವಿಜ್ಞಾನಿಗಳ ನಡುವೆ ನಡೆದ ಒಂದು ಸ್ವಾರಸ್ಯದ ಚರ್ಚೆಯನ್ನು ಪ್ರಕಟಿಸಿದೆ. ಚರ್ಚೆಯ ವಿಷಯ "Molecules and Man" (ಅಣುಗಳು ಮತ್ತು ಮನುಷ್ಯನು) ಭಕ್ತಿ ವೇದಾಂತ ಸಂಸ್ಥೆಯ ನಾಲ್ಕು ವಿಜ್ಞಾನಿಗಳು— ಡಾ. ಟಿ. ಡಿ. ಸಿಂಗ್, ಡಾ.ಆರ್.ಎಲ್. ದ್ಯಾಂಪನ್, ಟಿ. ಜಾಫೆ ಮತ್ತು ಡೆವಿಡ್ ವೆಲ್ ಇವರು ಆಗ್ರಾ ಮೆಡಿಕಲ್ ಕಾಲೇಜಿನ ಜೀವ ರಸಾಯನ ವಿಜ್ಞಾನಿ ಡಾ.ಎ.ಎನ್. ಮಾಲ ವಿಯಾರೊಂದಿಗೆ ಈ ಗಂಭೀರ ಹಾಗೂ ಮೌಲಿಕ ಚರ್ಚೆ ನಡೆಸಿದ್ದಾರೆ.

ಈ ಚರ್ಚೆಯಿಂದ ನಾವು ತೀರ್ಮಾನಕ್ಕೆ ಬರುವದೇನು?

ಇಂದು ನಮ್ಮ ವೈಜ್ಞಾನಿಕ ಯಂತ್ರೋಪಕರಣಗಳು ಎಷ್ಟೋ ಸೂಕ್ಷ್ಮ ಹಾಗೂ ತೀವ್ರ ಸಂವೇದಿಯಾಗಿದ್ದಾಗ್ಯೂ ನಿಸರ್ಗದ ಎಲ್ಲ ನಿಯಮಗಳನ್ನು,

ಜೈವಿಕ ಜೀವಾಣುಗಳ ವ್ಯಾಪಾರಗಳನ್ನು ಅರಿತುಕೊಳ್ಳುವಷ್ಟು ಪೂರ್ಣತೆ ಪಡೆದಿಲ್ಲ. ಅಲ್ಲದೆ, ನಮ್ಮ ಇಂದ್ರಿಯಗಳ ಸಂವೇದನೆಗಳ ತಳಹದಿಯೂ ಅಂಥ ಪೂರ್ಣತ್ವದ್ದಲ್ಲ. ಅದು ಅವ್ಯಂಗವಲ್ಲ. ಅವಕ್ಕೂ ಇತಿ ಮಿತಿಗಳಿದ್ದೇ ಇವೆ. ಆದಾಗ್ಯೂ ಕಳೆದ 25 ವರ್ಷಗಳಲ್ಲಿ ಅಣು–ಕಣ (Molecule)ಗಳ ರಚನೆ ಪ್ರೋಟಾನುಗಳ ರಚನೆ ಪ್ರಯೋಗಶಾಲೆಯಲ್ಲಿ ಯಶಸ್ವಿ ಆಗಿದೆ. ವಿಜ್ಞಾನಿಗಳು ಜೀವನವನ್ನು ಸೃಷ್ಟಿಸುತ್ತೇವೆಂದು ಸಾಧಿಸುತ್ತಿದ್ದಾರೆ. ಅವರು ಈವರೆಗೆ ಸಾಧಿಸಿದ್ದೂ ಜೈವಿಕ ಸಂಘಟನೆಗೆ ಅವಶ್ಯವೆನಿಸುವ ರಾಸಾಯನಿಕ ದ್ರವ್ಯಗಳನ್ನು ಆಯ್ದು ಪರೀಕ್ಷಿಸಿ, ಪ್ರಯೋಗಿಸಿ ಒಟ್ಟಿಗೆ ತರುತ್ತಿರುವದು ಜೀವದ ಮೂಲ ಭೌತಿಕ (ಜಡ). ಅದರಿಂದ ಆ ಜೀವ ಸಾವಯವ–ಸೇಂದ್ರೀಯವಾಗಿ ರೂಪಗೊಂಡಿತು. ನಾವು ಇಂದು ತಿಳಿದಂತೆ ಜೀವ ಪ್ರೋಟಾನು ಜನ್ಯ, ಪ್ರೋಟಾನುವೇ ಜೀವ-ಜೀವಾಣು ಘಟಕ, ಜೀವವೆಂಬುದು ಭೌತಿಕ ಯಾಂತ್ರಿಕ ಸಂಗತಿ+ಇನ್ನೇನೋ ಒಂದು. ಅದು ಇನ್ನೂ ವಿಜ್ಞಾನದ ತೆಕ್ಕೆಗೆ ಬಂದಿಲ್ಲ. ಅಮೀಬಾವನ್ನು ಪರೀಕ್ಷಾ ನಳಿಕೆಯಲ್ಲಿ ಸೃಷ್ಟಿಸುವದು ಇನ್ನೂ ಪೂರ್ತಿ ಯಶಸ್ವಿ ಆಗಿಲ್ಲ. ಆದರೆ ಆ ಯಶಸ್ಸು ಕೈಗೆ ಎಟಕಲಿಕ್ಕಿಲ್ಲವೆಂದೂ ಅನ್ನುವಂತಿಲ್ಲ. ಸದ್ಯ ಅಶಕ್ಯವೆನಿಸುವದೆಲ್ಲ ಮುಂದೆ ಅಸಂಭವನೀಯವಲ್ಲ. ಭೌತಿಕ ಪ್ರಕ್ರಿಯೆಯಲ್ಲಿ ಅಭೌತಿಕವೆಂದು ಇಂದು ತೋರುವ ಪ್ರಭಾವವು ಯಾವದೋ ಅತಿ ಭೌತಿಕ ವಾದ, ಜಗತ್ತಿಗೇ ಮಿಗಿಲಾದ, ಹೊರತಾದ, ಹಿರಿದಾದ ಒಂದು ಶಕ್ತಿಯದು; ಅದರ ಅಂಶ ಈ ಜೀವಾಣುವಿನೊಳಗೆ ಮಿಡಿಯುವ ಆತ್ಮದ್ದು; ಈ ಆತ್ಮ ಮತ್ತು ಆ ಪರಮಾತ್ಮ ಎಲ್ಲ ಜಾಗ್ರತ ಪ್ರಜ್ಞಾವಂತ ನಿಯಂತ್ರಣ ಸಂಘಟನೆ ಗಳಿಗೆ ಸಂಚಾಲಕ ಮೂಲ ಶಕ್ತಿ; ಎಂದೆಲ್ಲ ವಿಜ್ಞಾನಿಯು ಒಪ್ಪಬೇಕಾಗಿಲ್ಲ. 'ಅ' ಕುರಿತ ಅಜ್ಞಾನವೇ 'ಬ' ಕುರಿತ ಜ್ಞಾನವಲ್ಲ. ಆ ಜ್ಞಾನಕ್ಕೆ ಒಂದು ಪ್ರಮಾಣವೂ ಅಲ್ಲ.

ಅಮೀಬಾ (ಜೀವಾಣು)ದ ಘಟಕ ಅಂಶಗಳನ್ನು ವಿಂಗಡಿಸಿ, ಮತ್ತೆ ಕೂಡಿಸಿ ಹೊಸ ಅಮೀಬಾ ಸೃಷ್ಟಿಸಿದ್ದಾರೆ–ಡಾ. ಖೊರಾನಾರಂಥ ವಿಜ್ಞಾನಿಗಳ ಪ್ರಯೋಗಶಾಲೆಯಲ್ಲಿ. ಇದರ ಮುಂದಿನ ಹೆಜ್ಜೆ ಅಮೀಬಾದ ಮೂಲ ಘಟಕ ದ್ರವ್ಯಗಳ ಅಣುಗಳನ್ನು ತಕ್ಕ ಪ್ರಮಾಣ ಪ್ರಯೋಗದಿಂದ ಸ್ವಯಂಭೂ ಅಮೀಬಾ ಒಂದನ್ನಾಗಿ ನಿರ್ಮಿಸುವದು–ಜಡದಿಂದ ಜೀವ ಸೃಷ್ಟಿ. ಇಲ್ಲಿ ನಾವು ಒಂದು ಅಂಶವನ್ನು ಗಮನಿಸಬೇಕು. ಇಂದಿನ ಲೋಹಗಳೂ ಖನಿಜಗಳೂ ಇತರ ದ್ರವ್ಯಗಳೂ ಅದರಂತೆಯೇ ಜೀವಾಣುವೂ ಮೊತ್ತ ಮೊದಲು ಉಂಟಾ

ಗುವಾಗಿನ ನಿಸರ್ಗದ ಅಂದಿನ ಮಹಾ ಪ್ರಯೋಗಶಾಲೆಯಲ್ಲಿಯ ರಾಸಾಯನಿಕ ಪ್ರಕ್ರಿಯೆಗಳ ಅಂದಿನ ವಿದ್ಯುದುಷ್ಣತೆ ಒತ್ತಡ, ಗುರುತ್ವಾಕರ್ಷಣೆ ಅಥವಾ ಚುಂಬಕ ಶಕ್ತಿ ಇತ್ಯಾದಿಗಳ ಒಂದು ಉಗ್ರ ಉತ್ಕಟ ಸನ್ನಿವೇಶ ಇಂದು ಪ್ರಯೋಗಶಾಲೆಗಳಲ್ಲಿ ಪುನಃ ನಿರ್ಮಿಸುವದು ಸುಲಭವಲ್ಲ. ಸೃಷ್ಟಿಯ ಆರಂಭಿಕ ಅವಸ್ಥೆಯಲ್ಲಿ ಸಹಜವಾಗಿ ಕೂಡಿಬಂದ ಅಂಥ ಮಾರ್ಪಾಟಗಳು ಇಂದು ಅಷ್ಟು ಸಹಜವಾಗಿ ಒದಗಿರಲಾರದು. ಇಂದು ಒಂದು ಅಣುವನ್ನು ಒಡೆಯಲಿಕ್ಕೆ ಎಷ್ಟೊಂದು ಕಷ್ಟ: ವೆಚ್ಚ ಮತ್ತು ಸಾಹಸ ಬೇಕಾಗುತ್ತದೆಂಬುದು ಒಂದೊಂದು ಪರಮಾಣು ಸ್ಫೋಟದ ಪ್ರಯೋಗವೇ ಸಾರುತ್ತದೆ. ಆದ್ದರಿಂದ ಇನ್ನೂ ಕೆಲವು ಕಾಲ ಜಡದಿಂದ ಜೀವೋತ್ಪತ್ತಿಯ ಪ್ರಯೋಗ ಒಂದು ಸಿದ್ಧಾಂತದ ಹಂತದಲ್ಲಿ ಉಳಿಯಬಹುದು.

ಆದರೂ ಜೀವದಿಂದ ಜೀವ ಹುಟ್ಟುವದನ್ನು ನಾವು ಯಾವಾಗಲೂ ನೋಡುತ್ತೇವೆ. ಎರೆಹುಳದಿಂದ ಭ್ರೂಣದವರೆಗೂ ಇದಕ್ಕೆ ಉದಾಹರಣೆಗಳಿವೆ. ಜೀವಾಣುಗಳಿಂದಲೇ ಜೀವಾಣು ಬೆಳೆಯುತ್ತಿವೆ, ಬಲಿಯುತ್ತಿವೆ. ಆದರೆ ಆದಿಯಲ್ಲಿ ಜಡ ದ್ರವ್ಯದಿಂದ ಮೂಲ ಜೀವ ಹೇಗೆ ಉಂಟಾಯಿತು? ಅದನ್ನೇ ವಿಜ್ಞಾನಿಗಳು ಇಂದು ಪ್ರಯೋಗ ಸಂಶೋಧನೆಗಳಿಂದ ಸಿದ್ಧ ಮಾಡಲು ಹೆಣಗುತ್ತಾ ಇದ್ದಾರೆ. ಈ ಜೀವದ ಗೂಢದೊಂದಿಗೆ ಹುಟ್ಟಿನ, ಸಾವಿನ ಹಾಗೂ ದೇವರ ಅಗಮ್ಯತೆಯ ರಹಸ್ಯವೂ ಕೂಡಿಕೊಂಡು ಮಾನವನ ಬುದ್ಧಿಗೆ ಆಹ್ವಾನವಾಗಿ ನಿಂತಿತು. ಯಾಜ್ಞ್ಯವಲ್ಕ್ಯನ ಕಾಲದಿಂದ ಐನ್‌ಸ್ಟೈನ್‌ನ ಕಾಲದವರೆಗೆ ಅರಿಯಲಾರದ್ದಕ್ಕೆ ಅಂಜುವದು, ಅದನ್ನು ಆರಾಧಿಸುವದು ನಡೆದುಬಂತು. ನೆಲಕ್ಕಿಂತ ಹರಿಯುವ ನೀರು, ಮೊರೆಯುವ ಕಡಲು, ಚಲಿಸುವ ಮೋಡ, ಗುಡುಗುವ ಮಿಂಚು, ರಭಸದ ಗಾಳಿ, ಭುಗಿಲೇಳುವ ಕಾಳ್ಗಿಚ್ಚು, ಹಗಲನ್ನೂ ಬೆಳಕನ್ನೂ ಬದುಕನ್ನೂ ಕೊಡುವ ಸೂರ್ಯ ಇವೆಲ್ಲ ದೇವತ್ವ ಪಡೆದವು. ಭೌತಿಕದ ಮೇಲೆ ದೈವಿಕದ ಆರೋಪವಾಯಿತು. ನಮ್ಮ ಬ್ರಹ್ಮ ಜಿಜ್ಞಾಸೆ ತತ್ವ ವಿಚಿಕಿತ್ಸೆ ಆಯಿತು, ವೇದಾಂತವಾಯಿತು, ಒಂದು ವಿಜ್ಞಾನವಾಯಿತು. ದೂರದರ್ಶಕ, ಸೂಕ್ಷ್ಮದರ್ಶಕ, ಪಾರದರ್ಶಕ, ಅಪಾರದರ್ಶಕ, ಇಲೆಕ್ಟ್ರಾನಿಕ್ ಲೇಸರ್ ವಿದ್ಯುತ್ ಉಪಕರಣ ಯಂತ್ರಗಳು, ಹಿರಿ ಕಿರಿ ಉಪಗ್ರಹಗಳು ಆಕಾಶ ಪಾತಾಳಗಳನ್ನೂ ಹೊಕ್ಕು, ಹೆಕ್ಕಿ ಸುತ್ತಾಡಿ ನೋಡಿ ಬಂದವು–ಎಲ್ಲೂ ದೇವರು ಸಿಗಲಿಲ್ಲ!

ಅಂದಾಗ, ಈ ಬ್ರಹ್ಮಜ್ಞಾನ ವಿಜ್ಞಾನಗಳ ದೃಷ್ಟಿಯಿಂದ ಚರಾಚರ ಸೃಷ್ಟಿಯ ಆದಿ ಕಾರಣ ಮೂಲತತ್ವ ತಿಳಿದು ಬಂದಷ್ಟು ಮಟ್ಟಿಗೆ ಅದರಲ್ಲಿ ನಾವು ಭಾವಿಸಿಕೊಂಡು ಪೂಜಿಸಿಕೊಂಡು ಬಂದ ದೈವಿಕತೆ, ದಿವ್ಯತ್ವ, ದೇವತ್ವವೆಂಬುದು

ಏನೂ ಇಲ್ಲವೆಂಬುದೇ ಸಿದ್ಧವಾಗಿದೆ. ವಿಶ್ವಚಕ್ರವು ಅವ್ಯಾಹತವಾಗಿ ನಡೆಯುವ ನಿಸರ್ಗ ನಿಯಮಗಳ ಸ್ವಯಂಭೂ ಸ್ವತಂತ್ರ ಶಕ್ತಿಯನ್ನು "ಋತ"ವೆಂದರೂ "ನಿಯತಿ" ಎಂದರೂ ಅದನ್ನು ಅರಿತು ಅನುಕೂಲಪಾಗಿಸಿಕೊಳ್ಳುವದೊಂದೇ ನಮಗೆ ಇರುವ ಬದುಕಿನ ಸೂತ್ರ. ಅಲ್ಲಿ "ದೇವ"ರ ಹಸ್ತಕ್ಷೇಪವಿರುವದಿಲ್ಲ.

2

ತತ್+ತ್ವದ ದೃಷ್ಟಿ

ತತ್ವಜ್ಞಾನದ ದೃಷ್ಟಿಯಿಂದ ದೇವರಲ್ಲಿ ನೋಡುವದೇನು? "ತತ್ವಂ ಚಿಂತಯ ತದಿದಂ ಭ್ರಾತ" ಎಂದಿದ್ದಾರೆ ಆದಿ ಶಂಕರರು. ತಮ್ಮ "ಚರ್ಪಟ್ಟಂಜರಿ"ಯಲ್ಲಿ ಈ ತತ್ವವೇನು? "ತತ್ +ವ" ಅಥವಾ "ತತ್ + ತ್ವ" ಅದರ ಅದು-ತನ. "The thing in itself" ಅದು ತಾನು ಏನು? ಇದರ ಹಿನ್ನೆಲೆಯ ಪ್ರಶ್ನೆ ಅದು ಏಕೆ? ಇದನ್ನು ಪರಿಶೀಲಿಸುವ ಶಾಸ್ತ್ರ Teleology" ಇಲ್ಲಿ ದೇವರನ್ನು ಕಾರಣವಾಗಿ ನೋಡುವದಕ್ಕಿಂತ, ಪರಿಣಾಮವಾಗಿ ಅಥವಾ ವಿಶ್ವವಿಕಾಸದ "ಗುರಿ"ಯಾಗಿ, "ಉದ್ದೇಶ"ವಾಗಿ ನೋಡುವ ದೃಷ್ಟಿಯೇ ಪ್ರಧಾನ.

ಎಲ್ಲಿ ಸಕಲ ಜೀವಿಗಳೂ ಅಖಿಲ ವಿಶ್ವವೂ ಕೊನೆಗೆ ಹೋಗಿ ತಲುಪುವದೋ ಆ"ಧಾಮ" ಆ ನೆಲೆಗತಿ ಸ್ಥಿತಿಯೇ ದೇವರು. "ಎಲ್ಲಿ ಹೋದಮೇಲೆ ತಿರುಗಿ ಬರುವದು ಇಲ್ಲವೋ ಆ ನೆಲೆ, ("ಯತ್‌ಗತ್ವಾನ್ ನಿವರ್ತಂತೇ ತತ್ ಧಾಮ ಪರಂ") ಆ ಪರಮಧಾಮ ಪರಿಪೂರ್ಣತ್ವ. ಸೃಷ್ಟಿ ವಿಕಾಸದ ಜೀವದ ಉತ್ಕ್ರಾಂತಿಯ ಪರಮ ಗುರಿ-ಎಂಬುದು ತತ್ವ ಜಿಜ್ಞಾಸೆಯ ನಿಲುವು. ಅಂದರೆ ಈ ವಿಶ್ವ ಸೃಷ್ಟಿಗೆ ಜೀವಜಾತದ ಉತ್ಕ್ರಾಂತಿ ವಿಕಾಸಕ್ಕೆ ಆದಿ ಕಾರಣವು ಮಾತ್ರವಲ್ಲ; ಅದಕ್ಕೆ ಒಂದು ಉದ್ದೇಶವೂ ಇರಬೇಕು, ಇದ್ದೇ ಇದೆ" ಎಂಬ ಗ್ರಹಿಕೆ ಇದು. ಉದ್ದೇಶ ಪ್ರಯೋಜನವಿಲ್ಲದೆ ಎಂಥ ಮಂದ ಬುದ್ಧಿಯವನೂ ಕೆಲಸಕ್ಕೆ ಪ್ರವೃತ್ತನಾಗುವದಿಲ್ಲ ಅಂದಾಗ, ಇಂಥ ಪ್ರಚಂಡ ಬ್ರಹ್ಮಾಂಡ ಸೃಷ್ಟಿಯ ಕಾರ್ಯಕ್ಕೆ ಒಂದು ಉದ್ದೇಶವಿರಬೇಡವೇ? ಇದು ಕೇವಲ ಮನೋಮಯವಾದ ಅಂದರೆ ಮನಸ್ಸಿನ ಮಟ್ಟದಲ್ಲಿ ಮೂಡುವ ವಿಚಾರ. ವಿಶ್ವ ಒಂದು ಸೃಷ್ಟಿ-ರಚನೆ-ನಿರ್ಮಾಣ ಅಂದಾಗ, ಅದಕ್ಕೆ ಪ್ರಯೋಜನ, ಅದರ ಹಿಂದೆ ಉದ್ದೇಶ, ಅದಕ್ಕೆ ತಕ್ಕ ಗುರಿ ಎಲ್ಲ ಬಂದಂತೆ.

ಹೀಗೆ ಪುರುಷೀ (ಮಾನವೀ)ಕರಣದ "ಹೇತು"ವಾದ ತತ್ವಜ್ಞಾನದ ಮಹತ್ವದ ಅಂಗವಾಯಿತು. "ಈಶ್ವರೇಚ್ಛೆ"—"ದೈವ ಸಂಕಲ್ಪ" ಒಳಗಿರ್ಪ

ಒಂದು ನೆವಂ ("ಅಂತರ: ಕೋಽಪಿ ಹೇತು;") ಮುಂತಾದ ಮಾತುಗಳಿಗೆ ಮಂತ್ರಶಕ್ತಿ ಬಂತು. ಮಾನವನ ಅನುಕೂಲತೆಗಾಗಿ ಋತುಗಳು, ಸೂರ್ಯ ಚಂದ್ರರು, ಮಳೆ ಗಾಳಿಗಳು "ತೇನ ವಿನಾ ತೃಣಮಪಿ ನ ಚಲತಿ" ಎಂದಾಯಿತು. ಹಕ್ಕಿಗಾಗಿ ಹಣ್ಣು, ಹಸುವಿಗಾಗಿ ಹುಲ್ಲು, ಜನ್ಮಕುಂಡಲಿಗಾಗಿ ನವಗ್ರಹಗಳು ಇತ್ಯಾದಿ, ಇತ್ಯಾದಿ ಜಗತ್ತಿನ ಆಗುಹೋಗುಗಳಿಗೆ ಆ ದೇವರದೊಂದು ಘನವಾದ-ಗೂಢವಾದ ಉದ್ದೇಶವಿರಲೇಬೇಕೆಂಬುದು ನಮ್ಮ ಬದುಕಿನ ಅನುಭವದಿಂದ ಸ್ವತಃಸಿದ್ಧವೆನಿಸಿತು. ಬೀಜದಿಂದ ಗಿಡ ಮರಗಳು, ಭ್ರೂಣದಿಂದ ಪ್ರಾಣಿ, ಶಿಶು, ಮನುಷ್ಯರು ಹೀಗೆ ಮುಂದಾಗುವ ವಿಕಾಸದ ಸೂಕ್ಷ್ಮ ಆಕೃತಿ ಆ ವಿಶ್ವಕರ್ಮದ (ಸೃಷ್ಟಿಕರ್ತನ) ಮೂಲ ಯೋಜನೆ, ಅಣುರೂಪದಲ್ಲಿ ಮೊದಲಿಗೆ ಗುಪ್ತವಾಗಿ ಮುದ್ರಿತವಾಗಿದ್ದು, ಅವು ಕಾಲಕ್ರಮಕ್ಕೆ ಅನುಸಾರವಾಗಿ ಬಿಡಿಸಿಕೊಳ್ಳುತ್ತ ಬೆಳೆದು ವಿಕಾಸಗೊಳ್ಳುತ್ತದೆಂಬುದು ಈ ಉದ್ದೇಶವಾದದ ಸಾರಾಂಶವು.

ಆದರೆ, ಈ ವಾದವು ಸಯುಕ್ತಿಕವಲ್ಲ. ಇದು ಮನುಷ್ಯನ ಮನೋ ವ್ಯಾಪಾರವನ್ನೇ ಸೃಷ್ಟಿಯ ಮೂಲ ಕಾರಣವನ್ನು ಆದಿ ಪುರುಷನೆಂದು ಭಾವಿಸಿ ಅದರ ಮೇಲೆ ಆರೋಪಿಸುವ ವಿಚಾರಸರಣಿ. ಸೃಷ್ಟಿಯ ವಿಕಾಸದಲ್ಲಿ ಎಲ್ಲ ಕಡೆಯಲ್ಲಿ ಎಲ್ಲ ಕಾಲದಿಂದಲೂ ನಡೆಯುತ್ತಿರುವ ಅಪಾರ ಅಪವ್ಯಯವನ್ನು, ಅನವಸ್ಥೆಯ ಕುರುಡು ಕಾರಭಾರವನ್ನು ಕಂಡರಿತಾಗ, ಈ ಜಗತ್ತಿನ ಉತ್ಪತ್ತಿಯ ಅಡಿಗೆ ಒಂದು ನಿಯಂತ್ರಕ ಬುದ್ಧಿಯೇ ಜಾಗೃತ ಪ್ರಜ್ಞೆಯೇ ಕೆಲಸ ಮಾಡುತ್ತಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಏಕೆಂದರೆ, ಆ ಒಂದು ಸಂಗತಿಯೇ ಅಲ್ಲಿ ಇರುವದಿಲ್ಲ ಎಂಬುದು ಗೊತ್ತಾಗುತ್ತದೆ. ವಿಕಾಸ ಕ್ರಮದಲ್ಲಿ ಮನಸ್ಸು ಮೇಧಾಶಕ್ತಿ ಮತ್ತು ಬುದ್ಧಿಗಳ ಹುಟ್ಟು ಬೆಳವಣಿಗೆಗಳು ತೀರ ನಂತರದವು, ಇತ್ತೀಚೆಯವು ಎಂಬುದು ಇಂದು ಸಿದ್ಧವಾಗಿದೆ. ಮಿದುಳಿಲ್ಲದೆ ಮೇಧಾಶಕ್ತಿ ಇಲ್ಲ. ಮತ್ತು ಮಿದುಳು ಪ್ರಾಣಿ-ಪಶು-ಮನುಷ್ಯ ವರ್ಗದ ವಿಶಿಷ್ಟ ಸಾವಯವ ಸೇಂದ್ರೀಯ ಸೃಷ್ಟಿ.

ಸರಳ ಮಾತಿನಲ್ಲಿ ಹೇಳುವದಾದರೆ, ಇಂದು ಪ್ರೌಢ ಮನುಷ್ಯನಿಗೂ ಚಿಕ್ಕ ಮಗುವಿಗೂ ಮನಸ್ಸಿನ ಮಟ್ಟದಲ್ಲಿ ಯಾವ ಅಂತರವೋ ಅದೇ ಆಧುನಿಕ ಮನುಷ್ಯನಿಗೂ ಆದಿ ಮಾನವನಿಗೂ ಮನೋಧರ್ಮದಲ್ಲಿ ಕಂಡುಬರುತ್ತದೆ. ಚಿಕ್ಕ ಮಗು ತನ್ನ ಸುತ್ತಲಿನ ಜಡ ವಸ್ತುಗಳಲ್ಲಿಯೂ ತನ್ನಂತಹದೇ ಜೀವ-ಭಾವ-ಕ್ರಿಯೆಗಳನ್ನು ಆರೋಪಿಸುತ್ತದೆ. ಆದಿ ಮಾನವನೂ ಹಾಗೆಯೇ ಅವನ ಬಲಿಯುವ ಬೆಳೆಯುವ ಮನೋಬುದ್ಧಿಗಳು ತನ್ನ ಮನೋಧರ್ಮಕ್ಕೆ ಅನುಗುಣವಾಗಿ ಸೃಷ್ಟಿ ವಿಕಾಸದ ಹಿಂದೆಯೇ ಒಂದು ಮನೋಧರ್ಮ

ಉದ್ದೇಶ–ಪ್ರಯೋಜನ, ಆ ನಿಟ್ಟಿನಲ್ಲಿ ಪ್ರಗತಿ ಅದಕ್ಕೊಂದು ಈಶ ಸಂಕೇತ ಕಲ್ಪಿಸಿಕೊಂಡು ಅರ್ಥೈಸುತ್ತಲೇ ಬಂದಿವೆ.

ಆದ್ದರಿಂದ ಈ ಉದ್ದೇಶವಾದವು ಸತ್ಯವಲ್ಲ, ಯಥಾರ್ಥವಲ್ಲ. ವಿಶ್ವ ಸೃಷ್ಟಿ ಪೂರ್ಣದಿಂದ ತಿರುಗಿ ಪೂರ್ಣಕ್ಕೆ, ಆನಂದದಿಂದ ಹುಟ್ಟಿ ಮರಳಿ ಆನಂದಕ್ಕೆ ತಲುಪುವದೆಂಬುದರಲ್ಲಿ ಹುರುಳಿಲ್ಲ. ಇದು ಅಮೂರ್ತ ಅಪೂರ್ಣ ದಿಂದ ನಿಧಾನವಾಗಿ ಮೂರ್ತಕ್ಕೆ ಪೂರ್ಣಕ್ಕೆ ಸಾಗುತ್ತಲಿದೆ. ವೇದದ ನಾಸದೀಯ ಸೂಕ್ತವೇ ಸೂಚಿಸುತ್ತದೆ. ಆರಂಭದಲ್ಲಿ ಏನೂ ಇದ್ದಿಲ್ಲ. ಅಥವಾ ಗಾಢ ಗೂಢ ಅಂಧಕಾರ ಒಂದೇ ಇತ್ತು. ಅಲ್ಲಿಂದ ತಮಸ್ಸಿನಿಂದ ಜ್ಯೋತಿಗೆ, ಮೃತ್ಯುವಿನಿಂದ ಅಮೃತ್ವಕ್ಕೆ—"ಅಸತ್"ದಿಂದ "ಸತ್"ಗೆ ಸಾಗುತ್ತಿದೆ– ಅಲ್ಲ, ನಾವು ಅದನ್ನು ಮುಂದೆ ಒಯ್ಯಬೇಕು. ಅದಕ್ಕೆ ನಮ್ಮ ಧೀಶಕ್ತಿಯೇ ಪ್ರಚೋದನೆ ನೀಡಬೇಕು.

ಮಾನವನ ಹಂತದವರೆಗೂ ಸೃಷ್ಟಿಯು ಉತ್ಕ್ರಾಂತಿ ವಿಕಾಸ ಹೇಗೋ ಕೂಡಿಬಂದಿತು. ಅದರ ವಿವರಣೆ ಇಲ್ಲಿ ಬೇಡ. ಮಾನವನ ಪ್ರಗತಿ ವಿಕಾಸ ಅವನ ಕೈಯಲ್ಲಿಯೇ ಇರುತ್ತದೆ.

3

ಈ ಪ್ರಗತಿ ವಿಕಾಸ ಯಾವತ್ತ? ಅದರ ಗುರಿ ಏನು?

ಪ್ರಗತಿಯ ಸೊನ್ನೆ (Lever)

ಮಿಕ್ಕ ಪಶು ವರ್ಗಕ್ಕೂ ಮಾನವನಿಗೂ ಇರುವ ಮುಖ್ಯ ಭೇದವೆಂದರೆ, ಈ ಗುರಿಯ ಕಲ್ಪನೆ, ಆ ಕುರಿತು ಯೋಜನೆ ಸಾಧನೆ. ಪಶು, ಪಕ್ಷಿ, ಪ್ರಾಣಿ ಪ್ರಪಂಚವು ತತ್ಕಾಲೋಪಜೀವಿ. ಅವುಗಳಿಗೆ ಕಂಡಷ್ಟೇ ಕ್ಷಿತಿಜ. ಆಹಾರ–ನಿದ್ದೆ–ಭಯ ಮತ್ತು ಮೈಥುನ ಇವುಗಳಲ್ಲಿಯೇ ಅವು ತೊಡಗಿರುತ್ತವೆ. ನಿನ್ನಿನ ನೆನಪಿಲ್ಲ, ನಾಳಿನ ಚಿಂತೆ ಇಲ್ಲ. ಅವು ಇಂದಿಗಿಂದಿಗೂ ತಾತ್ಕಾಲಿಕ ಪ್ರವೃತ್ತಿಗೆ ತಾತ್ಕಾಲಿಕ ಪ್ರತಿಕ್ರಿಯೆ. ದಡ್ಡಿಯಲ್ಲಿ ಚಳಿಗೆ ಮುದುಡಿಕೊಂಡು ಬಿದ್ದ ಕುರಿಗೆ ಆ ಚಳಿಗೆ ಏನು ಮಾಡಬೇಕೆಂದು ತೋಚುವದಿಲ್ಲ. ಆದರೆ ಮೂಲೆಯಲ್ಲಿ ಮಲಗಿದ ಕುರುಬನಿಗೆ ತೋಚುತ್ತದೆ–ಕುರಿಯ ಉಣ್ಣೆಯಿಂದ ಕಂಬಳಿ ನೆಯ್ದು ಕೊಂಡರೆ ತಾನು ಬೆಚ್ಚಗೆ ಹೊದ್ದುಕೊಂಡಿರಬಹುದು. ಆತ ಹಾಗೆಯೇ ಮಾಡುತ್ತಾನೆ. ಈ ಊಹೆ ಈ ಕನಸುಗಾರಿಕೆ ಇಂದಿನ ಕಲ್ಪನೆಯಿಂದ ನಾಳಿನ ಕಲ್ಪನೆ ಕಟ್ಟುವ ಯೋಚನೆ, ಯೋಜನೆ ಮನುಷ್ಯನ ಮನಸ್ಸಿನ ವಿಶೇಷ ಗುಣ. ಪ್ರಸ್ತುತದಿಂದ ಅಪ್ರಸ್ತುತವನ್ನು ಕಲ್ಪಿಸುವ ಆ ಬಗೆಗೆ ಜಲ್ಪಿಸುವ ಅದನ್ನೇ

ಶಿಲ್ಪಿಸುವ ಶಕ್ತಿ ಮಾನವನ ಧೀಮಂತಿಕೆ. ಅದರಿಂದಲೇ ಸಕಲ ಪುರುಷಾರ್ಥ
ಇತಿಹಾಸ, ಸಂಸ್ಕೃತಿ ಮತ್ತು ನಾಗರಿಕತೆ. ಇವುವೇ ಇದ್ದದ್ದರಿಂದ ಇಲ್ಲದ
ದಕ್ಕೆ ಮಿಡಿಯುವ, ತುಡಿಯುವ ಅದಕ್ಕಾಗಿ ದುಡಿಯುವ ಸಾಹಸ, ಅದು
ಪ್ರಗತಿಯ ಸೊನ್ನೆ (Lever), ಅನುಗೋಲು.

ಈ ಕನಸು, ಪೂರ್ಣತ್ವದ ಕನಸು ಆದರ್ಶವೆನಿಸುವ ಧ್ಯೇಯ. ಈ
ಆದರ್ಶ ತನ್ನಲ್ಲಿಯ ಶಕ್ತಿಗಳ ಹಾಗೂ ವಿಶೇಷ ಗುಣಗಳ ಪರಮ ಹಾಗು
ಉತ್ತಮ ವಿಕಾಸ. ನಿನ್ನೆಗಿಂತ ಇಂದು, ಇಂದಿಗಿಂತ ನಾಳೆ ತಾನು ಪಡೆಯ
ಬೇಕಾದ, ಮುಟ್ಟಬೇಕಾದ, ಗಳಿಸಬೇಕಾದ ಆ ಒಂದು ಎತ್ತರದ ಹಿರಿಯ
ಮಟ್ಟಕ್ಕೆ ಹತ್ತಿರ ಹೋಗಬೇಕೆಂಬ ಹಂಬಲ. ಆ ನಿಟ್ಟಿನಲ್ಲಿ ಹೆಣಗಾಟ
ಇದನ್ನೇ ಮಾನವನ ಬಾಳಿನ ಅಂತಿಮ ಅರ್ಥ ಪರಮ ಅರ್ಥ, ಅದರ ಸಾ
ನೆಯೇ ಪುರುಷಾರ್ಥವೆನ್ನಬಹುದು. ಈ ಅರ್ಥವೇ ಮನುಷ್ಯತ್ವದ ಮೌಲ
ಗಳ ಮೊತ್ತ. ಅದರ ಪ್ರಜ್ಞೆ, ಸತತವಾದ ಅನುಸಂಧಾನ, ಅದರ ಅನುಷ್ಠಾ
ಇದುವೇ ನಮ್ಮ ಅಧ್ಯಾತ್ಮಿಕ ಮತ್ತು ನಿಜವಾದ ಆಧಿದೈವಿಕ ಸಂಪತ್ತು
ಎಂದು ಭಾವಿಸಿದರೆ ಅದನ್ನು ನಾಸ್ತಿಕನು ಆ ಮಟ್ಟಿಗೆ ನಿರಾಕರಿಸಲಾರನು.

ನಿಸರ್ಗದ ಆಗುಹೋಗುಗಳ ಯಾಂತ್ರಿಕತೆಯ ಹಿಂದೆ ಒಂದು ಸರ್ವಜ್ಞ
ತ್ವದ ಸರ್ವ ಕರ್ತೃತ್ವವನ್ನು ಕಲ್ಪಿಸುವದು ಅಬದ್ಧ ಅಸಂಗತಿ, ಕೇವಲ ನಮ
ನಮ್ಮ ಅಪೇಕ್ಷೆಯ ಭ್ರಮೆ. ಆದರೆ ಮಾನವ ಜೀವನಕ್ಕೆ ಒಂದು ಅಂತಿಮ ಗು
ಯಾಗಿ, ಚರಮ ಲಕ್ಷ್ಯವಾಗಿ, ಪರಮ ಆದರ್ಶವಾಗಿ ಪೂರ್ಣತ್ವದ ಸರ್ವಾಂಗೀ
ಉತ್ಕರ್ಷ ಉತ್ತಮತೆಯ ಮೌಲ್ಯಗಳ ಮೊತ್ತವನ್ನು ಕಲ್ಪಿಸಿ, ಅದನ್ನೆ
ನೆನೆದು ನೋಂತು ಸಾಧಿಸಲು ಹೆಣಗುವದು ಜೀವನಕ್ಕೆ ಮೂಲದಲ್ಲಿ ಇಲ್ಲ
ಅರ್ಥವನ್ನು, ಆಕರ್ಷಣೆಯನ್ನು, ಆಸ್ವಾದವನ್ನು ತುಂಬುವ ತತ್ವ. ಈ ದೃ
ಯಿಂದ ಅದನ್ನೇ ದೇವತ್ವವೆಂದು ಒಪ್ಪಿಕೊಂಡಿದ್ದು ಕಂಡುಬರುತ್ತದೆ–ನವ
ಒಟ್ಟೂ ಆಧ್ಯಾತ್ಮಿಕ ಹಾಗೂ ಆಧಿದೈವಿಕ ವಿಚಾರಧಾರೆಯಲ್ಲಿ.

ಇದಕ್ಕಾಗಿ ವಿಶ್ವದ ಆದಿಯಲ್ಲಿ ಜಗತ್ತಿನ ಮೂಲದಲ್ಲಿ ಒಬ್ಬ ವೈಯಕ್ತಿ
ಸೃಷ್ಟಿಕರ್ತನನ್ನು ಸ್ಥಾಪಿಸುವ ಅಗತ್ಯವಿಲ್ಲ. ಈ ಬಗೆಯ ಉದ್ದೇಶ (ಹೇತು
ವಾದವು ನಮ್ಮ ಮನಸ್ಸಿನ ಮಾನವೀಯ ಪ್ರಜ್ಞೆಯ ಆರೋಪಣೆಯ ಒಂ
ರೀತಿ. ಮಾನವೀಕರಣವು—ಅತಿ ಮಾನವತೆಯ ಮಾನವೀಯತೆಯದೇ ರಾ
ಗನ್ನಡಿಯ ಬಿಂಬ. ವಿರಾಟ್‌ಪುರುಷ, ಪುರುಷನದೇ ವಿರಾಟ ಸ್ವರೂಪ. ಅ
ಸತ್ಯವಾದ "ಸತ್ತೆ" ಇಲ್ಲ, ಅಸ್ತಿತ್ವವಿಲ್ಲ, ನಂಬಲರ್ಹವಾದ ನೆಲೆಯೇ ಇಲ್ಲ.

ಮಾನವನು ಬುದ್ಧಿ ಶಕ್ತಿಯಿಂದಾಗಿ, ತನ್ನ ಪ್ರಜ್ಞೆಯ ಅನುಭವದಿಂದಾಗಿ, ವಸ್ತು ವ್ಯಾಪಾರಗಳಲ್ಲಿ, ಸ್ಥಿತಿಗತಿಗಳಲ್ಲಿ ಒಂದು ಸಂಗತಿಯನ್ನು ಕಲ್ಪಿಸಿಕೊಳ್ಳಬಲ್ಲ, ಕ್ರಮವನ್ನೋ ವ್ಯವಸ್ಥೆಯನ್ನೋ ಆರೋಪಿಸಬಲ್ಲ, ಅರಿತುಕೊಳ್ಳಬಲ್ಲ. ಅನೇಕ ಸಲ ಸಮವಾಯ ಸಂಬಂಧವನ್ನೂ ಕಾರ್ಯಕಾರಣ ಸಂಬಂಧವೆಂದು ಭಾವಿಸಿ ಮೋಸ ಹೋಗಬಲ್ಲ. ಅಂದರೆ ಒಂದರ ನಂತರ ಅಥವಾ ಒಂದರ ಸಂಗಡ ಇನ್ನೊಂದು ಒದಗಿ ಬಂದಾಗ, ಇನ್ನೊಂದು ಆ ಒಂದರಿಂದಲೇ ಉಂಟಾಯಿತೆಂದು ಭಾವಿಸುವದು. (ಆ ಎರಡೂ ಉಂಟಾಗಲೂ ಮೂರನೆಯ ಮತ್ತೊಂದು ಕಾರಣವಾಗಿರಬಹುದು.)-ಮುಂಜಾವಿಗೆ ಕೋಳಿ ಕೂಗಿದರೆ, ತನ್ನ ಕೋಳಿ ಕೂಗಿದ್ದರಿಂದಲೇ ಮುಂಜಾವಾಯಿತೆಂದು ಹಳ್ಳಿಯ ಮುದುಕಿ ತಿಳಿದಂತೆ.

"ಆನಂದಮಯ ಈ ಜಗಹೃದಯ"

ಆನಂದಮಯ
ಈ ಜಗ ಹೃದಯ
ಏತರ ಭಯ?–ಮಾಣೋ!
ಸೂರ್ಯೋದಯ
ಚಂದ್ರೋದಯ
ದೇವರ ದಯ!– ಕಾಣೋ!

ಅಂದರು ವರಕವಿ ಕುವೆಂಪು. ಹಾಗೆಯೇ "ಆನಂದ ಸ್ಪಂದದಿಂದ ಹುಟ್ಟಿ ಬಂದ ಸೃಷ್ಟಿಯಿಂದ–" ಎಂದಿದ್ದಾರೆ ವರಕವಿ ಅಂಬಿಕಾತನಯದತ್ತರು ತಮ್ಮ ಒಂದು ಪ್ರಸಿದ್ಧ ಕವನದಲ್ಲಿ. ವಿಶ್ವವು ಆನಂದಮಯ, ಎಲ್ಲ ಜಗತ್‌ಸೃಷ್ಟಿ ಆನಂದದಿಂದ ಹುಟ್ಟುತ್ತದೆ, ಆನಂದದಲ್ಲಿ ಲೀನವಾಗುತ್ತದೆ–ಎಂದಿದೆ ಮಧುರ ರಮ್ಯವಾದ ಉಪನಿಷತ್ತು. ಹೀಗೆ, ಸೂರ್ಯೋದಯ ಚಂದ್ರೋದಯಗಳೆಂಬ ದೇವರ ದಯೆಯನ್ನೂ ಈ ರೀತಿ ಆ ರೂಪದಲ್ಲಿ ಕಾಣುವದು, ಮೆಚ್ಚುವದು ಕೇವಲ ಮಾನವನ–ಅದೂ ಕವಿ ಹೃದಯದ–ಸುಂದರ ಕಲ್ಪನೆ ಅಥವಾ ಭಾವನೆ.

ಇದೊಂದು ಕಾವ್ಯ ಸತ್ಯ– ಭಾವ ಸತ್ಯ – ರಸ ಸತ್ಯ ಹೊರತು ವಸ್ತು ಸತ್ಯವಲ್ಲ. ಹೀಗೆ ಭೌತಿಕ ಸೃಷ್ಟಿಯ ಮೂಲವನ್ನೂ ಮರ್ಮವನ್ನೂ ಏನೋ ದೈವಿಕವಾಗಿ ನೈತಿಕವಾಗಿ ಭಾವನಾಮಯವಾಗಿ ನೋಡುವದು ಕೇವಲ ಮಾನವನ ಪ್ರಜ್ಞೆಗೆ ಸಂಬಂಧಪಟ್ಟ ಸಂಗತಿ ಎಂಬುದನ್ನು ನಾವು ಮರೆಯಬಾರದು. ಜಡದಿಂದ ಚೇತನ, ಚೇತನದಿಂದ ಜೀವ, ಜೀವನದಲ್ಲಿ ಮನಸ್ತತ್ವ ಅಲ್ಲಿಂದ

ಮನುಷ್ಯತ್ವ–ಹೀಗೆ ಸೃಷ್ಟಿಯ ವಿಕಾಸವು ಹಂತಹಂತವಾಗಿ ಬೆಳೆದು ಬಂದಿದೆ ಆದರೆ ಅದೊಂದು ಆದಿಯ ಮೂಲದ ಒಂದು ಈಶ ಸಂಕಲ್ಪದಿಂದಲೋ ಪರಮ ಪ್ರಜ್ಞೆಯ ಯಾವದೋ ಮಹಾ ಚೇತನದ ಪೂರ್ವ ನಿಶ್ಚಿತ ಯೋಜ ಯಿಂದಲೋ ರೂಪಗೊಳ್ಳುತ್ತ ಬಂದಿದೆ ಎಂದು ಭಾವಿಸುವದೆಂದರೆ, ವಿಶ್ವ ಮೂಲದಲ್ಲಿ ಒಂದು ಹಿರಿಯ ಉದ್ದೇಶವನ್ನು, ಅದನ್ನು ಇಟ್ಟುಕೊಂಡ ಒಂದ ವಿರಾಟ್ ವ್ಯಕ್ತಿತ್ವವನ್ನು ನಾವು ಒಪ್ಪಿಕೊಂಡಂತೆ. ಮತ್ತು ಇದು ನಮ ಮಾನವೀಯ ಮನಸ್ಸಿನ ಒಂದು ಮಿಗಿಲಾದ, ವಿಚಿತ್ರವಾದ, ಅದ್ಭುತವಾ ತಾನೇತಾನಾದ ಮಾದರಿಯನ್ನು ಆ ಮೂಲದಲ್ಲಿ ಹಿನ್ನೆಗೆದು ಸ್ಥಾಪಿಸಿದಂತೆ.

ಇಂಥ ಒಂದು ವಿಶ್ವಪ್ರಜ್ಞೆ, ಮಹಾ ಚೇತನ ಅಥವಾ ಪರಮಾತ್ಮ ಸತ್ ತಾನೇತಾನಾಗಿ ಹುಟ್ಟಿತ್ತು. ಅಥವಾ ಎಂದಿನಿಂದಲೂ "ಅಂದು" "ಎಂದು ಗಳಿಗಿಂತಲೂ ಹಿಂದಿನಿಂದ ಇದ್ದದ್ದು ಎಂದು ಭಾವಿಸುವದೇಕೆ? ಅದರ ಬದಲ ಈ ವಿಶ್ವಸೃಷ್ಟಿ ಈ ಜಗತ್ ಪ್ರಪಂಚವೇ ಸ್ವಯಂ ಸಿದ್ಧವಾಗಿ ತಾನೇತಾನಾ ಸನಾತನವಾಗಿ ಅಸ್ತಿತ್ವದಲ್ಲಿ ಇತ್ತು, ಇದೆ, ಇರುವದು ಎಂದೇಕೆ ಭಾವಿ ಬಾರದು? ಹಾಗೆ ಭಾವಿಸಿದರೆ ತಪ್ಪೇನು? ಹಾನಿಯೇನು? ಇದಕ್ಕೆ ಒಂದ ಮಹಾಕಾರಣ, ಆದಿ ಪುರುಷನೋ ಪರಬ್ರಹ್ಮನೋ (ವೋ) ಇರುವದು ಅವಶ ವಿದ್ದರೆ, ಆ ಪರಮ ಪುರುಷ ಪರಬ್ರಹ್ಮ ವಸ್ತುವಿಗೂ ಒಂದು ಕಾರಣವಿರಬೇಕ ದದ್ದು ಅಷ್ಟೇ–ಅದೇ–ಅಗತ್ಯವಲ್ಲವೇ? ಅದಕ್ಕೆ ಆ ಅಗತ್ಯವಿಲ್ಲವೆಂದಾದರೆ ಇದಕ್ಕೂ ಆ ಅದರ ಅಗತ್ಯವೇಕೆ ಬೇಕು?

ಇದೂ ಅಲ್ಲದೆ ಮಾನವನೆಂಬ ಈ ರೆಕ್ಕೆಪುಕ್ಕವಿಲ್ಲದ ದ್ವಿಪಾದ ಪಶು ಈ ವಿಶ್ವವಿಕಾಸ ಕ್ರಮದಲ್ಲಿ ತೀರ ಈಚೆಗೆ ಹುಟ್ಟಿ ಬಂದು ಕಣ್ಣು ತೆರೆದದ್ದು ಆದಕ್ಕೂ ಹಿಂದೆ ಲಕ್ಷಾಂತರ ವರ್ಷಗಳಷ್ಟು ಸುದೀರ್ಘಕಾಲ ಮನಸ್ಸು ಮನೋ ಮಯ ಭಾವನಾ ಕಲ್ಪನಾದಿ ಲಹರಿಗಳು ಅವುಗಳ ಒಂದು ಬಣ್ಣ ಬಣ್ಣ ಕಲ್ಪನಾ ಕನಸಿನ ಲೋಕ ಇದ್ದಿದ್ದಿಲ್ಲ. ಆದರೂ ಆಗಲೂ ಸಾವಿರಾರು ವರ್ ಗಳಿಂದ ಗ್ರಹಗೋಲಗಳು ಹುಟ್ಟಿ, ಈ ಪೃಥ್ವಿಯು ಸೌರಮಂಡಳದಲ್ಲಿ ಬಿ ಯಾಗಿ ಸುತ್ತಲು ಆರಂಭವಾದಂದಿನಿಂದಲೂ ಈ ಸೂರ್ಯ ಚಂದ್ರ ಉ ಯಾಸ್ತಗಳ ಸೌಂದರ್ಯ ವೈಭವಗಳೆಂಬವು ಇದ್ದೇ ಇದ್ದವು. ನಾಳೆ ನಾಲ್ಕೈ ಅಣುಬಾಂಬು ಚೆಲ್ಲಿ, ಈ ಮಾನವ ಕೋಟಿ ಎಲ್ಲ ಪ್ರಚಂಡ ಬೂದಿ ರಾಶಿಯ ಸ್ಮಶಾನ ಭೂಮಿಯಾಗಿಬಿಟ್ಟರೆ ಆ ಮೇಲೂ ಈ ಸೂರ್ಯೋದ ಚಂದ್ರೋದಯಗಳ ದೇವರ ದಯೆ ಈಗಿನಂತೆಯೇ ಹಿಂದಿನಂತೆಯೇ ಎ ನಂತೆಯೇ ಈ ಲೋಕದಲ್ಲಿ ಸವಿಯಲು ಯಾವ ಕಣ್ಣೂ ಇಲ್ಲದಿದ್ದರೂ ತ

ಸೌಂದರ್ಯ ವೈಭವಗಳನ್ನು ತೋರುತ್ತಲೇ ಉಳಿಯುವುದು! ಋತು ಚಕ್ರ ಹೀಗೆಯೇ ಉರುಳುವುದು. ಗುಡುಗು-ಮಿಂಚು-ಮೋಡ-ಮಳೆ-ಕಾಮನ ಬಿಲ್ಲು ಎಲ್ಲವೂ ಎಂದಿನಂತೆಯೇ ಮುಂದುವರಿಯುವವು. ಆಗ ಜಗದ ಹೃದಯದ ಆನಂದ, ಸೃಷ್ಟಿಯ ಮೂಲದ ಆನಂದ ಸ್ಪಂದ ಎಲ್ಲಿ?

ಅಂದರೇನು? ಈ ಆನಂದ ಸೌಂದರ್ಯ, ಕಾರುಣ್ಯ, ಕಲ್ಯಾಣ, ಮಾಧುರ್ಯ ಇವೆಲ್ಲವೂ ಮಾನವನ ಮನಸ್ಸಿನಿಂದ ಉಂಟಾದ ಗುಣ ಮೌಲ್ಯಗಳೆ ಹೊರತು ವಿಶ್ವ ಮೂಲದ ಸ್ಫೂರ್ತಿ ಸ್ಪಂದನವಲ್ಲ. ಮಾನವ ಪ್ರಾಣಿಯು ಹುಟ್ಟಿ ಬಂದು ಅವನ ಮನೋವಿಕಾಸ ಕ್ರಮದಲ್ಲಿ ಇವೆಲ್ಲ ಗುಣ ಮೌಲ್ಯಗಳನ್ನು ಅವನೇ ಹುಟ್ಟಿಸಿಕೊಂಡು, ತನ್ನ ಬದುಕನ್ನು ಬಾಳನ್ನಾಗಿ ಬೆಳಗಿಸಿ, ಅದನ್ನು ಅಭಿವೃದ್ಧಿಗೊಳಿಸಿ ಸಮೃದ್ಧಗೊಳಿಸಹತ್ತಿದನು.

ಮಾನವನ ಉದಯದ ತನಕ ಜೀವದ ವಿಕಾಸವು ಜೀವನ ಕಲಹದ ಒಂದು ಕುರುಡು ಕರ್ಕಶ ಹೋರಾಟದ ಯೋಗಾಯೋಗದ ಫಲಿತವಾದ ಉತ್ಕ್ರಾಂತಿ. ವಿಕಾಸವು ಜೀವ-ಪ್ರಾಣಿ-ಪಕ್ಷಿ-ಪಶುಗಳ ಹುಟ್ಟು-ಮಾನವನಿಂದ ಮುಂದೆ ಅವನಲ್ಲಿಯ ಮನಸ್ತತ್ವದ ಪ್ರಜ್ಞಾಶಕ್ತಿಯ ಉದಯದಿಂದಾಗಿ ಉದ್ದೇಶಪೂರ್ಣ ವಾಯಿತು. ಆತ ತನ್ನ ಬದುಕಿನ ಆಗುಹೋಗುಗಳಿಗೆ ತಾನೇ ಪ್ರಭುವಾದ, ಹೊಣೆಯಾದ. ಅವನ ಪೌರುಷವೇ ಅವನ ದೈವವಾಯಿತು, ಸಹೇತುಕಶಕ್ತಿ ವಿನಿಯೋಗವೇ ಕರ್ಮವಾಯಿತು. ಅದೇ "ಭೂತ – ಭಾವ -- ಉದ್ಭವಕರ ವಿ-ಸರ್ಗವಾಯಿತು. ಇತಿಹಾಸ ಸಂಸ್ಕೃತಿ ನಾಗರಿಕತೆ ಮಾನವನ ಪುರುಷಾರ್ಥ ವಾಯಿತು.

. ಇದ್ದುದನ್ನು ಅರಿತು ಅದರಲ್ಲಿ ತೃಪ್ತಿ ಪಟ್ಟಿರದೆ, ಇಲ್ಲದಿದ್ದುದಕ್ಕೆ ಇರಬಹು ದಾದುದಕ್ಕೆ ದುಡಿಯುವದು ನಮ್ಮ ನಿಮ್ಮ ಅಂತಃಪ್ರೇರಣೆ ಆಯಿತು. ಊಹೆ, ಕಲ್ಪನೆ, ಚಿಂತನೆ, ಸ್ಮರಣೆ, ಸ್ಫುರಣ ಇವೆಲ್ಲ ಮನೋಗುಣಗಳು ಬಲಗೊಂಡವು, ಪುಟಗೊಂಡವು. ವೇದಾಂತದ ಪರಿಭಾಷೆಯಲ್ಲಿ ಹೇಳುವದಾದರೆ, ಅನ್ನಮಯ ವಾದ ಕೋಶದಿಂದ ಭೌತಿಕ ಸತ್ತೆಯಿಂದ ಪ್ರಾಣಮಯ ಅದರಿಂದ ಮನೋ ಮಯದ ಕೋಶಕ್ಕೆ ಜೀವದ ವಿಕಾಸವು ಮುಂದರಿಯಿತು. ಅಲ್ಲಿಂದ ಈಗ ವಿಜ್ಞಾನಮಯಕ್ಕೂ ಆನಂದಮಯಕ್ಕೂ ಕೈಚಾಚಿದೆ. ಅತ್ತ ಅಂತರಿಕ್ಷದ ಶೋಧ, ಇತ್ತ ಅಂತರಂಗದ ಶೋಧ ಎರಡೂ ಕೋಶಗಳ ಬೀಗ ಮುದ್ರೆಯನ್ನು ಮಾನ ವನ ಮನಸ್ಸು ಒಡೆದು ಭಾಗ್ಯದ ಬಾಗಿಲನ್ನು ತೆರೆದಿದೆ. ಅದೆಲ್ಲದರ ವಿವರ ವಿವರಣೆ ಇಲ್ಲಿ ಅನಗತ್ಯ.

ಇಲ್ಲಿ ನಮಗೆ ಅಗತ್ಯವಾದುದೆಂದರೆ, ದೇವರ ಕಲ್ಪನೆ ತಲೆದೋರಿದ್ದು ಮಾನವನ ಮನೋಮಯವಾದ ಹಾಗೂ ವಿಜ್ಞಾನಮಯ ಕೋಶಗಳ ಎಲ್ಲೆ ನಡುವೆ, ಆದರ್ಶಗಳ ಹಂಬಲ, ಮೌಲ್ಯಗಳ ಮನನಗಳ ಹಂತದಲ್ಲಿ. ಒಂದೆಡೆ ಅರಳುತ್ತಿರುವ ಮನಸ್ಸು ಈ ವಿಶ್ವದ ಅದ್ಭುತಕ್ಕೆ, ಅಪೂರ್ವಕ್ಕೆ, ಈ ನಿಗೂ ರಹಸ್ಯಕ್ಕೆ, ಪ್ರಚಂಡ ಶಕ್ತಿಗಳಿಗೆ, ತಾಂಡವಕ್ಕೆ, ಭಯ ಚಕಿತವಾಗಿ ವಿಚಿತ್ರಕ್ಕೆ ಮಣಿಯುತ್ತ ಮಂಕುತಿಮ್ಮನಾದ ಮಾನವ, ಇನ್ನೊಂದೆಡೆಗೆ ತನ ಬದುಕನ್ನು ಹಸನುಗೊಳಿಸುವ, ಹದಗೊಳಿಸುವ, ಉತ್ತರೋತ್ತರ ಉತ್ತ ಗೊಳಿಸುವ ಗುಣ ಮೌಲ್ಯಗಳನ್ನು ಕಲ್ಪಿಸಿ, ಅವುಗಳ ಕನಸು ನನಸುಗಳನ ಧ್ಯಾನಿಸಿ, ಚಿಂತಿಸಿ ಅವುಗಳ ಮೊತ್ತವನ್ನು ನಿರಾಕಾರವಾಗಿಯೋ ಸಾಕಾ ವಾಗಿಯೋ ರೂಪಿಸಿಕೊಂಡು ಒಂದು ದೇವತ್ವವನ್ನು ಕಟ್ಟಿಕೊಂಡನು.

4

ಹಿಮಾಲಯದ ಶಿಖರವನ್ನೇರುವವರ ಒಂದು ತಂತ್ರವಿದೆ. ಅವರು ಹಿ ಮುಚ್ಚಿದ ಆ ಬಂಡೆಗಳ ಕಡಿದಾದ ಮಗ್ಗುಲಲ್ಲಿ ಎತ್ತರ ಎತ್ತರಕ್ಕೆ ತಮ್ಮ ಕೊಡಲಿಯಿಂದ ಹೆಜ್ಜೆ ಊರಲು ತಗ್ಗು ತೋಡಿಕೊಳ್ಳುತ್ತಾರೆ. ಅವುಗಳ ಹೆಜ್ಜೆ ಇಟ್ಟು ಮೇಲೆ ಮೇಲೆ ಏರುತ್ತ ಸಾಗುತ್ತಾರೆ. ಏರಿದಂತೆ ಮುಂದಿ ಮೆಟ್ಟಿಲು ಅವರ ಗುರಿ. ಆ ಗುರಿ ಅವರೇ ಮಾಡಿಕೊಂಡಿದ್ದು.

ಮನುಷ್ಯನೂ ಈ ಕಾಲದ ಬೆಟ್ಟವನ್ನೇರಿ ಮುಂದುವರಿಯುವಾಗಲ ಹಾಗೆಯೇ ಮಾಡುತ್ತಾನೆ. ತನ್ನ ಮನೋರಥದ ಗುರಿಯನ್ನು ತಾನೇ ಮುನ್ನೋ ದಲ್ಲಿ ಇಟ್ಟುಕೊಂಡು, ಅದರತ್ತ ತನ್ನ ಮುನ್ ಓಟದಂತೆ ನಡೆಯಿಸುತ್ತಾನ ಅವನ ವ್ಯಕ್ತಿತ್ವದ ವಿಕಾಸದ ಆ ಕೊನೆಯ ಗುರಿ ತನ್ನ ಬಾಳಿನಲ್ಲಿ ಸಾಧಿಸಬೇಕಾ ಕೊನೆಯ ಸಿದ್ಧಿ ಪೂರ್ಣತ್ವ. ಅದರ ಒಂದು ಸುಸ್ಪಷ್ಟ ನಿರ್ದಿಷ್ಟ ಕಲ್ಪನೆಯೆ ಪ್ರತಿಮೆಯೇ ಅವನು ಧ್ಯಾನಿಸುವ ದೇವತ್ವ, ದೇವರು ಈಶ್ವರ. ಅವ ಐಶ್ವರ್ಯ ಷಡ್ಗುಣೈಶ್ವರ್ಯ. ಆರು ಗುಣಗಳಿಂದ ಈ ಐಶ್ವರ್ಯದ ಸಂಪತ್ತು ಈ ಆರು ಗುಣಗಳಾವವು? ಒಂದು ಲೆಕ್ಕದಲ್ಲಿ ಅವು ಜ್ಞಾನ, ವೈರಾಗ್ಯ ಐಶ್ವರ್ಯ, (ಪ್ರಭುತ್ವ) ಯಶಸ್ಸು, ಕೀರ್ತಿ ಮತ್ತು ಔದಾರ್ಯ. ಇನ್ನೊಂದ ಲೆಕ್ಕದಲ್ಲಿ ಅವು ಜ್ಞಾನ, ಐಶ್ವರ್ಯ, ಶಕ್ತಿ, ಬಲ, ವೀರ್ಯ ಮತ್ತು ತೇಜಸ್ಸು ಮೊದಲನೆಯ ಲೆಕ್ಕವೇ ಶುದ್ಧವೆಂದು ನನ್ನ ಅಭಿಪ್ರಾಯ. ಏಕೆಂದರೆ ಶಕ್ತಿ ಬಲ, ವೀರ್ಯ ಈ ಮೂರೂ ಹೆಚ್ಚು ಕಡಿಮೆ ಒಂದೇ ಅರ್ಥದವು. ತೇಜಸ್ಸು ಅವನ್ನು ವ್ಯಾಪಿಸುವಂತಿದೆ. ಆದರೆ ಮೊದಲನೆಯ ಲೆಕ್ಕದಲ್ಲಿ ಸಾಕಪ

ವೈವಿಧ್ಯ ವೈಶಿಷ್ಟ್ಯಗಳಿರುತ್ತವೆ. ಅವೆಲ್ಲ ಒಂದು ಪರಿಪೂರ್ಣ ವ್ಯಕ್ತಿತ್ವಕ್ಕೆ ಅವಶ್ಯ ವಿರುವ ವಿಭೂತಿಗಳು. ಭಗವದ್ಗೀತೆಯಲ್ಲಿಯೂ ಈ ದೇವತ್ವದ ವ್ಯಾಖ್ಯೆಯು ಪರ್ಯಾಯವಾಗಿ ಬರುತ್ತದೆ. "ಯಾವ ಯಾವದು ವಿಭೂತಿಮಂತವಾದ ಸತ್ವವೋ ಶ್ರೀಮಂತವೋ ಊರ್ಜಿತವೋ ಅದು ನನ್ನ ತೇಜಸ್ಸು" ಎಂದಿದ್ದಾನೆ- ಭಗವಂತನ ಬಾಯಿಯಿಂದ ಭಾತಕಾರ (ಕೃಷ್ಣ ದ್ವೈಪಾಯನ)ನು. ಈ ವಿಭೂತಿಗಳು ಊರ್ಜಿತವಾಗಿ ತೇಜೋಯುಕ್ತವಾಗಿ ಶ್ರೀಮಂತವಾಗಿ ಪ್ರಕಟ ವಾದಲ್ಲಿ, ದಿವ್ಯತ್ವ–ದೇವತ್ವ ಭಗವತ್‌ತತ್ವ ಎಂಬುದು ಇದರಿಂದ ಸೂಚಿತ ವಾಗುವದಿಲ್ಲವೇ? ದೈವೀ ಸಂಪತ್ತಿ ಎಂಬುದರ ವಿವರಣೆಯಲ್ಲಿಯೂ ಅದೇ ಗೀತಾ ಗ್ರಂಥದಲ್ಲಿ ಬರುವ ಗುಣಗಳು ಸಾತ್ವಿಕ ಮಾನವೀ ಜೀವನದ ಮೌಲ್ಯ ಗಳನ್ನೇ ಎಣಿಸಿ ಹೇಳುತ್ತದೆ.

ಸತ್ವದಂತೆ ಶ್ರದ್ಧೆ–"ಗಂಡು ಮಾಸ್ತಿ"

ಅವರವರ ಸತ್ವದಂತೆ ಅವರವರ ಶ್ರದ್ಧೆ. ಯಾರ ಶ್ರದ್ಧೆ ಹೇಗೋ ಹಾಗೆಯೇ ಅವರು ಆಗುತ್ತಾರೆ, ಸಿದ್ಧಿ ಪಡೆಯುತ್ತಾರೆ ಎಂಬ ಒಂದು ಮಾತು ಅದೇ ಗೀತೆಯಲ್ಲಿ ಬರುತ್ತದೆ. ಅಂದರೆ, ತಾನು ಬಾಳಿನಲ್ಲಿ ನಿಲುಕಬೇಕೆಂಬ ಗುಣ ಮೌಲ್ಯಗಳ ಮೊತ್ತವನ್ನೇ ಚಿಂತಿಸಿ ಹಂಬಲಿಸಿ ಆದರ ಸಕ್ರಿಯ (ಆಚರ ಣೆಯ) ಸಾಧನೆಯಲ್ಲಿ ತೊಡಗಿದ ವ್ಯಕ್ತಿಯ ವ್ಯಕ್ತಿತ್ವ ಕೊನೆಗೂ ಆ ಗುಣವಂತಿಕೆ ಯನ್ನೂ ತನ್ನದಾಗಿಸಿಕೊಳ್ಳುತ್ತದೆ. ಈ ಹಂಬಲ ಈ ಚಿಂತನೆ ಸುಗಮವಾಗು ವಂತೆ ಆ ವ್ಯಕ್ತಿ ತನ್ನ ಮನೋಬಲಕ್ಕೆ ಅನುಗುಣವಾಗಿ ಅದನ್ನು ವಿಶಿಷ್ಟ ಮೂರ್ತಿಯಾಗಿ ಕಲ್ಪಿಸಬಹುದು–ಕಾಣಬಹುದು. ಮುಂದೆ ದುರ್ಬಲ ಮನಸ್ಸು ಗಳು ಈ ಸಾಧನೆಯನ್ನು ಸುಲಭಗೊಳಿಸಿಕೊಳ್ಳಲು ಸಲೀಸಾಗಿ ತತ್ವವನ್ನು ಮರೆತುಬಿಟ್ಟು ಅದರ ಮೂರ್ತಿಯನ್ನೇ ದೇವರೆಂದು ನಂಬಿಕೊಂಡು, ಆಚರಣೆಯ ಬದಲು ಆರಾಧನೆಯ ಅಗ್ಗದ ಅಥವಾ ಆಡಂಬರದ ದಾರಿಯನ್ನು ಹಿಡಿಯುವಂತೆ ಆಯಿತು. (ಬಳ್ಳಿ ಗುರುಡರ ಜನ ಮರುಳು ಜಾತ್ರೆಯಲ್ಲಿ.)

ಇದಕ್ಕೆ ಒಂದು ಸಣ್ಣ ಉದಾಹರಣೆ. ಹಿಂದೆ ಗಂಡನ ಶವದೊಂದಿಗೆ ಹೆಂಡತಿ ಸಹಗಮನ ಮಾಡುವ ಒಂದು ವಾಡಿಕೆಯಿತ್ತು. ಇಂಥ ಸಾಧ್ವಿ "ಸತಿ" ಯವಳನ್ನು "ಮಹಾಸತಿ" ಎಂದು ಒಂದು ಶಿಲಾ ಪ್ರತಿಮೆಯಲ್ಲಿ ನಿಲ್ಲಿಸಿ, ಊರಿ ನವರೆಲ್ಲ ಪೂಜೆ ಮಾಡುವ ಸಂಪ್ರದಾಯ ಸಾರ್ವತ್ರಿಕವಾಯಿತು. ಆ ಮಹಾ ಸತಿಯ ಪಾತಿವ್ರತ್ಯದ ನಿಷ್ಠುರ ನಿಷ್ಠೆ ತಮ್ಮ ಬಾಳಿನಲ್ಲಿ ಸಾಧಿಸುವದಕ್ಕಿಂತ ಆ ಮಾಸ್ತಿಗಲ್ಲಿಗೆ "ಉಪಾರ" ಸಲ್ಲಿಸುವದೇ ಸಲೀಸಾದ ಸೇವೆ ಆಯಿತು. ಅದೇ

ರೀತಿ ನಮ್ಮ ಊರಿನ ಹತ್ತಿರದ ಒಂದು ಹಳ್ಳಿಯಲ್ಲಿ ಒಂದು "ಮಾಸ್ತಿ" ಅನಾ
ಕಾಲದಿಂದಲೂ ಹೀಗೆ ಹಳ್ಳಿಯ ಅನೇಕ ಭಜಕ ಕುಟುಂಬಗಳ "ಉಪಾ
ಹರಕೆ ಪೂಜೆ ಪಡೆಯುತ್ತ ಬಂದಿದೆ. ಕೆಲವು ವರ್ಷಗಳ ಹಿಂದೆ ನನ್ನ ವಿದ್ವಾ
ಮಿತ್ರರಾದ ಪ್ರಾಧ್ಯಾಪಕರೊಬ್ಬರು, ಶಿಲಾ ಲೇಖಗಳಲ್ಲಿ ಆಸಕ್ತಿ ಉಳ್ಳವರು
ಮಾಸ್ತಿಕಲ್ಲಿನ ಮೇಲೆ ಏನೋ ಹಳೆಯ ಬರಹವಿರುವದನ್ನು ಊಹಿಸಿ, ಅದ
ಅಚ್ಚು ಕರಡು ಮಾಡಿಕೊಳ್ಳಲು ಹೊರಟರು. ವರ್ಷಗಟ್ಟಲೆ ಭಜಕರ ಸೇ
ಪಡೆದು, ಸಿಂಧೂರ-ಕುಂಕುಮ ಮುಸಿ ಎಣ್ಣೆ ಜಿಡ್ಡುಗಳಿಂದ ಮುಚ್ಚಿಹೋದ
ಉಬ್ಬು ಶಿಲ್ಪವನ್ನು ತಾಸುಗಟ್ಟಲೆ ತಿಕ್ಕಿ ತೊಳೆದು ಸ್ವಚ್ಛ ಮಾಡಿದಾ
ಕಂಡಿದ್ದೇನು?

ಆ ಉಬ್ಬು ಶಿಲ್ಪ ಒಂದು ಹೆಣ್ಣು ವಿಗ್ರಹವೇ ಅಲ್ಲ. ಅದೊಂದು ಗಡ್ಡ
ಬೈರಾಗಿಯ ವಿಗ್ರಹ! ಅದು ಮಹಾಸತಿಯೇ ಅಲ್ಲ! ಆದಾಗ್ಯೂ ಆ ಹಿಂದ
ಅನಂತರವೂ ಆ ಮಾಸ್ತಿಕಲ್ಲು ಭಜಕ ಕುಟುಂಬಗಳ ಹರಕೆ ಹೊಂದುತ್ತ ಬಂದ
ಅವರ ಬಯಕೆ ಸಲಿಸುತ್ತ ಬಂದು ಪೂಜಾಸ್ಥಾನವಾಗಿ ನಿರಾತಂಕವಾಗಿ ಮುಂ
ವರಿದಿದೆ, ಪೂಜ್ಯ ಮಾಸ್ತಿಯವರ "ಕತ್ತೆಯ ಸಮಾಧಿ"ಯಂತೆ! ಕೊನೆಗ
ಶ್ರದ್ಧೆಯಂತೆ ಸಿದ್ಧಿ! ನಂಬಿದಂತೆ ನಾವು!

ಹೀಗೆ ಟೆಲಿಯೋಲೋಜಿ (ಹೇತುವಾದ) ವಿಶ್ವದ ಆಗುಹೋಗು
ಹಿಂದೆ, ಸೃಷ್ಟಿಯ ಹುಟ್ಟು ಬೆಳವಣಿಗೆಗಳ ಹಿಂದೆ ಒಂದು ಉದ್ದೇಶವನ
ಒಂದು ಯೋಜನೆಯನ್ನೂ ನೋಡುತ್ತದೆ. ಅದಕ್ಕೆ ಆಧಾರವಾಗಿ ಒಂ
ಕರ್ತೃತ್ವವನ್ನೂ ಒಂದು ನೇತೃತ್ವವನ್ನೂ ಕಾಣುತ್ತದೆ. "ಈ ವಿ
ಪ್ರಪಂಚ ಆ ಕರ್ತಾರನ ಕಮ್ಮಟ. ಈ ಜೀವ ಜಾತಿಯೆಲ್ಲ ಆ ಸ್ವಾಮಿ
ಕೈಯ ಗೊಂಬೆಯಾಟ. ಆತ ಲೀಲಾ ನಾಟಕ ಸೂತ್ರಧಾರ. ನಮ್ಮನ್ನು ಕ
ದಾಡಿಸುವ ಮಾಯಾ ಮಹಿಮ. ಆ ವಿರಾಟ್‌ಪುರುಷನ ಸಂಕೇತಕ್ಕೆ ಈ ಜಗತ್ತಿ
ಚಕ್ರ, ಜೀವನದ ಚಕ್ರ ನಡೆಯುತ್ತಿರುತ್ತದೆ. ನಾವೆಲ್ಲ ಜೀವಿಗಳು ಕೇವ
ಲೀಲಾ ಮಾತ್ರರು."— ಈ ರೀತಿಯಾಗಿ ಈ ಉದ್ದೇಶವಾದವು ಜಗತ್ತಿ
ಆದಿ ಕಾರಣವನ್ನು ಆದಿ ಪುರುಷನನ್ನಾಗಿ ಮಾಡಿ, ಅವನಲ್ಲಿ ಗುಣಗಳನ್ನೂ ಆಕ
ವನ್ನೂ ಆರೋಪಿಸಿ, ಒಂದು ನಿಗ್ರಹಾನುಗ್ರಹ ಶಕ್ತಿಯುಳ್ಳ ಭಗವಂತನೆಂಬುದ
ರೂಪಿಸುತ್ತದೆ.

ಮಾನವ ಸಮಾಜದ ಮನಸ್ಸಿನ ವಿಕಾಸ, ಹಂತ ಹಂತವಾಗಿ ಅದ
ಅನುಭವದ ವಿಶಾಲತೆಗೆ, ವಿಶೇಷತೆಗೆ ಹಾಗೂ ವಿವಿಧತೆಗೆ ಹೊಂದಿಕೊಂ
ಆಗುತ್ತ ಸಾಗುತ್ತ ಬಂದಿದೆ. ಆದರೆ ಅದರ ಮೂಲದ ಆ ಮನಸ್ಸಿಗೆ ಇ

ಪಶು ಪಕ್ಷಿ, ಪ್ರಾಣಿ, ಕ್ರಿಮಿ ಕೀಟ, ಜೀವ ಜಂತುಗಳಿಂದ ಭಿನ್ನವಾಗಿ ತನ್ನ ಪ್ರತ್ಯೇಕತೆಯ ಹಾಗೂ ಅಸಹಾಯಕತೆಯ ಅರಿವು ಅನಿಸಿಕೆ ಆಳವಾಗಿ ತಳವೂರಿದೆ. ಉಳಿದೆಲ್ಲ ಪ್ರಾಣಿಸೃಷ್ಟಿಯದು ಪ್ರಕೃತಿ ಧರ್ಮಕ್ಕೆ ನಿಸರ್ಗದ ಕ್ರಮಕ್ಕೆ ಪೂರ್ತಿ ಒಳಪಟ್ಟ ಬದುಕು. ಆದರೆ ಮಾನವನೊಬ್ಬನೇ ಅದರಿಂದ ಸಿಡಿದು ಸ್ವತಂತ್ರ (ಅತಂತ್ರ) ವಾಗಿ ನಿಲ್ಲುವ ಸಂದರ್ಭವನ್ನು ಪಡೆದ ಪ್ರಾಣಿ. ಜೀವಿಯು ಪ್ರಾಣಿಯಾಗಿ ಸತ್ವ ಪಡೆದು ಆತ್ಮವಾಗಿ ವಿಕಾಸಗೊಳ್ಳುತ್ತಿರುವ ವ್ಯಕ್ತಿ ವಿಶೇಷ.

ಈ ಸ್ವತಂತ್ರ ಅಸಹಾಯ ಪ್ರಜ್ಞೆಯಿಂದ ಆತ ವಿಶ್ವಶಕ್ತಿಗೆ ಪ್ರತಿಕ್ರಿಯೆ ತೋರಿಸುವ ರೀತಿ ಎರಡು. ಒಂದು, ತನಗಿಂತ ಅತ್ಯಂತ ಹಿರಿದಾದ ಮಿಗಿಲಾದ ಆ ಶಕ್ತಿಯೊಂದಿಗೆ ಒಂದಾಗಲು ಅದನ್ನು ಓಲೈಸಲು, ಒಲಿಸಿಕೊಳ್ಳಲು ಅದರ ಕೈಯಲ್ಲಿ ಅದರ ಕೈವಾಡದಂತೆ ಆಡಲು, ಯತ್ನಿಸುವದು. ಇದರ ಪರಿಷ್ಕೃತ ರೂಪವೇ ದೈವೀ ಭಾವನೆ, ಭಕ್ತಿ, ಶ್ರದ್ಧೆ, ಪ್ರಪತ್ತಿ, ಈಶ್ವರ ಶರಣಾಗತಿ. ಇನ್ನೊಂದು ಈ ವಿಶ್ವಶಕ್ತಿಯ ಸೃಷ್ಟಿಕ್ರಮದ ರಹಸ್ಯಗಳನ್ನು, ರೀತಿ ನೀತಿಗಳನ್ನು ಅರಿತು, ಅರಗಿಸಿಕೊಂಡು ಅವನ್ನು ತನ್ನ ಪ್ರಜ್ಞೆಯ ಬುದ್ಧಿಯ ಅಂಕೆಯಲ್ಲಿ ತಂದುಕೊಂಡು, ಬದುಕನ್ನು ಆಳಲು ಯತ್ನಿಸುವದು. ಇದು ಜ್ಞಾನ ವಿಜ್ಞಾನದ ಹಾದಿ. ಅಲ್ಲಿ ಮನುಷ್ಯ ದಾಸಾನುದಾಸನಾಗುತ್ತಾನೆ. ಇಲ್ಲಿ ಪ್ರಭುವಾಗುತ್ತಾನೆ. ಆ ನಿಟ್ಟಿನಲ್ಲಿ ಪರಮಾರ್ಥ, ಈ ನಿಟ್ಟಿನಲ್ಲಿ ಪುರುಷಾರ್ಥ. ಅಲ್ಲಿ ಪ್ರಾರ್ಥನೆ, ಇಲ್ಲಿ ಪ್ರಯೋಗ ಪರೀಕ್ಷಣೆ. ಅಲ್ಲಿ ಆರಾಧನೆ, ಸಿದ್ಧಿ-ಸಾಧನೆ, ಇಲ್ಲಿ ಸತ್ಯ ಸಂಶೋಧನೆ. ಅದು ಶ್ರದ್ಧೆಯ ಕ್ಷೇತ್ರ, ಇದು ಬುದ್ಧಿಯ ಕ್ಷೇತ್ರ. ಅದು ಉಪಾಸನೆಯ ದಾರಿ, ಇದು ಜಿಜ್ಞಾಸೆ-ವಿಚಿಕಿತ್ಸೆ ಪ್ರಯೋಗ ಪ್ರಯತ್ನಗಳ ದಾರಿ. ಆ ದಾರಿಯಿಂದ ಈ ದಾರಿಗೆ ಬರಲಿಕ್ಕೂ ಒಂದು ಮನಃ ಸಂಸ್ಕಾರ ಬುದ್ಧಿಯ ಪರಿಣತಿ ಬೇಕು. ಆ ಹದವನ್ನು ಪಳಗಿಸಲು ಅನುಭವದ, ಅದರ ಪರಿಸರದ ಒಂದು ಹೊಂದಾಣಿಕೆ ಪರಿಷ್ಕಾರಬೇಕು.

ದೈವಿಕತೆಯ ಹಂತಗಳು

ಆದಿ ಮಾನವರಲ್ಲಿ ಬುದ್ಧಿಶಕ್ತಿಗಿಂತ ಭಾವಾವೇಶವೇ ಬಲವಾಗಿತ್ತು. ಅಂದಿನ ಯುಗ ಪರಿವರ್ತನೆಯಲ್ಲಿ ಅವನ ಚಿತ್ತವೃತ್ತಿ ಒಪ್ಪಿ ಓಲೈಸಿಕೊಂಡು ಬಂದ ದೈವಿಕತೆಯು ಪ್ರಪಂಚದೆಲ್ಲೆಡೆಗೂ ಈ ಮುಂದಿನ ಹಂತಗಳನ್ನು ಹಾದು ಬಂದಿದೆ. ಅದನ್ನು ಸ್ಥೂಲವಾಗಿ ಇಲ್ಲಿ ನಮೂದಿಸಿದೆ.

ಪ್ರಾಣ ದೇವತ್ವ (Animism)

ಜಡ ನಿರ್ಜೀವ ವಸ್ತುಗಳಲ್ಲಿ, ಸಂಗತಿಗಳಲ್ಲಿ ಜೀವಸತ್ವವನ್ನು ಆರೋಪಿಸುವದು. ಗಿಡ, ಮರ, ಗವಿ, ಗುಡ್ಡ, ಕುಂಡ, ಕಲ್ಲುಬಂಡೆಗಳಲ್ಲಿ ದೇವತ್ವವನ್ನು ಭಾವಿಸಿ ಪೂಜಿಸುವುದು.

ಪ್ರಾಣಿ ದೇವತ್ವ (Totemism)

ಬುಡಕಟ್ಟಿನ ಹಳೆಯ ಬಣಗಳು, ಕುಲಗಳು ವಂಶಪರಂಪರೆಯಿಂದ ಕೆಲವು ಪ್ರತೀಕಗಳನ್ನು ತಮ್ಮ ಮೂಲದ ದೈವತ್ವವಾಗಿ ಭಾವಿಸಿ, ಒಪ್ಪಿ ಪೂಜಿಸುತ್ತ ಬರುವ ಶ್ರದ್ಧೆ. ಅನೇಕ ಸಲ ಆ ಕುಲಕ್ಕೆ ಬುಡಕಟ್ಟಿನ ಬಣಕ್ಕೆ ಈ ಪ್ರತೀಕದ ಹೆಸರೇ ಬಂದಿರುತ್ತದೆ. ಇಂಥವರ "ಬಳಿ" ಎಂದು. ಬಳಿಯಿಂದಲೇ "ಬಳಗ" "ಬಳರಿ-ಬಳಾರಿ" ಎಂದರೆ ಒಂದು ಕ್ಷುದ್ರ ದೇವತೆ. ಈ ಪ್ರತೀಕಕ್ಕೆ "ಟೊಟೆಂ" (Totem) ಎನ್ನುತ್ತಾರೆ—ಪಾಶ್ಚಾತ್ಯ ವಂಶಶಾಸ್ತ್ರಜ್ಞರು. ಇದು ಅಶ್ವತ್ಥ, ಔದುಂಬರ, ವಟ, ತುಳಸಿಯಂಥ ಸಸ್ಯವಿರಬಹುದು. ಹಾವು, ಗೋವು, ಹುಲಿ, ನರಿಯಂಥ ಪಶು, ಗರುಡ, ಹಂಸ, ಗಿಳಿ, ಪಾರಿವಾಳದಂಥ ಪಕ್ಷಿ (ಗುಜರಾತದಲ್ಲಿ ಹೆಗ್ಗಣಗಳಿಗೇ ಒಂದು ಮಂದಿರವಿದೆ) ಇರಬಹುದು.

ಇಲ್ಲಿ ಕೃಷ್ಣನು ಗೋಕುಲದಲ್ಲಿ ಇಂದ್ರನ ಪೂಜೆಯನ್ನು ಪ್ರತಿಬಂಧಿಸಿ (ಪ್ರತಿಭಟಿಸಿ), ಗೋವರ್ಧನ ಪರ್ವತಕ್ಕೆ ಪೂಜೆ ಸಲ್ಲಿಸಲು ಗೋಪ-ಗೋಪಿಯರನ್ನು ಅಣಿಗೊಳಿಸಿದ ಕಥೆ ಭಾಗವತದಲ್ಲಿ (ಹರಿವಂಶದಲ್ಲಿ?) ಬರುತ್ತದೆ. ಆ ಪೂಜೆ ಏನು, ಈ ಪೂಜೆ ಏನು? ಎಂಬ ಪ್ರಶ್ನೆ ಇಲ್ಲಿ ಸಲ್ಲ. ಅವ್ಯಕ್ತ ಸಂದಿಗ್ಧ ವೈದಿಕ ದೇವತೆಯ ಪೂಜೆಯನ್ನು ಧಿಃಕರಿಸಿ ತಮ್ಮ ಬದುಕಿಗೆ ಹತ್ತಿರವಾದ ನಿತ್ಯದ ಬಳಕೆಗೆ ಕೇಂದ್ರವಾದ ಗೋವುಗಳ ಹಾಗೂ ಅವುಗಳ ಬಾಳಿನ ಆಸರೆ ಆದ ಗೋವರ್ಧನದ ಪೂಜೆಯನ್ನು ಗೋಪಾಲ ಕೃಷ್ಣನು ಇಂದ್ರನ ಪ್ರಕೋಪವನ್ನು ಲೆಕ್ಕಿಸದೆ, ಪುರಸ್ಕರಿಸಿದ್ದೂ ಇಲ್ಲಿ ಗಮನಾರ್ಹ ಸಂಗತಿ (ಶೇಷಶಾಯಿ ವಿಷ್ಣುವಿನ ಅವತಾರವೆನಿಸಿಕೊಂಡ ಆತನು ನಾಗ ಪೂಜೆಯನ್ನು ಪುರಸ್ಕರಿಸಲಿಲ್ಲ. ಕಾಲಿಯ ಕಾಳಿಂಗನ ತಲೆ ಮೆಟ್ಟಿ ಕುಣಿದಾಡಿದನು!)

ಪ್ರತೀಕ ದೇವತ್ವ (Fetishism)

ಬುನಾದಿಯಿಂದ ಇಂದಿನ ತನಕವೂ ಒಂದಲ್ಲ ಒಂದು ರೂಪದಲ್ಲಿ ಪ್ರತೀಕ ದೇವತ್ವ ನಡೆದು ಬಂದಿದೆ. ಇದು ನಿರ್ಜೀವ ಜಡ ವಸ್ತುಗಳನ್ನೇ ದೇವರೆಂದು

ಆರಾಧಿಸುವದು ಆದಿ ಮಾನವ ಕಾಡುಮನುಷ್ಯ,ಹಳ್ಳಿಯ ಹೈದನು ಮಾತ್ರವಲ್ಲ, ಆಧುನಿಕನೆಂಬ ಸುಧಾರಿಸಿದವನೆಂಬ ಶಿಷ್ಟ ಪ್ರತಿಷ್ಠಿತ ಸಂಭಾವಿತನೂ ಒಂದಲ್ಲ ಒಂದು Fetish ಕಲ್ಪಿಸಿ ಮನ್ನಿಸಿ ನಡೆದುಕೊಳ್ಳುತ್ತಿರುತ್ತಾನೆ. ಇದು ಲಿಂಗ ಇರಬಹುದು, ಶಿಲುಬೆ ಇರಬಹುದು, ಸ್ವಸ್ತಿಕ ಚಿಹ್ನೆ ಇರಬಹುದು, ಓಂಕಾರ ವಿರಬಹುದು, ಗುರು ಪಾದುಕೆ ಇರಬಹುದು, ತಾಬೂತು ಇರಬಹುದು, ಬೆನಕನ ಕಲ್ಲು, ಶ್ರೀ ಚಕ್ರ, ಸಾಲಿಗ್ರಾಮ ಶಂಖ, ರುದ್ರಾಕ್ಷಿ, ಹಜರತ್‌ಬಾಲ, ಬುದ್ಧನ ಉಗುರು–ಏನೇನೋ ಇರಬಹುದು. ಆದೇಕೆ ನಮ್ಮ ಅವತಾರಿಗಳ ವಿಭೂತಿ ಗಳ ಪ್ರತಿಮೆಗಳು, ಜಟಗ, ಮಾಸ್ತಿಕಲ್ಲು ಇತ್ಯಾದಿಗಳು ಭಕ್ತವೃಂದದ ಪೂಜೆ ಪಡೆದುಕೊಳ್ಳುವದನ್ನು ಕಾಣಬಹುದು.

ಮೂಲತಃ ಪುರಾಣ ಪೌರಾಣಿಕ ಮಹಾಕಾವ್ಯಗಳ ರೂಪಕ ನಾಯಕ ಪಾತ್ರಗಳು ಕ್ರಮೇಣ ಹೀಗೆ ದೈವೀಕರಣ ಹೊಂದಿ, ಪೂಜನೀಯ ಪ್ರತೀಕ ಗಳಾಗುವವು. ವೀರಕಲ್ಲು ಪಂಡರಪುರದ ವಿಠ್ಠಲನಾಗಬಹುದು. ರಾಷ್ಟ್ರ ಧ್ವಜ, ಲೇನಿನ್‌ನ ಶವ, ರಾಜಘಾಟ, ಶಾಂತಿವನಗಳ ಸಮಾಧಿಗಳು–ಹೀಗೆ ಒಂದರ್ಥದಲ್ಲಿ ದೈವೀಕೃತ ಪ್ರತೀಕಗಳೆನ್ನಬಹುದು. ಪಂಡಿತ ನೆಹರೂ ಅವರ ಮೇಜಿನ ಮೇಲೆ ಪೇಪರ್‌ವೇಟ್ ಎಂದು ಅಬ್ರಾಹಿಂಲಿಂಕನ್‌ರ ಕೈಯ ಪ್ಲಾಸ್ಟರ ಪ್ರತಿಕೃತಿ ಇರುತ್ತಿತ್ತು. ಅದೂ ಒಂದು ಆ ಮಹಾಪುರುಷನ ಪುಣ್ಯ ಸ್ಮೃತಿಗೆ ಮುಡಿಪಾದ Fetish. ಒಬ್ಬರ ಜೀವಮಾನದಲ್ಲಿಯೇ ಅವರನ್ನು ಪವಾಡ ಪುರುಷರನ್ನಾಗಿ ಮಾಡಿ, ಅವರ ದೈವೀಕರಣ ಪ್ರಚಲಿತವಾಗುವದನ್ನು ನಾವು ನೋಡುತ್ತೇವೆ. ಕಾಡು ಮಾನವನಿರಲಿ, ಇಂದಿನ ನವ ನಾಗರಿಕನಿರಲಿ, ಜಡ, ನಿರ್ಜೀವ ಪ್ರತಿಮೆ ಪ್ರತೀಕಗಳ ಬಗೆಗೆ,ಒಡವೆಗಳ ಬಗೆಗೆ ಒಂದು ಅಲೌಕಿಕವಾದ ಅಸಂಗತವಾದ ಅತ್ಯಂತಿಕ ಪೂಜ್ಯ ಭಾವನೆಯನ್ನು ಪ್ರಕಟಿಸುವದು ಈ ದೈವೀ ಕರಣದ ಅಥವಾ ದೇವಾಂಶ ಪ್ರಜ್ಞೆಯ ಲಕ್ಷಣ.

ಅಸಾಮಾನ್ಯವಾದುದನ್ನು ಅಲೌಕಿಕ–ಪಾರಲೌಕಿಕವೆಂದು, ವಿಚಿತ್ರವನ್ನು ಏನೋ ವಿಭೂತಿ ವಿಶೇಷವೆಂದು, ಅಮಾನುಷವನ್ನು ಅತಿಮಾನುಷವೆಂದು, ಭವ್ಯವನ್ನು ದಿವ್ಯವೆಂದು, ಅಜ್ಞಾತವನ್ನು ಜ್ಞಾನಾತೀತವೆಂದು ಭಾವಿಸುವ ಮನೋದೌರ್ಬಲ್ಯದಲ್ಲಿಯೇ ಈ ದೇವತ್ವದ ಉಗಮವಿರುತ್ತದೆ. ಇದಕ್ಕೆಲ್ಲ ಕಾರಣ ನಾವು ಸೃಷ್ಟಿ ಮೂಲದಲ್ಲಿಯೇ ಒಂದು ಮನಸ್ತತ್ವವನ್ನು ಸ್ಥಾಪಿಸು ವದು. ಆರಂಭದಲ್ಲಿ ಅದು ತಾಯಿಯ ಮನಸ್ಸಾಗಿತ್ತು. ಆಗ ಮಾನವನ ಕುಲ ಮಾತೃಸತ್ತಾತ್ಮಕವಾಗಿತ್ತು. ತಾಯಿಯೇ ಕುಲಕ್ಕೆ ಯಜಮಾನಿ "ಮಾತೃ

ದೇವೋಭವ" ಮೊದಲು. ಆಮೇಲೆ ಕುಲವು ಪಿತೃಸತ್ತಾತ್ಮಕವಾಯಿತು. "ಪಿತೃದೇವೋಭವ" ಅದಿತಿ-ಅತಿಮಾತೆ ಆದಿ ಮಾಯೆಯ ನಂತರ ಆದಿ ಪುರುಷ ಇಬ್ಬರೂ ಕೂಡಿ ಜಗತಃ ಪಿತರೌ ("ಪಿತರೌ" ಈ ದ್ವಂದ್ವ ಸಮಾಜದಲ್ಲಿ "ಮಾತಾ ಚ ಪಿತಾ ಚ"ಎರಡೂ ಪದಗಳಿವೆ. ಆದರೆ ಕೊನೆಗೂ ಉಳಿಯುವದು "ಪಿತೃ" ಇಬ್ಬರಿಗೂ. ಆಗಲೇ ತಂದೆಗೇ ಪ್ರಾಧಾನ್ಯ ಬಂದುಬಿಟ್ಟಿತ್ತು. ವ್ಯಾಕರಣದಲ್ಲಿಯೂ!) ಇರಲಿ ಇದೆಲ್ಲ ಮಾನವೇತಿಹಾಸ ಶಾಸ್ತ್ರದಲ್ಲಿ ಹೊಕ್ಕಿ ಹೊರ ಬೀಳಲಾಗದೇ ಸುತ್ತಾಡುವದು ಇಲ್ಲಿ ಅನಗತ್ಯ.

ಹೀಗೆ ದಾರ್ಶನಿಕ ಪರಿಭಾಷೆಯಲ್ಲಿ ಹೇಳುವದಾದರೆ, "ಋತ್" "ಸತ್" ಎಂಬ ತತ್ವಕ್ಕೆ "ಚಿತ್" ಕೂಡಿಕೊಂಡಿತು. ಆ ಬ್ರಹ್ಮ ಚಿನ್ಮಯ ಚಿದ್ರೂಪವೂ ಆಯಿತು. ಅಂದರೆ ಅದು ಮನಸ್ತತ್ವವನ್ನು ಒಳಗೊಂಡಿತು. ಅಲ್ಲಿಂದ ಹೊರಟ ಊಹನೆ, ಉದ್ದೇಶ, ಹೇತು ಯೋಜನೆಗಳದು. ಈ ಉದ್ದೇಶವಾದ ಅಥವಾ ಟೆಲಿಯೋಲೋಜಿಯ ಸಿದ್ಧಾಂತವು ವಿಶ್ವ ವಸ್ತುಗಳ ಸೃಷ್ಟಿ ಸ್ಥಿತಿಗಳಲ್ಲಿ ಬರೆ ಇರುವಿಕೆ ಆಗುವಿಕೆಗಳೊಂದಿಗೇ ಬೇರೆ ವಸ್ತು ಪ್ರಪಂಚದ ಆಗುಹೋಗುಗಳ ಮೇಲೆ ಏನೋ ಪರಿಣಾಮ ಬೀರುವ ಪ್ರಭಾ ವಚೆಲ್ಲುವ ಪ್ರಯೋಜನವೂ ಇರಬೇಕೆಂಬ ಒಂದು "ಉಪಾಧಿ"ಯನ್ನೂ ಕಂಡುಕೊಂಡಿತು. ಎಲ್ಲ ಸೃಷ್ಟಿ ವಿಕಾಸ ಕ್ರಮ ಈ ಒಂದು ಉದ್ದೇಶಕ್ಕೆ ಅಂತಿಮ ಪ್ರಯೋಜನಕ್ಕೆ ವಿಧೇಯ. ಅದರ ಸಾಧನೆಯ ಯೋಜನೆ ವ್ಯವಸ್ಥೆಗೆ ಅಧೀನ. ಆ ಪರಮಗುರಿ ಮನುಷ್ಯತ್ವ ಮುಮುಕ್ಷತ್ವ.

5

ಆದರ್ಶವಾದ: "ಸಚ್ಚಿದಾನಂದ"

ಉದ್ದೇಶವಾದದ ಇನ್ನೊಂದು ಮುಖ ಆದರ್ಶವಾದ. ದೇವತ್ವವು ಮನುಷ್ಯತ್ವದೊಳಗೇ ಅಂತರ್ಹಿತವಾಗಿದ್ದು, ಅದರ ಪೂರ್ಣ ವಿಕಸನವೇ ಮಾನವ ದೇವರಾಗುವದು. ಅದೇ ಹಳೆಯ ಮಾತಿನಲ್ಲಿ ಮಾನವನು ದೇವನಲ್ಲಿ ಕೂಡಿ ಒಂದಾಗುವದು–ಹನಿಯು ಕಡಲಿನಲ್ಲಿ ಸೇರಿದಂತೆ, ಕೊರಡು ಉರಿದು ಬೆಂಕಿಯಾದಂತೆ "ಜ್ಯೋತ ಮೆ ಜ್ಯೋತ ಮಿಲಾತೆ ಜಾ"ಎಂದು–ಮೀರಾಬಾಯಿ ಹಾಡಲಿಲ್ಲವೇ? "ಅಲ್ಲಿದೆ ನಮ್ಮ ಮನೆ, ಇಲ್ಲಿ ಬರೆ ಸುಮ್ಮನೆ!" ಅಂದಿಲ್ಲವೇ ದಾಸವರೇಣ್ಯರು? ಧರ್ಮ ಎಂಬುದಕ್ಕೆ ಸ್ವಾಮೀ ವಿವೇಕಾನಂದರು ಕೊಟ್ಟ ಒಂದೇ ವಾಕ್ಯದ ವ್ಯಾಖ್ಯೆ ಇದು. "Religion is the manifestation

f Divinity already in Man"– ಅರವಿಂದರ ಪೂರ್ಣಯೋಗವೂ
ಸ್ಥೂಲವಾಗಿ ಇದನ್ನೇ ಹೇಳುತ್ತದೆ.

ಈ ಹಿಂದೆಯೇ ಹೇಳಿದಂತೆ ಕೆಲವೊಂದು ಗುಣ ಮೌಲ್ಯಗಳ ಮೊತ್ತ
ವನ್ನು ಮಾನವನು ತನ್ನ ಧ್ಯಾನದಲ್ಲಿ, ಅನುಸಂಧಾನದಲ್ಲಿ ಇಟ್ಟುಕೊಂಡು,
ಅದನ್ನು ತನ್ನಲ್ಲಿ ಉತ್ತರೋತ್ತರ ಅರಗಿಸಿಕೊಳ್ಳುವತ್ತ ತನ್ನ ಜೀವನವನ್ನು
ಹದಗೊಳಿಸುವದು, ಆ ಹಾದಿಯಲ್ಲಿ ಮುನ್ನಡೆಯುವದು, ಅದರಿಂದ ತನ್ನ
ಪ್ರಸ್ತುತದ ಇತಿಮಿತಿಗಳಿಂದ ಪಶುತ್ವದಿಂದ ಬಿಡುಗಡೆ ಹೊಂದುತ್ತ ಮನೋ
ಮಯವಾಗಿ ಬೆಳೆಯುವದು–ಇದುವೆ ಮೋಕ್ಷ. ಅದರ ಕುರಿತು ತೀವ್ರ
ಉತ್ಕಾಸೆಯೇ ಮುಮುಕ್ಷತ್ವ. ವ್ಯಕ್ತಿತ್ವದ ಪೂರ್ಣ ವಿಕಸನ ಉತ್ತರೋತ್ತರ
ಗುಣೋತ್ಕರ್ಷದ ಉತ್ತಮತೆ. ಈ ಆದರ್ಶದ ಪರಿಕಲ್ಪನೆಯೂ ನಮ್ಮ
ಜೀವತ್ವದ ಧ್ಯೇಯ, ಗಂತವ್ಯದ ಗುರಿ. ಅದರ ಶ್ರವಣ ಮನನ, ನಿಧಿ ಧ್ಯಾಸ
ಗಳಿಂದ ತತ್ ಮಯ, ತತ್ ಲೀನವಾಗುವದು ಅದನ್ನು ಪಡೆಯುವ
ಮಾರ್ಗವೆನಿಸಿಕೊಳ್ಳುತ್ತದೆ.

ಇದನ್ನು ನಾವು ನಾಸ್ತಿಕ್ಯದ ನಿಲುಮೆಯಿಂದಲೂ ಅರ್ಥ ಮಾಡಿಕೊಳ್ಳ
ಬಹುದು. ಮಾನವನು ದೇವನ ಪ್ರತಿಬಿಂಬ, ಪ್ರತಿಮೆ ಅಲ್ಲ. ದೇವನೇ
ಮಾನವನು ಕಲ್ಪಿಸಿಕೊಂಡ, ರೂಪಿಸಿಕೊಂಡ ಒಂದು ಬಿಂಬ. ಅದು ಅನಿವಾರ್ಯ
ವಾಗಿಯೇ ಮಾನವ ರೂಪಿಸಿಕೊಂಡ ವ್ಯಕ್ತಿತ್ವದ್ದೇ ದಿವ್ಯಗೊಳಿಸಿದ ಭವ್ಯಾ
ಕಾರದ ಪ್ರತಿಬಿಂಬ ಪ್ರತಿಮೆಯಾಗಿದೆ. ಈ ಸಗುಣ ಸ್ವರೂಪ ತಾಳಿದ ಜೀವನ
ಮೌಲ್ಯಗಳೇನು?

ನಾವು ಪ್ರಾಚೀನ ಕಾಲದಿಂದಲೂ ದೇವರನ್ನು ಸಚ್ಚಿದಾನಂದ ಸ್ವರೂಪ
ಎಂದು ಗುರುತಿಸುತ್ತೇವೆ. ಈ ಹೆಸರಿನಲ್ಲಿ ಮೂರು ಶಬ್ದಗಳಿವೆ. ಸತ್+ಚಿತ್+
ಆನಂದ. ನಮ್ಮ ಭೌತಿಕ ಸೃಷ್ಟಿ ಪ್ರಪಂಚವೆಲ್ಲ ಪಂಚೇಂದ್ರಿಯಗಳಿಗೆ ಗ್ರಾಹ್ಯ
ವಾದದ್ದೆಲ್ಲ ಸತ್. ನಮ್ಮ ಇಂದ್ರಿಯ ಸಂವೇದನೆಗಳಿಂದ ಒಡಗೂಡಿ ಮನೋ
ಮಯ ಪ್ರಪಂಚವೆಲ್ಲ ಚಿತ್. ಆ ಹಂತದಿಂದ ನಾವು ಸಾಧಿಸುವ ಸಾದರಪಡಿಸಿ
ಕೊಳ್ಳುವ ಭಾವ ಪ್ರಪಂಚವೆಲ್ಲ, ರಸಲೋಕವೆಲ್ಲ ಆನಂದ. ಮಾನವನು
ಮನೋದೇಹಿ, ಅದೂ ಬುದ್ಧಿ ಚಿತ್ತಗಳಿಂದ ವಿಶಿಷ್ಟ ಚೇತನೆಯಿಂದ ಸಂಪನ್ನ.
ಗಿಡ ಮರಗಳಂತೆ ಕೇವಲ ಪ್ರಾಣಮಯನಲ್ಲ. ಪಶು ಪಕ್ಷಿಗಳಂತೆ ಪ್ರಾಣ+
ಮನೋಮಯನೂ ಅಲ್ಲ. ಪ್ರಾಣ ಮತ್ತು ವಿಕಾರ ಪ್ರವೃತ್ತಿಗಳ ಮನಃಸತ್ವ

ಗಳೊಂದಿಗೆ ಅವುಗಳೊಳಗಿನಿಂದಲೇ ಉತ್ಪನ್ನವಾದ ಬುದ್ಧಿಶಕ್ತಿ ವಿಚಾರವಂತಿ
ಮೂಲಕ ಆತ್ಮಪ್ರಜ್ಞೆ (ತನ್ನ ತನದ ಅರಿವು) ಉಳ್ಳ ಭಾವಜೀವಿ ಈ ಮನು

ಇದರಿಂದಾಗಿ ಆತ ಸೃಷ್ಟಿವಿಕಾಸ ಕ್ರಮದಲ್ಲಿಯ ಹಿಂದಿನ (ಕೆಳಗ
ಹಂತಗಳ ಸತ್ವ ಶಕ್ತಿಗಳೊಂದಿಗೆ ಹೊಸ ಪ್ರಜ್ಞಾ ಮೇಧಾ ಶಕ್ತಿಗಳನ್ನು
ಯಿಸಿಕೊಂಡು, ಒಟ್ಟಿನಲ್ಲಿ "ಆತ್ಮವಂತ"ನಾಗಿದ್ದಾನೆ. ಅವನ ಬಾಳಿನ ಬೆಳವ
ಯಲ್ಲಿ ಇವೆಲ್ಲ ಗುಣ ಮೌಲ್ಯಗಳು ಮಾನಸಿಕ ಶಕ್ತಿಗಳ ಪೂರ್ಣ ವಿಕಸ
ಒಂದು ಕಲ್ಪನೆಯೇ ಅವನಿಗೆ ಆರಾಧ್ಯ ಆದರ್ಶ.

ಅರಿಸ್ಟಾಟಲ್ ಪ್ರತಿಪಾದಿಸಿದಂತೆ, ನಮ್ಮ ಮನಸ್ಸಿನ ಕ್ರಿಯಾಶಕ್ತಿ ಅಥ
ಧರ್ಮಗಳು ಮೂರು: ವಿಚಾರ, ಭಾವನೆ ಮತ್ತು ಇಚ್ಛೆ (ಸಂಕಲ್ಪ). ಇವು
ಮೂಲ ಪ್ರೇರಣೆಗಳನ್ನೇ ನಾವು ಬುದ್ಧಿ, ಮನಸ್ಸು ಮತ್ತು ಅಹಂಕಾರ (ಅಸ್ಮಿ
ಅನ್ನುತ್ತೇವೆ. ನಮ್ಮಲ್ಲಿ ಕೆಲವರು ಜಿಜ್ಞಾಸುಗಳೂ ಜ್ಞಾನಿಗಳೂ ವೈಚಾರಿಕ
(ವಿಜ್ಞಾನಿಗಳೂ ಸಂಶೋಧಕರೂ ಬೋಧಕರೂ) ವಿಚಾರ (Thinking
ಅಂಗದಲ್ಲಿ ತಮ್ಮ ಮನಃಶಕ್ತಿಯನ್ನು ವಿಶೇಷ ಪಳಗಿಸುತ್ತಾರೆ. ಕೆಲವ
ಕಲಾವಿದರು, ಕವಿಗಳು, ಕನಸುಣಿಗಳು, ಭಾವಜೀವಿಗಳು, ಅನುಭಾವಿಗ
ಭಕ್ತಮಾರ್ಗಿಗಳು ಭಾವನೆ (Feeling)ಯ ಅಂಗವಾಗಿ ತಮ್ಮ ಮನಸ್
ತರಬೇತಿ ನೀಡುತ್ತಾರೆ. ಇನ್ನುಳಿದ ಅನೇಕರು ವ್ಯವಹಾರ ಕುಶಲರ
ಕಾರ್ಯಕರ್ತರು, ಧುರೀಣರು, ರಾಜಕಾರಣಿಗಳು, ನೀತಿ ನಿಪುಣರು, ವ್
ಸ್ಥಾಪಕರು, ಆಡಳಿತಗಾರರು, ಹಟಯೋಗಿಗಳು, ಮಂತ್ರಿಗಳು, ತಂತ್ರಿಗಳ
ಯಂತ್ರ ಚಾಲಕರು ಮುಂತಾದವರು ಇಚ್ಛಾಶಕ್ತಿ (Willing)ಯನ್ನೇ ವಿಶೇ
ವಾಗಿ ಅವಲಂಬಿಸಿರುತ್ತಾರೆ.

ಇಲ್ಲಿ ಒಂದು ಮಾತನ್ನು ಮರೆಯಕೂಡದು. ಮನಸ್ಸಿನ ಈ ಮೂ
ಶಕ್ತಿಗಳು ಅಥವಾ ಧರ್ಮಗಳು ಅನ್ಯೋನ್ಯ ಭಿನ್ನವಾಗಿಲ್ಲ. ಅವು ಮೂ
ಬೇರೆ ಬೇರೆ ಕಕ್ಷೆಗಳಲ್ಲ. ಮನಃಶಕ್ತಿಯ ಸತ್ವದ ವಿನಿಯೋಗದ ಮೂ
ರೀತಿಗಳು: (ಸಾಮಾನ್ಯವಾಗಿ ನಮ್ಮಲ್ಲಿ ನಂಬಿಕೊಂಡು ಬಂದ ತ್ರೈಗುಣ್ಯ
ಕಲ್ಪನೆಯೂ ಇದಕ್ಕೆ ಸಮಾಂತರ ಸತ್ವ ರಜ ತಮ. ಸತ್ವಗುಣ, ಬುದ್ಧಿಗುಣ
ತಮೋಗುಣ ಭಾವನಾಮಯ (ಅಂಧಪ್ರವೃತ್ತಿ ವಿಕಾರಗಳ ಮೊತ್ತ) ಮತ
ರಜೋಗುಣ ಅಹಂಕಾರ (ಅಸ್ಮಿತೆ)ದ ಅವಿಷ್ಕಾರ.)

ಇನ್ನು ಮಾನವನ ಮನಸ್ಸಿನ ಈ ಮೂರು ಧರ್ಮಗಳ, ಶಕ್ತಿಗ
ಕ್ರಿಯೆಗೆ ಅರಿಸ್ಟಾಟಲ್ ಮೂರು ಧ್ಯೇಯ (ಆದರ್ಶ)ಗಳನ್ನು, ಗುರಿಗಳನ
ಗುರುತಿಸಿದನು. ವಿಚಾರಕ್ಕೆ (ಬುದ್ಧಿಗೆ) ಸತ್ಯ (Truth) ಭಾವನೆಗೆ ಸೌಂದರ

Beauty) ಮತ್ತು ಇಚ್ಛಾಶಕ್ತಿಗೆ ಒಳಿತು ಕಲ್ಯಾಣ (Goodness) ಈ ಟ್ರುಥ್, ಗುಡನೆಸ್ ಮತ್ತು ಬ್ಯೂಟಿಗಳನ್ನು ನಮ್ಮ ಗುರುದೇವ ರವೀಂದ್ರನಾಥ ಠಾಕುರರು "ಸತ್ಯಂ ಶಿವಂ ಸುಂದರಂ" ಎಂದು ಕರೆದರು. ದೇವತ್ವದ ವಿಭೂತಿಗಳನ್ನಾಗಿ ಬಣ್ಣಿಸಿದರು.

ಆದರೆ ಈ ಮೂರು ತತ್ವ (Concept)ಗಳನ್ನೇ ನಮ್ಮ ಪೂರ್ವಿಕರು ನಾನು ಹಿಂದೆ ಹೇಳಿದ ಸತ್ ಚಿತ್ ಆನಂದವೆಂಬುದಾಗಿ ಹೆಸರಿಸಿದ್ದರು ಸೌಂದರ್ಯವೆಂಬ ನಾಣ್ಯದ ಇನ್ನೊಂದು ಮಗ್ಗಲೇ ಆನಂದ. ವರಕವಿ ಬೇಂದ್ರೆ ಅಂದಂತೆ "ಹಿಗ್ಗು ಸುಖ ದುಃಖಗಳ ಸುಲಿದ ತಿಳಿಲು! ಯಾವ ಎದೆಯು ಏನು? ಒಂದೇ ನೆಳಲು!") ಈ ಮೂವರನ್ನು ಬಾಳಿನ ಅಂತಿಮ ಮೌಲ್ಯಗಳೆಂದು ನಾವು ಚಿಂತಿಸಬಹುದು-ಬೇಕು. ಇನ್ನು ಭಾವನ ಮತ್ತು ಇಚ್ಛೆ (ಚಿತ್ ಮತ್ತು ಶಿವ)ಗಳನ್ನು ಕೂಡಿಯೇ ವ್ಯಾಪಿಸಿ ಚೈತನ್ಯ ನೀಡಬಲ್ಲ ಇನ್ನೊಂದು ಪ್ರೇರಣೆ ಇದೆ. ಅದು ಪ್ರೇಮ. ನಾರದ ಭಕ್ತಿ ಸೂತ್ರಗಳಲ್ಲಿ ಈಶ್ವರನ ವ್ಯಾಖ್ಯೆಯನ್ನೇ "ಸ ಈ ಶಃ ಅನಿರ್ವಚನೀಯ ಪ್ರೇಮ ಸ್ವರೂಪಃ" ಎಂದು ಮಾಡಲಾಗಿದೆ. ಅಂದರೆ ಈ ಪ್ರೇಮ ಒಂದು ಪರಮ ಮೌಲ್ಯ. ಪ್ರೇಮವೇ ದೇವರು. ಅಂದರೆ ಆ ಕುರಿತು ನಮ್ಮ ತಕರಾರು, ಯಾವದೇ ಕರಾರು ಇಲ್ಲ!

ಈ ಪ್ರೇಮವೆಂಬ ತತ್ವದ ಇನ್ನೊಂದು ವಿಶೇಷವೆಂದರೆ, ಇದು ಅಪ್ಪಟ ಮಾನವೀಯ ಗುಣ. ವಾತ್ಸಲ್ಯ, ಕರುಣೆ, ಸ್ನೇಹ, ಮೈತ್ರಿ, ಮಮತೆ, ಆತ್ಮೀಯತೆ ಇವೆಲ್ಲ ಅದರ ರೂಪಗಳು. ಪ್ರೇಮವೇ ಪ್ರೀತಿ. ಪ್ರೀತಿಯೆಂದರೇ ಸಂತೋಷಪಡಿಸುವದು. ಇದು ಪ್ರೇಮದ ಧರ್ಮ. ಪ್ರಾಣಿ ಮಾತ್ರರನ್ನೂ ಸಂತೋಷಪಡಿಸುವದು ಮಾನವನ ಧರ್ಮ. ಮಮತೆ ತನ್ನವರೆಂದು ಕಾಣುವ ಭಾವ ಅಥವಾ ವೃತ್ತಿ. ಮಾನವ ಕುಲವನ್ನೂ ಅಖಿಲ ಜೀವ ಜಾತವನ್ನೂ ಒಂದಾಗಿಸುವ ಶಕ್ತಿ. ಎಲ್ಲ ವೈಷಮ್ಯ ತಾರತಮ್ಯಗಳನ್ನು ಸ್ವ—ಪರ ಭೇದ ಭಾವಗಳನ್ನು ಕರಗಿಸಿ ಎರಕಗೊಳಿಸುವದೇ ಈ ಪ್ರೀತಿ ರಸಾಯನವು.

ಬೇಂದ್ರೆಯವರು, ಒಂದು ಸುಂದರ ಕವನ (ಬಾ ಕೈಯ ತಾ) ಅದರಲ್ಲಿ ದೇವರನ್ನು ಕುರಿತು ವರಕವಿ ಹಾಡುತ್ತಾರೆ-

ಒಲವಿನಲ್ಲಿ ಬಾಗಿರುವೆ
ಚಲುವಿನಲ್ಲಿ ಮಾಗಿರುವೆ
ಜಗದ ರೂಪವಾಗಿರುವೆ
ಬಾ ಕೈಯ ತಾ

ಈ ಒಂದೊಂದು ಮಾತೂ ಬಾಳಿನ ಈ ಗುಣ ಮೌಲ್ಯವನ್ನೇ ದೃ
ಕರಿಸುತ್ತದೆ.

"ತ್ರಿವಿಧ ದಾಸೋಹ"

ತಾತ್ಪರ್ಯವೆಂದರೆ ಈ ಸತ್ಯಂ ಶಿವಂ ಸುಂದರಂ. ಈ ಸತ್ ಚಿತ್ ಆನ
ಮತ್ತು ಪ್ರೇಮಗಳನ್ನು ಇನ್ನಾವದೋ ಶಕ್ತಿಮಯ ವ್ಯಕ್ತಿ ವಿಶೇಷಕ್ಕೆ ಅನ್ವಯಿ
ಅದನ್ನು ಪೂಜಿಸುವದು ಮಾತ್ರ ನಾಸ್ತಿಕನಿಗೆ ಸಮ್ಮತವಲ್ಲ. ಗುಣಗಳ ಪೂ
ಮೌಲ್ಯಗಳ ಉಪಾಸನೆ ಅಂದರೆ ಅವುಗಳ ಹಂಬಲ ಮಾತ್ರವಲ್ಲ. ಅವು
ಹೆಸರಿಗೆ ಹೂವು ಏರಿಸುವದೂ ಹಣ್ಣು ಕಾಯಿ ಮಾಡಿಸುವದೂ ಹ
ಹೊರುವದೂ ಅಲ್ಲ. ಆ ಗುಣ ಮೇಲ್ಭಾಗಗಳನ್ನು ತಮ್ಮ ಬದುಕಿನ
ಆದಷ್ಟು ಅಳವಡಿಸಿಕೊಳ್ಳಲು ಎಡಬಿಡದೆ ಹೆಣಗುವದೇ ಅವುಗಳ ಪೂ
"ಸ್ವಕರ್ಮಣಾತಂ ಅಭ್ಯರ್ಚ್ಯ" ಎಂದು ಒಂದು ಮಾತು ಭಗವದ್ಗೀತೆಯ
ಬರುತ್ತದೆ. ಅದರ ಇಂಗಿತವೂ ಇದೆ. ನಮ್ಮ ಪಾಲಿನ ಕರ್ತವ್ಯ, ನ
ನಮ್ಮ ಕಾಯಕ, ನಾವು ದೇವರಿಗೆ ಗೈಯುವ ಸಲ್ಲಿಸುವ ಪೂಜೆ-ಎಂಬ
ಮಾತು ದೇವರಿಗೆ "ಪತ್ರಂ ಪುಷ್ಪಂ ಫಲಂ ತೋಯಂ" ಭಕ್ತಿಯಿಂದ ಅರ್ಪಿ
ಬೇಕೆಂಬ ಪ್ರತ್ಯೇಕ ಪೂಜಾವಿಧಿಯ ಮಹತ್ವವನ್ನು ಅಗತ್ಯವನ್ನು ಅಲ್ಲಗಳೆಯ
ತ್ತದೆ. ನಿಜವಾಗಿಯೂ ಜ್ಞಾನ-ಭಕ್ತಿ ಮತ್ತು ವೈರಾಗ್ಯಗಳೆಂಬವು ನ
ನಿತ್ಯದ ಬದುಕಿನ ಕ್ರಿಯಾಚರಣೆಗೇ ಸಲ್ಲಬೇಕಾದ "ತ್ರಿವಿಧ ದಾಸೋಹ"; ಇದು
ಕರ್ಮಯೋಗ. ಯೋಗವೆಂದರೆ ಕರ್ಮದ ಕುರಿತು ಕೌಶಲ್ಯವೆಂದಿದೆ-ಗೀ
ಬಾಳಿನಲ್ಲಿ ಏನೇ ಮಾಡುವದಿರಲಿ ಬಿಡುವದಿರಲಿ ತಿಳಿದು ತುಂಬಾ ಆಸಕ್ತಿಯಿ
ಆದರೆ ನಿರ್ಲಿಪ್ತ ಭಾವದಿಂದ ಫಲಾಪೇಕ್ಷೆಯ ಹೆದ್ದಾಸೆ ಇಟ್ಟುಕೊಳ್ಳ
ಮಾಡುವದು, ಬಿಡುವದು-ಇದುವೆ ಆ ಕರ್ಮಯೋಗ. ಜ್ಞಾನಭಕ್ತಿ ಸ
ನ್ವಿತವಾದ ಜೀವನಯೋಗ. ಇದಕ್ಕೆ ದೇವರೆಂಬ ಕಲ್ಪನೆಯ ಅವಲಂಬ
ಬೇಕಾಗಿಲ್ಲ. ಒಂದು ಸಂಗತಿಯನ್ನು ಅತ್ಯಂತ ಭಾವನಾಮಯವಾಗಿ ನೋ
ವದು ನೆನೆಯುವದು ಭಕ್ತಿಯ ಲಕ್ಷಣ. ನಮ್ಮ ಬದುಕಿನ ಕರ್ತವ್ಯದ ಬ
ಹೊಣೆಗಾರಿಕೆಗಳ ಬಗೆಗೆ ಋಣಾನುಬಂಧಗಳ ಬಗೆಗೆ ಅಂಥ ಭಕ್ತಿಭಾವವ
ನಾವು ತಾಳಬಹುದು. ಈ ನಿಷ್ಠೆಯು ಅನನ್ಯವಾಗಬೇಕಾದರೆ, ಅದರ ಹೊರ
ಇತರ ಸಂಗತಿಗಳತ್ತ ಮನಸ್ಸು ಉಪೇಕ್ಷೆ ಉದಾಸೀನ ಬೆಳೆಸಿಕೊಳ್ಳುತ್ತದೆ.
ಮಟ್ಟಿಗೆ ಅದು ವೈರಾಗ್ಯ. ಜತೆಗೆ ತಾನು ಭಜಿಸುವ ಸಂಗತಿಯ ಬ
ಯಥಾರ್ಥವಾದ ಅರಿವು ಪೂರ್ತಿಯಾಗಿ ಚೆನ್ನಾಗಿ ಪಡೆದುಕೊಳ್ಳುವದು ಜ್ಞಾ

ಹೀಗೆ ಯಾವುದೇ ಸಂಗತಿ, ಯೋಜನೆ, ಕಾರ್ಯ ಎತ್ತಿಕೊಂಡರೂ ಅದರ ಯಶಸ್ಸಿಗೂ ಆ ಮೂಲಕ ನಮ್ಮ ಮನಸ್ಸಿನ ಸಮಾಧಾನಕ್ಕೂ ಆ ಚಟುವಟಿಕೆಯಲ್ಲಿ ಭಕ್ತಿ ಜ್ಞಾನ ಮತ್ತು ವೈರಾಗ್ಯಗಳು ಮುಪ್ಪುರಿಗೊಳ್ಳಲೇಬೇಕು. ಇದಕ್ಕೆ ಜೀವನದ ಆಚೆಗೆ ಜಗತ್ತಿನ ಹೊರಗೆ ಒಂದು ದೇವರೆಂಬ ವ್ಯಕ್ತಿತ್ವವನ್ನು ಆಧಾರವಾಗಿ ಇಟ್ಟುಕೊಳ್ಳುವ ಅಗತ್ಯವೇನಿದೆ?

ಇಂಥ ಒಂದು ಪ್ರತ್ಯೇಕ ಕೇಂದ್ರವನ್ನು ನಮ್ಮ ಶ್ರದ್ಧೆಗೆ ಕಲ್ಪಿಸಿಕೊಂಡರೆ, ಅದರ ಚಿಹ್ನವೆಂದು ಒಂದು ಪ್ರತಿಮೆಯನ್ನೋ ಪ್ರತೀಕವನ್ನೋ ಸ್ಥಾಪಿಸಿಕೊಂಡರೆ ಆಗುವ ಅನಾಹುತವೇನೆಂದರೆ, ಮಾನವನು ಮನೋದೌರ್ಬಲ್ಯಕ್ಕೆ ಒಳಪಟ್ಟು ಕ್ರಮೇಣ ಈ ಪ್ರತೀಕ ಚಿಹ್ನಕ್ಕೆ ಎಲ್ಲಿಲ್ಲದ ಮಹತ್ವ ಬರುತ್ತದೆ. ಅದು ಪ್ರತಿನಿಧಿಸುವ ಪ್ರತಿಬಿಂಬಿಸುವ ತತ್ವವೂ ಭಾವವೂ ಮರೆಯಾಗಿ ಮರೆತು ಹೋಗುತ್ತದೆ. ಗರ್ಭಗುಡಿಯಲ್ಲಿಯ ಆ ಮೂರ್ತಿ ಆ ಶಿಲೆಯ ಅಥವಾ ಮರದ ವಿಗ್ರಹವೇ ಜಾಗೃತ ದೇವತೆಯೆನಿಸಿಕೊಳ್ಳುತ್ತದೆ. ಹಿಂದೆ ಉಲ್ಲೇಖಿಸಿದ "ನ ದೇವೋ ವಿದ್ಯತೇ ಕಾಷ್ಟೇ ನ ಪಾಷಾಣೇ ನ ಮೃಣ್ಮಯೇ" ಎಂಬ ಸೂಕ್ತಿ ಪುರಾಣದ ಒಡವೆಯಾಗಿಯೇ ಉಳಿಯುತ್ತದೆ. ಕಣ್ಣೆದುರಿನ ವಿಗ್ರಹಕ್ಕೇ ಷೋಡಶೋಪಚಾರ ಪೂಜೆ, ಪಂಚಪಕ್ವಾನ್ನಗಳ ನೈವೇದ್ಯ, ರತ್ನಾಭರಣಗಳು, ಚಿನ್ನ ಇಂಥ—ಏನೆಲ್ಲ ವೈಭೋಗ ನಡೆಯುತ್ತದೆ.

ಮತ್ತು ಈ ನಿಟ್ಟಿನಲ್ಲಿ ಸಾಮಾಜಿಕ ಶೋಷಣೆ ಭಾವಿಕ ಅಜ್ಞ ಆರ್ತ ಜನರ ಸುಲಿಗೆಯ ದಾರಿ ತೆರೆಯುತ್ತದೆ. ಈ ಅರಿವು ನಮ್ಮ ಪೂರ್ವಕ ಸ್ಮೃತಿಕಾರರಿಗೂ ಕೆಲಮಟ್ಟಿಗೆ ಇದ್ದಿರಬೇಕು. ಮನುಸ್ಮೃತಿಯಲ್ಲಿ ದೇವರ ಮೇಲೆ ಉಪಜೀವಿಕೆ ನಡೆಯಿಸುವ ಬ್ರಾಹ್ಮಣರಿಗೆ "ದೇವಲಕ" ಬ್ರಾಹ್ಮಣರೆಂದು ಕರೆದಿದ್ದಾರೆ. ಈ ದೇವಲಕರನ್ನು ಶ್ರೋತ್ರೀಯರಿಗಿಂತ ವೈದಿಕರಿಗಿಂತ ಕೀಳೆಂದು ಎಣಿಸಲಾಗಿದೆ. ಇವರನ್ನು ಶ್ರಾದ್ಧಾದಿಗಳಿಗೆ ಕರೆಯಬಾರದೆಂದು ಹೇಳಲಾಗಿದೆ. ಬೃಹಸ್ಪತಿ ಎಂಬವನು ಇದು "ಬುದ್ಧಿ ಪೌರುಷ ಹೀನರ ಜೀವಿಕೆ" ಎಂದಿದ್ದಾನೆ! ಇವರನ್ನು "ಕರ್ಮ ಚಾಂಡಾಲ"ರೆಂದೂ ಜರೆದದ್ದುಂಟು!

ಇದನ್ನೆಲ್ಲ ಇಲ್ಲಿ ಎತ್ತಿ ಹೇಳುವದು ಏಕೆ? ಆಸ್ತಿಕ ವರ್ಗಗಳಲ್ಲಿಯೇ ಈ ಬಗೆಯ ಮೂರ್ತಿಪೂಜೆ, ವಿಗ್ರಹಾರಾಧನೆಯ ವಿಷಯವಾಗಿ ತಜ್ಞರೆಂಬವರಲ್ಲಿ ಒಳ್ಳೆಯ ಅಭಿಪ್ರಾಯವಿದ್ದಿಲ್ಲ. "ದೇವತೆಗಳು ಪರೋಕ್ಷ ಪ್ರಿಯರು" ಎಂಬುದೊಂದು ಪೂರ್ವಿಕರ ವಚನ. ಅಂದರೆ ದೇವತ್ವವು ಸೂಕ್ಷ್ಮ. ಅದು ದೃಶ್ಯವಲ್ಲ ಅದೊಂದು ಭಾವ, ವಸ್ತು ಘಟನೆ ಅಲ್ಲ. ಆದರೆ ಕ್ರಮೇಣ ಕೆಳಪಾತಳಿಗೇ ಹರಿಯುವ ಹಾಗೂ ಅಲ್ಲಿಯೇ ಮಲೆತು ಮಡುವುಗಟ್ಟುವ ಭಾವ

ನೆಯ ಪ್ರಭಾವ ತಿಳುವಳಿಕೆಯ ಮಟ್ಟ ಮೂರ್ತಕ್ಕೇ-ಮೂರ್ತಿಗೇ-ಜಡ ಚಿಹ್ನೆ (Fetish)ಕ್ಕೇ ಪ್ರಾಧಾನ್ಯವಿತ್ತು, ಅದನ್ನೇ ನಿಜವಾಗಿಯೂ ವ್ಯಾವಹಾರಿಕ ವಾಗಿಯೂ ದೇವರೆಂದು ಪ್ರಚಲಿತ ಪ್ರತಿಷ್ಠಿತಗೊಳಿಸುವದು ನಮ್ಮ ಗತಾನು ಗತಿಕ ರೂಢಿಯಾಗಿದೆ, ಪರಂಪರೆಯಾಗಿದೆ.

ಧ್ಯಾನಕ್ಕಾಗಿ, ಮನಸ್ಸಿನ ಏಕಾಗ್ರತೆಗಾಗಿ ಒಂದು ಮೂರ್ತಬಿಂಬ ಆರಂಭ ದಲ್ಲಿ ಅಗತ್ಯವಂತೆ. ಆರಂಭದಲ್ಲಿಯೇ ನಮ್ಮ ಕೊನೆ ಇರುತ್ತದೆ. ಮೂಢರು ಭಾವಿಕರು ಅವರ ನಂಬಿಕೆ ಕೆಡಿಸಬಾರದೆಂದು ಜ್ಞಾನಿಗಳೂ ಅವರಂತೆಯೇ ನಡೆಯುತ್ತಾರೆ. ಒಟ್ಟಿನಲ್ಲಿ ನಮಗೆ ದೇವರೇ ಗತಿ!

6

ಸತ್, ಚಿತ್, ಆನಂದ ಅಥವಾ ಸತ್ಯಂ ಶಿವಂ ಸುಂದರಂ ಎಂಬ ಪರಿಕಲ್ಪನೆಗಳಾಗಲಿ, ಭಗವದ್ಗೀತೆಯು ಸಾರಿದ ಶ್ರೀಮತ್ ಊರ್ಜಿತ ವಿಭೂ ತಿಯ ಸತ್ವವಾಗಲಿ, ದೇವಾಂಶ ದೇವತ್ವದ ತೇಜಸ್ಸು ಎಂದು ಭಾವಿಸಿ, ಅದರ ಅರಿವನ್ನು ಅಚ್ಚಳಿಯದಂತೆ ಕಾಪಾಡಿಕೊಳ್ಳುವದು ಒಂದು ರೀತಿ ಆದರ್ಶದ ಗುಣ ಮೌಲ್ಯಗಳ ಉಪಾಸನೆ. ಇಲ್ಲಿಯೂ ಈ ಗುಣಗಳನ್ನೂ ಮೌಲ್ಯಗಳನ್ನೂ ನಮ್ಮ ವೈಯಕ್ತಿಕ ಬಾಳಿನಲ್ಲಿ ಸಾಧಿಸುವದೇ ನಿಜವಾದ ಉಪ+ಆಸನೆ. ಅವುಗಳ ಹಂಬಲ ಬರೇ ವಾಸನೆ. ಅದೊಂದು ಪೂಜೆ, ಆರಾಧನೆ, ಪಂಚಾಮೃತಾಭಿಷೇಕ ಗಳಂತೆ ಒಂದು ಹವ್ಯಾಸ. ಮಾನಸಿಕ ಚಟ, ತೆವಲು, ಲಹರಿ, ಯಾಂತ್ರಿಕ ವಾದ ತಾಳಕುಟ್ಟುವ ಭಜನೆಯಂತೆ!

ಮೂಲ್ಯಗಳ ಮೊತ್ತ

"ಸಪ್ತಶತಿ" ಎಂಬುದೊಂದು ಇಂಥ ಹವ್ಯಾಸದ ನಿತ್ಯ ಪಾರಾಯಣದ ದೇವೀ ಮಹಾತ್ಮೆಯ ಪುಟ್ಟ ಗ್ರಂಥ. ಅದರಲ್ಲಿ ಲೆಕ್ಕಕ್ಕೆ 700 ಶ್ಲೋಕಗಳೆಂದು ಇದೆ. ದೇವಿಯು ಮಹಿಷಾಸುರ, ಶುಂಭ, ನಿಶುಂಭ ಮುಂತಾದ ದೈತ್ಯರನ್ನು ಕೊಂದ ಕತೆಗಳ ಪುರಾಣವದು. ಆದರೆ ಅಲ್ಲಿಯ 5 ನೆಯ ಅಧ್ಯಾಯದಲ್ಲಿ ಆ ದೇವಿಯ ಸ್ತೋತ್ರವಿದೆ. ಅದರಲ್ಲಿ 14 ನೆಯ ಶ್ಲೋಕದಿಂದ 80 ರ ವರೆಗೆ ದೇವಿಯನ್ನು 21 ಗುಣ ಮೌಲ್ಯ ರೂಪದಲ್ಲಿ ಬಣ್ಣಿಸಿ, ನಮಸ್ಕರಿಸ ಲಾಗಿದೆ. "ಯಾ ದೇವೀ ಸರ್ವಭೂತೇಷು ರೂಪೇಣ ಸಂಸ್ಥಿತಾ। ನಮಃ ತಸ್ಮೈಃ ನಮಃ ತಸ್ಮೈಃ ನಮಃ ತಸ್ಮೈಃ ನಮೋ ನಮಃ" ಎಂಬುದಾಗಿ ಈ ಶ್ಲೋಕಗಳು ಸ್ತುತಿಗೈಯುತ್ತವೆ. ಇಲ್ಲಿ ದೇವಿಯು ರೂಪಗಳಾಗಿ ಹೆಸರಿಸಿದ ಗುಣ ಮೌಲ್ಯಗಳಲ್ಲಿ 6-7 ಮಾನವನ ದೌರ್ಬಲ್ಯಗಳು ಅಥವಾ ಸಹಜ

ಪ್ರವೃತ್ತಿಗಳು. ಅವು-ನಿದ್ರಾ, ಕ್ಷುದ್ರ, ಛಾಯೆ, ತೃಷ್ಣೆ, ಜಾತಿ, ಲಜ್ಜೆ, ವೃತ್ತಿ ಮತ್ತು ಸ್ಮೃತಿ. ಇವೆಲ್ಲವೂ ಬಲಿಷ್ಠ ವಾಸನೆಗಳು. ನಕಾರಾತ್ಮಕ ಶಕ್ತಿಗಳೇ ನಮ್ಮ ಬದುಕನ್ನು ವಿಕಾರಗೊಳಿಸಬಲ್ಲವು. ಆ ಮಟ್ಟಿಗೆ ದೈವೀ ಅಂಶಗಳೇ.

ಆದರೆ ಇನ್ನುಳಿದವು ನಿಜವಾಗಿಯೂ ನಮ್ಮ ಬಾಳಿನಲ್ಲಿ ಬಳಸಿ ಬೆಳೆಸಿ ಕೊಳ್ಳಬೇಕಾದ ಗುಣ-ಮೌಲ್ಯಗಳು. ಶಕ್ತಿ, ಶ್ರದ್ಧೆ, ಕ್ಷಾಂತಿ, ಶಾಂತಿ, ಕಾಂತಿ, ದಯೆ, ತುಷ್ಟಿ, ಮಾತೃತ್ವ, ಚಿತ್ತ ಮತ್ತು ಲಕ್ಷ್ಮೀ (ಸೌಂದರ್ಯ) ಇವುಗಳಲ್ಲಿ ಸ್ತೋತ್ರಕಾರ ಭ್ರಾಂತಿಯನ್ನೂ ದೇವಿಯ ರೂಪವಾಗಿ ಸೇರಿಸಿದ್ದಾನೆ. ಭ್ರಾಂತಿಯೂ ಒಂದು ಸಾರ್ವತ್ರಿಕ ಸರ್ವಸಾಮಾನ್ಯ ಮನೋಗುಣ. ಇದ್ದು ದನ್ನು ಇದ್ದಂತೆ ನೋಡದೆ, ನಮ್ಮ ಬಯಕೆಯಂತೆ ನಮಗೆ ಬೇಕಾದಂತೆ ಭಾವಿಸುವದು. ರವೀಂದ್ರರ "ಚಿತ್ರಾಂಗದೆ"ಅನ್ನುವಂತೆ "Illusion is the first appearance of truth." ಭ್ರಾಂತಿ, ಭ್ರಮೆ, ಸತ್ಯದ ಪ್ರಥಮ ದರ್ಶನ. "ಸತ್ಯದ ಮುಖವನ್ನು ಮುಚ್ಚುವ ಬಂಗಾರದ ಬಟ್ಟಲು!" ಅದೂ ಒಂದು ಮೌಲ್ಯವೇ.

ಈ ಗುಣ ಮೌಲ್ಯಗಳನ್ನು ಹಂಬಲಿಸುವದು ಅವುಗಳನ್ನು ಸಾಧಿಸುವ ಹವ್ಯಾಸ, ಅದರ ಅಭ್ಯಾಸ ಇಟ್ಟುಕೊಳ್ಳುವದು ಹಿಂದೆ ಬಿದ್ದು; ಅವನ್ನೇ ಸಾಕಾರಗೊಳಿಸಿ ಆ ಆಕೃತಿಗಳ, ಅವನ್ನು ಪ್ರತಿನಿಧಿಸುವ ಸಂಕೇತಗಳ ಆರಾಧನೆ ಸುಲಭವಾಯಿತು, ಸಲೀಸವಾಯಿತು. ಇದರ ಅತಿರೇಕವನ್ನು ತೀವ್ರವಾಗಿ ಟೀಕಿಸಿದ್ದೂ ಹಿಂದೆ ಉಂಟು.

ಆದರೆ ನಮ್ಮ ದೇಶದಲ್ಲಿ ಮಧ್ಯಯುಗದಿಂದ ಜನರ ಕರ್ತವ್ಯ ಪ್ರಜ್ಞೆ ಕುಂದಿತು. ಪುಣ್ಯ ಮೋಕ್ಷಗಳ ಭ್ರಾಮಕ ಕಲ್ಪನೆಗಳು ಬೆಳೆದವು. ರಾಷ್ಟ್ರದ ವಿಜಿಗೀಷು ವೃತ್ತಿ ಲೋಪವಾಯಿತು. ಪದೇ ಪದೇ ಪರಚಕ್ರಗಳ ದಾಳಿಗೆ ತುತ್ತಾಗಿಇತ್ತ ಸಮಾಜದ ಅಭ್ಯುದಯದ ಪುರೋಗಾಮಿಯಾದ ಧರ್ಮಪ್ರವೃತ್ತಿ ದುರ್ಬಲವಾಯಿತು. ಸಾಮುದಾಯಿಕ ವಿಮೋಚನೆ (ಮೋಕ್ಷ)ಯ ಗುರಿ ಕೈಗೆಟುಕದಾಯಿತು. ಈಗ ವೈಯಕ್ತಿಕ ಮುಕ್ತಿಯ ಕಲ್ಪನೆ ಹಾಗೂ ಆದರ್ಶ ಮುಂದೆ ಬಂದಿತು. "ದಿಲ್ಲೀಶ್ವರೋವಾ ಜಗದೀಶ್ವರೋವಾ" ಯಾರು ಆಳಿದರೇನು? ನಮ್ಮ ಪೂಜಾ ಪಾಠಗಳ ನಿತ್ಯ ಕರ್ಮಗಳನ್ನು ಚಾಚೂ ತಪ್ಪದೆ ಮಾಡಿಕೊಂಡು ದೇವರ ಅರ್ಚನೆ ಧ್ಯಾನ ಜಪಾನುಷ್ಠಾನಗಳಲ್ಲಿ ಲೋಪ ಬರದಂತೆ ನೋಡಿಕೊಂಡರಾಯಿತು-ಎಂಬ ಒಳದಾರಿ (Short Cut) ಹತ್ತಿರ ವೆನಿಸಿತು. ಗುರುವಿನ ಗುಲಾಮನಾಗಲೇಬೇಕು ಮುಕ್ತಿ ಪಡೆಯಲಿಕ್ಕೆ. ಸಮಾಜದ ಧರ್ಮಪಾಲನೆ ಹಾಗೂ ಮೋಕ್ಷದ ಹೊಣೆಯು ಗಂಟೂ ಈ ಗುರುಗಳ ದಂಡಕ್ಕೆ

ನೇತು ಹಾಕಲಾಯಿತು. ಮಠಪೀಠಗಳು ಹುಟ್ಟಿಕೊಂಡವು. (ಮೂಲತ
ಅವು ಬೌದ್ಧ ಜೈನ ವಿಹಾರಗಳೂ ಬಸದಿಗಳೂ ಇದ್ದವು.) ಪುರೋಹಿತ
ವರ್ಗವು ತಲೆಯೆತ್ತಿತು. ಇವರು "ಪುರೋ+ಹಿತರು" ಮುಂದೆ ಇಡಲ್ಪಟ್ಟವರು.
ಭಜಕರನ್ನೂ ಭಾವಿಕರನ್ನೂ ಯಜನ ಮಾಡಲಾರದ "ಯಜಮಾನ"ರನ್ನು
ದೇವರ ಅನುಗ್ರಹಕ್ಕಾಗಿ ಅಣಿಗೊಳಿಸುವ ಏಜಂಟರು. ಅಂದರೆ ಭಕ್ತಜನ
ಹಾಗೂ ಭಗವಂತರ ನಡುವೆ ಮುಂದಾಳು ಮಧ್ಯಸ್ಥ, ದಲ್ಲಾಳಿಗಳು. ಅರ್ಥಾತ್
"ವರ್ಣಾನಾಂ ಬ್ರಾಹ್ಮಣೋ ಗುರುಃ" ಎಂದರು. ಯಾರು? ಈ ಬ್ರಾಹ್ಮಣರೇ.
ಒಂದು ಕಾಲದಲ್ಲಿ "ಭಟ್ಟ" ಎಂಬ ಉಪಾಧಿ ವಿಶಿಷ್ಟ ಪಾಂಡಿತ್ಯದ ಅಧಿಕಾರ
ಗಳಿಸಿದವರಿಗೆ ಇತ್ತು. ಉದಾ: ಭಟ್ಟ ನಾರಾಯಣ, ಭಟ್ಟ ಕಮಲಾಕರ, ಭಟ್ಟ
ತೌತ ಇತ್ಯಾದಿ. ಆದರೆ ಹೇಗೋ ಎಲ್ಲ ವೈದಿಕರೂ ಭಟ್ಟರೆನಿಸಿಕೊಂಡರು,
ಇಂದು ಡಾಕ್ಟರೇಟು (ಎಮ್.ಡಿ.) ಪಡೆಯದ ವೈದ್ಯರೆಲ್ಲರೂ ಡಾಕ್ಟರರೆಂದು
ಕರೆದುಕೊಳ್ಳುವಂತೆ!

ಪೂಜೆ ಪಾರಾಯಣ ಅನುಷ್ಠಾನ ಜಪ ಎಲ್ಲ "ಆವರಣ"ಕೊಟ್ಟು
(by proxy) ಆಯಿತು. ಯಜಮಾನನ ಪರವಾಗಿ "ಆವರಣ" ಪಡೆದ
ಭಟ್ಟರದೇ ಕಸಬಾಯಿತು. ಯೋಗ್ಯ ಸುವರ್ಣಪುಷ್ಪ ದಕ್ಷಿಣೆಗೆ ಕೊಡ
ಕೊಳ್ಳುವ ಸರಕಾಯಿತು. ದೇವತೆಗಳೆಲ್ಲ ಮಂತ್ರಗಳಿಗೆ ಅಧೀನ, ಮಂತ್ರ
ಗಳೋ ಬ್ರಾಹ್ಮಣರ ಅಧೀನ. ಆದ್ದರಿಂದ ಬ್ರಾಹ್ಮಣರೇ ನಮ್ಮ ದೇವತೆಗಳು
ಎಂದು ಯಜಮಾನನೆಂಬ ಗ್ರಹಸ್ಥ ಕೈಜೋಡಿಸಿ ಭೂ–ಸುರರ ಕಾಲಿಗೆ ಬೀಳು
ವಂತೆ ಆಯಿತು. ಬ್ರಾಹ್ಮಣರ ಪಾದಧೂಳಿ "ಅಪಾರ ಸಂಸಾರ ಸಮುದ್ರಕ್ಕೆ
ಸೇತು"ವಾಯಿತು. ಈ ಬ್ರಾಹ್ಮಣನಿಗೆ ಬ್ರಹ್ಮಜ್ಞಾನ ಇರಬೇಕೆಂತಿಲ್ಲ. ಆತ
ಶ್ರೋತ್ರೀಯ, ವೈದಿಕ ಕೇವಲ ನಾಮ ಮಾತ್ರ ಹಿಂದೆಲ್ಲ ಅವನಿಗೆ ತನ್ನ ವೇದದ
ಶಾಖೆ ಆದಕ್ಕೆ ಸಂಬಂಧಪಟ್ಟ ಗೃಹ್ಯಧರ್ಮ ಸೂತ್ರಗಳ ಜ್ಞಾನವಿರಬೇಕಿತ್ತು.
ಆದರೆ ಮುಂದೆಲ್ಲ, ವರ್ಣ ಹೋಗಿ ಜಾತಿ ಮುಖ್ಯವಾದಂದಿನಿಂದ, ಈ ಶಾಖಾ
ಸೂತ್ರಗಳ ಬದಲು ಶಿಖಾ ಸೂತ್ರಗಳಿಗೆ ಅಂದರೆ ಜುಟ್ಟು ಜನಿವಾರಗಳಿಗೆ
ಮನ್ನಣೆ ಬಂದಿತು!

ಧ್ಯಾನಕ್ಕಿಂತ ಜಪಕ್ಕೆ ಪ್ರಾಶಸ್ತ್ಯ ಬಂದಿತು. ಧ್ಯಾನದಲ್ಲಿ ಮನಸ್ಸಿನ
(ಚಿತ್ತ)ದ ಏಕಾಗ್ರತೆ, ಅದರಿಂದ ನಿರ್ವಿಕಾರ ಮನಃಶಾಂತಿ (ಸಮಾಧಾನ
ಸಮಾಧಿ) ಸಾಧನೆಯೇ ಗುರಿ ಇತ್ತು. ಅದಕ್ಕಾಗಿ "ಜಪ"ವೆಂದರೆ,
ಜಪಿಸುವ ಮಂತ್ರದ ಅರ್ಥ ಭಾವನೆ ಅನುಸ್ಮತ್ತದೆ ಯೋಗಶಾಸ್ತ್ರ. ("ಮಂತ್ರ"
ವೆಂದರೂ ಮನನ ಮಾಡಿದ್ದು ಎಂಬ ಅರ್ಥ.) ಆದರೆ ಮುಂದೆಲ್ಲ ಅರ್ಥಕ್ಕಿಂತ

ಶಬ್ದಕ್ಕೆ (ಬೀಜಾಕ್ಷರಗಳಿಗೆ) ಮಹತ್ವ ಬಂದಿತು. ಲಕ್ಷ್ಯ ಜಪ-ಕೋಟಿ ಜಪ ಜನಪ್ರಿಯವಾಯಿತು. ವ್ಯಾಧನಾದ ವಾಲ್ಮೀಕಿ "ಮರ-ಮರ" ಎಂದು ಜಪಿಸಿಯೇ ಮಹರ್ಷಿ ಆದನೆಂಬ ಕಥೆ ಪ್ರಚುರವಾಯಿತು. ಅಜಾಮಿಳನಂಥ ಪಾಪಿ ಸಾಯುವಾಗ ಮಾಧವ, ಕೇಶವ, ನಾರಾಯಣ ಎಂದೆಲ್ಲ ತನ್ನ ಮಕ್ಕಳನ್ನು ಕರೆದ ಮಾತ್ರಕ್ಕೆ ಯಮದೂತರು ಕಾಲು ಕಿತ್ತರು. ಆ ನಾಮೋಚ್ಚಾರಣೆಯ ಪುಣ್ಯದಿಂದ ನೇರ ವೈಕುಂಠಕ್ಕೆ ಒಯ್ಯಲು ಅವನಿಗಾಗಿ ವಿಮಾನ ಇಳಿದು ಬಂದಿತು. ಹೀಗೆ ದೇವರಿಗಿಂತಲೂ ದೇವರ "ನಾಮದ ಬಲ" ಹಿರಿದಾಯಿತು.

ಅಂದರೆ, ನಿಜವಾಗಿಯೂ ಭಾವಿಕ ಭಜಕ ಜನ ಇದನ್ನೆಲ್ಲ ಮನವಾರೆ ನಂಬಿದರು. ಆದರೆ ಈ ನಂಬಿಗೆ ಹುಟ್ಟಿಸಿ, ಬಲಗೊಳಿಸಿ ಅದರಿಂದ ವ್ಯವಸ್ಥಿತವಾಗಿ ಲಾಭ ಪಡೆಯುವ ಪರಮಾರ್ಥ ಜೀವಿಯಾದ ವರ್ಗವೇ ಉಂಟಾಯಿತು, ಬಲಿಷ್ಠವಾಯಿತು. ಅಂಥವರಲ್ಲಿ ಮೂರ್ಖರು ಆತ್ಮ ವಂಚನೆಯಲ್ಲಿ, ಧೂರ್ತರು ಪರವಂಚನೆಯಲ್ಲಿ ತೊಡಗಿದರು. ಶಂಕರಾಚಾರ್ಯರು ಇದಕ್ಕೆ "ಉದರ ನಿಮಿತ್ತಂ ಬಹುಕೃತವೇಷಂ" ಎಂದು ಮರುಗಿದರು. ಪುರಂದರದಾಸರು ಇದನ್ನು "ಉದರ ವೈರಾಗ್ಯ"ವೆಂದು ಜರೆದರು. ಆದರೇನು? ಮನೋಜಾಡ್ಯಕ್ಕೆ ಮದ್ದಿಲ್ಲ. ಜತೆಗೆ ಮತಾಂಧತೆ, ಪಟ್ಟಭದ್ರಹಿತಾಸಕ್ತಿ, ಅಗ್ಗದರದ ಪುಣ್ಯಪ್ರಾಪ್ತಿಯ ಆಮಿಷ ಇವೆಲ್ಲ ಆ ಜಾಡ್ಯಕ್ಕೆ ಜಡ್ಡಿನಂತೆ ಅಂಟಿಕೊಂಡು, ಶತಮಾನ ಶತಮಾನ ಪುಟಗೊಂಡು ಬೆಳೆದು ಬಂದಾಗ ಯಾರೇನು ಮಾಡುವದು? ಯಾರಿಂದಲೇನಹುದು?

ಹೀಗೆ, ಉದ್ದೇಶವಾದದ (ಟೆಲಿಯೋಲೋಜಿಯ) ಸಿದ್ಧಾಂತದಂತೆ ಈ ಸೃಷ್ಟಿಯ ಉತ್ಪತ್ತಿಗೆ ಹಾಗೂ ಸೃಷ್ಟಿಯಲ್ಲಿ ಮನುಷ್ಯನ ವರೆಗಿನ ಉತ್ಕ್ರಾಂತಿಗೆ ಒಂದು ಉದ್ದೇಶವಿದ್ದು, ಈ ಉದ್ದೇಶದ ಹಿಂದೆ ಒಂದು ಮಹಾಪ್ರಜ್ಞೆ-ವಿರಾಟ್‌ಚೇತನ ಅಥವಾ ಚಿತ್ ಶಕ್ತಿ ಕೆಲಸ ಮಾಡುತ್ತದೆ-ಎಂಬುದು ಒಂದು ಅಂಶ. ಹಾಗೆಯೇ ಈ ಉತ್ಕ್ರಾಂತಿಯಲ್ಲಿ ಮನುಷ್ಯನ ವ್ಯಕ್ತಿತ್ವ ವಿಕಾಸಕ್ಕೆ ಅವಶ್ಯವಾದ ಗುಣ ಮೌಲ್ಯಗಳ ಬೆಳವಣಿಗೆಯ ವಿಕಾಸಕ್ಕೆ ಕೊನೆಯ ಪರಿಪಕ್ವ ಪರಿಪೂರ್ಣ ರೂಪ, ವಿಕಸನದ ಅಂತಿಮ ಗುರಿ ಅದೇ ಮೂಲದ ಮಹಾಚೇತನವೆಂಬುದು ಪರಮಾತ್ಮ ತತ್ವದ ಇನ್ನೊಂದು ಅಂಶ-ಎಂಬುದು ಪ್ರತಿಪಾದಿಸಲ್ಪಟ್ಟಿದೆ.

ಕಾರ್ಯ–ಕಾರಣ ಸರಪಳಿ

ಆದರೆ, ಹೀಗೆ ಸತ್‌ನ್ನು ಚಿತ್ ಆಗಿ ಕಾಣುವದು ಮನುಷ್ಯನ ಮನೋ ವಿಭ್ರಮ. ಆದಿ ಕಾರಣವನ್ನು ಊಹಿಸುವದಾಗಲಿ, ಅದನ್ನು ಮಹಾ ಚೇತನ ವೆಂದೂ ಧೀಶಕ್ತಿಯೆಂದೂ ಆರೋಪಿಸುವದಾಗಲಿ, ಈ ಮಾನವೀಕರಣದ್ದೆ ವಿಕ್ಷೇಪ–ಎಂಬುದೇ ನಾಸ್ತಿಕನ ನಿಲುಮೆ. ಯಾವದೇ ಸೃಷ್ಟಿಗೆ, ನಿರ್ಮಿತಿಗೆ ಮೊದಲು ಈ ಸಂಗತಿಗಳು ಬೇಕೆ ಬೇಕು. ಅಧಿಷ್ಠಾನ (ಆಧಾರ), ಉಪಾದಾನ (ಮೂಲದ್ರವ್ಯ), ಉಪಕರಣ (ಸಾಧನಗಳು), ಉದ್ದೇಶ ಮತ್ತು ನಿಮಿತ್ತ (ಕರ್ತೃ) ಇವೆಲ್ಲವೂ ಕಾರಣಗಳೇ. ಇನ್ನು ಈ ಕಾರಣಗಳೂ ಬೇರೊಂದು ಕಾರಣದ ಕಾರ್ಯಗಳು. ಅವು ಆ ದೃಷ್ಟಿಯಿಂದ ಸ್ವಯಂಭೂ ಅಲ್ಲ, ತಾನೇ ತಾನಾಗಿ ಉಂಟಾದವಲ್ಲ. ಇಲ್ಲಿ ಇನ್ನೂ ಒಂದು ಮಾತು ಮಹತ್ವದ್ದು. ಈ ಕಾರ್ಯಕಾರಣ ಸರಪಳಿಯಲ್ಲಿ ಪ್ರತಿಯೊಂದು ಕಾರ್ಯವೂ ಒಂದಕ್ಕಿಂತ ಹೆಚ್ಚು ಕಾರಣಗಳಿಂದ ಉಂಟಾಗುತ್ತದೆ; ಮತ್ತು ಪ್ರತಿಯೊಂದು ಕಾರಣವೂ ಒಂದಕ್ಕಿಂತ ಹೆಚ್ಚು ಕಾರ್ಯಗಳನ್ನು ಉಂಟುಮಾಡುತ್ತದೆ. ಈ ಮೂಲಕವೇ ಈ ಸೃಷ್ಟಿ ಪ್ರಪಂಚವು ಹೀಗೆ ಬಹುಕಾಲವಾಗಿದೆ, ಇಷ್ಟು ವಿವಿಧವಾಗಿದೆ ಒಟ್ಟಾ ಸಂಕೀರ್ಣವಾಗಿದೆ. ಅಂದಾಗ, ಈ ಸೃಷ್ಟಿಗೆ ಒಂದು ಕಾರಣವಿದ್ದುದಾದರೆ, ಅದೂ ಒಂದೇ ಆಗಿರಲಾರದು. ಅದಕ್ಕೂ ಹಲವಾರು ಕಾರಣಗಳು ಇದ್ದೇ ಇರ ಬೇಕು. ಪ್ರತಿ ಕಾರಣಕ್ಕೂ ಮೇಲೆ ಹೇಳಿದ ಐದು ಕಾರಣಗಳೂ ಇರಲಿಕ್ಕೇ ಬೇಕು. ಅಂದಮೇಲೆ ಈಶ್ವರನೊಬ್ಬನೇ (ಒಂದೇ) ಈ ಜಗತ್ತಿಗೆ ಆದಿ ಕಾರಣ ನೆಂಬುದು ಹೇಗೆ? ಆತನನ್ನು (ಅದನ್ನು) ಕಲ್ಪಿಸಿ ಪೇಚಿಗೆ ಸಿಲುಕುವದಕ್ಕಿಂತ ಆತನ (ಅದರ) ಬದಲು ಈ ಜಗತ್ ಸೃಷ್ಟಿಯೇ ಸ್ವಯಂಭೂ ಸ್ವಯಂ ಚಾಲಿತ ಮತ್ತು ಸ್ವತಃ ಸಿದ್ಧವೆಂದು ಏಕೆ ತಿಳಿಯಬಾರದು? ಸೃಷ್ಟಿ ಎಂದೊಡನೆ ಅದನ್ನು ಸೃಜನಗೊಳಿಸಿದ ಕರ್ತಾರ್‌ನೊಬ್ಬ ಬೇಕಾಯಿತು. ಅವನಿಗೆ ಮೇಲೆ ಹೇಳಿದ ಅಧಿಷ್ಠಾನ, ಉಪಾದಾನ, ಉಪಕರಣ ಉದ್ದೇಶಗಳಾದಿಯಾಗಿ ಕಾರಣ ಗಳು ಬೇಕಾಯಿತು. ಅವೆಲ್ಲ ಅವನೊಂದಿಗೇ ಅವನಿಗಿಂತ ಹಿಂದಿನಿಂದಲೂ ಅಸ್ತಿತ್ವದಲ್ಲಿ ಬರಬೇಕಾಯಿತು. "ಮಡಕೆ ಮಾಡುವೊಡೆ ಮಣ್ಣೇಮೊದಲು" ಅಂದಾಗ, ಕುಂಬಾರನಿಗಿಂತಲೂ ಮಣ್ಣು ಮೊದಲಿನದೆಂದಾಯಿತು. ಮತ್ತೆ ತಿಗರಿ ಭಟ್ಟಿ ಬೆಂಕಿ ಇತ್ಯಾದಿ ಇತ್ಯಾದಿ! "ಸೃಜ್" ಕಲ್ಪನೆಯೇ ಕರ್ತೃತ್ವ ಸೂಚಕ. ಅದು ಸರಿ ಅಲ್ಲ.

ಈ ಪೇಚಿನಿಂದ ಪಾರಾಗಲಿಕ್ಕೆ ವಿಶ್ವಪ್ರಪಂಚವೆಲ್ಲ ಆದಿ ಕಾರಣ ಪರ ಬ್ರಹ್ಮನ ಒಡಲೊಳಗಿಂದಲೇ ಹೊರಟು ಅವನ (ಅದರ)ಲ್ಲಿ ಲೀನವಾಗುತ್ತದೆ

"ಊರ್ಣನಾಭ" (ಜೇಡನ) ಜಾಲದಂತೆ ಎಂಬ ಪ್ರತಿಪಾದನೆ ಮುಂದೆ ಬಂತು. ಇದು ಇನ್ನಿಷ್ಟು ಗಜಿಬಿಜಿಗೆ ಕಾರಣವಾಯಿತು. ಮುಂದೆ ವಿಶ್ವವೆಂಬುದೇ ಒಂದು ತೋರಿಕೆ ಕನ್ನಡಿಯೊಳಗಿನ ಬಿಂಬ. ಬ್ರಹ್ಮನೇ ಸತ್ಯ, ಅದೇ ಜಗತ್ತಾಗಿ ಭಾಸವಾಗುತ್ತದೆ. ಹಗ್ಗ ಹಾವಾಗಿ ಕಾಣಿಸುವಂತೆ ಎಂಬ "ವಿವರ್ತ"ವಾದ ವನ್ನು ಆದಿ ಶಂಕರಾಚಾರ್ಯರು ಮುಂದಿಟ್ಟರು.

ಆದರೆ ಇದರಿಂದ ಗಜಿಬಿಜಿಗೆ ಗೊಂದಲ ಗಂಟುಹಾಕಿಕೊಂಡಿತು. ಹಗ್ಗ ಹಾವಾಗಿ ಕಾಣಲು ಆ ಕಣ್ಣು ಹಾವೆಂಬುದನ್ನು ಮೊದಲು ನೋಡಿರಬೇಕು. ಅಂಥವನಿಗೆ ಹಾವೂ ಹಗ್ಗವಾಗಿ ಕಾಣಬಹುದು–ಮಬ್ಬಿನಲ್ಲಿ, ಮೋಹದಲ್ಲಿ ತುಲಸೀದಾಸನಿಗೆ ಕಂಡಂತೆ (ಆತ ವಿರಹ ವ್ಯಥೆಯನ್ನು ತಾಳಲಾರದೆ, ಮುದ್ದು ಹೆಂಡತಿಯನ್ನು ಕೂಡಲು ಓಡಿ ಬಂದವನು; ಅಟ್ಟದಿಂದ ತೂಗುತ್ತಿರುವ ಹಾವನ್ನೇ ಹಗ್ಗವೆಂದು ಹಿಡಿದು ಏರಿ ಹೋದನಂತೆ–ಅವಳ ಕೋಣೆಗೆ!) ಅಲ್ಲದೆ, ಸ್ವಪ್ನಭಾಸಕ್ಕೂ ಸತ್ಯದ ಮೂಲ ಅನುಭವದ ಆಧಾರವಿರಲೇಬೇಕು. ಹುಟ್ಟು ಗುರುಡನಿಗೆ ಬೆಳಕಿನ ಕನಸು ಬೀಳಲಾರದು. ಪ್ರತಿಬಿಂಬಕ್ಕೆ ಮೊದಲು ಒಂದು ಬಿಂಬ ಬೇಕು.

ಇಷ್ಟೇ, ಶಂಕರ ಮತದಿಂದ ಜಗತ್ತು ಒಂದು ಸೃಷ್ಟಿ, ರಚನೆ ಎಂಬ ವಾದ ಹುಸಿ ಅನಿಸಿತು. ಜಗತ್ ಪ್ರಪಂಚ ಒಂದು ಆವಿಷ್ಕಾರ, ವಿರಾಟ್ ದರ್ಶನ, ಆದಿ ಕಾರಣವೆಂಬುದೇ ಕಾರ್ಯವಾಗಿ ಕಾಣಿಸುತ್ತದೆ. ಅದೊಂದು (appearance) ಎಂದಂತೆ ಆಯಿತು. ಆದರೆ ಇದರಿಂದ ಬ್ರಹ್ಮ ಮತ್ತು ಜಗತ್ತು ವಸ್ತುತಃ ಬೇರೆ ಅಲ್ಲ, ಒಂದೇ ವಾಸ್ತವ ಸತ್ಯವೆಂಬ ಅರ್ಥ ಹೊರಟಿತು. ಭೌತಿಕ ಸತ್ತೆ ಎನಿಸಿ, ಜಗತ್ತಿಗೆ ಒಬ್ಬ ಅಧ್ಯಕ್ಷ ಅಧೀಶ ಉಳಿಯದೇ ಅದ್ವೈತ ವಾದವು ನಿರೀಶ್ವರವಾದವೇ ಆಯಿತು. ತಾತ್ಪರ್ಯದಲ್ಲಿ ಅದು ವಿಜ್ಞಾನಕ್ಕೆ, ನಾಸ್ತಿಕತೆಗೆ ಹತ್ತಿರವಾಯಿತು!

7

ಪೂರ್ಣತ್ವ ದೇವತ್ವ ಇನ್ನೂ ಮುಂದೆ!

ವಿಶ್ವಪ್ರಪಂಚಕ್ಕೆ ಆದಿ ಕಾರಣವೆಂಬುದಿಲ್ಲ. ವಿಶ್ವವು ಒಂದು ಸೃಷ್ಟಿ ಅಲ್ಲ. ಯಾರೋ ಒಮ್ಮೆ ಒಂದೆಡೆಗೆ ನಿಂತು ಅದನ್ನು ಉಂಟುಮಾಡಿದ್ದೆಂಬುದು ಅರ್ಥ ವಿಲ್ಲದ ಅಸಂಗತ ಸಂಗತಿ. ಇನ್ನು ಒಂದೊಮ್ಮೆ, ಅಂಥ ಒಂದು ಕಾರಣ ಉಂಟೆಂದು ಭಾವಿಸಿದರೂ ಅದೂ ಅದರ ಹಿಂದಿನ ಕಾರಣದ ಕಾರ್ಯ ವಾಗಿರಲಿಕ್ಕೇಬೇಕು. ಕಾರ್ಯಕಾರಣ ಸಂಬಂಧದ ನ್ಯಾಯವನ್ನು ಈ

ಕಾರಣದ ಮಟ್ಟಿಗೆ ಕಡಿದಿಡುವದು ನ್ಯಾಯುವಲ್ಲ, ಶಕ್ಯವೂ ಅಲ್ಲ. ಇದೂ ಅಲ್ಲದೆ, ಇಂಥ ಒಂದು ಕಾರಣ ಉಂಟೆಂದು ಅಥವಾ ಇತ್ತೆಂದು ಊಹಿಸಿದರೆ, ಅದೊಂದು ಸಚೇತನ ಪ್ರಜ್ಞೆಯ ವ್ಯಕ್ತಿಯೆಂದು ಭಾವಿಸುವದೂ ಹಾಸ್ಯಾಸ್ಪದ. ಏಕೆಂದರೆ, ವಿಶ್ವ ವಿಕಾಸ ಕ್ರಮದಲ್ಲಿ ಸಚೇತನ–ಸೇಂದ್ರೀಯ ಸಾವಯುವ ಹಾಗೂ ಸ್ವಯಂ ಪ್ರಜ್ಞೆಯ ವ್ಯಕ್ತಿತ್ವ ರೂಪಗೊಂಡು ಉಂಟಾದದ್ದೇ ತೀರ ಈಚೆಗೆ. ಅದನ್ನೇ ಆದಿಯಲ್ಲಿ ಕಲ್ಪಿಸುವದು ನಿರಾಧಾರ, ಅಸಂಗತ.

ವಿಕಾಸ ಕ್ರಮದಲ್ಲಿ ಪೂರ್ಣ ವ್ಯಕ್ತಿತ್ವ ಇನ್ನು ಮುಂದೆ ಮಾನವನಿಂದಲೇ ರೂಪಗೊಳ್ಳಬೇಕು. ಅದರ ಅಂಗಭೂತವಾದ ಗುಣ ಮೌಲ್ಯಗಳನ್ನೇ ದೈವೀ ಅಂಶಗಳೆಂದು ದೇವತ್ವವೆಂದು ಭಾವಿಸುವದು ಸಹಜವೆಂದರೂ ಅದೇನು ವಾಸ್ತವ ಸತ್ಯವಲ್ಲ. "ನ ದೇವ ಚರಿತಂ ಚರೇತ್" ದೇವರಂತೆ ನಡೆಯು ಬೇಕಾಗಿಲ್ಲ, ನಡೆಯುವಂತೆಯೂ ಇಲ್ಲ. ("ಜನ್ಮ ಕರ್ಮ ಚಮೇ ದಿವ್ಯಂ" ಅಂದಿಲ್ಲವೇ ಆ ಭಗವಂತ?) ದೇವಮಾನವನಾಗುವದಾದರೆ ಅದೊಂದು ಆದರ್ಶ; ಪರಿಪೂರ್ಣ ಮಾನವನ ಪರಿಕಲ್ಪನೆ. ಅದರ ಮೇರೆಗೆ ದೇವನೆಂಬು ವವನು ಇನ್ನು ಮುಂದೆ ಎಂದೋ ರೂಪಗೊಳ್ಳಬೇಕು. ಅದೂ ಮಾನವನ ಸಾಧನೆಯಿಂದಲೇ.

ಹೀಗೆ, ಒಂದೆಡೆಗೆ ಯಾಂತ್ರಿಕ ತರ್ಕ (ಆದಿ ಕಾರಣಕ್ಕಾಗಿ), ತಾತ್ವಿಕ ಸಾಂಕೇತಿಕತೆ (ಮೂರ್ತಿ ಪ್ರತೀಕಾದಿ) ಹಾಗೂ ಮೌಲ್ಯಗಳ ಮೇಲ್ಮೆಯ ಮನನ ಇವೆಲ್ಲ ಕೂಡಿ ನಮ್ಮ ದೇವರೆಂಬ ಪರಿಕಲ್ಪನೆ ಸಂಭವಿಸಿದೆ. ಅದನ್ನು ನಮ್ಮ ಅಹಂಕಾರವೇ ಶ್ರದ್ಧೆಯ ಸೂಕ್ಷ್ಮ ಬಂಧದಿಂದ ಕಟ್ಟಿ ಎತ್ತಿ ಹಿಡಿದಿದೆ. ನಾವು ನಮ್ಮನ್ನು ಪ್ರೀತಿಸುತ್ತೇವೆ. ಆದ್ದರಿಂದ ನಮ್ಮದೆಂಬ ದೇವತ್ವವನ್ನು ನೆಚ್ಚಿ ಕೊಳ್ಳುತ್ತೇವೆ. ಗ್ರಾಮದೇವರು, ಕುಲದೇವರು, ಇಷ್ಟದೇವರು ಇಂತಿಷ್ಟೇ ಎಂದು ಲೆಕ್ಕವಿಲ್ಲ. ಯಾಜ್ಞವಲ್ಕ್ಯರೇ ಉಪನಿಷತ್ತಿನಲ್ಲಿ ಹೇಳಿದ್ದುಂಟು–"ಆತ್ಮನಃ ತು ಕಾಮಾಯ ದೇವಾಃ ಪ್ರಿಯಾಃ ಭವಂತಿ" ತನ್ನನ್ನು ತಾನು ಕಾಮಿಸುವದರಿಂದಲೇ– ಪ್ರೀತಿಸುವದರಿಂದಲೇ ದೇವರೆಂಬುದು ನಮಗೆಲ್ಲ ಪ್ರಿಯ ವಸ್ತು. ಆತ್ಮ ಕಾಮ–ಆತ್ಮ ಪ್ರಜ್ಞೆ ಇಲ್ಲದ ಪ್ರಾಣಿ–ಪಶು ವರ್ಗಕ್ಕೆ ದೇವರೆಂಬ ಕಲ್ಪನೆ ಇಲ್ಲ.

ನಮ್ಮ ಮನೆ ದೇವರ ಪೂಜಾ ವಿಧಾನದಲ್ಲಿಯೂ ಪೂಜೆಯ ಆರಂಭದಲ್ಲಿ ನಮ್ಮಲ್ಲಿರುವದೆಂಬ ದೇವಾಂಶವನ್ನು ನಾವು ಪೂಜಿಸಲಿರುವ ಮೂರ್ತಿಯಲ್ಲಿ ಆವಾಹನೆ ಮಾಡಿ ಆಮೇಲೆ ಅದನ್ನು ಪೂಜಿಸುತ್ತೇವೆ. ಪೂಜೆಯ ನಂತರ ಆ ದೇವಾಂಶವನ್ನು ಅಲ್ಲಿಂದ ವಿಸರ್ಜಿಸಿ, ತಿರುಗಿ ನಮ್ಮ ಅಂತರಾತ್ಮನಲ್ಲಿಯೇ ಸೇರಿಸಿಕೊಳ್ಳುತ್ತೇವೆ. ಈ ಆವಾಹನೆ–ವಿಸರ್ಜನೆಗಳು ಏನನ್ನು ಸೂಚಿಸುತ್ತವೆ?

ದೇವತ್ವವು ನಮ್ಮ ಅಂತರ್ಯಾದ ಭಾವದ್ದೇ ಒಂದು ಅಧ್ಯಾರೋಪ; (Projection). ವಿಸರ್ಜನ ಪೂಜೆಯ ನಂತರ ಎಂಥ ಬೆಲೆಬಾಳುವ ಗಣಪತಿಯೂ ಒಂದು ಮಣ್ಣಿನ ಗೊಂಬೆ-ಅದು ನೀರಪಾಲು ಆಗುವದೇ! ನಮ್ಮಲ್ಲಿ ಸತ್ಯ ನಾರಾಯಣ ಪೂಜೆಗೆಂದು ಕಲಶದ ಮೇಲಿಡಲು ಅಂಗಡಿಯಿಂದ ಒಂದು ತೆಂಗಿನ ಕಾಯಿ ಕೊಂಡು ತರುತ್ತೇವೆ. ತರುವಾಗ ಅಂಗಡಿಕಾರನಿಗೂ ಪೂಜೆಗೆ ಬರಲು ಆಮಂತ್ರಿಸುತ್ತೇವೆ. ಆತ ಬಂದವನೇ ಕಲಶದ ಮೇಲೆ ಕೂತ ತನ್ನ ಅಂಗಡಿಯ ತಾನು ಮಾರಿ, ಲಾಭ ಗಿಟ್ಟಿಸಿಕೊಂಡ ಅದೇ ತೆಂಗಿನಕಾಯಿಗೆ ಅಡ್ಡಬಿದ್ದು ಕೈಮುಗಿ ಯುತ್ತಾನೆ. ಏಕೆ? ಅದು ಆಗ ದೇವರು! ಅದರಲ್ಲಿ ಯಜಮಾನರ ಭಾವನೆ ದೇವತ್ವವನ್ನು ಆಹ್ವಾನಗೊಳಿಸಿದ್ದಾಗಿದೆ. ಅದರ ಅವಹೇಳನೆ ಮಾಡುವದು ಅದನ್ನು ದೇವರೆಂದು ಕಾಣುವ ಅಲ್ಲಿ ನೆರೆದ ಎಲ್ಲರ ಭಾವನೆಯನ್ನು ನೋಯಿಸಿ ದಂತೆ.

ಅವರವರ ಭಾವದಂತೆ ಅವರವರ ದೇವರು. ಗ್ರಾಮದ ಸಾರ್ವಜನಿಕರ ಶ್ರದ್ಧೆಗೆ ಗ್ರಾಮದೇವರು. ಕುಟುಂಬದ ಪರಂಪರಾಗತ ಭಾವನೆಗೆ ಕುಲದೇವರು. ನಮ್ಮ ನಮ್ಮ ಇಷ್ಟಾರ್ಥ ಪೂರ್ತಿಗೆ ವಿಶಿಷ್ಟ ಭಾವನೆಗೆ ನಮ್ಮ ನಮ್ಮ ಇಷ್ಟದೇವತೆ-ರಾಮ, ಕೃಷ್ಣ, ಗಣಪತಿ, ದತ್ತಾತ್ರೇಯ, ಸುಬ್ರಹ್ಮಣ್ಯ, ಜಟಗ, ಮಾಸ್ತಿ ಇತ್ಯಾದಿ. ಮಕ್ಕಳಿಲ್ಲದವರು ಸಂತತಿಗಾಗಿ ಹನುಮಂತ, ಗಣಪತಿಯಂಥ ದೇವರ ಆರಾಧನೆ ಮಾಡುತ್ತಾರೆ. ಈ ದೇವರು ಬ್ರಹ್ಮಚಾರಿಗಳೇ! ದತ್ತಭಕ್ತರೊಬ್ಬರು ನಮ್ಮಲ್ಲಿ ದತ್ತಾತ್ರೇಯನ ಭಾವಚಿತ್ರ ವನ್ನು ನೋಡಿ ಉದ್ಗರಿಸಿದರು-"ಗೌರೀಶ, ದತ್ತನ ಇಂಥ ಲಂಗೋಟಿ ತೊಟ್ಟ ದಿಗಂಬರ ಚಿತ್ರ ಮನೆಯಲ್ಲಿ ಇಡಬಾರದು. ಇದು ಕುಟುಂಬಸ್ಥರು ಸಂಸಾರಿ ಗಳು ಪೂಜಿಸಬಾರದು!" ನಿತ್ಯ ದತ್ತ ಭಜನೆ ಮಾಡುವ ದತ್ತ ಜಯಂತಿಯನ್ನು ವಿಜೃಂಭಣೆಯಿಂದ ಪ್ರತಿವರ್ಷ ಆಚರಿಸುವ ಈ ನನ್ನ ನಿಷ್ಠಾವಂತ ದತ್ತೋ ಪಾಸಕರೇ ದತ್ತನ ಆಕೃತಿಯಲ್ಲಿಯೂ ಈ ತಾರತಮ್ಯದ ವಿಧಿನಿಷೇಧ ಪಾಲಿಸು ತ್ತಿದ್ದರು! ಇದಕ್ಕೆ ಏನೆನ್ನಬೇಕು? ಅವರ ಭಕ್ತಿ ಸಕಾಮವಿತ್ತು. ಅವರ ಜಾಯಮಾನಕ್ಕೆ ಒದಗಿಬಂದ ಆರ್ಥಿಕ ಆಪತ್ತಿನ ಪರಿಹಾರಕ್ಕಾಗಿ ಅವರ ಗುರು ಗಳು ದತ್ತೋಪಾಸನೆಯನ್ನು ಮಾಡಲು ಹೇಳಿದ್ದರು. ಕೆಲವರಿಗೆ ಉಗ್ರ ದೇವತೆಗಳು, ಕೆಲವರಿಗೆ ಸ್ತ್ರೀ ದೇವತೆಗಳು, ಕೆಲವರಿಗೆ ನಾಗಪೂಜೆ, ವೃಕ್ಷಪೂಜೆ, ಲಿಂಗಪೂಜೆ, ಸಾಲಿಗ್ರಾಮ ಪೂಜೆ, ಶ್ರೀ ಚಕ್ರಪೂಜೆ, ಕೆಲವರಿಗೆ ನಿತ್ಯಪೂ ಒಂದು ಗಣಹೋಮ, ಸತ್ಯನಾರಾಯಣ, ವರದಶಂಕರ ವ್ರತ ಇತ್ಯಾದಿ ಇತ್ಯಾದಿ ಪ್ರಿಯ. "ಸಪಾದ" ಪ್ರಸಾದಕ್ಕಾಗಿಯೇ ಸತ್ಯನಾರಾಯಣ ಪೂಜೆ ಮಾಡುವ ಭಕ್ತರು ಎಷ್ಟು ಮಂದಿ ಇಲ್ಲ! ನನ್ನ ಒಬ್ಬ ಗೆಳೆಯರು ಒಂದು

ಸತ್ಯನಾರಾಯಣ ಪೂಜೆಗೆ ಹೋಗಿ ಬಂದವರೆಂದರು-"ಇದೆಂಥ ಸತ್ಯನಾರಾಯಣ! ಮೊನ್ನೆ ಶ್ರೀ.........ಅವರ ಮನೆಯ ಸತ್ಯನಾರಾಯಣ ಪೂಜೆಯೇ ಪೂಜೆ! ಸಾಬೂನು ಹಚ್ಚಿ ಕೈ ತೊಳೆದುಕೊಂಡರೂ ಆ ತುಪ್ಪದ ನಯ ಪ್ರಸಾದದ ವಾಸನೆ ಹೋಗಲಿಲ್ಲ!" "ಆತ್ಮನಸ್ತು ಕಾಮಾಯ........" ಎಂಬ ಉಪನಿಷದ್ವಾಕ್ಯ ಸುಳ್ಳಲ್ಲ.

ಈ ದೇವರಿಗಿಂತ ಆ ದೇವರು ಹಿರಿದು. ನಿಮ್ಮ ದೇವರಿಗಿಂತ ನಮ್ಮ ದೇವರು ಮೇಲು. ಕಲ್ಲು ದೇವರಿಗಿಂತ ಅಗ್ನಿ ಉಪಾಸನೆ ಶ್ರೇಷ್ಠ. ಮೂರ್ತಿ ಪೂಜೆ ಕೆಳಮಟ್ಟದ್ದು. ಸಗುಣಕ್ಕಿಂತ ನಿರ್ಗುಣ, ನಿರಾಕಾರ ದೇವರ ಉಪಾಸನೆ ಉತ್ತಮ-ಹೀಗೆಲ್ಲ ವಾದಿಸುವವರು ಮೂಲತಃ ದೇವರೆಂಬ ಒಂದು ಕಲ್ಪನೆ ಯನ್ನು ಒಪ್ಪಿಕೊಂಡವರೇ. ಇವರು ಇತರರ ದೇವರ ಕಲ್ಪನೆಯ ಬಗೆಗೆ ಮಾತ್ರ, ತುಂಬ ತಾರ್ಕಿಕ ವಿಚಿಕಿತ್ಸೆ ವಿವಾದ ಮಾಡಬಲ್ಲರು. ಆದರೆ ತಮ್ಮ ಕಲ್ಪನೆಯ ಮಟ್ಟಿಗೆ ತುಂಬ ಅಭಿಮಾನ, ಅಭಿನಿವೇಶ, ಆವೇಶ!

"ನೂರು ದೇವರನ್ನೆಲ್ಲ ನೂಕಾಚೆ ದೂರ" ಎಂದು ಗರ್ಜಿಸುವ ಕವಿ ಅವರ ಬದಲು ನಾಡ ದೇವರನ್ನು ಸ್ಥಾಪಿಸಲು ಆರಾಧಿಸಲು ಕಳಕಳಿಯ ಕರ ನೀಡುತ್ತಾರೆ. ಅಂದರೆ, ಅವರಿಗೆ ಅವರದೇ ಪರಿಭಾವನೆಯ ದೇವರು ಬೇಕು. ನಾವಿಲ್ಲಿ ಚರ್ಚಿಸುವದು ಮೂಲದ ದೇವರೆಂಬ ಕಲ್ಪನೆಯ ಸ್ವರೂಪದ ಬಗೆಗೆ. ಅದು ತುಂಬ ಮೋಹಕ. ಅಷ್ಟೇ ಭ್ರಾಮಕ. ಅಷ್ಟೇ ಅನೇಕರಿಗೆ ಆವಶ್ಯಕ ಸ್ವಾಭಾವಿಕವೆನ್ನುವಷ್ಟು ಪ್ರಯೋಜಕ.

ಅಜ್ಞಾತ—ಅವ್ಯಕ್ತ—ಅದ್ಭುತ—ಆಕಸ್ಮಿಕ

ಅಜ್ಞಾತದ ಭಯ, ಅವ್ಯಕ್ತದ ಕುತೂಹಲ, ಅದ್ಭುತದ ಕುರಿತ ಆಶ್ಚರ್ಯ ಆಘಾತ—ಅಪಘಾತಗಳಂಥ ಆಕಸ್ಮಿಕ ಅನಾಹುತಗಳ ಇದಿರು ಅಸಹಾಯಕತೆ ಆರ್ತತೆ- ಇವೆಲ್ಲ ಪ್ರೇರಣೆಗಳಿಂದ ಮನುಷ್ಯ ಅನಾದಿ ಕಾಲದಿಂದಲೂ—ಗವಿಯಿಂದ ಗುಡಿಗೋಪುರಗಳವರೆಗೂ ಕಾಡು ಕೊಂಪೆಯಿಂದ ನಾಡು ನಗರಗಳವರೆಗೂ ಈ ದೇವರೆಂಬ ತನಗಿಂತ ತನ್ನ ಸುತ್ತಲಿನ ಎಲ್ಲ ಬಲಿಷ್ಠ ಗರಿಷ್ಠ ಸಂಗತಿಗ ಗಿಂತ ಭವ್ಯವಾದ ಹಿರಿದಾದ ಪ್ರಚಂಡ ಶಕ್ತಿಶಾಲಿಯಾದ ಏನೋ ಒಂದು ಸತ್ವ ವನ್ನು ಕಲ್ಪಿಸಿ, ಪ್ರತಿಮೆ, ಪ್ರತೀಕಗಳಲ್ಲಿ ಶಿಲ್ಪಿಸಿ, ಆರಾಧಿಸುತ್ತ ಬಂದಿದ್ದಾನೆ.

50 ವರ್ಷಗಳ ಹಿಂದಿನ ಕತೆ. ಅಂದು ಪತ್ರಿಕೆಗಳಲ್ಲಿ ಓದಿದ್ದು. ಉತ್ತರ ಧ್ರುವ ಪ್ರದೇಶದ ಎಸ್ಕಿಮೋ ಜನರ ಒಂದು ವಸತಿಯಲ್ಲಿ ಒಂದು ಹಿಮ ಕಲ್ಲು ಹೇರಿ ಕಟ್ಟಿ ನಿಲ್ಲಿಸಿದ ಒಂದು ಗುಡಿ. ಆ ಗುಡಿಯಲ್ಲಿ ಆ ಜನ ಭಕ್ತಿಭಾ

ದಿಂದ ಹೋಗಿ ಪೂಜೆ ಸಲ್ಲಿಸುತ್ತಿರುವ ಒಂದು ದೇವತೆ. ಅದೆಂತಹದು? ಮುರಿದು ಬಿದ್ದ ವಿಮಾನದ ಒಂದು ರೆಕ್ಕೆ! ಆ ಜನಕ್ಕೆ ಅದು ಪೂರ್ತಿ ಅಜ್ಞಾತ. ಅಷ್ಟೇ ಆಕಸ್ಮಿಕ. ಒಂದು ಮುಂಜಾನೆ ಆ ಹಿಮದ ಚಳಿಗಾಡಿನಲ್ಲಿ ಕಾಣಿಸಿ ಕೊಂಡಿತು. ಎಲ್ಲಿಂದ ಬಂತು? ಯಾರು ನಿಲ್ಲಿಸಿದರು? ಅವರ ಹುಟ್ಟು ಗುಟ್ಟು ಎಲ್ಲ ಗೂಢ. ಅಂತೆಯೇ ಆ ಸರಳ ಮುಗ್ಧ ಜೀವಿಗಳಿಗೆ ಅದು ದಿವ್ಯ. ಅದಕ್ಕೆ ಗುಡಿ ಕಟ್ಟಿದರು. ಅವರ ಪಾಲಿಗೆ ಅದೋಂದು "ಅದ್ಭುತ ದೇವರು!" ಡೇನಿಯಲ್ ಡೆಫೋನ "ರಾಬಿನ್‌ಸನ್ ಕ್ರೂಸೋ" ಕಾದಂಬರಿಯಲ್ಲಿ ಕ್ರೂಸೋನ ಆದಿವಾಸಿ ಬಂಟ ಫ್ರ್ರೈಡ್ಡ ಒಡೆಯನ ಬಂದೂಕನ್ನು ಭಯಭಕ್ತಿಯಿಂದ ಕಾಣುತ್ತಾನೆ. ಅದೋಂದು ಅವನಿಗೆ ಹೊಸ ಶಕ್ತಿ!

ನಮ್ಮಲ್ಲಿ "ಜ್ಯೋತಿರ್ಲಿಂಗ"ಗಳೆಂದು ಇವೆ. ಪ್ರಾಚೀನ ಕಾಲದಿಂದಲೂ ಹೆಸರುವಾಸಿ. ಬಹುಶಃ ಇವು ಹಿಂದೊಮ್ಮೆ ಉಲ್ಕಾಪಾತವಾಗಿ ಅಲ್ಲಲ್ಲಿ ಕಂಡು ಬಂದ ಕಲ್ಲುಗಳು-ಅಪರೂಪದ ಈ ಶಿಲಾಖಂಡಗಳನ್ನೇ "ಜ್ಯೋತಿರ್ಲಿಂಗ" ಗಳೆಂದು ಉದ್ಭವಲಿಂಗಗಳೆಂದೂ ಆಯಾ ಜನಪದದ ಭಾವಿಕ ಜನ ಒಪ್ಪಿ ನಂಬಿ ನಡೆದುಕೊಂಡು ಬಂದಿರಬೇಕು.

ಇಂಥ ಒಂದೊಂದು ದೇವತೆಯ ಪರಿಕಲ್ಪನೆಯೂ ಒಂದು ಸಂಕೀರ್ಣ ಸಂಕೇತ. ಅದರ ಅನ್ವೇಷಣೆ ವಿಶ್ಲೇಷಣೆ ಇಲ್ಲಿ ಅಪ್ರಸ್ತುತ. ಆದರೂ ಒಂದು ಮಾತನ್ನು ಎತ್ತಿ ಹೇಳಬೇಕು. ಕಲೆಗಳ ಕ್ಷೇತ್ರದಲ್ಲಿ ಹೇಗೋ ಹಾಗೆಯೇ ಈ ದೈವೀಕರಣದ ಕ್ಷೇತ್ರದಲ್ಲಿಯೂ ಮಾನವನ ಬುದ್ಧಿಯು ಎರಡು ನಿಟ್ಟಿನಲ್ಲಿ ಕೆಲಸ ಮಾಡಿದ್ದು ಕಾಣುತ್ತದೆ. ಒಂದು ಅನುಕರಣ. ಇನ್ನೊಂದು ಕಲ್ಪಕತೆ. ಕಲೆಗಳಲ್ಲಿ ಚಿತ್ರ, ಶಿಲ್ಪ, ಕೆಲಮಟ್ಟಿಗೆ ಸ್ಥಾಪತ್ಯ (ವಾಸ್ತುರಚನೆ) ಅಭಿನಯ-ಇವು ಅನುಕರ ಣಾತ್ಮಕ. ಪ್ರಕೃತಿಯ ಚಲನವಲನ ಸ್ಥಿತಿ-ಗತಿಗಳ ಅನುಕರಣೆ. ಆದರೆ ಸಂಗೀತ, ನೃತ್ಯ, ಅಲಂಕಾರಿಕ ರಚನೆ ಇತ್ಯಾದಿ ಕಾಲ್ಪನಿಕ. (ವಾಸ್ತು ಶಿಲ್ಪವೂ ಕಾಲ್ಪನಿಕವೇ ಅನ್ನಬೇಕು.)

ಅದೇ ರೀತಿ ಅನೇಕ ದೇವತಾ ವಿಗ್ರಹಗಳು ಮಾನವ ಅಥವಾ ಇತರ ಪಶು-ಪಕ್ಷಿಗಳ ಪ್ರತಿಕೃತಿಗಳು. ಆದರೆ ಇನ್ನು ಅನೇಕ ದೇವತೆಗಳು ಕಾಲ್ಪನಿಕ. ಅಂದರೆ ಮನುಷ್ಯ, ಪಶು, ಪಕ್ಷಿ, ಇವುಗಳ ಅಂಗಾಂಗಗಳಿಂದ ಕೂಡಿದ ಸಂಯುಕ್ತ ಆಕೃತಿಗಳು. ಗಣಪತಿ, ಹಯಗ್ರೀವ, ನೃಸಿಂಹ, ಮತ್ಸ್ಯ, ವರಾಹ ಮುಂತಾ ದವು. ಇಲ್ಲಿಯೂ ಒಂದು ಸಣ್ಣ ಸೋಜಿಗ. ಭಾರತದ ಹೊರಗೂ ಇಂಥ ಕೆಲವು ದೇವತೆಗಳು ಹಿಂದೆ ಇದ್ದವು. ಇಜಿಪ್ತದ ಸ್ಫಿಂಗ್ಸ್ ಬ್ಯಾಕಸ್ ಅವನ ಗಣಗಳಾದ ಸ್ಯಾಟಿರ್. ಹಾಗೆಯೇ ಸೈತಾನ ಇತ್ಯಾದಿ. ಇಲ್ಲಿಯ ಸೋಜಿಗದ

ವಿಶೇಷವೆಂದರೆ, ನಮ್ಮಲ್ಲಿ ಗಣಪತಿ ದಕ್ಷಪ್ರಜಾಪತಿ ಅಥವಾ ನೃಸಿಂಹ ಹಯಗ್ರೀ
ರಿಗೆ ಮನುಷ್ಯನ ದೇಹ. ಆದರೆ ತಲೆಯು ಆನೆ, ಮೇಕೆ, ಸಿಂಹ, ಕುದು
ಇತ್ಯಾದಿಗಳದು. ಆದರೆ ಈ ಗ್ರೀಕ ಪುರಾಣದ ದೇವತೆಗಳಲ್ಲಿ ದೇಹ ಪಶ
ಗಳದು. ಆದರೆ ಉತ್ತಮಾಂಗಗಳು ಮನುಷ್ಯನವು! ಅಂದರೆ ಈ ದೇವಸತ್ವ
ಗಳ ಮಿದುಳು ಬುದ್ಧಿಶಕ್ತಿ ಎಲ್ಲ ಮಾನವರಂತೆ! ಸ್ಪಿಂಕ್ಸ ದೇವತೆಯ ದೇ
ಸಿಂಹನದು. ಆದರೆ ತಲೆ ಹೆಣ್ಣಿನದು. ಬ್ಯಾಕಸ್ ಹಾಗೂ ಅವನ ಅನುಚರ
ದೇಹ ಕುದುರೆಯದು. ಆದರೆ ತಲೆ ಮನುಷ್ಯನದು. ಸೈತಾನನಿಗೆ ಕೋಡು
ಇದ್ದರೂ ಬಾಲವಿದ್ದರೂ ಆಕೃತಿ ಮುಖಚರ್ಯೆ ಮನುಷ್ಯನದೇ.

ಹಾಗೆಯೇ ಪಾಶ್ಚಾತ್ಯ ಪುರಾಣಗಳಲ್ಲಿ ಹೆಚ್ಚಾಗಿ ಒಂದೇ ತಲೆಯ ಎರಡ
ತೋಳುಗಳ ದೇವತೆಗಳು. ನಮ್ಮಲ್ಲಿ ತಲೆಗಳ ಸಂಖ್ಯೆ 3, 4, 5 ಏನೆಲ್ಲ ಅ
ಬಹುದು. ತೋಳುಗಳೂ 4, 6, 8 ಮುಂತಾಗಿ. ವಿರಾಟ್‌ಪುರುಷನಿಗಂತ
ಸಾವಿರ ತಲೆ, ಸಾವಿರ ಭುಜ, ಸಾವಿರ ಪಾದ, ಮಹಾಕಾಳಿಗೆ 30 ಕಂ
60 ಭುಜ. ಇನ್ನು ಇವೆಲ್ಲ ಆಕೃತಿಗಳು ಕೆಲವೊಂದು ತಾತ್ವಿಕ ತಾಂತ್ರಿಕ ಸಂಖ
ಗಳಿಗೆ ಸಾಂಕೇತಿಕವಾಗಿಯೇ ಮೂಲದಲ್ಲಿ ಕಾಣಿಸಿಕೊಂಡಿರಬಹುದು. ಆದ
ಪರಂಪರೆಯಲ್ಲಿ ತತ್ವ-ತಂತ್ರಗಳ ಮರ್ಮ ಮರೆಯಾಗಿ ಈ ಅದ್ಭುತ ವಿಗ್ರ
ಗಳಷ್ಟೇ ಭಾವಿಕರ ಭಯ-ಭಕ್ತಿಗಳನ್ನು ಆಳಿದವು.

8

ವೈಜ್ಞಾನಿಕ ನಾಸ್ತಿಕನು ವಿಶ್ವ ಪ್ರಪಂಚದಲ್ಲಿ ಕಾರ್ಯ-ಕಾರಣ ಸಂಬಂ
ವನ್ನು ಹುಡುಕುವನು, ಕಾಣುವನು, ನಂಬುವನು. ಅವನಿಗೆ ಈ ಜಗತ್ತು,
ಜೀವ, ಜೀವನಗಳ ಉತ್ಪತ್ತಿ ವಿಕಾಸ ಹೇಗೆ ಎಂಬುದರದೇ ಜಿಜ್ಞಾಸೆ ಮುಖ
ಮತ್ತು ಮೂಲದ್ದು. ಅದು ಏಕೆ ಎಂಬುದರಲ್ಲಿ ಅವನ ಆಸಕ್ತಿ ಇಲ್ಲ.
ಎಂಬ ಪ್ರಶ್ನೆ ವಿಶೇಷವಾಗಿ ಉದ್ದೇಶಗಳ ಮೌಲ್ಯಗಳ ಕುರಿತಾದ ಪ್ರಶ್ನೆ. ಅದ
ಕೇವಲ ಮಾನವೀಯ ಪ್ರಜ್ಞೆಯ ಪ್ರಪಂಚಕ್ಕೆ ಒಳಪಟ್ಟಿದ್ದು. ಅದನ್ನು ಜಗತ್ತಿ
ಆದಿಯಲ್ಲಿ ಹುಡುಕುವದು ಅಸಮಂಜಸ.

ಪೂಜಾ-ಸ್ತೋತ್ರ ಪ್ರಿಯ ದೇವತ್ವ!

ಅಲ್ಲದೆ, ಈ ಜಗತ್ತಿಗೆ ಒಂದು ಕಾರಣವನ್ನೋ ಕರ್ತನನ್ನೋ ಊಹಿ
ಅಥವಾ ಕಲ್ಪಿಸಿಕೊಂಡರೂ ಅದರ ಸ್ತುತಿ ಮಾಡುವದು, ಸ್ತೋತ್ರ ಮಾ
ವದು ಹಾಸ್ಯಾಸ್ಪದ ಗಡಿಗೆಯನ್ನು ಕುಂಬಾರ ಮಾಡಿದನೆಂದು ತಿಳಿದುಕೊಂ
ವೆಂದು ಆ ಕುಂಬಾರನನ್ನು ಅಥವಾ ಗಡಿಗೆಗೆ ಮೂಲವಾದ ಮಣ್ಣನ್ನು
ಲಿರುಳು ಅನುದಿನವೂ ಕೊಂಡಾಡುತ್ತಲೇ ಇರುತ್ತಾರೆಯೇ? ಇರಬೇಕೇ? ಕೈಗ

ಕುವ ಗಡಿಗೆಯ ಗುಣ ಧರ್ಮಗಳನ್ನು ತಿಳಿದು ಸರಿಯಾಗಿ ಅದರ ಉಪಯೋಗ ಮಾಡಿಕೊಂಡು, ಆದಷ್ಟು ದೀರ್ಘಕಾಲ ಅದು ಬಾಳುವಂತೆ ನೋಡಿಕೊಂಡರೆ ಅದರಿಂದಲೇ ಆ ಕುಂಬಾರನಿಗೆ ಸಮಾಧಾನ, ಸಾರ್ಥಕತೆ. ಜಗತ್ತು ಒಂದು ಎಡಬಿಡದೆ ಸಾಗುತ್ತಿರುವ ಯಂತ್ರ. "ಗಚ್ಛತಿ ಇತಿ ಜಗತ್" (ಹೋಗುತ್ತಿರುವದು) ಅದರ ಗತಿಧರ್ಮ. ಅದನ್ನು ನಿಯಂತ್ರಿಸುವ ಮರ್ಮ ಅರಿತುಕೊಂಡು ಅವಕ್ಕೆ ಅನುಗುಣವಾಗಿ ನಡೆಯುವದು ಪ್ರಜ್ಞಾವಂತರಾದ ನಮ್ಮ ಕರ್ತವ್ಯ. ಅದನ್ನು ಬಿಟ್ಟು ಅಥವಾ ಮರೆತು ಈ ಯಂತ್ರ ರಚಿಸಿದವನೊಬ್ಬನನ್ನು ಊಹಿಸಿ ಕಲ್ಪಿಸಿ ಅವನನ್ನು ಪೂಜಿಸಲು ತೊಡಗುವದು ಯಾವ ಜಾಣತನ?

ಈ ವಿಶ್ವದ ಮೂಲ ಪರಬ್ರಹ್ಮನೋ, ಅದರ ಮುಖ್ಯ ಪರಮೇಶ್ವರನೋ-ಯಾರೋ ಏನೋ ಇರಲಿ. ಆದರೆ ಇದೆಲ್ಲ ಜಗತ್ತು ಒಬ್ಬ ಜೀವಿಗಾಗಿಯೇ ಜೀವಿಯ ಸುಖ ಸೌಕರ್ಯಗಳಿಗಾಗಿಯೇ ಉಂಟಾಗಿದೆ-ಎಂದೆಲ್ಲ ತರ್ಕಿಸುವದು, ಆ ಜೀವಿಗೇ ವಿಶಿಷ್ಟವಾದ ಅಹಂಕಾರದ ಚೇಷ್ಟೆ. ಅಲ್ಲದೆ, ಅದೊಂದು ಮಾನವನಿಗೇ ಸಹಜವಾದ ಮನೋಧರ್ಮ. ಆ ಈಶ್ವರ ಸರ್ವಗುಣ ಶಕ್ತಿ ಐಶ್ವರ್ಯ ಸಂಪನ್ನ-ಒಬ್ಬ "ಆಳುವ ಮಹಾಪ್ರಭು"ವಿನಂತೆ. ಅವನನ್ನು ಹಾಡಿಪಾಡಿ ಕೊಂಡಾಡಿದರೆ, ಓಲೈಸಿದರೆ ಅವನು ಪ್ರಸನ್ನನಾಗುವನು. ಅವನ ಪ್ರಸಾದದಿಂದ ನಮ್ಮ ದುಃಖ ಕಷ್ಟಗಳೆಲ್ಲ ದೂರವಾಗುವವು. ನಮಗೆ ಆಯುರಾರೋಗ್ಯ ಐಶ್ವರ್ಯ ಅಭಿವೃದ್ಧಿಗಳು ಅನುಕೂಲವಾಗುವವು. ಈಶ್ವರನ ಇಚ್ಛೆಯಿಂದ ವಿಷವೂ ಅಮೃತವಾಗಬಹುದು, ಅಮೃತವೂ ವಿಷವಾಗಬಹುದು-ಎಂದೆಲ್ಲ ನಾವು ಭಾವಿಸುವದು ನಮ್ಮಲ್ಲಿಯ ರಾಜಾಸ್ಥಾನದ ಉನ್ನತ ಅಧಿಕಾರಿಗಳ (ಖಾವಿಂದರ) ಸನ್ನಿಧಾನದ ಅನುಭವದ ಹೋಲಿಕೆ. ನಾವು ಕುಳಿತು ಪ್ರಯಾಣ ಮಾಡುವ ಬಸ್ಸಿನೊಳಗಿನ ಪ್ರತಿ ಪ್ರಯಾಣಿಕನ ಬಯಕೆ ಬೇಡಿಕೆಗಳಿಗೂ ಆ ಬಸ್ಸಿನ ಚಾಲಕರು ಹೊಣೆಗಾರರಲ್ಲ. ನಮ್ಮನ್ನು ಅಂದರೆ ನಮ್ಮ ವಾಹನವನ್ನು ಆದಷ್ಟೂ ಶೀಘ್ರ ಆದಷ್ಟೂ ಸುರಕ್ಷಿತವಾಗಿ ಮುಂದೆ ಒಯ್ಯುವದೇ ಅವನ ಒಂದೇ ಒಂದು ಗುರಿ. ಆದ್ದರಿಂದ ಅವನ ಸೀಟಿನ ಹಿಂದೆ ನಾವೆಲ್ಲ ಓದುವಂತೆ ಒಂದು ಬೋರ್ಡು ಬರೆದಿರುತ್ತದೆ. "ಡ್ರಾಯ್ವರನನ್ನು ಮಾತಾಡಿಸಬೇಡಿರಿ!" ನಮ್ಮ ನಿಮ್ಮ ತಂಟೆ ತುಂಟತನ ಬಡ ಕಂಡಕ್ಟರನೊಡನೆ. ಈ ಜಗತ್ ಎಂಬ ಬಾಳಿನ "ಜಟಕಾಬಂಡಿ"ಗೂ ಹಾಗೆಯೇ. ನಾವು ಅದರ ಸಾಹೇಬನನ್ನು ಮಾತಾಡಿಸುವದರಲ್ಲಿ ಪ್ರಯೋಜನವಿಲ್ಲ. ಅವನು

ತನ್ನ ಅಥವಾ ತನ್ನ ರಥದ ಸಂಕೇತ ಹಾಗೂ ನಿಯುಮಗಳಂತೆ ಪಯಣವನ್ನು ಮುಂದುವರಿಸುತ್ತಿರುತ್ತಾನೆ- ಹೊರತು, ನಮ್ಮ ನಿಮ್ಮ ಮನೋರಥಗಳಂತೆ ಅಲ್ಲ. ಅಲ್ಲಿ ವಿಶೇಷ ಪೂಜೆ ಪುನಸ್ಕಾರಗಳ ವಶೀಲಿ ವಸೂಲಿಗೆ, ಲಂಚಾಮೃತ ಸೇವೆಗೆ ಅವಕಾಶವಿಲ್ಲ. ಅಂದರೆ ಇದರ ಅರ್ಥ, ಈ ಸಾರಿಗೆಗೆ ಒಬ್ಬ "ಸಾಹೇಬ" ನಿದ್ದಾನೆ ಎಂದಲ್ಲ. ಆತನು ಇರುವನೆಂದು ಒಂದೊಮ್ಮೆ "ಇಟ್ಟು ಕೊಂಡರೂ" ಅವನಿಂದ ರಿಯಾಯತಿ ಗಿಟ್ಟಿಸಿಕೊಳ್ಳುವದು ಅಶಕ್ಯ-ಎಂದಿಷ್ಟೇ ನನ್ನ ಅಭಿಪ್ರಾಯು.

ಬದುಕು—ಪ್ರಚಂಡ ಆಕಸ್ಮಿಕ

ಅನಂತಕೋಟಿ ಬ್ರಹ್ಮಾಂಡಗಳು ಸಾವಿರಾರು ಗ್ರಹ ನಕ್ಷತ್ರಗಳ ಅಪಾರ ಪ್ರಪಂಚ. ಅದರಲ್ಲಿಯ ಒಂದು ಸೌರ ಮಂಡಳದಲ್ಲಿ ಒಂದು ಮೂಲೆಯ ಗ್ರಹದಲ್ಲಿ ಒಂದು ಬದಿಯಲ್ಲಿ ಹೇಗೋ ಏನೋ ಈ ಮಾನವನೆಂಬ ಪ್ರಾಣಿ ಹುಟ್ಟಿ ಬಂದನು. ಇತರ ಗ್ರಹಗೋಲಗಳಲ್ಲಿ ಇಂಥ ಒಂದು ಪ್ರಜ್ಞಾವಂತ ಪ್ರಾಣಿ ಇದನ್ನು ಸರಿಗಟ್ಟುವ ಜೀವಿ ಇರುವದೆಂಬುದಕ್ಕೆ ಇನ್ನೂ ಯಾವ ಸಬಲ ಪ್ರಮಾಣಗಳೂ ಸಿಕ್ಕಿಲ್ಲ. ಅಂದಾಗ, ಇದೆಲ್ಲ ವಿಶ್ವ ವಿಸ್ಮಯ. ನಮ್ಮ ಮಟ್ಟಿಗೆ ಒಂದು ಪ್ರಚಂಡ ಆಕಸ್ಮಿಕ. ಇದರ ಹಿಂದೆ ಒಂದು ಸಂಕಲ್ಪ "ಸದುದ್ದೇಶ" ಕೆಲಸ ಮಾಡಿದೆ, ಮಾಡುತ್ತಿದೆ ಎಂದು ಭಾವಿಸುವದು ಮುಗ್ಧ "ಆತ್ಮಕಾಮನೆ"ಯ ಭಾವಿಕತನವೇ ಹೊರತು, ಅದು ಊಹೆಗೆ ನಿಲುಕದ ಸಂಗತಿ. ಕಾರ್ಯ-ಕಾರಣ ಶೃಂಖಲೆ ಸ್ವಯಂಚಾಲಿತ. ಆದರೆ ಅದಕ್ಕೆ ಒಂದು ಆದಿ ಕಾರಣ, ಅದಕ್ಕೆ ಹಿಂದೆ ಒಬ್ಬ "ಆದಿ ಪುರುಷ"-ಹೀಗೆಲ್ಲ ಪ್ರತಿಪಾದಿಸುವದು ಒಂದು ಬಗೆಯ "ಪ್ರಜ್ಞಾವಾದ".

ಕೋತಿಯೊಂದು ಬೆರಳಚ್ಚಿನ ಮೇಲೆ ಕೈಯಾಡಿಸುತ್ತಿದ್ದರೆ, ಹಾಗೆಯೇ ಅಕ್ಷರಗಳನ್ನು ಜೋಡಿಸುತ್ತ ಮೂಡಿಸುತ್ತ ಕಲ್ಪಾಂತದಲ್ಲಿ ಶೇಕ್ಸಪಿಯರನ ನಾಟಕವನ್ನೊಂದು—ಒಂದೇಕೆ? ಎಲ್ಲ ನಾಟಕಗಳನ್ನು ಅಚ್ಚು ಮಾಡಲೂ ಬಹುದು—ಎಂದು ಹೇಳುವದುಂಟು. "ಬಹುದು ಗಿಹುದಿನ" ತರ್ಕದಲ್ಲಿ ಮಾನವನ ಹುಟ್ಟು. ಈ ಒಟ್ಟೂ ವಿಶ್ವ ಪ್ರಪಂಚದಲ್ಲಿ ಅದೇ ರೀತಿಯಾಗಿದೆ. ಮಾನವನು ತನ್ನ ಬದುಕಿಗೆ ತಾನೇ ಬೆಳಕಾಗಿ ಬೆಳೆಯಬೇಕಾಗಿದೆ—ತಾನೇ ಗುರುತಿಸಿಕೊಂಡ ಗುರಿಯತ್ತ.

ಉದ್ದೇಶವೆಂದೊಡನೆ ಸಂಕಲ್ಪ ಬಂದಿತು. ಅದರ ಬೆನ್ನಿಗೆ ಅನುಭವ ವಿರಬೇಕು. ಅದರಿಂದ ಬೋಧ ತಥ್ಯ ಗ್ರಹಿಸಬಲ್ಲ ಪ್ರಜ್ಞೆ (ತಿಳುವಳಿಕೆ) ಅದಕ್ಕೆ

ಆಂಗಿಕವಾಗಿ ಇತರ ಮನಸ್ಸಿನ ಪ್ರಕ್ರಿಯೆ, ಅವುಗಳಿಂದ ಇತ್ಯರ್ಥಕ್ಕೆ ಬರುವ ಬುದ್ಧಿ, ಅದರಂತೆ ಕೆಲಸಕ್ಕೆ ಅಣಿಯಾಗುವ ಇಚ್ಛೆ–ಇವೆಲ್ಲ ಭಾವಕೋಶ ಎಚ್ಚರವಾಗಿ ಪ್ರಚುರವಾಗಿ ಕೆಲಸ ಮಾಡುತ್ತಿರಬೇಕು. ಈ ಶಕ್ತಿಗಳ ಆಧಾರ ವಾಗಿ ಒಂದು ಮಿದುಳು, ಅದಕ್ಕೆ ಹೊಂದಿಕೊಂಡ ಮಜ್ಜಾ ಸಂಸ್ಥೆ, ಅದರ ಚಟುವಟಿಕೆಗೆ ಅನುವಾಗುವ ಇಂದ್ರಿಯಗಳು ಅವಯವಗಳು– ಇದೆಲ್ಲ ಯಂತ್ರೋಪಕರಣ ಸಂಘಟನೆ. ಅಂದರೆ ಮಾನವನಂಥ ಶರೀರ ಈ ಸಮಗ್ರ ಸೃಷ್ಟಿಯ–ಆದಿಯಲ್ಲಿ, ಅಡಿಯಲ್ಲಿ ಇರಬೇಕು. ಅಂತೆಯೇ ನಮ್ಮ ವೈದಿಕ ಋಷಿಗಳು ವಿರಾಟ್‌ಪುರುಷನನ್ನು ಹುಟ್ಟಿಸಿರಬೇಕು. ಅವರ ಈ ಕಲ್ಪನೆ ಹುಚ್ಚಾಗಿ ತೋರಿದರೂ ಈ ಹುಚ್ಚಿನಲ್ಲಿಯೂ ಒಂದು ಅಚ್ಚು ಇದೆ. ಉದ್ದೇ ಶಕ್ಕೆ ಪೂರ್ವಾನುಭವ ಬೇಕೆಂದು ಅನಿಸಿದಾಗ, ಈ ಸೃಷ್ಟಿ ಒಂಟಿ ಘಟನೆ ಅಲ್ಲ. ಹಿಂದೊಮ್ಮೆ ಮಾಡಿದಂತೆ ಆ ವಿಧಾತ ಮತ್ತೆ ಕಲ್ಪಿಸಿದನು ಎಂದರು ಆ ಋಷಿಗಳು. "ಧಾತಾ ಯಥಾ ಪೂರ್ವಂ ಅಕಲ್ಪಯತ್" ಅಂದರೆ ಈ ಸೃಷ್ಟಿ ಸ್ಥಿತಿ ಲಯಗಳು ಒಂದು ನಿರಂತರ ಚಕ್ರನೇಮಿ ಕ್ರಮ–ವಿಶ್ವಚಕ್ರ, ಭಾಗ್ಯ ಚಕ್ರ, ಧರ್ಮಚಕ್ರ. ಹೀಗೆ ಚಕ್ರಗತಿಯಲ್ಲಿ ಪರಿವರ್ತನೆಯ ಪ್ರಪಂಚದ ಪರಿ ಕಲ್ಪನೆ ನಮ್ಮಲ್ಲಿ ಪ್ರಚಲಿತವಾಯಿತು. ಹುಟ್ಟು ಸಾವು, ಸುಖ ದುಃಖ, ಏಳು ಬೀಳು ಇವೆಲ್ಲ ಒಂದನ್ನೊಂದು ಚಕ್ರಗತಿಯಲ್ಲಿ ಹಿಂಬಾಲಿಸುತ್ತವೆ ಎಂಬ ವೈಚಾರಿಕ ಭೂಮಿಕೆ ನಮ್ಮಲ್ಲಿ ಭದ್ರವಾಯಿತು. ಚಕ್ರದ ಬೆನ್ನಿಗೆ ಚಕ್ರವರ್ತಿ ಕಾಣಿಸಿಕೊಂಡ!

ದೈವ–ಪುರುಷ ಪ್ರಯತ್ನಗಳ ಮೂಲ

ಇಲ್ಲಿ ಆ ದೇವರ ಉದ್ದೇಶಕ್ಕೆ, ಈಶ ಸಂಕೇತಕ್ಕೆ, ದೈವ ಸಂಕಲ್ಪಕ್ಕೆ ಮಾತ್ರ ಕೊನೆಯ ಹಾಗೂ ಕೊನೆಯಿಲ್ಲದ ಮಹತ್ವ. ನಮ್ಮ ಕೈಯಲ್ಲಿ ಏನಿದೆ? ಮಾನವನ ಉದ್ದೇಶ ಆ ದೈವಾನುಕೂಲಕ್ಕೆ ಹೊಂದಿಕೊಂಡಿದ್ದರೆ ಮಾತ್ರ ಅವನ ಮುನ್ನಡೆ ಏಳ್ಗೆ. ಇಲ್ಲವಾದರೆ, ಎಲ್ಲ ವ್ಯರ್ಥ ಎಂಬ ನಿಲುವು ನಮ್ಮ ದಾಯಿತು. ದೈವಾಯತ್ತದ ಪರಿಧಿಯಲ್ಲಿ ಸುತ್ತಳತೆಯೊಳಗೆ ಪುರುಷಾ ಯತ್ತದ ಪರಿದಾಟ ಹಾರಾಟ. ಈ ಒಂದು ಭಾವನೆ ಬಲಿಷ್ಠವಾಗಿ ಬೇರೂರಿ ಬೆಳೆಯಲಿಕ್ಕೆ ಮಾನವನ ಜೀವನ ಪದ್ಧತಿಯೇ ಕಾರಣವನ್ನು ಪ್ರೇರಣೆಯನ್ನು ಒದಗಿಸಿತು. ನಮ್ಮ ಇತಿಹಾಸವೇ ಇದಕ್ಕೆ ಸಾಕ್ಷಿ. ಮನುಷ್ಯ ಆರಂಭದಿಂದಲೂ "ಆರಂಭ" (ಬೇಸಾಯ)ಗಾರ, ಆ ಬೇಸಾಯಕ್ಕೆ ಆನುಷಂಗಿಕವಾಗಿ ಆತ ಕಸಬು ಗಾರನಾದನು. ಹೀಗೆ ಮಾನವನ ಬದುಕು ಎರಡು ಬಗೆ ರೂಪಗೊಂಡಿತು.

ಒಂದು ವರ್ಗ "ಬೆಳೆಗಾರ"ರದು, ಇನ್ನೊಂದು ವರ್ಗ "ಮಾಟಗಾರ"ರದು
ಅವರು ವಸ್ತುಗಳನ್ನು ಬೆಳೆಯಿಸುವವರು, ಇವರು ವಸ್ತುಗಳನ್ನು ಮಾಡುವ
ವರು. ಬೆಳೆಗಾರರು ಬೇಸಾಯಗಾರರು ಯಾವಾಗಲೂ ಮಣ್ಣು, ಮಳೆ, ಗಾಳಿ
ಹವಾಮಾನಗಳ ಹಂಗಾಮಿನೊಂದಿಗೆ ಹೆಣಗಾಡಿ ಬದುಕಬೇಕು. ಅವರ ಸ್ವಂತ
ಪ್ರಯತ್ನ ಎಷ್ಟೇ ಬಲವಾದರೂ ಈ ನಿಸರ್ಗ ಶಕ್ತಿಗಳು ಪ್ರತಿಕೂಲವಾದರೆ ಮಾಡಿ
ದ್ದೆಲ್ಲ ವ್ಯರ್ಥ. ಆದ್ದರಿಂದ ಇತಿಹಾಸದ ಬಹುಪಾಲು ಕಾಲ ಮನುಷ್ಯ ಒಕ
ಲಾಗಿ ಮಣ್ಣಿನ ಮಗನಾಗಿ ಬೆಳೆದು ಬರುವಾಗ ಅನಿವಾರ್ಯವಾಗಿ ತನ್ನ ಪುರುಷ
ಪ್ರಯತ್ನಕ್ಕಿಂತ ಆ ದೈವ ಬಲವನ್ನೇ ಹೆಚ್ಚಾಗಿ ನಂಬಿ ಬಾಳುತ್ತ ಬರುವಂತೆ
ಆಯಿತು. ಮಳೆ ಗಾಳಿ ಭೂಮಿತಾಯಿ ನಿಸರ್ಗದ ರುದ್ರ ಶಕ್ತಿಗಳನ್ನು ಓಲೈಸಿ,
ಒಲಿಸಿಕೊಳ್ಳುವದು ಅವನಿಗೆ ಅವಶ್ಯವೆನಿಸಿತು, ಸಹಜವೆನಿಸಿತು. ಆತ ಹೆಚ್ಚು
ಭಾವಿಕನಾದರೆ ಆಶ್ಚರ್ಯವಿಲ್ಲ.

ಆದರೆ ಕಸಬುಗಾರ ವಸ್ತುಗಳನ್ನು ತಾನೇ ತನ್ನ ಬುದ್ಧಿ ಬಲಗಳಿಂದ
ಉಂಟುಮಾಡಿ ಬದುಕುವವನು. ಆತ ಗಡಿಗೆಯನ್ನೋ ಗಾಡಿಯನ್ನೋ
ಯಂತ್ರವನ್ನೋ ತಯಾರಿಸಿ ಮಾರಿ ಗಳಿಸುತ್ತಾನೆ. ಆತ ಮಿನಿಟಿಗೊಂದು
ಮೋಟಾರ್ ಕಾರ್ ತನ್ನ ಕೈಯಿಂದ ಹೊರ ಬೀಳುವದನ್ನು ಕಣ್ಣಾರೆ ನೋಡು
ತ್ತಾನೆ. ಆತನು ಪ್ರಯತ್ನವಾದಿಯಾಗುತ್ತಾನೆ. ಪೌರುಷವಾದಿಯಾಗು
ತ್ತಾನೆ. ದೈವಬಲಕ್ಕಿಂತ ತನ್ನ ಬಾಹುಬಲವನ್ನು ಹೆಚ್ಚು ನಂಬುತ್ತಾನೆ. ಇನ್ನು
ಕಾರಖಾನೆಯ ಕೆಲಸಗಾರರೂ ಸತ್ಯನಾರಾಯಣ ಪೂಜೆ ಮಾಡುತ್ತಿರುತ್ತಾರೆ.
ಗಣೇಶೋತ್ಸವವನ್ನು ಆಚರಿಸುತ್ತಾರೆ. ಆದರೆ ಇವೆಲ್ಲ ಅವರಲ್ಲಿಯ ಕುಲ
ಪರಂಪರೆಯಿಂದ ಬಂದ ಸಂಸ್ಕಾರ ಬಲದ ನಡಾವಳಿ.

ಒಟ್ಟಿನಲ್ಲಿ ಔದ್ಯೋಗಿಕ ಸಂಸ್ಕೃತಿಗಿಂತ ಕೃಷಿ ಸಂಸ್ಕೃತಿ ಹೆಚ್ಚು ಭಾವಿಕ,
ಆಸ್ತಿಕ. ಸಾಮಾಜಿಕವಾಗಿ ಕೃಷಿ ಸಂಸ್ಕೃತಿ ಹೆಚ್ಚು ಸ್ಥಿತಿಸ್ಥಾಪಕ, ಸನಾತನಿ
ಪರಂಪರಾಪ್ರಿಯ ಅಥವಾ ಪುರಾಣ ಮತವಾದಿ; ಔದ್ಯೋಗಿಕ ಸಂಸ್ಕೃತಿಯು
ಪ್ರವೃತ್ತಿಯಲ್ಲಿ ಹೆಚ್ಚು ಆಧುನಿಕ, ಪ್ರಗತಿಪರ, ಬುದ್ಧಿಜೀವಿ ಸಾಹಸಿ ಮತ್ತು
ಸ್ವಾತಂತ್ರ್ಯಪ್ರಿಯ ಹಾಗೂ ವ್ಯಕ್ತಿವಾದಿ.

ಈ ಕುರಿತು ವಿಸ್ತಾರಕ್ಕೆ ಇಲ್ಲಿ ಅವಕಾಶವಿಲ್ಲ. ತಾತ್ಪರ್ಯವಿಷ್ಟೇ,—
ಮಾನವನ ಸಾಮುದಾಯಿಕ ಅಸ್ತಿತ್ವದ ಇತಿಮಿತಿಗಳೇ ಅವನ ಜ್ಞಪ್ತಿತ್ವದ
ರೀತಿ ನೀತಿಗಳನ್ನು ರೂಪಿಸುತ್ತವೆ. ಅಸ್ತಿತ್ವದ ಸಾಧನೆಗಳು ಉತ್ಪಾದನೆಯ
ಉಪಜೀವಿಕೆಯ ಪದ್ಧತಿ ಸ್ಥಿತಿಗತಿಗಳು ನಮ್ಮ ಸಮಾಜದ ಸಂಸಾರದ ಮನೋ

ಭೂಮಿಕೆಯನ್ನು ಅದರ ಹಾಸುಹೊಕ್ಕಾದ ವಿಚಾರಧಾರೆಯನ್ನು ತಾತ್ವಿಕತೆಯನ್ನು ರೂಪಿಸುತ್ತದೆ. ಅದರ ಒಂದು ಹಿರಿಯ ಫಲವೇ ದೇವರು.

9

ಇನ್ನು ಗಮನಿಸಬೇಕಾದದ್ದು ಮೂರನೆಯ ನಿಲುವೆಯ ನಿಲುಕು. ಅದು ಒಂಟೋಲೋಜಿಯ ನಿಲುವೆ. "ಒಂಟೋ" ಅದು ಗ್ರೀಕ್ ಧಾತು ಅದರ ಅರ್ಥ ಅಸ್ತಿತ್ವ, ಇರುವಿಕೆ. ಅದನ್ನು ನಮ್ಮ ಭಾರತೀಯ ತಾತ್ವಿಕ ಪರಿಭಾಷೆಯಲ್ಲಿ ಸತ್, ಸತ್ತಾ ಎನ್ನಬಹುದು. ಇದು ಸತ್ತಾವಾದ. ಅಸ್ತಿತ್ವದ ಪಾತಳಿಯೇ ಸತ್ತೆ. ಆದಿ ಶಂಕರಾಚಾರ್ಯರು ಇದನ್ನು ಮೂರು ಬಗೆಯಾಗಿ ವ್ಯಾಖ್ಯಾನಿಸಿದ್ದಾರೆ—ವ್ಯಾವಹಾರಿಕ, ಪ್ರಾತಿಭಾಸಿಕ ಮತ್ತು ಪಾರಮಾರ್ಥಿಕ. ಸತ್ ಸತ್ಯವು ಹೀಗೆ ಮೂರು ಅಂತಸ್ತಿನ ಸೌಧ.

ಒಂಟೋಲೋಜಿಯ ನಿಲುವೆ

ದೇವರ ಬಗೆಗೆ ವಿಚಾರ ಮಾಡುವಾಗ, ಆ ಪರಿಕಲ್ಪನೆಯನ್ನು ವ್ಯಾಪಕವಾಗಿಯೂ ಸಾಮಾನ್ಯವಾಗಿಯೂ ವ್ಯಾವಹಾರಿಕ ಸತ್ತೆಯಿಂದ ಆಕಾರಗೊಂಡ ತತ್ವವೆನ್ನಬೇಕು. ಅದರ ಸ್ವರೂಪ ಪ್ರಾತಿಭಾಸಿಕ (ಕಾಲ್ಪನಿಕ ಭ್ರಾಮಕ) ಸತ್ತೆಯಲ್ಲಿ ಸಗುಣ ಸಾಕಾರವಾಗಿ ಭಗವತ್ ಸ್ವರೂಪವಾಗಿ ನಾವು ಕಾಣಬಹುದು. ಇನ್ನು ಮುಂದೆ ಅಥವಾ ಮೇಲೆ ಹೋಗಿ ಪಾರಮಾರ್ಥಿಕ (ದಾರ್ಶನಿಕ ಶುದ್ಧ ತಾತ್ವಿಕ) ಸತ್ತೆಯಲ್ಲಿ ಅದನ್ನು ನಮ್ಮ ಪರಿಚಯದ ಪರಿಭಾಷೆಯಲ್ಲಿ ಹೇಳುವದಾದರೆ, ಪರಬ್ರಹ್ಮ ಪರಮಾತ್ಮ ಸ್ವರೂಪವಾಗಿ ತಿಳಿಯಬಹುದು.

ಅದೇನೇ ಇದ್ದರೂ ಅಸ್ತಿತ್ವದ ಪಾತಳಿಯಲ್ಲಿ ದೇವರು ನಮ ನಿಮಗೆ ಅನೇಕಾನೇಕ ಭಾವಿಕರಿಗೆ ಶ್ರದ್ಧಾಮಯರಿಗೆ ಬೇಕಾಗುವದು ಒಂದು ನೆಮ್ಮದಿಯ ಬೇಡಿಕೆಯಾಗಿ ಭರವಸೆಯಾಗಿ; ಈಜಲಿಕ್ಕೂ ಇದ್ದು ಜೈಸಲಿಕ್ಕೂ ಈ ಸಂಸಾರ ಸಾಗರದ ತೆರೆಗಳ ತಿಕ್ಕಾಟದ ತೆಕ್ಕೆಯಲ್ಲಿ ಒಂದು ಲಂಗರು, ಒಂದು ಈಜುಗುಂಬಳವಾಗಿ.

ಆರ್ತರ ಅಗತ್ಯ

ಬದುಕಿನ ಒತ್ತಡ ಒತ್ತರಗಳು ಅಡಿಗಡಿಗೆ ಉಂಟುಮಾಡುವ ಅವಶ್ಯಕತೆಗಳ ಆಘಾತಕ್ಕೆ ಮನುಷ್ಯನೆಂಬ ಅತ್ಯಂತ ದುರ್ಬಲನಾದರೂ ಅಷ್ಟೇ ತೀವ್ರ ಸಂವೇದನೆಯ ಪ್ರಾಣಿಯು ಆರ್ತನಾಗುತ್ತಾನೆ. ಭಗವದ್ಗೀತೆಯಲ್ಲಿ ಕೃಷ್ಣ ಪರಮಾತ್ಮನು ಭಕ್ತರನ್ನು ನಾಲ್ಕು ವಿಧವಾಗಿ ವರ್ಗೀಕರಿಸಿದ್ದಾನೆ. ಆರ್ತ,

ಜಿಜ್ಞಾಸು, ಅರ್ಥಾರ್ಥಿ ಮತ್ತು ಜ್ಞಾನಿ. ಈ ಮಾತುಗಳನ್ನೇ ನಾವು ನವ ಹೂರಣ ತುಂಬಿ ಬಳಸಬಹುದು. ಆಗ ನಾವು ಆರ್ತ, ಅರ್ಥಾರ್ಥಿ ಒಂದ ಗುಂಪು; ಜಿಜ್ಞಾಸು ಜ್ಞಾನಿ ಇನ್ನೊಂದು ಗುಂಪು ಎಂದು ಬಗೆಯಬಹುದು ದೇವತ್ವದ ಸಗುಣ ಸಾಕಾರ ರೂಪವನ್ನು ಮೊದಲನೆಯ ಗುಂಪು, ನಿರ್ಗು ನಿರಾಕಾರ ತಾತ್ವಿಕ ರೂಪವನ್ನು ಎರಡನೆಯ ಗುಂಪು, ಭಜಿಸುವದು. (ಇ ಭಜಿಸುವದೆಂದರೆ ಭಜನೆ ಮಾಡುವದಲ್ಲ, ನಾಮ ಸಂಕೀರ್ತನೆ ಎಂಬ ಅರ್ಥವ ಆ ಮೂಲ ಧಾತುವಿಗೆ ಇಲ್ಲ. "ಭಜ" ಇದು ಸ್ವೀಕರಿಸು, ಒಪ್ಪಿಕೊಳ್ಳು ತನ್ನದಾಗಿಮಾಡಿಕೊಳ್ಳು, ಸೇವಿಸು ಎಂದೆಲ್ಲ ಅರ್ಥವನ್ನು ಕೊಡುತ್ತದ ಉದಾಹರಣೆಗೆ, ಗೀತೆಯಲ್ಲಿ ಆ ಭಗವಂತನೇ ಹೇಳುತ್ತಾನೆ, ನನ್ನನ್ನು ಯಾರ ಹೇಗೆ ಮೊರೆ ಹೋಗುತ್ತಾರೋ ಅವರನ್ನು ಹಾಗೆಯೇ ಭಜಿಸುತ್ತೇನೆ ಭಗವಂತನೇ ಭಕ್ತನನ್ನು ಭಜಿಸುತ್ತಾನೆ!)

"ಅವಶ್ಯ" "ಅಗತ್ಯ"ವೆಂದರೆ ನಮ್ಮ ವಶವನ್ನು ಮೀರಿದ್ದು, ಬೇರೆ ಗ (ದಾರಿ) ಸಿಗದಂತಹದು. ಈ ಭಾವವನ್ನು ಗ್ರಹಿಸಿದಾಗ, ಬದುಕಿನಲ್ಲಿ ಮಾನ ನಿಗೆ ದೇವರೆಂಬ ಒಂದು ಕಲ್ಪನೆಯನ್ನು ಕಟ್ಟಿಕೊಳ್ಳುವ, ಇಟ್ಟುಕೊಳ್ಳು ಪ್ರಮೇಯಗಳು ಹಲವಾರು ಒದಗಿದುದು ಮಾನವನ ಇತಿಹಾಸದ ಆ ಯಿಂದಲೂ ಕಂಡುಬರುತ್ತದೆ. ಈ ಅಗತ್ಯ ಅವಶ್ಯಕತೆಗಳು ಎರಡು ಬಗೆ ಹೊರಗಿನ ಪರಿಸ್ಥಿತಿ ಪರಿಸರಗಳ ಒತ್ತಡದಿಂದ ಒದಗಿದವು ಮತ್ತು ಮಾನವನ ಒಳಗಿನ ಕೊರತೆ ಕೊರಗು ಬಯಕೆ ಬೇಡಿಕೆಗಳಿಂದಾಗಿ ಉಂಟಾದವು. (ಗ್ರೀಕ "ಒಂಟೋ"=ಇರು ಇದಕ್ಕೂ ನಮ್ಮ ಉಂಟು ಧಾತುವಿಗೂ ಏನಾದರೂ ನಂಟ ಇರಬಹುದೇ?)

ಮಾನವನ ಬದುಕಿನ ಅವನ ದೈಹಿಕ ದೌರ್ಬಲ್ಯದ ಅಸಹಾಯಕತೆಯ ಉಲ್ಲೇಖ ಹಿಂದೆಯೇ ವಿಶದವಾಗಿ ಬಂದಿದೆ. ನಿಸರ್ಗದ ಶಕ್ತಿಗಳ ಇದಿರು ಇತರ ವನ್ಯ ಮಿಕಗಳ ಇದಿರು ಮಾನವ ಈ ಕೋಡು ಬಾಲವಿಲ್ಲದ, ರೆಕ್ಕೆ ಪುಚ್ಚ ಗಳಿಲ್ಲದ ಕೋರೆ ಹಲ್ಲು ಉಗುರುಗಳಿಲ್ಲದ ದ್ವಿಪಾದ ಪಶುವು. ಅಸಹಾಯ ಮಾತ್ರವಲ್ಲ, ಅವುಗಳಿಗಿಂತ ಮಿಗಿಲಾಗಿ ಬಲಿತ, ಬೆಳೆದ ದೊಡ್ಡ ಮಿದುಳಿ ನಿಂದಾಗಿ ತನ್ನ ಅಸಹಾಯಕತೆಯನ್ನು ಅಶಕ್ತತೆಯನ್ನು ತಾನೇ ಅರಿಯಬಲ್ಲ "ಅಲ್ಪಸ್ಥಾಮ." ಆ ಕುರಿತು ತೀವ್ರವಾಗಿ ಬಹುವಾಗಿ ನೊಂದು ನರಳಬಲ್ಲ ಇದರಿಂದ ಅವನಿಗೆ ಒಂದು ಹಿರಿಯ ಅನಿಸಿಕೆ, ಆಧಾರ ಆಶ್ರಯದ ಅಗತ್ಯವೆನಿಸಿ, ಅಂಥ ಒಂದು ರಕ್ಷಕ ಶಕ್ತಿಯನ್ನು ಆತ ಕಲ್ಪಿಸುವಂತೆ ಆಯಿತು. ಮುಂದೆ

ಅವನ್ನು ಮೀರಿ ಎಲ್ಲವನ್ನೂ ಆಳುವ ಒಂದು ಮಹಾಚೇತನವನ್ನು ವಿರಾಟ್ ಪುರುಷನನ್ನು ಪರಿಭಾವಿಸುವಂತೆ ಆಯಿತು.

ಇದು ಮೂಲತಃ ಪ್ರಜ್ಞೆಯ ಅಥವಾ ಬುದ್ಧಿಯ ಪ್ರೇರಣೆಯಲ್ಲ. ಇಲ್ಲಿ ಬುದ್ಧಿಯ ಅಥವಾ ತರ್ಕದ ಕೆಲಸ ನಂತರದ್ದು. ಮೊದಲು ಹೆದರಿಕೆ, ಆದರ ಬೆನ್ನಿಗೆ ನಂಬಿಕೆ. ಪ್ರವೃತ್ತಿ ಜನ್ಯ ಪ್ರೇರಣೆಗಳ ಪರಿಪಾಕವಿದು. ಮನುಷ್ಯನು ಮೂಲತಃ ಸ್ವಭಾವದಿಂದಲೂ ಶ್ರದ್ಧಾಮಯನು. ಅವರವರ ಸತ್ವದಂತೆ ಅವರವರ ಶ್ರದ್ಧೆ. ಬಾಳನ್ನು ಆಳುವ ಆಳವಾದ ನಂಬಿಕೆಯೆಂಬ ಈ ದೈವಿಕ ಭಾವನೆ ಬುನಾದಿಯಿಂದಲೂ ಪುಟಗೊಂಡು ಹೆಪ್ಪುಗಟ್ಟಿ ಸಂಸ್ಕಾರ ಬಲವಾಗಿ ಬಲಿತು ಬೆಳೆದು ಬಂದಿತು. ಶ್ವಾಸದಷ್ಟೇ ಈ ವಿಶ್ವಾಸವೂ ಮಾನವನಿಗೆ ಜೀವ ಸತ್ವವಾಯಿತು.

ಅಲ್ಲಿಯೂ ಆಘಾತ, ಅಪಘಾತ, ಆಪತ್ತು, ಆಧಿವ್ಯಾಧಿ, ಉತ್ಪಾತ, ದುರಂತ, ಕಷ್ಟ ನಷ್ಟಗಳು ಒದಗಿದಾಗ ಮನುಷ್ಯನ ಅಸಹಾಯಕತೆ ಇನ್ನೂ ತೀವ್ರವಾಗಿ, ಸಹನೆ ಇನ್ನೂ ಕ್ಷೀಣವಾಗಿ ಮುಳುಗುವವನು ಹುಲ್ಲು ಕಡ್ಡಿಗೂ ತೆಕ್ಕೆ ಬೀಳಲು ಹೆಣಗುವಂತೆ ಈ ದೇವ ದೈವಗಳಲ್ಲಿ ನಂಬಿಕೆ ಇನ್ನೂ ತ್ವರಿತ, ಇನ್ನೂ ತೀವ್ರಗೊಳ್ಳುವಂತೆ ಆಯಿತು. ಇದೆಲ್ಲ ತರ್ಕಶುದ್ಧವಾದ, ನ್ಯಾಯ ನಿಷ್ಠುರವಾದ ವಿಚಾರವಾದಿಯಾದ ಮನೋ ವ್ಯಾಪಾರವೇ ಅಲ್ಲ. ಬಲಿ, ಹರಕೆ, ಉಪಾರ, ವ್ರತ ವಿಶೇಷ ಪೂಜೆ, ಜಪ-ತಪ-ಅನುಷ್ಠಾನ ಹೋಮ ಹವನ ಏನೆಲ್ಲ ಎಷ್ಟೆಲ್ಲ ವಿಧಿ ಕ್ರಮಗಳು ನಿಡಿದಾದ ಇಡಿಯಾದ ತಿಳುವಳಿಕೆಯ ತೀರ್ಮಾನಗಳಲ್ಲ, ಅವಸರದ ದಿಢೀರು ಕ್ರಮಗಳು; ಆ "ಪರಮ" ಶಕ್ತಿಯನ್ನು ಒಲಿಸಿಕೊಳ್ಳಲು ಹಠಾತ್ತಾಗಿ ಹೂಡಿದ ಉಗ್ರ ಶೀಘ್ರ ಉಪಾಯಗಳು. ಇಂಥಲ್ಲಿ ಪ್ರಾಪ್ತ ಪರಿಸ್ಥಿತಿಯು ನಮ್ಮ ಹೆದರಿದ ದುರ್ಬಲ ಹೃದಯಗಳನ್ನು ಬಲವಂತ ಪಡಿಸುತ್ತದೆ. ಸಂಸ್ಕಾರ ಬಲದಿಂದ ಬಾಲ್ಯದಾರಭ್ಯ ಅಭ್ಯಾಸ ಬಲದಿಂದ ಆಳ ವಾಗಿ ಬೇರೂರಿ ನಿಂತ ದೈವ ಭಕ್ತಿಯು ನಮ್ಮ ಬುದ್ಧಿಶಕ್ತಿಯನ್ನು ಮಂಕು ಗೊಳಿಸುತ್ತದೆ; ತುಳಿದು ವಿಜೃಂಭಿಸುತ್ತದೆ. ಗುರು ಮಹಂತರ ಅನುಗ್ರಹ ವನ್ನೂ ವಿಭೂತಿ ಪ್ರಸಾದವನ್ನೂ ಪವಾಡ ಕೈವಾಡಗಳನ್ನೂ ಕಣ್ಣು ಮುಚ್ಚಿ ಒಪ್ಪಿಕೊಳ್ಳುತ್ತೇವೆ. ನಮ್ಮ ದುಃಖ ವಿಮೋಚನೆಗಾಗಿ, ಮಗುವಿನ ಕಾಯಿಲೆ, ಗಂಡನ ರೋಗ, ಧನದ ಲೋಭ ಮೋಹ ಮುಂತಾದ ಸಂದರ್ಭಗಳಲ್ಲಿ ದೇವರಿಗೆ ದೇವತಾ ಪುರುಷರಿಗೆ ಶರಣುಹೋಗುವ ಒತ್ತಾಯಕ್ಕೆ ಮೂರು ಪ್ರೇರಣೆಗಳು ಪುಷ್ಟಿಕೊಡುತ್ತವೆ. 1) ಮೂಲದ ನಂಬಿಕೆ 2) ಸಾವಿನ ನೋವಿನ ಅಸಹ್ಯ

ಭೀತಿ ಮತ್ತು 3) ಆ ಬಳಲುವ ಜೀವದ ಬಗೆಗೆ, ಬಯಸುವ ಲಾಭ ಬಗೆಗೆ ಉತ್ಕಟ ಮಮತೆ ಪ್ರೀತಿ ಮತ್ತು ಆಸೆ.

ಇಂಥ ಕೆಲವು ದೈವಾನುಭವ ಅನೇಕರಿಗೆ ಮನಃಶಾಂತಿಯನ್ನು ನೀಡ ತ್ತದೆ. ಮನೋದೇಹಿಯಾದ ಮನುಷ್ಯನ ಅನೇಕ ವ್ಯಾಧಿಗಳೂ ವ್ಯಸನಗಳೂ ಮೂಲದಲ್ಲಿ ಮಾನಸಿಕವಾಗಿರುತ್ತವೆ. ಅಂಥಲ್ಲಿ ಈ ಬಗೆಯ ದಿಢೀರ ದೇವತಾಸೇವೆ ಗುಣಕಾರಿಯೂ ಆಗಬಲ್ಲದು. ಮನದಾಳದ ಆತಂಕ ಕಳೆದ ಆತ್ಮ ವಿಶ್ವಾಸ ಕುದುರಿ, ಬಂದ ಕುತ್ತಿನಿಂದ ಪಾರಾಗುವ ತ್ರಾಣ ಅವರವರ ಆತ ಪ್ರಾಣಕ್ಕೆ ಬರಬಹುದು. (ಈ ಕುರಿತು ಇನ್ನೂ ವಿವರ ಚರ್ಚೆ ಇಲ್ಲಿ ಅನಗತ್ಯ.)

ಇಲ್ಲಿ ಒತ್ತಿ ಹೇಳಬೇಕಾದ ಮಾತೆಂದರೆ, ನಮ್ಮಲ್ಲಿ ಸಾಮಾನ್ಯವಾಗಿ ದೈವ ಭಕ್ತಿ ಅಥವಾ ಆಸ್ತಿಕ್ಯ ಒಂದು ಪರಂಪರಾಗತವೂ ಬಾಲ್ಯದಿಂದ ವಾಡಿಕೆಯಾಗಿ ಬಂದ ಚಟವೂ ಆದ ಯಾಂತ್ರಿಕ ಸಂಸ್ಕಾರ. ಅದಕ್ಕೆ ಲೋಪ ಬಂದರೆ ಏನೋ ಕದ್ದುಬಿಟ್ಟಂತೆ, ತಪ್ಪಿಹೋದಂತೆ ಅಸ್ವಸ್ಥತೆ ಮನಸ್ಸಿಗೆ ಕೊರೆಯುತ್ತದೆ. ಅವರ ಸಮಾಧಾನ ಅದರ ಆಚರಣೆಯಲ್ಲಿಯೇ ಇರುತ್ತದೆ, ಮಾಡಿ ಮುಗಿ ದಲ್ಲಿಯೇ ಮನಸ್ಸಿಗೆ ಮುಕ್ತಿ.

ಭಾವನಿಕ ಅವಶ್ಯಕತೆ

ಆದರೆ ಅನೇಕ ಮೇಧಾವಿಗಳೂ ವಿದ್ವಾಂಸರೂ ಆಧುನಿಕ ಪ್ರಜ್ಞೆ ಯುಳ್ಳವರಾಗಿ ನಡೆ ನುಡಿಯುವವರೂ ಆಳವಾಗಿ ದೈವಿಕ ಶ್ರದ್ಧೆಯನ್ನು ಆಸ್ತಿಕ್ಯ ಭಾವನೆಯನ್ನು ತಾಳಿರುವದು ಕಂಡುಬರುತ್ತದೆ. ಇದು ಕೇವಲ ಒಂದು ಮಾನಸಿಕ ಚಟವೆನ್ನುವಂತಿಲ್ಲ. ಇಂಥವರು ಎಷ್ಟೋ ಜನರು ಸಾಮಾನ್ಯ ಮೂಢ ರೂಢಿಗಳಲ್ಲಿ ವ್ರತ ವಿಧಿಗಳಲ್ಲಿ ನಂಬಿಕೆ ಆಗಲಿ, ಆಸಕ್ತಿ ಯನ್ನಾಗಲೀ ತೋರಿಸುವದು ಕಡಿಮೆ. ಆದರೂ ತಮ್ಮದೇ ರೀತಿಯಲ್ಲಿ ದಿನಾಲೂ ತಮ್ಮ ಆರಾಧ್ಯ ದೇವರೊಂದಿಗೆ ಕೆಲ ನಿಮಿಷಗಳನ್ನು ಚಿಂತನೆಯಲ್ಲೋ ಪ್ರಾರ್ಥನೆಯಲ್ಲೋ ಏಕಾಂತದಲ್ಲೋ ಕಳೆಯುತ್ತಿರುತ್ತಾರೆ. ಇವರನ್ನು ಈ ಕುರಿತು ಕೇಳಿದರೆ, ಇವರು ಹೇಳುವದು ಇಷ್ಟೇ. ನಮಗೆ ದೇವರು ಒಂದ ದಾರ್ಶನಿಕ ಸತ್ಯವಲ್ಲ, ಆದರ್ಶದ ತತ್ವವಲ್ಲ. ನಮಗೆ ದೇವರು ಒಂದು ಭಾವನಾತ್ಮಕ ಅವಶ್ಯಕತೆ. ಈ ಮಾತು ಸ್ವಾರಸ್ಯವಾಗಿದೆ, ತುಂಬ ಅರ್ಥಪೂರ್ಣ ವಾಗಿದೆ. ಕವಿಗಳು, ಕಲಾವಿದರು, (ಚಿತ್ರಕಾರ, ಸಂಗೀತಗಾರ, ನಟ-ನರ್ತಕ ಶಿಲ್ಪಿ ಮುಂತಾದವರು) ಭಾವನಾ ಪ್ರಧಾನರು, ಭಾವ ಜೀವಿಗಳು; ಇತರರ ತರ್ಕ ಪ್ರಧಾನರು—ಎಂದೆಲ್ಲ ನಾವು ಸ್ಥೂಲವಾಗಿ ವರ್ಗೀಕರಿಸುತ್ತೇವೆ. ಆದರ ಇವರೆಲ್ಲರಲ್ಲಿಯೂ ಹಲವಾರು ಮಂದಿ ಇತರರಿಗಿಂತ ಹೆಚ್ಚು ಭಾವನಾಮಯ

ಾಗಿರುತ್ತಾರೆ. ಆದರಿಂದಾಗಿ ಹೆಚ್ಚು ಸೂಕ್ಷ್ಮ ಸಂವೇದಿಗಳಾಗಿರುತ್ತಾರೆ. ಾದ್ದರಿಂದ ಇವರೆಲ್ಲರ ಅನುಭವ ಗ್ರಹಣ ಒಂದೇ ರೀತಿಯಾಗಿರುವದಿಲ್ಲ.

ಅನುಭವವೆಂದರೇನು? ಇದೊಂದು ಮಾರ್ಮಿಕವಾದ ಶಬ್ದ. ನಮಗೆ ಒದಗುವದೆಲ್ಲ ಅನುಭವವಲ್ಲ. ಅದು "ಭವ" ಅವರ ಬೆನ್ನಿಗೆ ಬರುವ ಕ್ರಿಯೆ-ಸಂವೇದನೆ "ಅನು-ಭವ." ಭವದ ಆಗುಹೋಗುಗಳ ಪರಿಣಾಮ ದ್ರವ್ಯದಿಂದ ಒಂದಲ್ಲ ಒಂದು ಬಗೆಯ ಪುನಃ ಸಂಘಟನೆಯನ್ನು ನಮ್ಮ ಮನಸ್ಸು ಸಂಸ್ಕಾರ ಬಲದಿಂದ, ಅಭ್ಯಾಸ ಬಲದಿಂದ, ಸ್ವಭಾವ ಬಲದಿಂದ ಮಾಡಿಕೊಳ್ಳುತ್ತದೆ, ಆ ಆಗುಹೋಗುಗಳನ್ನು ತನ್ನದಾಗಿಸಿಕೊಳ್ಳುವಾಗ. ಆದ್ದರಿಂದ ಒಂದೇ ಸ್ಥಿತಿ ಗತಿಯಲ್ಲಿ ಪರಿಸರದಲ್ಲಿ ಬದುಕಿ ಬಂದರೂ ಅನುಭವ ಒಂದೇ ಆಗಿರುವದಿಲ್ಲ. ಒದಗಿದ ಸಂಗತಿಗಳು, ಘಟನೆಗಳು ಅವುಗಳ ಸನ್ನಿವೇಶ ಒಂದೇ ಆದರೂ ಅದಕ್ಕೆ ನಾವು ಹೇಗೆ ಪ್ರತಿಕ್ರಿಯಿಸುವೆವೆಂಬುದನ್ನೇ ಅವಲಂಬಿಸಿರುತ್ತದೆ—ನಮ್ಮ ಅನುಭವ.

ಈ ಪುನಃ ಸಂಘಟನೆಯು ಹಲವು ವಿಧ. ಕಲೆಯಾಗಿ ಒಂದು ವಿಧ, ಸಂಗೀತ ರಚನೆಯಾಗಿ ಒಂದು ವಿಧ, ವೈಜ್ಞಾನಿಕ ಪ್ರಕ್ರಿಯೆಯಾಗಿ ಒಂದು ವಿಧ, ಹಾಗೆಯೇ ದೈವಭಕ್ತಿ ದೇವೋಪಾಸನೆ, ಅಧ್ಯಾತ್ಮಿಕ ಅನುಭೂತಿಯಾಗಿ ಇನ್ನೊಂದು ವಿಧ. (ಈ ದೇವಾನುಭವಕ್ಕೆ ಅನುಭಾವವೆಂದೂ ಕರೆಯುವ ದುಂಟು. ಭವಸ್ತರದಿಂದ ಭಾವಸ್ತರ, ಅದರ ವಿಶಿಷ್ಟ ಸಂಘಟನೆ ಅನು-ಭಾವ.)

ಇದೆಲ್ಲ ಪ್ರತ್ಯಕ್ಷವಲ್ಲ, ಪರೋಕ್ಷವೂ ಅಲ್ಲ. ಅಂದರೆ ದೇವರೆಂಬ ಸಂಗತಿ ಕಂಡರಿಯುವದಲ್ಲ. ಇನ್ನೊಬ್ಬರು ಕಾಣಿಸುವದೂ ಅಲ್ಲ. (ಬೇರೆಯವರ ಕಣ್ಣಿನಿಂದ ನೋಡುವದೂ ಅಲ್ಲ) ಇದನ್ನು ನಮ್ಮ ದಾರ್ಶನಿಕರೂ ಅನುಭಾವಿಗಳೂ "ಅಪರೋಕ್ಷಾನುಭವ"ವೆಂದು ಹೆಸರಿಸಿದ್ದಾರೆ. ಅಂದರೆ ಇದು ತನಗೆ ತಾನೇ ಆಂತರಿಕವಾಗಿ ಕಂಡುಕೊಳ್ಳಬೇಕಾದ ಅನುಭವದ ಮಾದರಿ. ಒಂದು ಸಣ್ಣ ಉದಾಹರಣೆಯಿಂದ ಇದನ್ನು ಗ್ರಹಿಸಬಹುದು: ಬಿಸ್ಮಿಲ್ಲಾ ಶಹನಾಯಿಯಲ್ಲಿ ಖಮಾಜಠುಮರಿ ನುಡಿಸುತ್ತಾರೆ. ಪಂ. ಭೀಮಸೇನ ಜೋಶಿ ಪುರ್ಯಾ ಹಾಡುತ್ತಾರೆ. ಕುಮಾರ ಗಂಧರ್ವರು ಭೈರವಿಯನ್ನು ಆಲಾಪಿಸುತ್ತಾರೆ. ಆದರೆ ಇದು ಯಾರ ಕಿವಿಗೆ? ಸಂಗೀತ ರಸಿಕ, ಹಾಗೂ ಈ ರಾಗಗಳನ್ನು ಗುರುತಿಸ ಬಲ್ಲ "ದರ್ದಿ"ಗಳ ಕಿವಿಗೆ. ಆದರೆ ಸ್ವರ ಜ್ಞಾನವೇ ಇಲ್ಲದ, ಸಂಗೀತವನ್ನೇ ಮೆಚ್ಚದ ಅರಸಿಕ ಸಜ್ಜನರ ಕಿವಿಗೆ? ಇದೆಲ್ಲ ಒಂದಲ್ಲಾ ಒಂದು ಬಗೆಯ ಹೆಚ್ಚು ಕಡಿಮೆ ಅಸಹ್ಯತೆಯ ಸದ್ದು-ಬರೆ ಸದ್ದು. ಬರೇ ಗುಲ್ಲು, ನಿದ್ದೆಗೇಡು!

ಅಂದಾಗ, ಯಾರ ಅನುಭವ ಸತ್ಯ? ಸಂಗೀತ ಬಲ್ಲವರಿಗೆ, ಕಾವ್ಯ ಬಲ್ಲ
ರಿಗೆ, ಆಧುನಿಕ ಚಿತ್ರಕಲೆ ಬಲ್ಲವರಿಗೆ ಅದೆಲ್ಲ ಸತ್ಯ, ಸರಿ. ಅಂಥವರಿಗೆ ಅ
ಭಾವನಾತ್ಮಕ ಅವಶ್ಯಕತೆ. ಈ ದೈವಿಕ ಭಾವನೆಯೂ ಅಂತಹದೇ ಸತ
ಅಂಥವರಿಗೇ ಸತ್ಯ.

ಇಲ್ಲಿ ಮತ್ತೊಂದು ಸ್ವಾರಸ್ಯ. ನಮ್ಮ ಮನೋದೌರ್ಬಲ್ಯದ ದೃಷ್ಟಿಯಿಂ
ನಿರ್ಗುಣ ನಿರಾಕಾರ ಅಮೂರ್ತ ದೇವರನ್ನು ಪರಿಭಾವಿಸುವದು ಹೇಗೆ ನಮ
ಸಾಮಾನ್ಯವಾಗಿ ಅಶಕ್ಯವೋ ಅತಿ ಕಷ್ಟವೋ ಹಾಗೆಯೇ ಕೇವಲ ಕಾಲ್ಪನಿ
ಪ್ರತೀಕಾತ್ಮಕ ದೇವರನ್ನು ದೈವೀ ಸಂಕೇತಗಳನ್ನು ಭಾವನಾಮಯವಾ
ಆರಾಧಿಸುವದೂ ಸುಲಭವಲ್ಲ. ಆದ್ದರಿಂದ ಸರ್ವೇಸಾಮಾನ್ಯವಾ
ಮಾನವೀ ರೂಪದ ದೈವತಗಳನ್ನು ಪೂಜಿಸುವದು ಸಾರ್ವತ್ರಿಕವಾಗಿ ಜ
ಪ್ರಿಯವಾಗುತ್ತದೆ. ಅಲ್ಲಿಯೂ ಕ್ರಮೇಣ ದೇವಮಾನವರು. ಮಾನ
ದೇವರು ಜನಜಂಗುಳಿಗೆ ಆರಾಧ್ಯರಾಗುತ್ತಾರೆ. ದೇವರ ಸ್ಥಾನದಲ್ಲಿ ಗುರ
ಗಳೂ ಮಠಪೀಠಗಳೂ ಸಂತಮಹಂತರೂ ಬಾಬಾಬುವಾ ಮಹಾರಾಜರ
ಗಳೂ ಪ್ರತ್ಯಕ್ಷ ದೇವರಾಗಿ ಪವಾಡ ಪುರುಷರಾಗಿ ಮನ್ನಣೆ ಪಡೆಯುತ್ತಾರೆ
ಶರಣು ಬಂದವರಿಗೆ ಆಧಿವ್ಯಾಧಿಗಳಿಂದ ಆಪತ್ತು ಆಘಾತಗಳಿಂದ ರಕ್ಷಣ
ನೀಡಿ ಅಭಯ ಸಾರಿ ಅವರ ಯೋಗಕ್ಷೇಮವನ್ನು ವಹಿಸಿಕೊಂಡು, ಈ ದೇ
ಮಾನವರು ಬಹು ಜನಸಮುದಾಯದ ಬದುಕನ್ನು ಒಳಿತಿಗೋ ಕೆಡುಕಿಗೊ
ಪ್ರಭಾವಿಯಾಗಿ ಆಳುತ್ತಾರೆ. ನಮ್ಮಲ್ಲಿ ಅನೇಕ ದುರ್ಬಲ ಮನಸ್ಸಿನವರಿ
ಭಾವುಕ ವೃತ್ತಿಯವರಿಗೆ ತಮಗಿಂತ ಪ್ರಬಲ ವ್ಯಕ್ತಿತ್ವದವರಿಗೆ ಸೋತು, ಅವ
ಮಾತಿಗೆ ಮೋಡಿಗೆ ಮಾರಿಹೋಗುವದು ಸ್ವಾಭಾವಿಕವಾಗಿದ್ದಂತೆ ಇಷ್ಟವ
ಆಗಿರುತ್ತದೆ. ಇದು ಭಕ್ತಿ ಮಾರ್ಗದಲ್ಲಿ ಸಮರ್ಪಣ, ಆತ್ಮನಿವೇದನೆ ಅನಿ
ಕೊಳ್ಳುತ್ತದೆ. ಅದಕ್ಕೂ ಕೆಳಮಟ್ಟದಲ್ಲಿ ದಾಸಮನೋಭಾವವಾಗಿ ಕಾಣಿ
ಕೊಳ್ಳುತ್ತದೆ. ಇದುವೆ "ಗುರುವಿನ ಗುಲಾಮ"ನಾಗುವ ಮನೋವೃತ್ತಿ. ಈ
ಗುಲಾಮಗಿರಿಯಲ್ಲಿಯೂ ಅವರು ಮುಕ್ತಿಯನ್ನು ಅನುಭವಿಸುತ್ತಾರೆ. ಏಕೆಂದರೆ
ತಮ್ಮ ತಾಪತ್ರಯಗಳ ಭವ ಭಾರದ ಹೊರೆಯನ್ನೆಲ್ಲ ಅವರು ತಮ್ಮ ಗುರುವಿನ
ಪಾದಕ್ಕೆ ಹೊತ್ತಿಹಾಕಿ ತಾವು ಪರಿಹಾರ ಪಡೆಯುತ್ತಾರೆ. ಇದೂ ಒಂದು
ಬಗೆಯ ಉನ್ಮಾದ; ಭಾವಾವೇಶ. ಇದರಿಂದ ಸಿಗುವ ಸಂತೃಪ್ತಿ ಸಮಾಧಾನ
ಮನಸ್ಸಿನ ಆರೋಗ್ಯದ ಲಕ್ಷಣವಲ್ಲ. ಇದು ಬಾಳಿನಿಂದ, ಮಾನವನಿಗೆ ಸಹಜ
ವಾದ ಸಾಮಾಜಿಕ ಬದುಕಿನ ಹೊಣೆಗಾರಿಕೆಯಿಂದ, ಸಹಜೀವನದ ಒಡಗೂಡಿ
ಒಡನಾಡಿ ಬಾಳುವ ನೈಜ ನೆಮ್ಮದಿಯಿಂದ ಒಂದು ಪಲಾಯನ.

ಕಾಮ–ಪ್ರೇಮ–ಮಧುರಾ ಭಕ್ತಿ

ಇಂಥ ಪ್ರವೃತ್ತಿಗೆ ಆಸಕ್ತಿಗೆ ಒಂದು ನಿತ್ಯದ ಆಲಂಬನ ದೇವರು. ವಿಶೇಷತಃ ಕೃಷ್ಣ, ಕ್ರಿಸ್ತ, ಚೆನ್ನಮಲ್ಲಿಕಾರ್ಜುನ, ಶ್ರೀರಾಮ, ಕೆಲ ಸಲ ಕಾಳೀ-ಮಾತೆ, ಚೈತನ್ಯ, ಪ್ರಭು, ಮೀರಾಬಾಯಿ, ಸಂತ ಥೇರೇಸಾ, ಅಕ್ಕಮಹಾದೇವಿ, ಶ್ರೀರಾಮಕೃಷ್ಣ ಪರಮಹಂಸರೇ ಮೊದಲಾದವರು; ಮುಸ್ಲಿಮರಲ್ಲಿ ಸೂಫೀ ಅನುಭಾವಿಗಳು ಇಂಥ ಮಧುರಾ ಭಕ್ತಿಗೆ ಮಾದರಿಗಳಾಗಿ ಇತಿಹಾಸ ಪ್ರಸಿದ್ಧ. ಇವರಿಗೆ ಜೀವಾತ್ಮಗಳೆಲ್ಲ ದೇವರ ಪ್ರಿಯತಮೆಯರು (ಗೋಪಿಯರು) ಮತ್ತು ದೇವರು ಪರಮ ಪ್ರಿಯತಮ. ಆತ್ಮನಿಗೆ (ಶ್ರೀಕೃಷ್ಣ) ಪರಮಾತ್ಮನಿಂದ ಚಿರವಿರಹ. ನಿತ್ಯವೂ ಪುನರ್ಮಿಲನದ ಆತುರ. ಇವರಿಗೆ ಭಕ್ತಿಯೊಂದು ಒಣ ಯೋಗ ಸಾಧನೆ ಅಲ್ಲ. ಅದು ರಸಮಯ–ಕರುಣ ಮಧುರ ಶೃಂಗಾರದ— "ಅಭಿಸಾರ."

ಅಂದರೆ, ಇಂಥ ಉತ್ಕಟ ಭಾವಾವೇಶದ ಮೈಮರೆಯುವ (ಉನ್ಮನ) ವೃತ್ತಿ ಒಂದು ಸಾಮಾನ್ಯ ಭಾವಪರವಶತೆಯಲ್ಲ. ಇದರ ಮೂಲ ಕಾಮ ಪ್ರೇರಣೆಯಲ್ಲಿದೆ. ಇದು ಕಾಮ ಪ್ರವೃತ್ತಿ (ವಿಕಾರ)ಯ ಉನ್ನಯನ (ಸಬ್ಲಿಮೇಶನ್.) ಕಾಮವು ಪ್ರೇಮವಾಗಿ, ಪ್ರೇಮವು ಭಕ್ತಿಯಾಗಿ ಈ ಭಕ್ತರು ಗಂಡಿರಲಿ, ಹೆಣ್ಣಿರಲಿ ದೇವರನ್ನು ತನ್ನ ಪ್ರಿಯತಮ "ನನ್ನ ನಲ್ಲ"ನೆಂದು ಸತಿ-ಪತಿ ಭಾವದಿಂದ ಪ್ರೀತಿಸುತ್ತಾರೆ. ಇದು ಆತ್ಯಂತಿಕ ಭಾವಾವೇಶದ ಉನ್ಮನ ಸ್ಥಿತಿ. ಸಾಮಾನ್ಯ ವ್ಯಾವಹಾರಿಕ ಪಾತಳಿಯಲ್ಲಿಯೂ ನಾನು ಕಂಡಂತೆ, ಕೆಲವರು ನಾಮ ಸಂಕೀರ್ತನಕಾರರಿಗೆ ಭಜನೆಯ ಗುಂಗಿನಲ್ಲಿ ಒಂದು ಬಗೆಯ ಭಾವ ಸಮಾಧಿ ಏರುತ್ತದೆ. ಆಗ ಸಂತ ತುಕಾರಾಮ ಒಂದು ಅಭಂಗದಲ್ಲಿ ಬಣ್ಣಿಸಿದಂತೆ, "ಬ್ರಹ್ಮಾನಂದೀಂ ಲಾಗಲೀಟಾಳೀ ಕೋಣ ದೇಹಾತೇಂ ಸಂಭಾಳಿ?" (ಬ್ರಹ್ಮಾನಂದದಲ್ಲಿ ತಾಲ ತಲ್ಲೀನ ಬಂತು! ಆಗಲೀ ದೇಹವನು ಸಾವರಿಸಲೆಂತು?) ನನ್ನ ಪರಿಚಯದ ಭಜನ ಪಂಥಿಗಳೊಬ್ಬರಿದ್ದರು, ತುಂಬ ಸಾತ್ವಿಕರು ಸಂಭಾವಿತರು, ಕುಟುಂಬಸ್ಥರು. ಅವರು ಭಜನೆ ಮಾಡುವಾಗ ಸಂಗಡಿಗರೊಂದಿಗೆ ರಿಂಗಣ ಹಾಕಿ ಮೃದಂಗ ತಾಳಗಳ ಲಯ ವೇಗದಲ್ಲಿ ಕುಣಿಯುತ್ತ ಕುಣಿಯುತ್ತ ಮೈಮರೆತು ಬೀಳುತ್ತಿದ್ದರು. ಆಗ ಅವರಿಗೆ ರೇತ ಸ್ಖಲನವಾಗಿರುತ್ತಿತ್ತು. ಕುಣಿತದ ರಭಸದೊಂದಿಗೆ ಅವರ ಶಿಶ್ನ ಉತ್ಥಾನವಾಗುತ್ತಿತ್ತು. ಇದನ್ನು ಅವರ ನಿಷ್ಠಾವಂತ ಮದ್ದಳೆಗಾರ ತುಂಬ ನಮ್ರ ಭಯಭರಿತ ಭಕ್ತಿಯಲ್ಲಿ ಕೊಂಡಾಡಿ ನನಗೆ ಹೇಳಿದ್ದುಂಟು. ಭಾವಾವೇಶದಲ್ಲಿ, ಮಡಿ ವೇಷದಲ್ಲಿ

ಕುಣಿದಾಡುವದು ಮೂಲತಃ ಕಾಮ ಪ್ರೇರಣೆಯೇ ಎಂಬುದಕ್ಕೆ ಇದೊಂದ
ಸಿರಾಡಂಬರವಾದ ಉದಾಹರಣೆ.

ಕವಿ ಜಯದೇವನ "ಗೀತ ಗೋವಿಂದ" ಕಾವ್ಯ ರೂಪಕವಂತೂ ಮಧುರ
ಭಕ್ತಿಯ ಒಳಮೈಯಾದ ಈ ಶುದ್ಧ ಶೃಂಗಾರ ಲೀಲೆಯನ್ನು ಅಜರಾಮ
ಗೊಳಿಸಿದೆ. ಇದರ ಬೀಜ ರೂಪದ ಬಿಂಬ ಭಾಗವತದಲ್ಲಿಯು "ಗೋಪಿ ಗೀತ
ಒಡಮೂಡಿಸಿದೆ. ನಮ್ಮಲ್ಲಿ ಕೃಷ್ಣಭಕ್ತಿಯ ಭಾವಾತಿರೇಕದ ರಸಾವಿಷ್ಕಾರವ
ಈ ಬಗೆಯ ಶೃಂಗಾರದ ಉದಾತ್ತೀಕರಣಕ್ಕೆ ಮೀಸಲು ಮಾದರಿ. ಅದ
ಇದೊಂದು ಆತ್ಯಂತಿಕ ಸ್ವರೂಪವಾಯಿತು. ಇದಕ್ಕೂ ಭಾವನಾಮಯ
ಅಗತ್ಯ.

ಇಲ್ಲಿ ನೆನಪಿಡಬೇಕಾದ ಅಂಶವೆಂದರೆ, ಭಾವನಾಮಯ ಸ್ವಭಾವ
ಆಸ್ತಿಕರಿಗೆ ದೇವರೊಂದು ಅತಿ ಅಗತ್ಯದ ಬೇಡಿಕೆ. ಅವರ ಬದುಕಿನ ಹಸಿರಿ
ಹಸಿವು ಅದರಿಂದ ತುಂಬುತ್ತದೆ. ಆರ್ದ್ರತೆಗಾಗಿ ಆರ್ತತೆ ಅದೊಂದು ಪೂರೈ
ಯಿಂದ ಆರುತ್ತದೆ. ನಮ ನಿಮಗೆ ಬಾಳಿನ ರಸಿಕರಿಗೆ ಪ್ರಕೃತಿ ಸೌಂದಯ
ದಲ್ಲಿ, ಹೂವಿನ ಕಂಪಿನಲ್ಲಿ, ಕೋಕಿಲೆಯ ಇಂಪಿನಲ್ಲಿ, ಬನಸಿರಿಯ ಸೊಂಪಿನಲ್ಲಿ
ಕಡಲಿನ ಉಗ್ಗಡಿಸುವ ಪೆಂಪಿನಲ್ಲಿ ಸಿಗುವ ಸೊಗಸು, ಸೊಬಗು ಇಂಥ ಉತ್ಕಟ
ಭಾವ ಜೀವಿಗಳಿಗೆ ದೇವರ ಬಿಂಬಗಳಲ್ಲಿ ದೇಗುಲಗಳ ಸಾನ್ನಿಧ್ಯದಲ್ಲಿ ಇನ್ನೂ
ಉತ್ಕಟವಾಗಿ ಭಾವ ನಿರ್ಭರವಾಗಿ ದೊರೆಯುತ್ತದೆ. ಜಗನ್ನಾಥಪುರಿಯಲ್ಲಿ
ಚೈತನ್ಯ (ಗೌರಂಗ) ಮಹಾಪ್ರಭು, ಮಥುರಾ ವೃಂದಾವನಗಳಲ್ಲಿ ಮೀರಾ
ಬಾಯಿ, ಶ್ರೀಶೈಲದಲ್ಲಿ ಅಕ್ಕಮಹಾದೇವಿ, ದಕ್ಷಿಣೇಶ್ವರಿಯಲ್ಲಿ ರಾಮಕೃಷ್ಣ
ಪರಮಹಂಸರು, ಪಂಢರಪುರದಲ್ಲಿ ಪುರಂದರದಾಸರು ಅಷ್ಟೇ ಏಕೆ? ಶ್ರೀರಂ
ಪಟ್ಟಣದ ರಂಗನಾಥನೆದುರಿಗೆ ಮಾಸ್ತೀಜಿಯವರು ಒಂದು ಅನಿರ್ವಚನೀಯ
ಆನಂದದ ಭಾವಪರವಶತೆಯಲ್ಲಿ ಕರಗಿ ಹೋಗುತ್ತಿದ್ದರು. ನಮ್ಮ ಅನಿಸಿಕೆಗಳನ್ನು
ಮೀರಿದ ಅಥವಾ ಅವುಗಳಿಗೆ ಹೊರತಾದ ಸೂಕ್ಷ್ಮ ಸಂವೇದನೆ ಅವರದು
ಅವರ ಆ ವಿಶಿಷ್ಟ ಅಲೆ ಅಳತೆಗೆ ನಾವು ಸ್ಪಂದಿಸುವದಿಲ್ಲ, ಬಹುಶಃ ಸ್ಪಂದಿಸ
ಲಾರೆವು. ಅಂದಾಗ ಈ ದಿವ್ಯಾನುಭೂತಿ ಒಂದು ಸಾರ್ವತ್ರಿಕ ಸರ್ವಸಾಮಾನ್ಯ
ಸತ್ಯವಾಗಲಾರದು. ಇದು ಏಕಾಂತಿಕ ಅತ್ಯಂತಿಕ ಅನುಭವವು, ಅವರವರದು
ಅವರವರ ಮಟ್ಟಿಗೆ ಸತ್ಯ: ಕೇವಲ ಭಾವ ಸತ್ಯ. ಕಾವ್ಯ ಸತ್ಯದಂತೆ ಆ ಮಟ್ಟಿಗೆ
ಅಂಥ ಭಾವಜೀವಿಗಳಿಗೆ ದೇವರೆಂಬುದು ಒಂದು ಅಪರೋಕ್ಷ ಅನುಭವ ಮತ್ತು
ಅವರ ಬದುಕಿಗೆ ಅವಶ್ಯಕವಾದ, ಕೆಲ ಸಲ ಅಪರಿಹಾರ್ಯವೂ ಆಗಬಹುದಾ

ಸತ್ಯವೆನಿಸುತ್ತದೆ. ಇದೇ ಒಂಟೋಲೋಜಿ-ಸತ್ತಾವಾದದ-ದೃಷ್ಟಿಯಿಂದ ದೇವರ ಅಸ್ತಿತ್ವದ ಒಂದು ಸಮರ್ಥನೆ.

ಬದುಕಿನ ಸಮಸ್ಯೆಗಳಿಗೆಲ್ಲ ನೇರವಾಗಿ ಸರಿಯಾಗಿ ಬಗೆಹರಿಕೆ ಸಿಗುತ್ತದೆಂದು ಹೇಳಲಾಗುವದಿಲ್ಲ. ಹಾಗೆ ನಿರುತ್ತರಗೊಳಿಸುವ ಗೂಢಗಳಿಗೆ ನಾವು ಕೊಡಕೊಳ್ಳುವ ಸಮಾಧಾನ ದೇವರು. ದೇವರು ಮಾಡಿದ್ದು, ದೇವರೇ ಗತಿ, ಕೊನೆಗೆ ದೇವರಿದ್ದಾನೆ–ಇತ್ಯಾದಿ. ಹೀಗೆ ಬದುಕಿನ ಅವಶ್ಯಕತೆ ದೇವರನ್ನು ಕಲ್ಪಿಸಿಕೊಳ್ಳುವಂತೆ, ಸ್ಥಾಪಿಸುವಂತೆ ಮಾಡುತ್ತದೆ.

ಜನಸಮಾಜವನ್ನು ಅಂಕೆಯಲ್ಲಿಡಲು ನಾವು ಅನಾದಿಯಿಂದ ಮಾಡಿಕೊಂಡ ಕಟ್ಟುಪಾಡು ಧರ್ಮ. "ಆಚಾರದಿಂದ ಧರ್ಮ ರೂಪಗೊಳ್ಳುತ್ತದೆ. ಧರ್ಮಕ್ಕೆ ಪ್ರಭು, ದೇವರು" ಎಂದು ನಮ್ಮ ಸಾಂಪ್ರದಾಯಿಕ ಭಾವನೆ. ದೇವರ ಭಯುವೇ ನೀತಿಯ ಆರಂಭವೆಂದಿದೆ–ಬೈಬಲ್. ಆದರೆ ದೇವರಿಲ್ಲದ ಧರ್ಮವನ್ನು ಗೌತಮಬುದ್ಧ ಯಶಸ್ವಿಯಾಗಿ ಸ್ಥಾಪಿಸಿ ಕಾಣಿಸಿದನು. ಇಂದು ನಮ್ಮ ಮಾನವತಾವಾದಿಗಳು ದೇವರಿಲ್ಲದ ಧರ್ಮವನ್ನೇ ಮಾನವತೆಯ ತಳಹದಿಯ ಮೇಲೆ ಪ್ರತಿವಾದಿಸುತ್ತಿದ್ದಾರೆ. ಆದರೆ ಪರಂಪರಾಗತವಾಗಿ ದೇವರ ಭಯ, ಆಜ್ಞೆ, ಧರ್ಮಾಚರಣೆಗೆಲ್ಲ ಪ್ರೇರಣೆ–ಬೋಧನೆ. ದೇವರಾಣೆ ಹೊತ್ತ ಹೊರತು ಕೋರ್ಟಿನಲ್ಲಿ ನಾವಾಡಿದ ಮಾತು ಸತ್ಯವೆನಿಸುವದಿಲ್ಲ. ನಮ್ಮ ನಡೆನುಡಿಗೆಲ್ಲ ಈ ದೇವರಿಂದ "ಭಗವಂತನ ಅಧಿಷ್ಠಾನ"ದಿಂದ ದೃಢತೆ, ಪಾವಿತ್ರ್ಯ ಮತ್ತು ವಿಶ್ವಾಸಾರ್ಹತೆ. ಹೀಗೆ ಲೋಕವ್ಯವಹಾರಕ್ಕೆ ದೇವರು ಬೇಕೆಂದಾಯಿತು. ಆದರೆ ಇದು ಕೇವಲ ರೂಢಿಯ ಫಲ. ಕೊನೆಗೂ ವ್ಯಕ್ತಿಯ ದೌರ್ಬಲ್ಯವನ್ನು ಆ ಸರ್ವಶಕ್ತನೆಂಬ ದೇವರ ಹೆಸರೆತ್ತಿ ಭಯ ತೋರಿಸಿ, ಪರಸ್ಪರರ ಪ್ರಯೋಜನಕ್ಕಾಗಿ ಸುಲಿಗೆ ಮಾಡುವ ಒಂದು ರೀತಿಯ ಸೂಕ್ಷ್ಮ ಜುಲುಮೆಯೇ ಇದು.

ಹೀಗೆ ಸಮಾಜದ ಸ್ಥಿತಿಪಾಲನೆಗೆ, ಬದಲಾವಣೆಗೆ ವಿರೋಧವಾಗಿ ಆಳರಸರ, ಶ್ರೇಷ್ಠಿಗಳ, ಮೇಲ್ವರ್ಗದವರ, ಪ್ರಜಾಪ್ರಭುಗಳ ಶಾಸನ ಸಂಘಟನೆಯ ಯೋಜನೆಗೆ ವಿಧೇಯವಾಗಿ ಜನತೆಯನ್ನು ನಡೆಯಿಸಲು ದೇವರ ಇಚ್ಛೆ, ಆದೇಶ ಇತ್ಯಾದಿ ಅವಶ್ಯಕತೆಯೇ ಉಂಟುಮಾಡಿದ ಒಂದು ಸದ್ಗುಣವಾಗಿ ನಿಂತಿತು.

10

ಸೌಂದರ್ಯ, ಆನಂದ, ಕಲ್ಯಾಣ, ಸಾಧುತ್ವ, ಮಾಧುರ್ಯ, ಚಾರಿತ್ರ್ಯ ಮುಂತಾದ ಗುಣತತ್ವಗಳಿಗೆ ಸಂಬಂಧಪಟ್ಟ ಅನುಭವದಿಂದ ದೇವರೆಂಬ

ಸತ್ತೆಯ ಸತ್ವದ ಅಥವಾ ಭಾವದ ಅಸ್ತಿತ್ವ ಸಿದ್ಧವಾಗುವದಿಲ್ಲ. ಈ ಅನುಭವ ಹೆಚ್ಚಾಗಿ ಆಯಾ ವ್ಯಕ್ತಿಯ ಮಾನಸಿಕ ಮತ್ತು ಕೆಲ ಸಲ ಶಾರೀರಿಕ ಅಂತಃಸ್ಥಿತಿಯ ಕುರಿತು ಬೆಳಕು ಬೀರುತ್ತದೆ. ಆದರೆ ಅದು ಚಿನ್ಮಯ ಸ್ವರೂಪವು. ಆದ್ದರಿಂದ ಚಿಂತನೆಗೆ, ತರ್ಕಕ್ಕೆ ಮತ್ತು ವ್ಯಾಖ್ಯೆ, ವ್ಯಕ್ತನೆಗೆ ಸಿಗುವ ಸಂಗತಿ ಅಲ್ಲ. ನಿಸರ್ಗದ ನಿಯಮ, ವಿಶ್ವಸೃಷ್ಟಿಯ ಯಾಂತ್ರಿಕ ಕ್ರಮ ಇವು ಆ ದೇವರ ಲಕ್ಷಣಗಳೆಂದರೆ, ಈ ನಿಯಮ-ಕ್ರಮಗಳನ್ನೇ ನಮ್ಮ ಜೀವನದ-ನಿಯತಿಯನ್ನೇ ದೇವರೆಂದು ಗುರುತಿಸಬೇಕು. ಆದರೆ ಈ ತರಹದ ದೇವರ ಗ್ರಹಿಕೆ ನಮ್ಮ ಆಸ್ತಿಕರಿಗೆ ಒಪ್ಪಿಗೆ ಆಗುವಂತಿಲ್ಲ. ದೇವರೆಂದರೆ, ಅದೇನೋ ಇಂದ್ರಿಯಗಳಿಗೆ ಮನೋವ್ಯಾಪಾರಕ್ಕೆ ಅತೀತವಾದ "ಪರ"ವಾದ ಸತ್ತೆ ಸತ್ವವೆಂದೇ ಭಾವಿಕರು ಭಜಿಸುತ್ತಾರೆ. ಆ ಕುರಿತು ಒಂದು ವಿಶಿಷ್ಟ ಪ್ರಚಂಡತೆಯ ಹಾಗೂ ಪಾವಿತ್ರ್ಯದ, ಆ ಮೂಲಕ ಪೂಜ್ಯತೆಯ ಭಾವವನ್ನು ತಾಳುತ್ತಾರೆ. ಆದರೆ ಈ ಪರಿಕಲ್ಪನೆಯೇ ವಾಸ್ತವ ಸತ್ಯವಲ್ಲ.

ಅಚಿಂತ್ಯವು ಅನೂಹ್ಯ "ಅನುಭಾವ?"

ಒಂದು ಅರ್ಥದಲ್ಲಿ ದೇವರೆಂಬ ಮಾತಿನ ಬಗೆಗೆ ಅಸ್ತಿ ಎಂದಾಗಲಿ, ನಾಸ್ತಿ ಎಂದಾಗಲಿ ಒಂದು ವಿಧಾನವನ್ನು ಮಾಡುವದೇ ಪ್ರಮಾದವು. ಅಚಿಂತ್ಯವೂ ಅನೂಹ್ಯವೂ-ಅಗಮ್ಯವೂ-ಅವ್ಯಕ್ತವೂ ಆದ ಸಂಗತಿಯು ಅದೇ ಕಾಲಕ್ಕೆ (ಇಲ್ಲಿ ಕಾಲ ಹೇಗೆ ಬಂತು?) ನಿರ್ಗುಣ ಸಗುಣ ನಿರಾಕಾರ ಸಾಕಾರ ವಿಶಿಷ್ಟ ನಾಮ ರೂಪ ಲಕ್ಷಣ ಸಂಪನ್ನವಾಗಿ, ಪರಬ್ರಹ್ಮ ವಸ್ತುವೆಂಬುದು ಅದೇ ಉಸಿರಿಗೆ ಪರಮೇಶ್ವರನಾಗಿ (ಅದೂ ಪಾರ್ವತಿಯೊಂದಿಗೆ ಮಾತ್ರವಲ್ಲ, ಗಣಪತಿ ಸುಬ್ರಹ್ಮಣ್ಯರೆಂಬ ಪುತ್ರಪರಿವಾರದೊಡನೆ) ಭಕ್ತರಿಗೆ ಕೂಗಳತೆಯಲ್ಲಿ-ಕೈಲಾಸದಲ್ಲಿ-(ವಿಷ್ಣುವಾದರೆ ವೈಕುಂಠದಲ್ಲಿ) ಅನುಗ್ರಹಿಸಲು ಸದಾ ಸಿದ್ಧನಾಗಿರುತ್ತಾನೆಂಬ ವಿಧಾನವು (ಹೇಳಿಕೆಯು) ಸಹಸಾ ನುಂಗಲಿಕ್ಕೆ ಬಾರದ ತುತ್ತು. ಉಪಾಧಿ, ಪರಿಮಾಣ, ಪಂಚೇಂದ್ರಿಯ ಗ್ರಾಹ್ಯವಾದ ಅರಿವು ಇಲ್ಲದ ಯಾವದೂ ಅಸ್ತಿತ್ವವಲ್ಲ.

ನಾವು ಇದ್ದೇವೆ, ಆದ್ದರಿಂದ ದೇವರು ಉಂಟು ಎಂಬ ಸಿದ್ಧಾಂತ ಒಂದರ್ಥದಲ್ಲಿ ನಿಜ. ನಮ್ಮ ಅಸ್ತಿತ್ವವೊಂದೇ ದೇವತ್ವದ ಕಲ್ಪನೆಯ ಅಸ್ತಿತ್ವಕ್ಕೆ ಆಧಾರ. ಅದು ನಮ್ಮ ಭಾವಲೋಕದ ಸೃಷ್ಟಿ. ಚಿಕ್ಕ ಮಕ್ಕಳ ನಿದ್ದೆಗೆಡಿಸುವ ಗುಮ್ಮನಂತೆಯೇ-ಈ ಬೊಮ್ಮನ ಹುಟ್ಟು, ಗುಟ್ಟು. ನಮ್ಮ ಕಲ್ಪನೆಯ, ಕಾಮನೆಯ ಭಾವೋನ್ಮಾದದ ಸಮ್ಮಿಶ್ರ ಹಾಗೂ ವಿಚಿತ್ರ ಬೆಳಕಿನಲ್ಲಿ ಭವ್ಯವಾಗಿ ಆಕಾಶದಲ್ಲಿ ಚಾಚಿದ ನಮ್ಮದೇ ನೆರಳು.

ಅಂತೆಯೇ ಸಂತ ಕವಿ ಏಕನಾಥರು ಎಂದೋ ಹಾಡಿದ್ದಾರೆ: "ಭಾವ ತೋಚಿದೇವ-ಭಾವತೋಚಿದೇವ ಯಾ ಅರ್ಥಿಂ ಸಂದೇಹ ಮಾನೂ ನಕಾ" (ಭಾವವೆಂಬುದೇ ದೇವನು ಭಾವವೆಂಬುದೇ ದೇವನು ಈ ಅರ್ಥದ ಸಂದೇಹ ವನ್ನು ತಾಳಬೇಡಿರಿ.) ಈ ಭಾವದ ಅಗತ್ಯವೇ ದೇವರ ಹುಟ್ಟಿನ ಗುಟ್ಟು ಎಂಬುದೇ ಒಂಟೋಲೋಜಿಯ (ಸತ್ತಾವಾದದ) ನಿಲುವು.

ಭಾವಿಕರಲ್ಲಿ ಅತಿ ಭಾವುಕರಿಂದ ರಹಸ್ಯವಾದ (ಗೂಢಗುಂಜನ) ಅಥವಾ ಅನುಭಾವ ಹುಟ್ಟಿಕೊಂಡಿತು. ತಕ್ಕಮಟ್ಟಿನ ಬೌದ್ಧಿಕತೆಯೊಂದಿಗೆ ಉತ್ಕಟ ಭಾವ ಸಂವೇದನೆಯೂ ಕೂಡಿಕೊಂಡಲ್ಲಿ, ಈ ಅನುಭಾವವೆಂಬ ದಿವ್ಯಾನು ಭೂತಿಯ ಒಂದು ಮನಃಸ್ಥಿತಿ ಕಾಣಿಸಿಕೊಳ್ಳುತ್ತದೆ. ಇದನ್ನು ಇಂಗ್ಲೀಷಿನಲ್ಲಿ "Mysticism" ಎನ್ನುತ್ತಾರೆ. ಮಿಸ್ಟಿಕ್ ಎಂದರೆ, ಆ ಪರಿಭಾಷೆಯಂತೆ ಅಪರೋಕ್ಷಾನುಭವಿ. ಬುದ್ಧಿಗೆ ನಿಲುಕಲಾರದ ದೇವರೊಂದಿಗೆ ಆತ್ಮದ ತಾದಾತ್ಮ್ಯ-ತದೇಕ ಧ್ಯಾನದಿಂದ ಏನೋ ಒಂದು ಬಣ್ಣಿಸಲಾಗದ, ಕಾಣಿಸ ಲಾಗದ ಆನಂದದ ಅನುಭವ. ಅತ್ಯಂತ ತೀವ್ರ ಸಂವೇದನೆಯ ಕೋಮಲ ಭಾವ, ವಿಹ್ವಲ ಮನಸ್ಸುಗಳು ಈ ಬಗೆಯ ಅತೀಂದ್ರಿಯ ಆಧ್ಯಾತ್ಮಿಕ ಆತ್ಮೀಯ ಅನುಭವವನ್ನು ಪಡೆಯುತ್ತವೆ. ಈ ಅನುಭವದಲ್ಲಿ ಅವರ ಸಮಾಗಮ ಒಂದು ಶ್ರೀರಾಮ, ಶ್ರೀಕೃಷ್ಣ, ಕ್ರಿಸ್ತನಂಥ ಸಗುಣ ಸಾಕಾರ ದೇವತಾಮೂರ್ತಿ ಯೊಂದಿಗೆ ನಡೆಯಬಹುದು ಅಥವಾ ಒಬ್ಬ ನಿರಾಕಾರವಾದರೂ ಸಗುಣ ವೆನಿಸುವ ಅಸ್ಪಷ್ಟ ತೇಜೋಮಯ ಅಮಾನುಷ ದಿವ್ಯ ಸತ್ವದೊಂದಿಗೆ ನಡೆಯ ಬಹುದು. ಈ ಅನುಭವ ಆದರಿಂದ ಉಂಟಾಗುವ ಅವಸ್ಥೆ ಅದಕ್ಕೆ ಕಾರಣ ಗಳು-ಇವೆಲ್ಲವರ ಮೀಮಾಂಸೆಗೆ ಇಲ್ಲಿ ಅವಕಾಶ ಕಡಿಮೆ.

ಇಂಥ ಅನುಭಾವಿಗಳು ಸಮಾಜದಲ್ಲಿದ್ದರೂ ಸಾಮಾಜಿಕರಂತೆ ಇರುವ ದಿಲ್ಲ. ಅಂತರ್ಮುಖಿಯಾಗಿ ತಮ್ಮಲ್ಲಿಯೇ ತಲ್ಲೀನರಾಗಿ ಒಳಹಿಗ್ಗಿನ ಒಂದು ತಂದ್ರಿಯಲ್ಲಿ, ಕನಸಿನಲ್ಲಿ ವ್ಯವಹರಿಸುವಂತೆ ವರ್ತಿಸುತ್ತಾರೆ, ಇವರು-ಶಿಶು ಗಳಂತೆ, ಹುಚ್ಚರಂತೆ, ಪಿಶಾಚಿಗಳಂತೆ! ("ಬಾಲೋನ್ಮತ್ ಪಿಶಾಚವತ್" ಎನ್ನುತ್ತದೆ ಯೋಗಶಾಸ್ತ್ರ!)

ಅಂದರೆ, ಸಾಮಾನ್ಯವಾಗಿ ಈ ಅನುಭಾವಿಗಳ ಮನಸ್ಸು ಸ್ವಸ್ಥವಲ್ಲ, ಸಮಸ್ಥಿತಿಯದಲ್ಲ. ಇದೂ ಒಂದು ಬಗೆಯ ಉನ್ಮಾದ, ಮನೋವಿಕೃತಿಯ ಉದ್ಭ್ರಾಂತ ಸ್ಥಿತಿ. ಪ್ರತಿಯೊಬ್ಬ ಪಾಪಿಗೂ ಒಂದು ಭವಿಷ್ಯವಿದೆ. ಹಾಗೆಯೇ ಪ್ರತಿಯೊಬ್ಬ ಸಂತನಿಗೂ ಒಂದು ಭೂತಕಾಲವಿದೆ-ಅಂದಿದ್ದಾನೆ, ವಿನೋದೀ ವ್ಯಂಗ್ಯ ನಾಟಕಕಾರ ಆಸ್ಕರ ವೈಲ್ಡ. ಇದು ತುಂಬ ಮಾರ್ಮಿಕವಾದ ಮಾತು.

ಈ ಅನುಭಾವಿ ಸಂತರ ಚರಿತ್ರೆಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ, ನಮಗೆ ಅವರ ಎಳೆ ವಯಸ್ಸಿನಲ್ಲಿ ಏರು ಜವ್ವನದಲ್ಲಿ ಏನಾದರೊಂದು ತಪ್ಪಿದ ಹೆಜ್ಜೆ, ಜಾರಿದ ಹಾದಿ, ಘಟಿಸಿದ ಪಾಪದ ಕೊರೆಯುವ ಪ್ರಜ್ಞೆ, ಕಾಡುವ ಕೊರಗು ತನ್ನ ಉದ್ದ ಆಳ ನೆರಳು ಚಾಚಿರುವದು ಕಂಡುಬರುತ್ತದೆ. ಕೆಲ ಸಲ ಅವರೇ ತಾಯಿ ತಂದೆಗಳಿಂದ, ಮನೆಯವರಿಂದ ತಿರಸ್ಕೃತರು, ಪರಿತ್ಯಕ್ತರು, ಏಕಾಂತ ದುಃಖಿಗಳು ಅಶ್ವತ್ಥಾಮನಂತೆ. ಕವಿ ಅಕಬರ ಅಲಿ ಹೆಸರಿಸುವ "ಅಶ್ವತ್ಥಾಮ"ರು ಸಮಾಜಕ್ಕೆ ಜೀವನಕ್ಕೆ, ಬೆನ್ನು ತಿರುವಿದ ಮುರುಟಿದ ಮುರಿದ ಮರ್ಮಾಘಾತಗೊಂಡ ಮನಸ್ಸು ಅವರದು. ಅದರ ತೀವ್ರ ವಿಕಾರಗೆಟ್ಟ ಸಂವೇದನೆಯು ಒಂದು ವಿಕ್ಷಿಪ್ತ ಅಥವಾ ವಿಶೇಷ ಬೆಳವಣಿಗೆಯು ಈ ಅನುಭಾವದಲ್ಲಿ ಪರಿಣಾಮಗೊಳ್ಳುತ್ತದೆ.

ಇಂಥ ಅನುಭಾವಿಗಳ, ಯೋಗಿಗಳ ಭಕ್ತಾಗ್ರೇಸರ ದಿವ್ಯಾನುಭವವಾಗಲಿ ದೇವರ ಸಾಕ್ಷಾತ್ಕಾರ "ದೃಷ್ಟಾಂತ" ಅತೀಂದ್ರಿಯ ಅಧ್ಯಾತ್ಮಿಕ "ಭಗವತ್" ಸಮಾಗಮದ ಉತ್ಕಟ ಭಾವದ ಆವೇಶ ಉನ್ಮಾದಗಳನ್ನುಂಟು ಮಾಡುವ "ಸಮಾಧಿ" ತನ್ಮಯತೆಗಳಾಗಲಿ, ಅವರ ಪಾಲಿಗೆ ಅವರ ಅಂತಃಪ್ರಜ್ಞೆಗೆ ಸತ್ಯವೇ ಆಗಿರಬಹುದು. ಪ್ರಾಮಾಣಿಕವಾಗಿಯೇ ಅವರು ದೇವರನ್ನು ತನ್ನವನಾಗಿ, ನಲ್ಲನಾಗಿ, ಪ್ರಿಯತಮನಾಗಿ, ಅಂತಃಸಖನಾಗಿಯೇ ಕಂಡು ಆ ಭಾವದಲ್ಲಿ ಮಗ್ನರಾಗಿರಬಹುದು. ಇದು ಮಿಸ್ಟಿಕ್ ಅನುಭವ. "ಮಿಸ್ಟಿಕ್" ಅಂದರೆ ರಹಸ್ಯಮಯ–ಹೇಳಲು ತಿಳಿಯಲು ಇತರರಿಗೆ ಅಗಮ್ಯ. ನಮ್ಮ ಪರಿಭಾಷೆಯಲ್ಲಿ ಅದು "ಅನಿರ್ವಚನೀಯ". ಅದು ಅದರ ಅನುಭವಿಗೆ ಅಂದರೆ "ಅನುಭಾವಿ"ಗೆ ಅದು ಆನಂದಮಯ, ಅದು ಉನ್ಮಾದ–ಆವೇಶ. "ದೇಹಭಾವದ ಲೋಪ" "ನಿರ್ವಿಕಲ್ಪ ಸಮಾಧಿ" "ನಾನೇ ಬ್ರಹ್ಮ" "ನಾನೇ ಶಿವ" ಎಂಬ ಉತ್ಕಟ ಭಾವನೆ ಏನೆಲ್ಲ ಪ್ರತೀತಿ, ತನ್ನ ಮಟ್ಟಿಗೆ ನಿಜವಾಗಿಯೂ ತರಬಹುದು. ಆದರೆ ಅದು ಅವನ (ಳ) ಮನೋಗತ ಸ್ವಗತ. ನೂರು ಮಂದಿಗೆ ಇಂಥ ಅನುಭವ ಬಂದಿದೆ, ಎಂದರೂ ಅದು ವಾಸ್ತವ, ಸಾರ್ವತ್ರಿಕ ಪ್ರಾಯೋಗಿಕವಾದ ಪ್ರತ್ಯಕ್ಷ ಇಲ್ಲವೇ ಪರೋಕ್ಷವಾದ ಸತ್ಯವಲ್ಲ. ಸಹ ಭಾಗಿಯಾದ ಇತ್ಯರ್ಥ ಅದಕ್ಕೆ ಇಲ್ಲ.

ನಕಾರಾತ್ಮಕ ನಡತೆ–ಈ ದಿವ್ಯಾನುಭವ

ಅಲ್ಲದೇ, ಇದೊಂದು ಸಾಮಾಜಿಕ ಜೀವನದ ಮುಂದರಿಯುವ ಬದುಕಿನಿಂದ ಹಿಂಜರಿದು, ಹಿಡಿದು ನಿಲ್ಲುವ ನಿಷ್ಕ್ರಿಯತೆಯು, ಶೂನ್ಯ ನಿಷ್ಪತ್ತಿಯು

ನಕಾರಾತ್ಮಕ ನಡತೆ. ಇದೊಂದು ಏಕಾಂತಿಕ ವ್ಯಸನ, ಅಫೀಮಿನಂತೆ. ಈಚೆಗೆ ಪಾಶ್ಚಾತ್ಯ ನಾಗರಿಕತೆಯು ಬಹುಮುಖ ಅಧಃಪತನಕ್ಕೆ ರೋಸಿ ಹೋಗಿ, ಆಧುನಿಕ ಯಾಂತ್ರಿಕ ಜೀವನದ ಕರ್ಕಶ ಕೋಲಾಹಲಕ್ಕೆ, ಸಂಭ್ರಮಕ್ಕೆ, ಸಂಘರ್ಷಕ್ಕೆ, ಜಾತ್ರೆ ಮರುಳ ಸಂತೆಗುಲ್ಲಿಗೆ, ಹೇಸಿ ಘಾಸಿಯಾಗಿ ಸಾವಿರಾರು ಪಾಶ್ಚಾತ್ಯ ಗಂಡು ಹೆಣ್ಣುಗಳು ಮಹೇಶ ಯೋಗಿಗಳ ಅತೀಂದ್ರಿಯ ಧ್ಯಾನವನ್ನೋ ಕುಂಡಲಿನೀ ಕ್ರಿಯೆಯನ್ನೋ ಭಗವಾನ್ ರಜನೀಶರ ಸಂಭೋಗದಿಂದ ಸಮಾಧಿಯ ಒಳದಾರಿಯ ಸಾಧನೆಯನ್ನೋ ನಂಬಿ ಹಿಂಬಾಲಿಸುತ್ತಿದ್ದಾರೆ; ಅಥವಾ ಭಾವ ಸಮಾಧಿಗೆ ಉತ್ತೇಜಕವೆಂದು ಎಲ್. ಎಸ್. ಡಿ, ಚರಸ, ಗಾಂಜಾ, ಕೋಕೇನ್ ಮುಂತಾದ ಮಾದಕ ದ್ರವ್ಯಗಳನ್ನು ನೇಮದಿಂದ ಸೇವಿಸಿ, ಅನುಭಾವಿಗಳ ಆ ಉನ್ಮನ ಉನ್ಮತ್ತ ಸಮಾಧಿ ಸ್ಥಿತಿಯನ್ನು ಸಾಧಿಸಿ, ಆದಷ್ಟು ಸಮಯ ಅದರಲ್ಲಿಯೇ ಉಳಿಯಲು ಯತ್ನಿಸುತ್ತಿದ್ದಾರೆ–ವೇದಗಳಲ್ಲಿ ಬರುವ "ಮದಂತಿಮ" ಮುನಿಗಳಂತೆ!

ಲೌಕಿಕ ಪ್ರಪಂಚದ ಬಹಿರ್ಮುಖ ಬದುಕು ಬೇಡವಾಗಿ ಅಸಹ್ಯವೆನಿಸಿ, ಅಸಾಧ್ಯವಾಗಿ ಕಂಡು ಅಂತರ್ಮುಖಿಯಾಗಿ ತನ್ನ ಮಟ್ಟಿಗೆ ತಾನು ಮುಕ್ತನೋ "ನಿತ್ಯ ಶುದ್ಧ ಬುದ್ಧ"ನೋ ಆಗಲು ಹೆಣಗುವ ತೀವ್ರ ಸಂವೇದನೆಯ ಜೀವಿಯು ಆಳವಾಗಿ ತನ್ನ ಸೋಲನ್ನು ಒಪ್ಪಿಕೊಳ್ಳುತ್ತ ಹೊರ ಜಗತ್ತೇ ಸುಳ್ಳು, ಮಿಥ್ಯೆ, ಮಾಯೆ, ಆ ದೇವರ ಲೀಲೆ ಅದರ ಆಚೆಗಿನ ಸತ್ಯ ನನ್ನಲ್ಲಿದೆ, ಅದೇ ನಿಜವಾಗಿ ನಾನು, ಎಂದೆಲ್ಲ ಭಾವಿಸಿ ಅದನ್ನೇ ಅನುದಿನವೂ ಚಿಂತಿಸುತ್ತಿರುತ್ತಾನೆ(ಳೆ.)

ಇದೂ ಒಂದು ಬಗೆಯ ಸೂಕ್ಷ್ಮವಾದ ಆತ್ಮಸಂಮೋಹನೆ. ಅವರನೊಂದ ಅಹಂಕಾರದ ಸೂಕ್ಷ್ಮ ಸಮಾಧಾನ–ಈ ದಿವ್ಯಾನುಭವ ಅಥವಾ ದೇವರ ಸಾಕ್ಷಾತ್ಕಾರ. ಇದೆಲ್ಲವೂ ಒಂದಲ್ಲ ಒಂದು ರೀತಿ ನಮ್ಮ ಅಂತರ್ಮನದ ಅಜಾಗ್ರತ ಹಾಗೂ ದಮಿತ ಭಾವ–ವಿಕಾರ ಕೋಶದ ಆವಿರ್ಭಾವ, ವಿಲಾಸ ಚೇಷ್ಟೆ. ಇದನ್ನು ಸವಿಯುವವರಿಗೆ ಇದೆಲ್ಲ ದೈವಿಕ ಅನುಭೂತಿ, ದೇವರೊಂದಿಗೆ ಸಮಾಗಮ, ಅತ್ಯಂತ ಆಪ್ಯಾಯಮಾನ, ಆನಂದಕಾರಿ–ಎಂದ ಮಾತ್ರಕ್ಕೆ ಇದು ಈ ವಿಶ್ವ ಪ್ರಪಂಚದ ರಹಸ್ಯವಲ್ಲ. ಜಗತ್ತಿನ ಮತ್ತು ಜೀವನದ ವಾಸ್ತವ ಯಥಾರ್ಥ ಸರ್ವಾಂಗೀಣ ಸತ್ಯವಲ್ಲ.

ಹೀಗೆ ನಮ್ಮ ಬಾಳನ್ನು ಆಳವಾಗಿ ಆಳುವ ಭೀತಿ, ಪ್ರೀತಿ, ಭಾವಿಕ ಉತ್ಸುಕತೆ, ಅನಾಥ ಪ್ರಜ್ಞೆ ಚಿಂತೆ ಅಂತಃಕ್ಲೇಷ, ಒಂದು ಬಗೆಯ ಆತ್ಮರತಿ. ಇವೆಲ್ಲ ಬೇರೆ ಬೇರೆ ಆಗಿಯೋ ಒಟ್ಟಾಗಿ ಬೆರತೋ ಒತ್ತಾಯಗೊಳಿಸುವ

ಆಗತ್ಯಕ್ಕೆ, ಬೇಡಿಕೆಗೆ ಈ ದೇವರ–ಭಕ್ತವತ್ಸಲ ಭಗವಂತನ–ಪರಿಕಲ್ಪನೆ ನಾವು ಕಂಡುಕೊಂಡ ಉತ್ತರ.

11

ಸಾಮಾಜಿಕ ಸತ್ತೆಗಾಗಿ ದೇವರು

ಮಾನವನು ಕಲ್ಪಿಸಿಕೊಂಡ ಪ್ರತಿಯೊಂದು ಕೃತಿಗೂ ಕ್ರಮಕ್ಕೂ ಒಂದು ಸಾಮಾಜಿಕ ಅಥವಾ ಸಾಮುದಾಯಿಕ ಮುಖವಿದ್ದೇ ಇದೆ. ಏಕೆಂದರೆ, ಮಾನವ ಹುಟ್ಟಿನಿಂದಲೂ ಗುಂಪುಗುಳಿ–ಸಮಾಜ ಜೀವಿ. ಆತ ಕಲ್ಪಿಸಿಕೊಂಡ ಭಾಷೆ, ಕಲೆ, ಕೃಷಿ, ಕೈಗಾರಿಕೆ ಪ್ರತಿಯೊಂದೂ ಮೂಲತಃ ಒಬ್ಬ ವ್ಯಕ್ತಿಯಿಂದ ಉಂಟಾಗಿರಬಹುದಾದರೂ ಮುಂದೆ ಕೂಡಲೇ ಅವೆಲ್ಲ ಪ್ರತಿಯೊಂದೂ ಅವನ (ಳ) ಒಡನಾಟದ ಜತೆಜೀವಿಗಳ ಸಂಗಡ ಕೂಡಿಕೊಂಡು ಕೊಡುಕೊಳ್ಳುವಿಕೆ ಯಿಂದ ಸಾಮಾಜಿಕ ಸಹಕಾರದ ಸಂವಹನದ ಸ್ವರೂಪವನ್ನು ಹೊಂದಿಯೇ ನಡೆದು ಬಂದವು–ಒಂದು ವಾಡಿಕೆಯೂ ವ್ಯವಸ್ಥೆಯೂ ಆಗಿ. ಏಕೆಂದರೆ, "ವ್ಯಕ್ತಿ" ಎಂಬುದು ವ್ಯಕ್ತವಾಗುವದೇ ಸಮಾಜದಲ್ಲಿ–ಸಮೂಹದಲ್ಲಿ. ದೇವರೆಂಬ ಕಲ್ಪನೆಯೂ ಪರಿಕಲ್ಪನೆಯೂ ಅದೇ ನಿಯಮಕ್ಕೆ ಅನುಸಾರವಾಗಿ ಸಾರ್ವಜನಿಕ ಸೊತ್ತಾಗಿಯೇ ಊರ್ಜಿತಗೊಂಡಿತು, ಅಭಿವೃದ್ಧಿ ಹೊಂದಿತು, ಪ್ರತಿಷ್ಠೆ ಪಡೆಯಿತು. ಸಮಾಜದ ಸುಸೂತ್ರ ಜೀವನ ನಿರ್ವಾಹಕ್ಕೆ ಆಚಾರ, ಅದರಿಂದ ರೂಪಗೊಂಡ ವ್ಯವಸ್ಥೆ/–ಧರ್ಮ ಮತ್ತು ಅದಕ್ಕೆ ಒಂದು ಪಾವಿತ್ರ್ಯವನ್ನೂ ಪ್ರಭುತ್ವವನ್ನೂ ನೀಡುವ ದೇವರು ಈ ರೀತಿಯಾಗಿ ಸಾರ್ವಜನಿಕ ಜೀವನ ವ್ಯವಹಾರಗಳ ಸಂಘಟನೆ ಒದಗಿ ಬಂದಿತು. ನಾಲ್ಕು ವಿಧವಾದ ಪುರುಷಾರ್ಥ ಗಳೆಂಬ ಮಾನವೀಯ ಮೌಲ್ಯಗಳಲ್ಲಿ ಧರ್ಮವು ಅರ್ಥಕ್ಕೆ ಅಧೀನವಾಯಿತು– ಧರ್ಮಕ್ಕೆ ಎಲ್ಲವೂ ಅಧೀನವಾಗುವ ಬದಲು ಅರ್ಥದ ಉತ್ಪಾದನೆ, ಅದಕ್ಕಾಗಿ ವರ್ಗಗಳ ಹುಟ್ಟು, ಹೊಂದಾಣಿಕೆ ಇವುಗಳಿಗೆ ಅನುಕೂಲವಾಗುವಂತೆ ಇವುಗಳ ತಿಕ್ಕಾಟ ನುಣ್ಣಗಾಗುವಂತೆ ಧರ್ಮದ ಉಪಯೋಗವಾಯಿತು. ಬೇಸಾಯ ಪ್ರಧಾನ ಬದುಕಿನಲ್ಲಿ ಜಮೀನಿನ ಒಡೆತನದ ಉತ್ಪಾದನಾ ಪದ್ಧತಿ ಸ್ಥಾಪಿತವಾಗಿ, ಈ ಒಡೆಯರ ವರಿಷ್ಠ ಭೂಪತಿ ಆಗಿ ಸರಂಜಾಮಿ (ಪಾಳೆಯಗಾರಿಕೆ)ಯ ವ್ಯವಸ್ಥೆ ರೂಢಿಯಲ್ಲಿ ಬಂದಿತು. ಅದರ ಛಾಯೆ ನಮ್ಮ ಅಂದರೆ, ಮಾನವರ ದೇವಲೋಕದ ಮೇಲೆಯೂ ಬಿದ್ದಿತು,ಈ ಹಿಂದೆಯೇ ಬಣ್ಣಿಸಿದಂತೆ.

ಮಧ್ಯಯುಗದಲ್ಲಿ ವಿಚಾರ ಪದ್ಧತಿಯೇ ಧಾರ್ಮಿಕ ಸ್ವರೂಪದ್ದಾಯಿತು. ದೇವರು ಈ ಧರ್ಮ ಸಂಸ್ಥೆಯ ಕೇಂದ್ರಬಿಂದುವಾಯಿತು. ಪುಣ್ಯ–ಪಾಪ,

ಸ್ವರ್ಗ-ನರಕ, ಕರ್ಮ-ಫಲ, ಶ್ರಮಣ-ಶ್ರಾವಕ, ಪುರೋಹಿತ-ಯಜಮಾನ, ಅರಮನೆ-ಗುರುಮನೆ, ಊಳಿಗ ಮನ್ನೆಯರು ಶಿಷ್ಯಸಮಾಜ ಹೀಗೆಲ್ಲ ವ್ಯವಸ್ಥೆ ಸಾರ್ವತ್ರಿಕವಾಯಿತು. ಆಗ ಈ ಧರ್ಮ ಸಂಸ್ಥಾಪನೆಯು ಸಲುವಾಗಿ ಉಚ್ಚ ನೀಚ ವರ್ಣಭೇದ ವರ್ಗಭೇದಗಳ ಸಂಘಟನೆಯನ್ನು ಭದ್ರವಾಗಿಡಲಿಕ್ಕೆ ಅವತಾರ ಕಾರ್ಯ, ಮಠ ಮರ್ಯಾದೆ, ಗುರುಭಕ್ತಿ ಮುಂತಾದ ರೂಪದಲ್ಲಿ ದೇವರ-ಈಶ ಸಂಕೇತದ ಭಯವನ್ನು ಊರ್ಜಿತವಾಗಿಡುವದು ರಾಜ ಶಾಸನಕ್ಕೂ ಲೋಕ ವ್ಯವಹಾರಕ್ಕೂ ಅತ್ಯಗತ್ಯವಾಯಿತು.

ಮೂಲದಲ್ಲಿ "ಗವಿಯಲ್ಲಿ ಅಡಗಿದ್ದ ಧರ್ಮದ ತತ್ವ" ಮುಂದೆ ಮಿಗಿಲಾದ ಭಯದಿಂದ ಪ್ರಜೆಯನ್ನು ರಕ್ಷಿಸಲು ಸಮಾಜದ ಸ್ವಾಸ್ಥ್ಯವನ್ನು ಭದ್ರವಾಗಿಡಲು ತುಂಬಉಪಯೋಗವಾಯಿತು. ಹಿಂದೂ, ಕ್ರೈಸ್ತ, ಇಸ್ಲಾಂ, ಬೌದ್ಧ, ಜೈನ ಎಲ್ಲ ಧರ್ಮಗಳುಸಾಮಾಜಿಕವಾಗಿ ಇದೇ ಸ್ಥಿತಿ ಪಾಲನೆಯ ಪಾತ್ರವನ್ನು ನಿರ್ವಹಿಸಿವೆ. ಪ್ರಚಲಿತ ವರ್ಗ ವ್ಯವಸ್ಥೆಯನ್ನು ನ್ಯಾಯ ಪದ್ಧತಿಯನ್ನು, ಕೆಳ ವರ್ಗದವರನ್ನುಮೇಲ್ವರ್ಗದವರು ನಿರಂತರವಾಗಿ ಮಾಡುತ್ತಿರುವ ಶೋಷಣೆಯನ್ನು ಅಭಾದಿತವಾಗಿ ಸುಸೂತ್ರವಾಗಿ ಮುಂದರಿಯುವಂತೆ ಆಳರಸರು ಮಾಡಲು ಈ ದೇವ ಧರ್ಮಗಳ ಉಪಾಸನೆಯು ಅರಿವಳಿಕೆಯ ಉತ್ತಮ ಸಂಮೋಹನ ಶಕ್ತಿಯಾಗಿ ಯುಗ ಯುಗಗಳಿಂದ ಪ್ರಭಾವಿಯಾಗಿ ಬಂದಿರುವದಕ್ಕೆ ಜಗತ್ತಿನ ಇತಿಹಾಸವೇ ಸಾಕ್ಷಿಯಾಗಿದೆ. ಲೋಕದ ಯಥಾಸ್ಥಿತಿಯನ್ನು ಕಾಪಾಡಿಕೊಳ್ಳಲಿಕ್ಕೆ, ದಲಿತರ ದುಃಖದಲ್ಲಿ ತಾಳ್ಮೆಯನ್ನು ಕಲಿಸಿ ಇದ್ದುದರಲ್ಲಿಯೇ ತೃಪ್ತಿಯನ್ನು ಬೋಧಿಸಲಿಕ್ಕೆ, ಶೋಷಕ ಶಾಸಕ ವರ್ಗಗಳ ಸ್ವಾರ್ಥಕ್ಕೆ ದೇವದತ್ತ ಅಧಿಕಾರವನ್ನೂ ಅದರ ಜುಲುಮೆ ಒಲುಮೆಗಳಿಗೆ ಸಡಗರವನ್ನೂ ತುಂಬಿ, ಸಾಮಾಜಿಕ ಅನ್ಯಾಯದ ಅಸಹ್ಯತೆಯ ತೀವ್ರತೆಯನ್ನು ಮೊಂಡಗೊಳಿಸಲಿಕ್ಕೆ, ಧರ್ಮದೊಂದಿಗೆ ಶ್ರಮವನ್ನೂ ಭೋಗದೊಂದಿಗೆ ತ್ಯಾಗವನ್ನೂ ದರ್ಪದೊಂದಿಗೆ ದಾನವನ್ನೂ ಪ್ರಚಾರಗೊಳಿಸಿ, ಸಾಮಾಜಿಕ ತಾರತಮ್ಯವನ್ನೂ ವರ್ಗೀಯ ವೈಷಮ್ಯವನ್ನೂ ಶಾಶ್ವತ ಹಾಗೂ ಸುಸೂತ್ರಗೊಳಿಸಲಿಕ್ಕೆ ದೇವರ ಅಧಿಷ್ಠಾನವನ್ನೂ ಪಡೆದ ಧರ್ಮವೆಂಬ ವಿಚಾರಸರಣಿಯು ಸಂಮೋಹನಾಸ್ತ್ರದಂತೆ ಕೆಲಸ ಮಾಡುತ್ತ ಬಂದಿದೆ.

ದೇವ-ಧರ್ಮಗಳ ಐತಿಹಾಸಿಕ ಕಾರ್ಯ

ಅರಮನೆ ಗುರುಮನೆಗಳ ಹಿರಿತನ ದೇವದತ್ತ ಅಧಿಕಾರವೆಂದು ಸಾರಿ, ಬಡವ ಬಲ್ಲಿದರೆಂಬ ಭೇದವು ಈಶ್ವರೇಚ್ಛೆಯೆಂದು ಬೋಧಿಸಿ, ಇದ್ದಲ್ಲಿ ಇಟ್ಟಂತೆ,

ಇರುವಷ್ಟು ಕಾಲ ತಾಳಿ ಬಾಳುವದೇ ಕ್ಷೇಮವೆಂದು ಬಿಂಬಿಸಿ, ಜನಸಮು ದಾಯವನ್ನು ತಣ್ಣಗೆ ನುಣ್ಣಗೆ ಸತ್ತೆಯ ಸಂಪತ್ತಿನ ನೊಗದಡಿಗೆ ತಲೆ ತಗ್ಗಿಸಿ ಬೆನ್ನು ಬಗ್ಗಿಸಿ ಬದುಕುವಂತೆ ಮಾಡುವದೇ ಈ ದೇವ ಧರ್ಮಗಳ ಐತಿಹಾಸಿಕ ಕಾರ್ಯವಾಗಿದೆ. ಪರದ ಚಿಂತೆಯಲ್ಲಿ ಇಹವನ್ನು ಮರೆಯಲು, ಆತ್ಮಕ್ಕಾಗಿ ಪೃಥ್ವಿಯನ್ನೇ ತ್ಯಜಿಸಲು, ಫಲದ ಆಸೆ ಇಟ್ಟುಕೊಳ್ಳದೆ ಕರ್ತವ್ಯವನ್ನು ಮಾಡುತ್ತಿರಲು, ಪುರುಷಾರ್ಥಕ್ಕಿಂತ ಪರಮಾರ್ಥವೇ ಮೇಲೆಂದು ನಂಬಲು, ಇದೇ ಅಧಿದೈವಿಕ ವಿಚಾರಸರಣಿ ನಮಗೆ ಕಲಿಸುತ್ತ ಬಂದಿದೆ,-ತಲೆ ತಲಾಂತರ ಗಳಿಂದ. ವ್ಯಕ್ತಿಗತವಾಗಿ ಬಿಡಿ ಮನುಷ್ಯನಿಗೆ ಈ ಆದೇಶ ಉಪದೇಶಗಳು ಅವರವರ ಬದುಕಿನ ಮನಸ್ಸಿನ ಸ್ಥಿತಿಗತಿಗಳಲ್ಲಿ ಎಷ್ಟೇ ಹಿತಕರವಾಗಿರಬಹುದು. ಆದರೆ ಇಂಥ ವೈಯಕ್ತಿಕ ನಿಃಶ್ರೇಯಸ್ಸದ ದಾರಿ ಸಾಮುದಾಯಿಕ-ಅಭ್ಯುದ ಯಕ್ಕೆ ಮಾರಕವಾಗುತ್ತ ಬಂದದ್ದು ಇತಿಹಾಸದುದ್ದಕ್ಕೂ ಕಂಡುಬರುತ್ತದೆ. ಒಂದು ಜನಾಂಗದ ಸಾಮುದಾಯಿಕ ದಾಸ್ಯದ ಯುಗದಲ್ಲಿಯೇ ಇಂಥ ವೈಯ ಕ್ತಿಕ ಮೋಕ್ಷ ಸಾಧನೆಯ ಬಿಸಿಲುಗುದುರೆಯ ಸವಾರಿ ನಡೆಯುತ್ತದೆ. ಬಹಿರ್ಮುಖವೂ ಲೌಕಿಕವೂ ಆದ ಸಾಹಸ, ವಿಜಿಗೀಷೆಗಳು ಅಸಾಧ್ಯವೆನಿಸಿ ದಾಗೆಲ್ಲ ಇಂಥ ಅಂತರ್ಮುಖಿಯಾದ ಪಾರಲೌಕಿಕ ಅಧ್ಯಾತ್ಮ ಚಿಂತನೆಯ ಏಕಾಂತ ಸೇವನೆಗೆ ಜನ ತೊಡಗುತ್ತಾರೆ. ಇಲ್ಲಿಯೂ ಸಾತ್ವಿಕರೂ ಭಾವ ಜೀವಿಗಳೂ ಆದ ಜನ ಸಾಧು ಸಂತರು, ಶರಣ ಪಂಥಿಗಳು ಆಗುತ್ತಾರೆ. ರಾಜಸಿಕ ಹಾಗೂ ತಾಮಸಿಕ ವಿಕಾರವಶರು ಉತ್ತಾನ ಶೃಂಗಾರದತ್ತ ಉಚ್ಛೃಂಖಲವಾದ ಕಾಮಾಚಾರದತ್ತ ಒಲಿಯುತ್ತಾರೆ. ಮತ್ತೆ ಅದಕ್ಕೂ ದೈವಿ ಕತೆಯ ಬಣ್ಣ ಬಳಿಯುತ್ತಾರೆ. ಪ್ರಪಂಚದ ಇತಿಹಾಸವೇ ಇದಕ್ಕೆ ಸಾಕ್ಷಿ.

ಪ್ರಪಂಚದ ಭಕ್ತಿ ಪಂಥಗಳೆಲ್ಲ, ದೈವಿಕ ಶರಣಾಗತಿಯ ಆಂದೋಲನಗಳೆಲ್ಲ ಇದೇ ರೀತಿಯಾಗಿ ಹುಟ್ಟಿ ಬೆಳೆದಿವೆ. ವಿಷ್ಣು ಭಕ್ತರೋ ಶಿವ ಭಕ್ತರೋ ಬೌದ್ಧ, ಜೈನ,ವಿರಕ್ತ ಪಂಥಿಗಳೋ ಯೇಸೂಕ್ರಿಸ್ತನ ಶಿಷ್ಯವೃಂದವೋ ಆಗಿ ಬೆಳೆದುಹಬ್ಬಿದ ಇಂಥ ಶರಣ ಸಮಾಜಗಳು ವಸ್ತುತಃ ಪಟ್ಟಭದ್ರ ವಿಷಮ ಪ್ರತಿಷ್ಠಿತ ಸಮಾಜ ವ್ಯವಸ್ಥೆ ಮತ್ತು ಧರ್ಮ ಸಂಸ್ಥೆಗಳ ಸತ್ತೆಯ ವಿರುದ್ಧ ದಲಿತರ ಬಂಡಾಯ ಗಳಾಗಿದ್ದವು. ಎಲ್ಲರೂ ಸರಿಸಮಾನರೆಂಬ ದೇವರ ರಾಜ್ಯದ ಸ್ಥಾಪನೆ ಇವುಗಳ ಹುಬಲವಾಗಿತ್ತು. ಅಂದರೆ, ವಸ್ತುತಃ ಈ ಆಂದೋಲನಗಳು ಸಾಮಾಜಿಕ ಕ್ರಾಂತಿಯ, ಸರಳ ಸಮತಾವಾದದ ಕರೆಯ ಕಹಳೆಯನ್ನು ಊದಿದವು. ಆದರೂ ಆಂದಿನ ಒಟ್ಟಿನ ದೈವಿಕ ಭಾವ, ವಿಚಾರದ ಆವರಣದಿಂದ ಇವರು ಹೊರ ಬರುವಂತೆ ಇದ್ದಿಲ್ಲ. ಆದ್ದರಿಂದ ದೈವಿಕತೆಯ ಮೇಲೆ ನೆಲೆಗೊಂಡ

ಇವರ ಚಳವಳಿ, ಚಟುವಟಿಕೆ ಎಲ್ಲ ಅಂತರ್ಮುಖವೇ ಆಯಿತು. ಭಾವಾವೇಶದ ಸ್ವಚ್ಛಂದ, ಧ್ಯಾನ, ಪ್ರಾರ್ಥನೆ, ಉಪಾಸನೆಗಳ ಆತ್ಮರತಿಯಲ್ಲಿಯೇ ಒಂದು ಬಗೆಯ ಉನ್ಮಾದದಲ್ಲಿಯೇ ತೃಪ್ತಿಯನ್ನು ಕಂಡುಕೊಂಡಿತು; ಮತ್ತು ದಿನ ಗಳೆದಂತೆ ಇದೂ ಒಂದು ಹೊಸ ಕರ್ಮಠ ಸಂಘಟನೆಯಾಗಿ ರೂಪಗೊಂಡಿತು. ಮೂಲದ ವರ್ಗಬದ್ಧ ಸಮಾಜವು ಅದನ್ನು ಬೇಗನೆ ತನ್ನ ಜನಶೋಷಣೆಯ ಹೊಸ ಯಂತ್ರವನ್ನಾಗಿ ಮಾಡಿಕೊಂಡಿತು. ಅದೇ "ವಿಧಿ ಅದರ ಸಾಹೇಬ" ನಾಗಿ, ಚರ್ಚು, ಮಠ, ವಿಹಾರ, ಜಗದ್ಗುರು ಪೀಠ ಇವೆಲ್ಲ ಆ ಸಾಹೇಬನ ಜಟಕಾ ಬಂಡಿ ಆದವು. ಇದು ದೇವರ ಜಾತಕದ ಜಾಯಮಾನ; ಸತ್ತಾ ಧಾರಿಗಳು ಕಂಡುಕೊಂಡ ಧರ್ಮರಹಸ್ಯ!

ನಿಜವಾಗಿಯೂ ಧರ್ಮವೆಂಬುದಕ್ಕೆ ದೇವರ ಅಗತ್ಯವಿದೆಯೇ? ಸಮಾ ಜದ ಧಾರಣೆ ಅಂದರೆ, ವ್ಯವಸ್ಥೆ ಸಂಘಟನೆಗಳ ನಿಯಮ ನಿರ್ವಹಣೆ ಈ ಒಂದು ಅರ್ಥದಲ್ಲಿ ಮಾತ್ರ,–ಇದೇ ನಿಜವಾದ ಅರ್ಥ,–ಧರ್ಮದ ಕಟ್ಟುಪಾಡಿಗೆ ದೇವರ ಮುದ್ರೆ ಒತ್ತಬೇಕಾಗಿಲ್ಲ. ಆದರೆ ಜಗತ್ತಿನ ಉತ್ಪತ್ತಿ ಕಾರಣವೆಂಬ ಬ್ರಹ್ಮ ತತ್ವದ ವ್ಯಾಖ್ಯಾನದಲ್ಲಿ ದೇವತ್ವದ ವಿಚಾರವೂ ಸೇರಿಕೊಂಡಿತು. ನಮ್ಮಲ್ಲಿಯ ಕರ್ಮ ಮೀಮಾಂಸಕರಿಗೆ ದೇವರು ಇದ್ದೂ ಫಲ ಇಲ್ಲದಂತೆ. ಅವರಿಗೆ ಕರ್ಮ ಬಂಧ, ಕರ್ಮ ಫಲ ಇವುಗಳ ವಿಚಾರ ವಿವೇಚನೆಯೇ ಮುಖ್ಯ. ನಮ್ಮ ಸಾಂಖ್ಯ ಯೋಗದಲ್ಲಿಯೂ ಈಶ್ವರ ವಿಚಾರ ಅನಂತರ ಒಳಗೊಂಡಿತು. ಆಸನ ಪ್ರಾಣಾಯಾಮ ಚಿತ್ತವೃತ್ತಿ ನಿರೋಧಗಳ ಯೋಗಶಾಸ್ತ್ರಕ್ಕೂ ಈಶ್ವರನು ಗೌಣ.

ಒಟ್ಟಿನಲ್ಲಿ, ನಿಗ್ರಹಾನುಗ್ರಹಕರ್ತನೂ ಸುಖಕರ್ತನೂ ದುಃಖಕರ್ತನೂ ಸರ್ವಶಕ್ತ ಸರ್ವಾಂತರ್ಯಾಮಿಯೂ ದಯಾಸಿಂಧುವೂ ದೀನಬಂಧುವೂ ಕರ್ತುಂ ಅಕರ್ತುಂ ಅನ್ಯಥಾ ಕರ್ತುಂ ಸಮರ್ಥನೆಂಬ ಪರಮೇಶ್ವರನು ನಮ್ಮ ಭಾವಲೋಕ ವನ್ನು ಆಕ್ರಮಿಸಿ, ತಾನೇತಾನಾಗಿ ವಿರಾಜಮಾನವಾದದ್ದು ನಿಶ್ಚಿತವಾಗಿ ಎಂತು? ಎಂದಿನಿಂದ? ಇದೊಂದು ಗೂಢವೇ ಸರಿ. ಅಂದರೆ, ನಮ್ಮ ಬದುಕನ್ನು ಆಳಬಲ್ಲ ಒಂದು ಸಾರ್ವಭೌಮ ಶಕ್ತಿಯಾಗಿ ಜಗಚ್ಚಾಲಕ ಪುರುಷನಾಗಿ ವಿಶ್ವದ ಆಗು ಹೋಗುಗಳಲ್ಲಿ ಪ್ರತಿ ಜೀವ ಜಂತುವಿನ ಏಳು–ಬೀಳು ಹುಟ್ಟು–ಸಾವು ಹಿಗ್ಗು–ಕುಗ್ಗುಗಳ ಬಾಳಿನಲ್ಲಿ ಮನಸ್ವಿಯಾಗಿ ಹಸ್ತಕ್ಷೇಪ ಮಾಡಬಲ್ಲ, ಈ "ದೇವರು" ಕೇವಲ ಮನುಕುಲದ ಪೂರ್ವಿಕ ಮನೀಷಿಗಳದೇ ಮನಃಸೃಷ್ಟಿ ಎನ್ನಬೇಕು. ಮತ್ತು ಅದಕ್ಕೆ ಹಿಂದೆಲ್ಲ ವಿವೇಚಿಸಿದಂತೆ ಮಾನವನ ದೌರ್ಬಲ್ಯ ಹಾಗೂ ಆ ಮೂಲಕ ಆತನಿಗೆ ಬೇಕೆನಿಸಿದ, ಆಳವಾದ, ಮಿಗಿಲಾದ ಮಾನಸಿಕ ಸಾಮರ್ಥ್ಯದ

ಭರವಸೆ ಹಾಗೂ ಸಾಂತ್ವನ ಮೂಲದ ವ್ಯಕ್ತಿಗತ ಪ್ರೇರಣೆಯೇ ಕಾರಣವಾದರೆ; ಮುಂದೆಲ್ಲ ಆ ಕಲ್ಪಿತ ಸಂಕೇತದ ಮಹಿಮೆ, ಪ್ರಭಾವ ಮತ್ತು ಸಾರ್ವಭೌಮ ಪ್ರತಿಷ್ಠೆಯನ್ನು ಸಾಮಾಜಿಕ ಜೀವನದ ಸಂಘಟನೆ ವ್ಯವಸ್ಥೆ, ವರ್ಣಾಶ್ರಮ, ಧರ್ಮಗಳ ನಿರ್ವಹಣೆ ಇತ್ಯಾದಿ ಲೌಕಿಕ ಲಾಭ ಲೋಭಗಳ ಅಗತ್ಯಗಳಿಗಾಗಿ ಪ್ರಭಾವಿಯಾಗಿ ಬಳಸಿಕೊಳ್ಳುವ ಧೋರಣೆ, ಸಮಾಜದ ನೇತಾರರ ಯೋಜನೆ ಈ ದೇವರನ್ನು ಧರ್ಮದ ಜೀವಾಳವಾಗಿ ಮರ್ಮಸ್ಥಾನವಾಗಿ ದೃಢಬದ್ಧವಾಗಿ ಸ್ಥಾಪನೆಗೊಳ್ಳುವಂತೆ ಮಾಡುವ ಪ್ರಚೋದನೆ ಇನ್ನೂ ಬಲಿಷ್ಠವಾದ ಕಾರಣ.

ಧರ್ಮದಲ್ಲಿ ದೇವರ ಪ್ರತಿಷ್ಠೆ

ಇದಕ್ಕಾಗಿಯೇ ಈ ಒಂದು ಲೌಕಿಕ ಪ್ರಯೋಜನಕ್ಕಾಗಿಯೇ ನಿರೀಶ್ವರ ವಾದಿ ಬೌದ್ಧರು ಬುದ್ಧನನ್ನೇ ದೇವರನ್ನಾಗಿ ಮಾಡಿ, ಮಹಾಯಾನ ಮಾರ್ಗ ವನ್ನು ಅನುಸರಿಸಿದರು. ಜೈನರು ತೀರ್ಥಂಕರರನ್ನೇ ಪೂಜಿಸಹತ್ತಿದರು. ಹಿಂದುಗಳು ಅನೇಕ ಗ್ರಾಮ ದೇವತೆಗಳನ್ನು ಆರಾಧಿಸುವದು ಸಾಲದೇ ದಶಾವತಾರಗಳನ್ನೂ ಕಲ್ಪಿಸಿಕೊಂಡರು.

ಧರ್ಮವೆಂಬುದು ಶುದ್ಧ ನೈತಿಕ ನಿಯಮದ ಸಮಾಜ ವ್ಯವಸ್ಥಿತಿಯ ಶಾಸ್ತ್ರವಾಗಿ ಉಳಿಯಲಿಲ್ಲ. ಮನುವು ಹೇಳಿದ ಹತ್ತು ವಿಧದ ಸಾಮಾನ್ಯ ಮಾನವ ಧರ್ಮ ಲಕ್ಷಣಗಳಿಗಿಂತ ಜಪ-ತಪ-ಹೋಮ-ಹವನ-ಪೂಜೆ-ಬಲಿ-ಹರಕೆ-ಉಪಾರಗಳಿಂದ ದೇವರನ್ನು ಒಲಿಸಿಕೊಳ್ಳುವ ಮತ್ತೂ ದೇವತಾನು ಗ್ರಹದಿಂದ ಪಾಪ-ದೋಷ-ಸಂಕಷ್ಟ ಪರಿಹಾರ ಪಡೆಯುವ ಈ "ದೇವಲಕ" ಧರ್ಮವೇ ಸಾರ್ವತ್ರಿಕ ಸರ್ವಸಮ್ಮತ ಧರ್ಮವಾಯಿತು.

ಆದ್ದರಿಂದ ದೇವರಿಲ್ಲದ ಧರ್ಮದ ಕಲ್ಪನೆಯೇ ನಮಗೆ ಅಸಾಧ್ಯವಾಯಿತು. ಧರ್ಮಾಚರಣೆಯೆಂದರೆ, ದೇವರ ಪ್ರಕೋಪದ ನಿವಾರಣೆಗೆ, ಅವನ ಪ್ರಸಾದದ ಸಂಪಾದನೆಗೆ ಮಾಡಬೇಕಾದ ವಿಧಿ-ವಿಧಾನವೆಂದಾಯಿತು. ಅವುಗಳನ್ನು ಮಾಡಿ ಸುವ ಪುರೋಹಿತ ವರ್ಗದ ಹಂಗು ಹಿಡಿತ ಜನ ಸಾಮಾನ್ಯರ ಮನದಲ್ಲಿ, ಮನೆ ಯಲ್ಲಿ ಕ್ರಮೇಣ ಪ್ರಬಲವಾಯಿತು. (ಕ್ರೈಸ್ತರ ಕ್ಯಾಥೊಲಿಕ್ ಚರ್ಚಿನಲ್ಲಿಯೂ ಹಾಗೆಯೇ ಆಗಿ ಅದನ್ನು ಪ್ರತಿಭಟಿಸಿ, ಮಾರ್ಟಿನ್ ಲೂಥರ್‌ನಂಥವರು ಪ್ರೊಟೆಸ್ಟಂಟ, ಪ್ರೆಸ್ಬಿಟೇರಿಯನ್, ಕ್ಯಾಲ್ವಿನ್, ಪ್ಯುರಿಟನ್ ಮುಂತಾದ ಪಂಥ ಗಳನ್ನು ಸ್ಥಾಪಿಸಿದರು. ನಮ್ಮಲ್ಲಿ ಆರ್ಯ ಸಮಾಜ, ಬ್ರಹ್ಮ ಸಮಾಜ, ಪ್ರಾರ್ಥನಾ

ಸಮಾಜ; ಅದಕ್ಕೂ ಹಿಂದೆ ಲಿಂಗಾಯತ, ಸಿಖ್, ವಾರಕರೀ, ದಾಸಕೂಟ ಮುಂತಾದ ಸುಗಮ ಭಕ್ತಿಪಂಥಗಳು ಪ್ರಚುರಗೊಂಡವು.)

12

ಇದುವರೆಗಿನ ವಿವೇಚನೆ ಕೇವಲ ಸತ್ಯಾನ್ವೇಷಣೆಯ ಉದ್ದೇಶದಿಂದ ಎಂಬುದನ್ನು ಕೊನೆಯಲ್ಲಿ ಒಮ್ಮೆ ಒತ್ತಿ ಹೇಳಲು ಬಯಸುತ್ತೇನೆ. ದೇವರ ಕುರಿತು ಇತ್ಯರ್ಥ ಮಾಡಲು ಹೊರಟ ಈ ಅಲ್ಪ ಹಾಗೂ ಸ್ಥೂಲ ಪ್ರಯತ್ನದ ಹಿಂದೆ ಯಾವುದೇ ರಾಗದ್ವೇಷದ ವಿಕಾರವಶತೆ ಕೆಲಸ ಮಾಡುತ್ತಿಲ್ಲ. ದೇವರ ಕುರಿತು ನನಗೇನೂ "ದ್ವೇಷ" ಅಥವಾ "ವಿರೋಧ-ಭಕ್ತಿ" ಇರುವದಿಲ್ಲ. "ನಾನು ದೆವ್ವ ಭೂತಗಳಲ್ಲಿ ನಂಬುವುದಿಲ್ಲ. ಆದರೆ ಅವನ್ನು ಕಂಡಿದ್ದೇ, ಆದರೆ ಹೆದರುವದು ಖಂಡಿತ"–ಎಂದಿದ್ದಳಂತೆ ಜಗತ್ಪ್ರಸಿದ್ಧ ಸಿನೇಮಾ ನಟಿ ಗ್ರೇಟಾಗಾರ್ಬೋ. ಹಾಗೆ ದೇವರ ಬಗೆಗೆ ವಿಶೇಷ ವಿಚಿಕಿತ್ಸೆ ಮಾಡುವ ಇಚ್ಛೆ, ಶಕ್ತಿ ಅಥವಾ ಅಗತ್ಯವಿಲ್ಲದ ನನ್ನ ಅನೇಕಾನೇಕ ಮಿತ್ರರು ದೇವರ ಅನುಗ್ರಹವನ್ನು ಪಡೆಯಲು ಅಥವಾ ಅದು ತಮಗೆ ಇದ್ದೇ ಇದೆ ಎಂದು ನಂಬಿ ನಡೆಯಲು ಸದಾ ಅಣಿಯಾಗಿರುತ್ತಾರೆ. ಅಂಥವರಲ್ಲಿ ಬುದ್ಧಿಭೇದವನ್ನು ಹುಟ್ಟಿಸುವ ಕಿಡಿಗೇಡಿತನ ನನ್ನದಲ್ಲ.

ದೇವರ ಕಲ್ಪನೆಯ ಹಿಂದಿನ ಅಥವಾ ಬುಡದ ಬೌದ್ಧಿಕ, ವೈಚಾರಿಕ ಬೇರುಗಳಿಗಾಗಿ ನನ್ನ ದುಡುಕಾಗಿದೆ. ಆದರೆ ಇಲ್ಲಿಯೂ ಒಂದು ವಿವೇಕವಿದೆ. ದೇವರ ವಿಷಯ ನಮ್ಮ ಭಾವನೆಯ–ಶ್ರದ್ಧೆಯ ಕ್ಷೇತ್ರದ್ದು. ನಮ್ಮ ಶ್ರದ್ಧಾ ಭಾವನೆಗಳು ತಾರ್ಕಿಕ ವೈಚಾರಿಕ ಕ್ರಮದಿಂದ ಎಷ್ಟರಮಟ್ಟಿಗೆ ರೂಪಗೊಳ್ಳುತ್ತವೆ? ನಮ್ಮ ನಂಬಿಗೆಗಳ ನೆಲೆ ಹೆಚ್ಚಾಗಿ ನಮ್ಮ ಭಾವನೆಗಳು, ಇಚ್ಛೆಗಳು, ಆಂತರಿಕ ಕೊರತೆ, ಕೊರಗುಗಳು. ಅವು ಒಟ್ಟಿನಲ್ಲಿ ಗುಟ್ಟಾಗಿ ಒತ್ತಡ ತರುವ, ಕೆಲಸ ಮಾಡುವ ಒಳಮನಸ್ಸಿನ ಅಜಾಗ್ರತ ಸ್ತರಗಳು. ಹಿಂದೆ ನಮ್ಮ ಪೂರ್ವಿಕ ಋಷಿಮುನಿ ಮನೀಷಿಗಳು ದೇವರು ದೈವವೆನ್ನುವ ಆ ಶಕ್ತಿಯನ್ನೇ ಇಂದಿನ ನಮ್ಮ ಮನೋವೈಜ್ಞಾನಿಕರು ಅಜಾಗ್ರತ ಮನಸ್ಸು, ಅಂತರ್ತಮ ಮನಸ್ತರಗಳು ಎಂದು ಕರೆಯುವಂತಿದೆ. ನಮ್ಮ ಜಾಗ್ರತ ಮನಸ್ಸಿನ ಹೊರ ಬದುಕಿನ ಅನುಭವಗಳ ಪುನಃ ಸಂಘಟನೆಯಲ್ಲ, ಕಲೆ, ಭಕ್ತಿ, ಉನ್ಮಾದ, ಅಪಸ್ಮಾರ, ಭಾವ, ಸಮಾಧಿ ಇತ್ಯಾದಿ ಎಲ್ಲ –ಆ ಅಜಾಗ್ರತ ಮನಃಶಕ್ತಿಯ ವಿವಿಧ ವಿಲಾಸ ವಿನ್ಯಾಸಗಳು.

ನಮ್ಮ ತರ್ಕ ವಿವೇಚನೆ ಈ ಅಂತರ್ಮನಸ್ಸಿನ ಪ್ರಕ್ರಿಯೆಗೆ ಅದು ತೋರ್ಪಡಿಸುವ ರೂಪಗಳಿಗೆ ಯಥಾಶಕ್ತಿ ಬೌದ್ಧಿಕವೆಂದು ತೋರುವ ಕಾರಣಗಳನ್ನು ಒದಗಿಸಬಹುದು. ಅದರಿಂದ ಕೆಲಮಟ್ಟಿಗೆ ನಮ್ಮ ವೈಚಾರಿಕತೆಯು ಸಮಾಧಾನವೂ ಆಗಬಹುದು. ಆದರೆ ತತ್ವತಃ ಇದೆಲ್ಲ ಭಾವ ಮೂಲವಾದ ಶ್ರದ್ಧಾಶಕ್ತಿಯು ಸಂಗತಿಗಳನ್ನು ನಮಗೆ ನಾವೇ ಸಮಂಜಸವಾಗಿ ಕಾಣುವಂತೆ ಸಮರ್ಥಿಸಿಕೊಳ್ಳುವ "ಪ್ರಜ್ಞಾವಾದ"ದ ಮನೋವ್ಯಾಪಾರವೆಂಬುದನ್ನು ಮರೆಯಬಾರದು. ಸಯುಕ್ತಿಕವಾಗಿ ಕಾಣಿಸುವ ಬೌದ್ಧೀಕರಣ (Rationalization)ವೆನ್ನಬಹುದು, ದೇವ–ಧರ್ಮಗಳ ಈ ಮೀಮಾಂಸೆ.

ಇದುವರೆಗಿನ ಚರ್ಚೆಯಲ್ಲಿ ದೇವರ ಅಸ್ತಿತ್ವದ ಪ್ರಶ್ನೆಗೆ ಕಾರಣವಾದ, ಹೇತುವಾದ ಸತ್ತಾವಾದವೇ ಮುಂತಾದ ಸಯುಕ್ತಿಕ ವಿಚಾರವಾದದ ನಿಲುಮೆ–ನಿಲುಕುಗಳಿಂದ ನಾವು ಕಂಡುಕೊಂಡ ಉತ್ತರಗಳನ್ನು ಐದು ವಿಧವಾಗಿ ಇಲ್ಲಿ ಸಂಗ್ರಹಿಸಿಕೊಡಬಹುದು. ನಿಜವಾಗಿಯೂ ಇವು ಕೊನೆಯ ಉತ್ತರಗಳಲ್ಲ. ಬದುಕಿನ, ಇತಿಹಾಸದ, ತತ್ವಜ್ಞಾನದ ಅನೇಕ ಹಳೆಯ ಪ್ರಶ್ನೆಗಳಿಗೆ ಹೊಸ ಪ್ರಶ್ನೆಗಳೇ ಉತ್ತರವಾಗಿರುತ್ತವೆ. ಹಳೆಯ ಸಂದೇಹಗಳನ್ನು ಹೊಸ ಸಂಗತಿಗಳ ಸಂದರ್ಭಗಳ ಬೆಳಕಿನಲ್ಲಿಟ್ಟು ಮತ್ತೆ ನೋಡುವದೇ ಆಗಿರುತ್ತದೆ. ಯುಗೇ ಯುಗೇ ದೇವನು ಹುಟ್ಟಿಬರುವನೆಂಬಂತೆ ದೇವರ ಕುರಿತ ಈ ಪ್ರಶ್ನೆಗಳು ಹುಟ್ಟಿಬರುತ್ತಲೇ ಇರುತ್ತವೆ. ಪ್ರತಿ ಯುಗವೂ ಪ್ರತಿ–ತಲೆಮಾರೂ ಪ್ರತಿ ವ್ಯಕ್ತಿಯೂ ತನ್ನ ಜಾಯಮಾನದಲ್ಲಿ, ತನ್ನ "ಬಾಳ್ವೆಯ ಬೆಳಕಿ"ನಲ್ಲಿ ಇಂಥ ಪ್ರಶ್ನೆಗಳಿಗೆ ತಾನೇ ಮತ್ತೆ ಮತ್ತೆ ಉತ್ತರವನ್ನು ಹುಡುಕಿಕೊಳ್ಳಬೇಕಾಗುತ್ತದೆ.

ಏಕೆಂದರೆ, ದೇವರು ಒಂದು ಅಪರೋಕ್ಷ ಅನುಭವದ ವಿಷಯ. ಸಾಮಾಜಿಕವಾಗಿ ಸಾರ್ವತ್ರಿಕ ಲೌಕಿಕ ಜೀವನ ಯಾತ್ರೆಯಲ್ಲಿ ವ್ಯವಸ್ಥೆಯ ಯೋಗಕ್ಷೇಮಕ್ಕಾಗಿ ಅದನ್ನು ಉಪಯೋಗಿಸಿಕೊಂಡಷ್ಟು ಮಟ್ಟಿಗೆ ಅದು ಸಾಮಾನ್ಯ ಜಿಜ್ಞಾಸೆಯ ವಿಷಯವಾಗಬಲ್ಲದು. ಆ ಜಿಜ್ಞಾಸೆಯಲ್ಲಿ ಈ ಐದು ಉತ್ತರಗಳು ಒಂದು ದಿಕ್‌ಸೂಚಿಯಾಗಬಹುದು.

ಉತ್ತರ ಪಂಚಕ

1

ಜಗತ್ ಪ್ರಪಂಚವು ಕಾರ್ಯಕಾರಣ ಕ್ರಮದ ಕೊಂಡಿಗಳ ಸರಣಿಯಿಂದ ಬದ್ಧ. ಒಮ್ಮೆ ಒಂದು ಕಾರಣದಿಂದ ಆರಂಭವಾಯಿತೆಂದರೆ, ಘಟನೆಗಳ ಸರಣಿ

(ಶ್ರೇಣಿ) ಯು ಹಾಗೆಯೇ ತಡೆ ಬಿಡುವಿಲ್ಲದೆ ಮುಂದುವರಿಯುತ್ತದೆ. ಈ ಆದಿ ಕಾರಣವೇ ದೇವರು.

ಹಾಗೆಂದರೆ, ಈ ಕಾರಣಕ್ಕೂ ಒಂದು ಕಾರಣ ಬೇಡವೇ? ಕಾರ್ಯಕಾರಣ ಸರಣಿಯಲ್ಲಿ ಕಾರ್ಯಕ್ಕೆ ಒಂದು ಕಾರಣವು ಹೇಗೋ ಹಾಗೆಯೇ ಆ ಕಾರಣವೂ ಬೇರೊಂದು ಕಾರಣದ ಕಾರ್ಯವಾಗಿರುತ್ತದೆ. ಅಂದಾಗ, ಈ ಕಾರ್ಯಕಾರಣ ಕೊಂಡಿಗಳ ಸರಪಳಿಗೆ ತುದಿ ಬುಡವೆಂಬುದಿಲ್ಲ. ಆದರೆ ನಾವು ಈ "ಆದಿ" ಎಂಬ ಕಾರಣವೇ ದೇವರೆಂದು ಭಾವಿಸಿದೆವು. ಆದರೆ ಈ ಭಾವನೆಗೆ ಆಧಾರವಿಲ್ಲ. ಏಕೆಂದರೆ, ಮೂಲದಲ್ಲಿಯಾದರೂ ಆ ಒಂದು ಕಾರಣದಿಂದ ಈ ಕಾರ್ಯಕಾರಣ ಸರಣಿ ಸುರುವಾದದ್ದೇಕೆ? ನಿರುತ್ತರವೇ ಇದಕ್ಕೆ ಉತ್ತರ.

2

ಕಾರಣವನ್ನು ಕಂಡುಕೊಳ್ಳುವದು ಬ್ರಹ್ಮಜ್ಞಾನದ ದಾರಿ. ಆದರೆ ಈ ವಿಶ್ವ ಪ್ರಪಂಚದ ಹಿಂದೆ ಒಂದು ಹೇತುವನ್ನೋ ಉದ್ದೇಶವನ್ನೋ ಹುಡುಕುವದು ತತ್ವಜ್ಞಾನದ ದಾರಿ. (ಗ್ರೀಕ್ ಪರಿಭಾಷೆಯಲ್ಲಿ "ಟೆಲಿಯಾಸ್" ಎಂದರೆ ಉದ್ದೇಶ ಹೇತು. ಈ ತತ್ವಶಾಸ್ತ್ರ ಟೆಲಿಯೋಲೋಜಿ. ಮೇಲೆ ನಮೂದಿಸಿದ್ದು "ಕೊಸ್ಮೊಲೋಜಿ.)"

ಸೃಷ್ಟಿ ವಿಕಾಸದಲ್ಲಿ ಒಂದು ವ್ಯವಸ್ಥೆ ಒಂದು ಕ್ರಮ ಒಂದು ಪರಿಣಾಮಕಾರಿಯಾಗುವಂಥ ಗತಿ ಕಂಡುಬರುತ್ತದೆ. (i) ಶಿಲೆ ಸಸ್ಯ, ನೀರ ಬಿಂದು, ಜೀವ ಜಂತು, ಮರ ಮೃಗ–ಇವೆಲ್ಲವುಗಳ ರಚನೆಯಲ್ಲಿ ಏನೋ ಒಂದು ಒಳ–ಹೊರಗಿನ ಸಂಘಟನೆ ಒಂದು ಅಚ್ಚು-ಕಟ್ಟು ಕಂಡುಬರುತ್ತದೆ. ಇದು ಅವು ಒಳಪಡುವ ಸಾಮಾನ್ಯ ಭೌತಿಕ ಪ್ರಕೃತಿ ನಿಯಮಗಳ ಕಟ್ಟುಪಾಡಿಗೆ ಹೊರತಾಗಿ. (ii) ಇದರಿಂದ ಈ ವಸ್ತು ಜಾತಗಳ ಹುಟ್ಟು ಬೆಳವಣಿಗೆಗಳಿಗೆ ಅವುಗಳ ಇರುವಿಕೆಯನ್ನು ಮೀರಿ ಬೇರೆ ಒಂದು ಉದ್ದೇಶ ಸಾರ್ಥಕತೆ, ಒಂದನ್ನೊಂದು ಹೊಂದಿಕೊಂಡು ಪರಿಣಾಮ ಬೀರುವ ಗುಣಧರ್ಮ ಇರಬೇಕೆಂದು ಊಹಿಸಬಹುದಾಗಿದೆ, ಮತ್ತು ಈ ಉದ್ದೇಶ ಈ ಗುಣಧರ್ಮದ ಪ್ರೇರಣೆ ಮೂಲದಲ್ಲಿ ಒಂದು ಸೃಷ್ಟಿಕರ್ತನದೇ ಆಗಿರಬೇಕು. ಅದೊಂದು ಕರ್ತೃ ವ್ಯಕ್ತಿತ್ವದ–ಆದಿ ಕಾರಣ ಮಾತ್ರವಲ್ಲ, "ಆದಿ ಪುರುಷ"ನ ಅಸ್ತಿತ್ವದ ಬಗೆಗೆ ಯೋಗ್ಯ ಪ್ರಮಾಣವೆನಿಸುತ್ತದೆ. (iii) ಅಖಂಡ ವಿಶ್ವ ಪ್ರಪಂಚದಲ್ಲಿಯೇ–ಪಿಂಡಾಂಡದಿಂದ ಬ್ರಹ್ಮಾಂಡದವರೆಗೂ ಒಳಗೊಂಡು, ಅಣುವಿನಿಂದ ಮಹತ್ತಿನವರೆಗೂ ಏನೋ ಒಂದು ಏಕರೂಪವಾದ ಏಕಮೇವವಾದ ಒಕ್ಕಟ್ಟಿನ ವ್ಯವಸ್ಥೆ, ಕ್ರಮಬದ್ಧತೆ,

ಪರಸ್ಪರತೆಯು ಹೊಂದಾಣಿಕೆಯು ಸುಸೂತ್ರತೆ ಕಂಡುಬರುತ್ತದೆ. ಇದರಿಂದ ಒಂದೊಂದು ಉದಾಹರಣೆಯು ಇಂಥ ಸೃಷ್ಟಿಕೌಶಲ್ಯದ ರಚನೆಯು ಲಕ್ಷಣಗಳೂ ಅದರ ಕುಶಲ ಕರ್ತೃವನ್ನು ಸೂಚಿಸುತ್ತವೆ.

ವಿಶ್ವದ ವಿಕಾಸ ಕ್ರಮದಲ್ಲಿ ಈ ಕ್ರಮ, ಕೌಶಲ್ಯ ರಚನಾ ವಿಶೇಷಗಳನ್ನು ಅರ್ಥೈಸಿಕೊಳ್ಳುವದು ಕೇವಲ ಮನುಷ್ಯನ ಮನಸ್ಸು. ಸೃಷ್ಟಿಯು ವಿಕಾಸದಲ್ಲಿ ಮುಂದೆ ಒದಗುವದೆಲ್ಲ ಹಿಂದೆ ಒದಗಿದ್ದಕ್ಕೆ ಹೊಂದಿಕೊಂಡು ಅನುಕೂಲವಾಗಿ, ಕೇವಲ ಸ್ಥಿತಿಯನ್ನೇ ಗತಿಯಲ್ಲಿ ಮುಂದುವರಿಸಿಕೊಂಡು ಸಾಗುವ ಒಂದು ಯಾಂತ್ರಿಕ ಕ್ರಮದಲ್ಲಿ ಸಾಗುವದೊಂದೇ ಭೌತಿಕ ಹಾಗೂ ಪ್ರಾಕೃತಿಕ ಧರ್ಮ. ಅದರ ಆಕಾರ-ವಿಕಾರಗಳಲ್ಲಿ ತನ್ನದೇ ಅರ್ಥವನ್ನೂ, ಕಂಡುಕೊಳ್ಳುವದು ಮನುಷ್ಯನ ಮನೋಧರ್ಮ. ತೇಲುವ ಮೋಡಗಳಲ್ಲಿ ನಾವು ಇಂಗ್ಲಂಡಿನ ನಕಾಶೆಯನ್ನೂ ಚಂದ್ರನ ಕಲೆಯಲ್ಲಿ ಮೊಲದ ಚಿಹ್ನೆಯನ್ನೂ ಗುರುತಿಸಿದಂತೆ, ಈ ಉದ್ದೇಶ-ತತ್ವದರ್ಶನ. ಮರದ ಹಣ್ಣು ತಿಂದು ಹಕ್ಕಿ ಬೀಜಗಳನ್ನು ನೆಲಕ್ಕೆ ಒಗೆಯುತ್ತವೆ. ಅಲ್ಲಿ ಅವು ಗುರುತ್ವಾಕರ್ಷಣೆಯಿಂದ ಹಕ್ಕಿಯ ಬಾಯಿಯಿಂದ ಕೆಳಗೆ ಬೀಳುತ್ತವೆ. ಮುಂದೆ ಮಳೆ ಬಿಸಿಲು ಮಣ್ಣುಗಳ ರಾಸಾಯನಿಕ ಕ್ರಿಯೆಯಿಂದ ಆ ಬೀಜ ಮೊಳಕೆ ಒಡೆದು,ಸಸಿ ಎದ್ದು ನಿಂತು ಹೊಸ ಮರವಾಗುತ್ತದೆ, ಎಂದ ಮಾತ್ರಕ್ಕೆ ಹೊಸ ಸಸಿ ಆಗಲೆಂದೇ ಹಕ್ಕಿಯ ಬಾಯಿಂದ ಬೀಜ ಬೀಳುತ್ತದೆ. ಅದು ಚಿಗುರಲೆಂದೇ ಮಳೆ ಬಿಸಿಲು ಬರುತ್ತವೆ. ಮುಂದೆ ಇದೆಲ್ಲ ಮನುಷ್ಯನಿಗೆ ಮನೆಯು ಸೌದೆಯು ಹಣ್ಣುಕಾಯಿ, ಸೊಪ್ಪು, ಗೊಬ್ಬರಗಳ ಸೌಕರ್ಯಕ್ಕಾಗಿಯೇ ಮರವಾಗಿ ಅಡವಿಯಾಗಿ ಸೃಷ್ಟಿಕರ್ತನ ಅಪಾರ ಕರುಣೆ ಒದಗಿ ಬರುತ್ತದೆ— ಹೀಗೆಲ್ಲ ಜಗತ್ತಿನ ನಿಯತಿಗೆ ಒಬ್ಬ ನಿಯಾಮಕನನ್ನು ಕಲ್ಪಿಸುವದು ಈ ವಾದದ ಪ್ರಮಾಣ. ಇದೂ ಒಂದು ಜಾಣತನದ ಪ್ರಮಾಣ. ಕೇವಲ ಮಾನವ ಕೇಂದ್ರಿತ.

3

ಇನ್ನು ಮೂರನೆಯ ಕಾರಣ ಸತ್ತಾವಾದದ್ದು. ಸತ್ ಅಂದರೆ ಇರುವಿಕೆ. ಇದಕ್ಕೆ "ಒಂಟೋಲೋಜಿ" ಎನ್ನುತ್ತಾರೆ. ("ಒಂಟೊಂ" ಆ ಗ್ರೀಕ್ ಧಾತುವಿನ ಅರ್ಥ ಇರು. ನಮ್ಮ ಕನ್ನಡದ "ಉಂಟು" ಎಂಬಂತೆ.) ಇದರಂತೆ, ಹಿಂದೆ ವಿವರವಾಗಿ ಹೇಳಿದಂತೆ—ನಮ್ಮ ಬದುಕಿನ ಭಾವಮಯ ಅವಶ್ಯಕತೆಗಾಗಿ ಈ ದೇವರು ಬೇಕು. ಅನೇಕ ಭಾವ ಜೀವಿಗಳಿಗೆ ಭಾವಿಕ ಭಾವುಕ, ಕೋಮಲ ತೀವ್ರ ಸಂವೇದಿಯಾದ ಜೀವಿಗಳಿಗೆ ಬಾಳಿನ ಬವಣೆ ಬಳಲಿಕೆಗಳು

ತಂದೊಡ್ಡುವ ಕೊರಗು ಕೊರತೆಗಳ ಕರುಳ ತುಡಿತದ ಒತ್ತಡ ಒತ್ತರಗಳ ಪರಿಹಾರ ಸಾಂತ್ವನೆ ದೇವರೆಂಬ ತತ್ವದಿಂದಲೋ ಸತ್ವದಿಂದಲೋ ಮಾತ್ರ ಸಾಧ್ಯವೆನಿಸುತ್ತದೆ. ದೇವರು ಇಂಥವರಿಗೆ ಒಂದು ಭಾವನಾಮಯ ಅವಶ್ಯಕತೆ. ಆವೇಗ, ಆವೇಶ, ಉದ್ರೇಕ, ಉಲ್ಬಣಗಳಿಗೆ ಒಂದಲ್ಲ ಒಂದು ರೂಪದ ಉಪ ಶಮನ ಈ ದೇವತ್ವದ ಧ್ಯಾನ, ಉಪಾಸನೆ, ಪೂಜೆ, ಅರ್ಚನೆ, ಭಜನೆ, ಅನನ್ಯ ಚಿಂತನೆ, ನಾಮಸ್ಮರಣೆ ಇತ್ಯಾದಿ. ನಾವು ಇದ್ದೇವೆ, ನಮಗೆ ಅಗತ್ಯಗಳಿವೆ, ನಮ್ಮ ಸಾಂತ್ವನೆಗಾಗಿ ದೇವರು ಇರಬೇಕು.

ಇಂಥ ಆರ್ತರದೂ ಒಂದು ವಾದವಿದೆ. ನಾವೆಲ್ಲ ಅಪೂರ್ಣರು, ಅಂಶ ಮಾತ್ರರು. ನಮ್ಮ ಪೂರ್ಣತ್ವ ಅಖಂಡತ್ವದ ಗುರಿಯೇ ದೇವರು. ಆತ ಪರಿ ಪೂರ್ಣ. ಅವನಲ್ಲಿ, ಅವನಿಂದ, ಅವನೊಂದಿಗೆ ಸಂಬಂಧಪಟ್ಟು ನಮ್ಮ ಪೂರ್ಣ ವ್ಯಕ್ತಿತ್ವ ತುಂಬಿಕೊಳ್ಳುತ್ತದೆ. ಅಸ್ತಿತ್ವವೆಂದರೇ ಪೂರ್ಣತ್ವ, ನಾಸ್ತಿತ್ವವೆಂದರೆ ಅಪೂರ್ಣತ್ವ. ನಾವು ಅಪೂರ್ಣತ್ವದಿಂದ ಪೂರ್ಣತ್ವದತ್ತ ಸಾಗುತ್ತೇವೆ. ಅಸ್ತಿತ್ವವು ಪೂರ್ಣತ್ವದ ಒಂದು ಅಂಗ, ಒಂದು ಲಕ್ಷಣ. ಆದ್ದರಿಂದ ನಮ್ಮ ಅಸ್ತಿತ್ವವೇ ದೇವರ ಅಸ್ತಿತ್ವಕ್ಕೆ ಪ್ರಮಾಣ.

ಆದರೆ ಇದೆಲ್ಲ ಶಾಬ್ದಿಕ ತರ್ಕ. ಏಕೆಂದರೆ, ಪೂರ್ಣತ್ವವೆಂಬುದೇ ನಮ್ಮ ಮಾನಸಿಕ ಬೌದ್ಧಿಕ ಕಲ್ಪನೆ–ಭೂಮಿತಿಯ ಆದರ್ಶ ರೇಖೆಯಂತೆ, ಬಿಂದು ವಿನಂತೆ. ಇನ್ನು ಇದರ ಹೊರತು ಸಜೀವ ವಸ್ತುಗಳ ವಿಕಾಸಕ್ಕೆ ಒಂದು ಸಹಜ ಪೂರ್ಣತೆ ಎಂಬುದಿದೆ. ಮೊಗ್ಗೆ ಹೂವಾಗುವದು, ಗಿಡವು ಮರವಾಗುವದು, ಮರಿಯು ಪಶುವಾಗುವದು, ಮಗುವು ಮನುಷ್ಯನಾಗುವದು—ಇತ್ಯಾದಿ. ಇದನ್ನೇ ದೇವತ್ವವೆಂದು ಭಾವಿಸುವದೇ?

ಇನ್ನು ಅವರವರ ಭಾವನಾಮಯ ಅಗತ್ಯಕ್ಕೆ ಅವರವರ ದೇವತ್ವದ ಕಲ್ಪನೆ ಅಥವಾ ಆದರ್ಶ ಸಾಕಾರವಾಗಿಯೋ ಸಗುಣವಾಗಿಯೋ ಒಡಮೂಡಿ ಸಾಂತ್ವನೆ ಸಂತೃಪ್ತಿ ನೀಡುವದು, ಅವರವರ ಆಂತರಿಕ ಆಧ್ಯಾತ್ಮಿಕ ಅನುಭವ. ಅದನ್ನೇ ಹಿಂದೆ ಅಪರೋಕ್ಷಾನುಭೂತಿ ಎಂದು ಕರೆದದ್ದು. ಅಲ್ಲಿ ಇತರರು ಇಣಕಿ ನೋಡುವಂತಿಲ್ಲ. ಅದಕ್ಕೆ ಇತರರ ಪುಷ್ಟಿ ತುಷ್ಟಿ ಬೇಕಾಗಿಲ್ಲ. ಅಂಥ ಬ್ರಹ್ಮಾನಂದ ಕಾವ್ಯಾನಂದದಂತೆ, ಕಲಾನಂದದಂತೆ. ಅದೂ ಒಂದು ವಿಶಿಷ್ಟ ಅತೀಂದ್ರಿಯ ರಸಾನುಭವ ಇಷ್ಟೇ ಅನ್ನಬಹುದು. ಅದು ಜಗತ್ ಚಾಲಕ ಪರಮೇಶ್ವರನ ಅಸ್ತಿತ್ವಕ್ಕೆ ಪ್ರಮಾಣವಾಗದು.

ಇನ್ನು ಈ ಜಗತ್ತಿನ ಈಶ್ವರ ಜಗತ್ತಿನಿಂದ ಬೇರೆ ಅಲ್ಲ. ಈತ ಜಗ ದಾತ್ಮ, ಸರ್ವಾಂತರ್ಯಾಮಿ, ತಿಲದ ಮರೆಯ ತೈಲದಂತೆ, ಮರದಲ್ಲಿ ಅಡ

ಗಿದ ಬೆಂಕಿಯಂತೆ, ಸಕ್ಕರೆಯೊಳಗಿನ ಸವಿಯಂತೆ ಅಥವಾ ಹೂವಿನೊಳಗಿನ ಪರಿಮಳದಂತೆ—ಎಂದೆಲ್ಲ ಬಣ್ಣಿಸುವದುಂಟು. ಇದೆಲ್ಲ ತುಂಬ ಸೊಗಸಾದ ಬಣ್ಣಣೆಯೇ. ಆದರೆ ಇದರಿಂದ ಪ್ರಯೋಜನವೇನು ? ವಸ್ತುತಃ ಅಥವಾ ತತ್ವತಃ ಜಗತ್ತೂ ದೇವರೂ ಬೇರೆ ಅಲ್ಲ; ಒಂದನ್ನೊಂದು ಸೇರಿರುವ ಅಖಂಡ ಏಕರೂಪ ಸ್ವಾರಸ್ಯವೆಂದಾಯಿತು. ಅಂದಾಗ, ಈ ಜಗತ್ತನ್ನೇ ನಾವು ಪ್ರೀತಿಯಿಂದ, ತಿಳುವಳಿಕೆಯಿಂದ, ಆತ್ಮೀಯ ಹೊಂದಾಣಿಕೆಯಿಂದ, ಸರ್ವರೊಂದಿಗೆ ಸಮದರ್ಶಿಯಾಗಿ ಕೂಡಿ ಸೇವಿಸಿ ಜೀವಿಸುವದೇ ನಮ್ಮ ಮಟ್ಟಿಗೆ ನಿಜವಾದ ಪುರುಷಾರ್ಥ, ನಿಜವಾದ ಪರಮಾರ್ಥವೆಂದಾಯಿತು.

ಹೀಗೆ ಭಾವಿಸಿದರೂ ದೇವರೆಂಬ ಒಂದು ಪ್ರತ್ಯೇಕ ಪ್ರಚಂಡ ಪ್ರಭಾವದ ಪರಮ ಶಕ್ತಿಯೊಂದು ನಮ್ಮ ಬದುಕನ್ನು ಆಳುವದೆಂದು ನಂಬಿ ಭಯಪಡಲೂ ಪೂಜಿಸಲೂ ಅದರ ಅನುಗ್ರಹಕ್ಕಾಗಿ ಏನೆಲ್ಲ ಖಟಾಟೋಪ ನಡೆಯಿಸಲೂ ಆ ದೇವರ ಹೆಸರಿನಲ್ಲಿ ಮತಾಂಧರಾಗಿ ಘೋಷಣೆ ಘರ್ಷಣೆ ಶೋಷಣೆಗಳನ್ನು ನಡೆಯಿಸಲೂ ಯಾವ ಯೋಗ್ಯವಾದ ಸತ್ಯವಾದ ಪ್ರಮಾಣವೂ ಇದ್ದಂತೆ ತೋರುವುದಿಲ್ಲ.

4

ಇನ್ನೊಂದು ಸಮರ್ಥನೆ ದೇವರ ಅಸ್ತಿತ್ವದ ಬಗೆಗೆ–ಧರ್ಮ ಅಥವಾ ನೀತಿ ನಿರ್ಬಂಧದ ವಾಸ್ತವತೆ. ನಿಸರ್ಗಕ್ಕೆ ನಿಯತಿ ಹೇಗೊ ಹಾಗೆ ಮಾನವ ಸಮಾಜಕ್ಕೆ, ಜೀವನಕ್ಕೆ ನೀತಿ. ಎಂಥ ಬುಡಕಟ್ಟಿನ ಬುನಾದಿಯಹಾಗೂ ಯಾವ ಮಟ್ಟದ ಮನುಷ್ಯ ಸಮಾಜಕ್ಕೂ ತನ್ನದೆ ಆದ ನಡಾವಳಿಯ ಆಚಾರದ ಸಂಹಿತೆ ಅಥವಾ ನಿಯಮವ್ಯವಸ್ಥೆ ಸ್ಪಷ್ಟವಾಗಿಯೋ ಅಷ್ಟು ಸ್ಪಷ್ಟವಲ್ಲದೆಯೋ ಇರುವದು ಕಂಡುಬರುತ್ತದೆ. ಕಟ್ಟಳೆ ಇಲ್ಲದ ಕಗ್ಗದ ಕಾಡುಬದುಕು ಮನುಷ್ಯರ ಮಟ್ಟದಲ್ಲಿ ಶಕ್ಯವಿಲ್ಲ. ಮತ್ತು ಈ ಕಟ್ಟಳೆ ನೀತಿ ನಿಯಮ ಅಥವಾ ಧರ್ಮದ ಪ್ರೇರಣೆಯೇ ದೇವರು ಎಂಬುದೊಂದು ಸಮರ್ಥನೆ ನೀಡಲಾಗುತ್ತದೆ. ದೇವರೆಂಬ ಅಧಿಷ್ಠಾನವನ್ನೋ ಅಧಿಕಾರ ಸ್ಥಾನವನ್ನೋ ಪ್ರತಿಷ್ಠಾಪಿಸಿ, ಅದರಿಂದ ಧರ್ಮ ನಿಯಮ ಸಂಘಟನೆ ಎಲ್ಲ ಧರ್ಮಗಳಲ್ಲಿಯೂ ಪ್ರತಿಪಾದಿಸುವದಾಗುತ್ತದೆ.

ಆದರೆ ಇದೂ ಒಂದು ಪರಂಪರೆಯಿಂದ ಬಂದ, ಕೇವಲ ನಂಬಿಕೆಯ ನೆಲೆಯ ಮೇಲೆಯೇ ನಿಂತ ವಾದ. ಅಶಕ್ತ ಅಜ್ಞಾನಿ ಅಸಮರ್ಥ ಹಾಗೂ ಅಮಾಯಕ ಅಂಜುಬುರುಕ ಆದಿಮಾನವಸಮಾಜಗಳು ಭಯ ಭಕ್ತಿ ಭಾವಿಕತೆಗಳಿಂದ ಕ್ರಮೇಣ ಮನ್ನಿಸುತ್ತ, ಪೂಜಿಸುತ್ತ ಬಂದ ದೇವರೆಂಬ ಆ ಅತಿಮಾನುಷ

ಅಲೌಕಿಕ ಹಾಗೂ ಅದ್ಭುತ ಶಕ್ತಿಯನ್ನೇ ಪ್ರಮಾಣವಾಗಿಟ್ಟುಕೊಂಡು, ಆಯಾ ಸಮಾಜಗಳ ಬದುಕನ್ನು ತಕ್ಕ ಕಟ್ಟುಪಾಡುಗಳಿಂದ ನಿಯಂತ್ರಿಸುವದು ಅಂದಿನ ಅವರ ನೇತಾರರಿಗೆ ಸುಲಭವೆನಿಸಿದ್ದು ತೀರ ಸಹಜ. ಹೀಗೆ ಧರ್ಮಕ್ಕೆ ಮೂಲ ವೇದ, ವೇದ ದೇವರ ಉಸಿರು, ಎಂದೆಲ್ಲ ತಿಳುವಳಿಕೆ ತಲೆತಲಾಂತರದಿಂದ ನಮ್ಮ ಮನಸ್ಸಿಗೆ ಸಂಸ್ಕಾರವಾಗಿ ಆಶ್ವಾಸನೆಯಾಗಿ ಒಡಮೂಡಿಸಲಾಯಿತು. ನಾವು ಅದನ್ನೇ ಪಡೆನುಡಿಯುತ್ತ ಬಂದೆವು. ಧರ್ಮ-ನೀತಿ ನಿಯಮಗಳೆಲ್ಲ ದೇವರ ಅಸ್ತಿತ್ವವನ್ನೇ ಸೂಚಿಸುತ್ತವೆ. ಆದರೆ ಇದು ಹೀಗೇ ಮುಂದುವರಿಯ ಬೇಕಿಲ್ಲ. ಹಲವು ನಾಮ ರೂಪಗಳುಳ್ಳ ಆ ಒಬ್ಬನೇ ದೇವರ ಹೆಸರಿನಲ್ಲಿ ನಡೆದ ಧರ್ಮಯುದ್ಧಗಳು, ಮತೀಯ ಘರ್ಷಣೆಗಳು, ಧರ್ಮಾಂತರ, ಧರ್ಮಶಾಸನ ಗಳ ಬಲಾತ್ಕಾರಗಳು, ಅತ್ಯಾಚಾರಗಳು ಇತಿಹಾಸದುದ್ದಕ್ಕೂ ಈ ದೇವರೆಂಬ ಢಾಲನ್ನು ತ್ವೇಷ ದ್ವೇಷ ಆತಂಕ ಅಸೂಯೆ ಅಸಹನೆಗಳ ಬಿಚ್ಚುಗತ್ತಿಗಳನ್ನೂ ಬೆನ್ನಿಗಿರಿಯುವ ಎದೆಗೆ ತಿವಿಯುವ ಈಟಿ ಕಠಾರಿಗಳನ್ನು, ಮುಚ್ಚಲಿಕ್ಕೆ ಯುಕ್ತಿ ಯಾಗಿ ಯೋಚಿಸುತ್ತ ಯತ್ನಿಸುತ್ತ ಬಂದಿದ್ದಾಗಿದೆ. ದೇವರು ಯಾವಾಗಲೂ ದೊಡ್ಡ ಸೈನ್ಯಗಳ, ಭಾರಿ ತೋಫು ಟ್ಯಾಂಕು ವಿಮಾನ ಪಡೆಗಳ ಪಕ್ಷದಲ್ಲಿಯೇ ಇರುವುದುಂಟು. ಪ್ರತಿ ಜಾಗತಿಕ ಮಹಾಯುದ್ಧದಲ್ಲಿಯೂ ಮಿತ್ರ ಮತ್ತು ಶತ್ರು ರಾಷ್ಟ್ರಗಳು ಉಭಯತರೂ ದೇವರನ್ನು ನಂಬಿ, ದೇವರ ಭರವಸೆಯ ಮೇಲೆ ಪರಸ್ಪರರ ಮೇಲೆ ಬಾಂಬು ಮಳೆಗರೆಯುತ್ತಿರುತ್ತವೆ!

ಅಂದರೆ, ನೀತಿ ಧರ್ಮಕ್ಕೂ ದೇವರಿಗೂ ಯಾವ ಬಾದರಾಯಣ ಸಂಬಂಧವೂ ಇರಬೇಕೆಂದಿಲ್ಲ-ಇಲ್ಲಿ ನಿಜವಾಗಿಯೂ. ಮಾನವ ಧರ್ಮಕ್ಕೆ ಇಂಥ ಅಗಮ್ಯ ಅವ್ಯಕ್ತ ಅಜ್ಞಾತ ಶಕ್ತಿಯನ್ನೊಂದು ಆಧಾರವೆಂದು ಇಟ್ಟುಕೊಳ್ಳುವ ಅಂಥ ಅಗತ್ಯವೇ ಇಲ್ಲ. ಮಾನವ ಧರ್ಮದ ಮೂಲ ಮತ್ತು ಪ್ರೇರಣೆ ಮಾನ ವೀಯತೆ. ಮಾನವ ಸಮಾಜದ ಸತ್ವ, ಸಹಬಾಳ್ವೆಯ ಅಗತ್ಯ, ಮನೋಧರ್ಮದ ವೈಚಾರಿಕತೆ, ಬುದ್ಧಿವಂತಿಕೆ ಇವುಗಳನ್ನೇ ನೆಲೆಗೊಂಡು ಮಾನವ ನೀತಿ ಧರ್ಮ ನಿಲ್ಲಬೇಕು. ಮನುವು ಸಾರಿದ ಹತ್ತು ಲಕ್ಷಣಗಳುಳ್ಳ ಸಾಮಾನ್ಯ ಧರ್ಮವನ್ನೇ ನಾವು ಈ ಮಾನವ ಧರ್ಮವೆಂದು ಗುರುತಿಸಬಹುದು. ಕ್ಷಮೆ, ಮಾರ್ದವ, ಆರ್ಜವ, ಶೌಚ, ಸತ್ಯ, ಸಂಯಮ, ತಪಸ್ಸು, ತ್ಯಾಗ, ಅಕಿಂಚಿನತ್ವ ಮತ್ತು ಇಂದ್ರಿಯನಿಗ್ರಹ ಇವೇ ಆ ಹತ್ತು ಲಕ್ಷಣಗಳು. ಇವು ನಾವು ವ್ಯಕ್ತಿಯಾಗಿ ಸಮಾಜವಾಗಿ ಬದುಕುವದಕ್ಕೆ ನಮ್ಮ ಬದುಕಿನ ಆರೋಗ್ಯಕ್ಕೆ ಕಲ್ಯಾಣಕ್ಕೆ ಮತ್ತು ಉತ್ಕರ್ಷಕ್ಕೆ ಅತಿ ಅಗತ್ಯವಾದ ಗುಣಗಳು. ಇವುಗಳಿಗೆ ದೇವರ ಆದೇಶದ ಆಧಾರ ಬೇರೆ ಬೇಕಿಲ್ಲ. ಅಂದಮೇಲೆ ನೀತಿ ನಿಯಮದ ವಾಸ್ತವತೆಗೆ

ಹಾಗೂ ಯಥಾರ್ಥತೆಗೆ ದೇವರ ಪ್ರೇರಣೆ ಬೇಕಾಗಿಲ್ಲ. ರಾಜನ, ಶಾಸಕನ, ಗುರುವಿನ, ಸತ್ತಾಧಾರಿಯ, ಸರ್ವಾಧಿಕಾರಿಯ ಕಟ್ಟು ಕಟ್ಟಳೆಗಳಿಗೆ ಅಂಥ ಒಂದು ಪ್ರಮಾಣ ಪತ್ರ ಬೇಕಾಗುತ್ತದೆ,– ಕುರುಡು ನಂಬಿಕೆಯ ಬರಡು ನಡವಳಿಕೆಯ ಜನಸಾಮಾನ್ಯರಲ್ಲಿ ಅದನ್ನು ಆಗ್ರಹದಿಂದ ಜಾರಿಯಲ್ಲಿ ತರಲಿಕ್ಕೆ ಮತ್ತು ಇಡಲಿಕ್ಕೆ.

5

ಜೀವನದಲ್ಲಿ ನೀತಿಯ ನಿಯಮದಂತೆ, ವಿಶ್ವಪ್ರಪಂಚದಲ್ಲಿ ಒಂದು ರಸಿಕ ಪ್ರಜ್ಞೆಯಿಂದ ಸೌಂದರ್ಯವನ್ನು ಗುರುತಿಸಲಿಕ್ಕೆ ದೈವಿಕ ಪ್ರೇರಣೆಯು ಅವಶ್ಯವೆಂದು ಒಂದು ವಾದವಿದೆ. ಆದರೆ ಬಾಳಿನ ಹೊರ ಬದುಕಿನ ನಲಿವು-ಒಲವು-ಚೆಲುವುಗಳು ನಮಗೆ ಸ್ವಯಂವೇದ್ಯ. ಯಾರು ಯಾರನ್ನು, ಯಾವುದನ್ನು ಏಕೆ ಮೆಚ್ಚುವರೆಂಬುದು ಯಾವಾಗಲೂ ಒಂದು ರಮ್ಯ ರಹಸ್ಯ. ಹಾಗಿರುವಾಗ ಈ ರಸಾನುಭೂತಿಯ ಸೌಂದರ್ಯದ ಪ್ರತೀತಿಯ ಮೂಲ ದೇವರೆಂದು ಹೇಳುವುದು ಬರಿ ಮಾತಿನ ಜಾಣತನವಾದೀತು, ಹೊರತು ಜಾಣತನದ ಮಾತಲ್ಲ. ಇನ್ನು, ಈ ಸೌಂದರ್ಯ ಆನಂದಗಳನ್ನು ನಲಿವು ಒಲವು ಚೆಲುವುಗಳನ್ನು ದೇವತ್ವದ ಲಕ್ಷಣ (ವಿಭೂತಿ)ಗಳೆಂದು ಇಟ್ಟುಕೊಂಡು ಅವುಗಳನ್ನು ಗಳಿಸಲು ಗೈಯುವ ಸಾಧನೆಯೇ ಒಂದು ಉಪಾಸನೆ–ಕಲೋಪಾಸನೆ, ರಸಸಿದ್ಧಿ ಎಂದು ನಾವು ಬಗೆಯಬಹುದು; ಹೊರತು ದೇವತ್ವವೆಂಬುದನ್ನೇ ಅದರಿಂದ ಪ್ರತಿಪಾದಿಸುವದಲ್ಲ.

ವಿಶ್ವದ ಅಥವಾ ಲೋಕದ ಅನುಭವದಲ್ಲಿ ನಮಗೆ ಸಾಮಾನ್ಯವಾಗಿ ಮೂರು ಘಟಕಗಳು ಕಂಡುಬರುತ್ತವೆ-ನಮ್ಮ ಪ್ರಜ್ಞೆಯ ಅನುಕೂಲತೆಯ ದೃಷ್ಟಿಯಿಂದ ಇವು ಒಳಿತು (ಹಿತಮಯ ಕಲ್ಯಾಣ)ಒಪ್ಪಂದ (ಸಕಲ ಸೃಷ್ಟಿಯ ವಸ್ತು ವ್ಯಾಪಾರಗಳ ಒಂದು ಬಗೆಯ ಹೊಂದಾಣಿಕೆ ಅಥವಾ ಸಾಮರಸ್ಯ) ಮತ್ತು ಚೆಲುವು (ಇಂದ್ರಿಯಗಳನ್ನೂ ಆತ್ಮವನ್ನೂ ಸೊಗಯಿಸುವ ರಮಣೀಯತೆ) ಈ ಮೂರರಲ್ಲಿ ಸೌಂದರ್ಯದ ಪ್ರಜ್ಞೆ ಎಲ್ಲರಲ್ಲಿಯೂ ತೀವ್ರವಾಗಿರುವುದಿಲ್ಲ. ಆದರೆ ಉಳಿದ ಎರಡು ಅಂಶಗಳು ಬಹುತೇಕ ವ್ಯಕ್ತಿಗಳ ಅನುಭವಕ್ಕೆ ಬರುತ್ತವೆ.

ಹೀಗೆ ಜಗತ್ತನ್ನೂ ಜೀವನವನ್ನೂ ಒಂದು ಅನುಗ್ರಹವಾಗಿಯೋ ಸುಸೂತ್ರ ಚಲನೆಯ ಯಂತ್ರವಾಗಿಯೋ ಒಂದು ಮೋಹಕ ಚಿತ್ರಶಿಲ್ಪವಾಗಿಯೋ ಕಾಣುವ ಚೇತನ ಈ ಅನುಭವವನ್ನು ದೈವಿಕವೆಂದು ಭಾವಿಸುತ್ತದೆ. ಕೊನೆಗೂ ಇದೊಂದು ಭಾವನೆ. ಏಕೆಂದರೆ ಒಂದು, ಇದು ನಾವು

ಮಾನವರೆಂಬ ಪ್ರಾಣಿಗಳು, ಮಿದುಳು ಹಾಗೂ ತಿಳುವಳಿಕೆಯ ಬೆಳವಣಿಗೆಯ ಒಂದು ಹಂತದಲ್ಲಿಯೇ ಅರ್ಥ ಮಾಡಿಕೊಳ್ಳಬಹುದಾದ ಅನಿಸಿಕೆ. ಇನ್ನೊಂದು, ಈ ಅನಿಸಿಕೆಗೆ ಆಧಾರವಾದ ಅನುಭವಗಳೂ ಕೆಲವು ಆಯ್ದ ವಿಶಿಷ್ಟ ವಲಯದವು. ಏಕೆಂದರೆ ಒಳಿತಲ್ಲದ, ಅಂದವಲ್ಲದ, ಅಚ್ಚುಕಟ್ಟಾಗಿ ಹೊಂದಿಕೊಳ್ಳದ ಅನೇಕ ಅನುಭವಗಳೂ ಈ ಬದುಕಿನ ಬಗೆಹರಿಯದ ಭಾಗಗಳಾಗಿರುತ್ತವೆ. ಬದುಕಿನ ಹಲವಾರು ಅನುಭವಗಳು ಒಂದು ಹದದ ಮತ್ತು ಹವಣದ ಅಳತೆಯಲ್ಲಿ ಅಳವಿನಲ್ಲಿ ಮಾತ್ರ ನಮಗೆ ಗ್ರಾಹ್ಯ ಸಹ್ಯ ಮತ್ತು ಇಷ್ಟ. ಇವೆಲ್ಲ ಒಟ್ಟಾಗಿ ದೈವಿಕವೆಂದಾದರೆ,ಇವುಗಳಿಗೆ ಹೊರತಾದ ಕಹಿ, ಶೀತ, ಉಗ್ರ, ಕ್ರೂರ, ಬೀಭತ್ಸ ಅನುಭವಗಳೆಲ್ಲ ಯಾರ ಹೊಣೆ? ದೇವರ ವಿರುದ್ಧ ಸೈತಾನ, ಇಂದ್ರನ ವಿರುದ್ಧ ವೃತ್ರ. ದೈವೀ ಸಂಪತ್ತಿಗೆ ವಿರುದ್ಧ ಅಸುರೀ ಸಂಪತ್ತಿ ಹೀಗೆ ದ್ವಂದ್ವದ ಇಕ್ಕಳದಲ್ಲಿ ನಾವು ಸಿಲುಕಿಕೊಳ್ಳುತ್ತೇವೆ. ಆಶೆಯೊಂದಿಗೆ ನಿರಾಶೆಯೂ ನಮ್ಮ ನಂಬಿಕೆಯ ಅಂಗವಾಗಬೇಕಾಗುತ್ತದೆ. ಆಗ ಅದನ್ನೆಲ್ಲ ಅಲ್ಲಗಳೆಯಲು ಸಲ್ಲದ ವೇದಾಂತ ಹುಟ್ಟಿಕೊಳ್ಳುತ್ತದೆ.

ಆದ್ದರಿಂದಲೇ ನೀತಿ ತತ್ವವಾಗಲಿ, ಸೌಂದರ್ಯ ತತ್ವವಾಗಲಿ ದೇವರ ಅಸ್ತಿತ್ವಕ್ಕೆ ಒಂದು ಪ್ರಮಾಣವಾಗುವಂತಿಲ್ಲ. ದೇವರೆಂಬುದು ಒಂದು ವಸ್ತುವೋ? ಭಾವವೋ? ತತ್ವವೋ? ಅದಕ್ಕೆ ಆಯಾಮಗಳು ಯಾವುವು? ಎಷ್ಟು? ಅದು ಭೌತಿಕವೋ? ಆತ್ಮಿಕವೋ? ಕಾಲ್ಪನಿಕವೋ? ಅಥವಾ ಇವೆಲ್ಲವನ್ನೂ ಒಳಗೊಂಡು ಎಲ್ಲವನ್ನೂ ಮೀರಿ ಉಳಿಯುವ "ಏನಾದರೊಂದೋ?" ವೇದಗಳು ಮೊಳಗಿದವು: 'ಆತ ಈ ಭೂಮಿ ವಿಶ್ವವನ್ನೆಲ್ಲ ವ್ಯಾಪಿಸಿ, ಮತ್ತೆ 10 ಅಂಗುಲ ಮೀರಿ ನಿಂತಿದ್ದಾನೆ, ಹೀಗೆ ಈ ಭೂಮಿ ವಿಶ್ವಗಳ ಬ್ರಹ್ಮಾಂಡದ ಭವ್ಯ ತೆಕ್ಕೆಯ ಆಚೆಗೆ ಅವನನ್ನು ಖಚಿತವಾಗಿ 10 ಎಂದು ಅಳೆದ ಆ ಅಂಗುಲವಾದರೂ ಯಾರದು? ನಮ್ಮದೇ! ದೇವರ ಕಾಯಕ್ಕೆ ನಮ್ಮದೇ ಅಳತೆ! ಇದೆಲ್ಲ ಒಂದು ಭವ್ಯ ಉತ್ಪ್ರೇಕ್ಷೆಯೆಂಬುದಾಗಿ ಬೇರೆ ಹೇಳಬೇಕಾಗಿಲ್ಲ.

ಹೀಗೆ ಸ್ವಲ್ಪದರಲ್ಲಿ ಹೇಳುವದಾದರೆ, ಅಸ್ತಿತ್ವದ ಆಯಾಮಗಳೆಲ್ಲ ಈ ದೇವರೆಂಬ ಪರಿಕಲ್ಪನೆಗೆ ಒಪ್ಪುವಂತಿಲ್ಲ. ಆಜ್ಞೇಯವಿದ್ದುದ್ದು ಯಾವಾಗಲೂ ಅಚಿಂತ್ಯ, ಅಗಮ್ಯ. ಇನ್ನು ಜಗತ್ತು ಜೀವನ ಇವೆರಡನ್ನೂ ಒಳಹೊರಗೆ ವ್ಯಾಪಿಸಿ ಇರುವ ಸತ್ಯವೋ ತತ್ವವೋ ದೇವರೆಂದು ಒಪ್ಪಿಕೊಂಡರೂ ಅದನ್ನು ವಿಂಗಡವಾಗಿ ನಮ್ಮ ನಿಮ್ಮ ಪಂಗಡ ಕಟ್ಟಿಕೊಂಡು ಮೇಲಾಟದಿಂದ ಪೂಜಿಸಬೇಕಾದದ್ದೇನೂ ಇಲ್ಲ. ವಿಶ್ವಸೃಷ್ಟಿಯ ಮಹತ್ತು, ಬೃಹತ್ತುಗಳ ಇದಿರು ಮಾನವನ ಮನಸ್ಸು ಸಹಜವಾಗಿಯೂ ಅತ್ಯಲ್ಪ. ಅದರ ಈ ಅರಿವಿನಿಂದ

ಹೊಮ್ಮುವ ಅಸಹಾಯಕತೆ ಅದರ ಆರಾಧನೆಯು ಭಾವಗಳನ್ನು ಒಂದು ಭಾವೋನ್ಮಾದದ ವ್ಯಾಯಾಮವಾಗಿ ಅನುಷ್ಠಾನವೆಂದೋ ಪೂಜೆಯೆಂದೊ ಆಚರಿಸುವದರಲ್ಲಿ ನಮ್ಮ ದ್ರವ್ಯ, ಶಕ್ತಿ, ಸಮಯಗಳನ್ನು ದುಂದು ಮಾಡುವ ದಕ್ಕಿಂತ ಅಂಥ ಒಂದು ಭಾವನಾಮಯ ಸಂತೃಪ್ತಿಯೇ ನಮಗೆ ಅಗತ್ಯವಿದ್ದರೆ- ಅದು ಹಾಗೆ ಇದ್ದೇ ಇರುತ್ತದೆಂಬುದೂ ಸುಳ್ಳಲ್ಲ-ವ್ಯಕ್ತಿಯು ಸಮಾಜಕ್ಕಾಗಿ, ವಿಶ್ವದ ಒಳಿತಿಗಾಗಿ, ಚೆಲುವಿಗಾಗಿ, ಸರ್ವರ ಸಂತೋಷಕ್ಕಾಗಿ ದುಡಿಯುವದೇ ವಿವೇಕಕ್ಕೂ ವಸ್ತುಸ್ಥಿತಿಗೂ ಒಪ್ಪುವ, ನಮ್ಮ ಮನಸ್ಸಿಗೂ ಒಪ್ಪಿಗೆಯಾಗುವ "ದೈವಭಕ್ತಿ" ಎನ್ನಬಹುದು. ಅದನ್ನೂ ನಮ್ಮ ಪೂರ್ವಿಕರು ಈ ಹಿಂದೆ ಉಲ್ಲೇಖಿಸಿದಂತೆ ಒಂದು ಪುಟ್ಟ ಮಾತಿನಲ್ಲಿ ಪುಟವಿಟ್ಟಂತೆ ಹೇಳಿದ್ದಾರೆ.

"ಯೇನಕೇನ ಪ್ರಕಾರೇಣ
ಯಸ್ಯಕಸ್ಯಾಪಿ ದೇಹಿನ
ಸಂತೋಷಂ ಜನಯೇತ್ ಪ್ರಾಜ್ಞಃ
ತದೇವೇಶ್ವರ ಪೂಜನಂ"

ದೇವರೆಂಬ ವ್ಯಕ್ತಿ-ಶಕ್ತಿಯ ಕಲ್ಪನೆ ಭ್ರಮಾಮೂಲವಾದುದು. ವೈಚಾರಿಕತೆ ಮತ್ತು ಜಿಜ್ಞಾಸೆಯ ಒರೆಗಲ್ಲಿನ ಮೇಲೆ ಈ ಕಲ್ಪನೆ ತನ್ನ ಅಸ್ತಿತ್ವ ಸಿದ್ಧಗೊಳಿಸಲಾರದು. ಅಂತೆಯೇ ಈ ಭ್ರಮಾಧೀನ ಕಲ್ಪನೆಯನ್ನು ಒಪ್ಪದ ಪ್ರಜ್ಞಾವಂತರು ಮೊದಲಿನಿಂದಲೇ ಭಾರತದಲ್ಲಿ ಇದ್ದರು; ಬೇರೆ ದೇಶಗಳಲ್ಲೂ ಇದ್ದರು. ಇಂಥ ಪ್ರಜ್ಞಾವಂತ ಚಿಂತಕರನ್ನು ನಾಸ್ತಿಕರೆಂದು ಕರೆದು, ಅಸಡ್ಡೆಯಿಂದ ಕಾಣುವ ಪ್ರವೃತ್ತಿ ಮೂಢ ಮತಾಭಿಮಾನಿಗಳಲ್ಲಿ ಬೆಳೆದು ಬಂದಿರುವುದು ಮಾತ್ರ ಒಂದು ಬಗೆಯ ವಿಪರ್ಯಾಸ. ದೇವರ 'ಅಸ್ತಿತ್ವ'ದ ಗುಟ್ಟನ್ನು ಸರಿಯಾಗಿ ಅರಿತುಕೊಂಡವರನ್ನು 'ನಾಸ್ತಿಕ'ರೆಂದು ಹೆಸರಿಸಿ, ಹೀಗಳೆದು, ತಾವು 'ಆಸ್ತಿಕ' ರೆಂದು ಬೀಗುವ ಪಂಡಿತರಿಂದಲೇ ಮುಗ್ಧ ಭಕ್ತರ ವಂಚನೆ, ಶೋಷಣೆ ವಿವಿಧ ರೀತಿಯಲ್ಲಿ ಅವ್ಯಾಹತವಾಗಿ ಸಾಗಿರುವುದು ಜಾಗತಿಕ ಇತಿಹಾಸದಲ್ಲಿಯ ಮಹಾದುರಂತ.

ನಾಸ್ತಿಕನೆಂದು ಭಾವಿಸಲಾಗಿದ್ದರೂ ನಿಜವಾಗಿ ಚಿಂತಕನಾಗಿರುವ ಈತನು ದೇವರು ಎಂಬ ಕಲ್ಪನೆಯನ್ನು ಕುರಿತು ಹೊಂದಿರುವ ವಿಚಾರಗಳನ್ನು, ಈ ಬಗ್ಗೆ ಜಾಗತಿಕ ಮಟ್ಟದಲ್ಲಿ ನಡೆದಿರುವ ಚಿಂತನೆಯ-ಮಂಥನದ-ವಿವರಗಳನ್ನು **'ನಾಸ್ತಿಕನು ಮತ್ತು ದೇವರು'** ಹೆಸರಿನ ಈ ಗ್ರಂಥದಲ್ಲಿ ವ್ಯವಸ್ಥಿತವಾಗಿ ನಿರೂಪಿಸಲಾಗಿದೆ. ಸಂಭಾವ್ಯ ಸಂಶಯಗಳಿಗೆಲ್ಲ ಸಮಾಧಾನಕರ ಉತ್ತರ ನೀಡಲಾಗಿದೆ. ಆದ್ದರಿಂದ ಈ ಬಗೆಯ ವೈಚಾರಿಕ ಎತ್ತರದ ವಿಶ್ಲೇಷಣಾತ್ಮಕ ಗ್ರಂಥ ಕನ್ನಡದಲ್ಲಂತೂ ಇನ್ನೊಂದಿಲ್ಲ.

ಕರ್ನಾಟಕದ ಪ್ರಥಮ ದರ್ಜೆಯ ವಿಚಾರಶೀಲರೂ ಚಿಂತಕರೂ ಮುಕ್ತ ಮನಸ್ಸಿನ ಸಾಂಸ್ಕೃತಿಕ ಸತ್ಯಾನ್ವೇಷಿಗಳೂ ಎಂಬುದಾಗಿ ಪ್ರಖ್ಯಾತರಾಗಿರುವ **ಶ್ರೀ ಗೌರೀಶ ಕಾಯ್ಕಿಣಿ** ಅವರು ಪ್ರಸ್ತುತ ಗ್ರಂಥದ ಲೇಖಕರು. ಹೀಗಾಗಿ **'ನಾಸ್ತಿಕನು ಮತ್ತು ದೇವರು'** ಗ್ರಂಥದ ಮಹತ್ವ ಸಹಜವಾಗಿಯೇ ಇನ್ನಷ್ಟು ಹೆಚ್ಚಿದೆ. ಸಾರಸ್ವತ ಲೋಕದ ವೈಚಾರಿಕ ಕ್ಷೇತ್ರಕ್ಕೆ ಸಂದ ಮೌಲಿಕ ಕಾಣಿಕೆಯೆಂದು ಪರಿಗಣಿಸಲು ಇದು ಅರ್ಹವಾಗಿದೆ.

ಬೆಲೆ : ರೂ. ೧೬-೦೦

ತ್ವರಿತ ಮುದ್ರಣ ಗಂಗಾಪೂರಪೇಟೆ ಗದಗ